ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ
ಎಂ.ಫಿಲ್ ಪದವಿಯ ನಿಬಂಧ

ನಿಬಂಧದ ವಿಷಯ

'ಐನ್ನೇರುಘಟ್ಟ – ಒಂದು ಸಾಂಸ್ಕೃತಿಕ ಅಧ್ಯಯನ'

ಮಾರ್ಗದರ್ಶಕರು :

ಡಾ. ಕೆ. ರಮಾನಂದ

ಪ್ರೋಫೆಸರ್ ಮತ್ತು ಕನ್ನಡ ವಿಭಾಗದ ಮುಖ್ಯಸ್ಥರು

ಸಿಂಧಿ ಕಾಲೇಜು

ಕೆಂಪಾಪುರ, ಹೆಬ್ಬಾಳ

ಬೆಂಗಳೂರು–560 024

ಸಂಶೋಧನಾ ವಿದ್ಯಾರ್ಥಿ

ರಾಜಶೇಖರ ಎನ್

ನೋಂದಣಿ ಸಂಖ್ಯೆ : **BMSBKS-00664**

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

ಬಿ.ಎಂ.ಶ್ರೀ ಕಲಾ ಭವನ,

3ನೇ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ

ಬೆಂಗಳೂರು – 560 019

ವರ್ಷ : 2013–14

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

ಬಿ.ಎಂ.ಶ್ರೀ ಕಲಾಭವನ, 3ನೇ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ,

ಬೆಂಗಳೂರು – 560019

1120

ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ
ಎಂ.ಫಿಲ್ ಪದವಿಯ ನಿಬಂಧ

ನಿಬಂಧದ ವಿಷಯ

'ಬನ್ನೇರುಘಟ್ಟ – ಒಂದು ಸಾಂಸ್ಕೃತಿಕ ಅಧ್ಯಯನ'

ನೋಂದಣಿ ಸಂಖ್ಯೆ : **BMSBKS-00664**

ವರ್ಷ : 2013–14

ಬನ್ನೇರುಘಟ್ಟ - ಒಂದು ಸಾಂಸ್ಕೃತಿಕ ಅಧ್ಯಯನ

ಪರಿವಿಡಿ

ಅಧ್ಯಾಯ – 1

ಅಧ್ಯಯನದ ವಿಷಯ, ಸ್ವರೂಪ ಮತ್ತು ವ್ಯಾಪ್ತಿ

ಯಾವುದೇ ಒಂದು ಗ್ರಾಮ ಅಥವಾ ಐತಿಹಾಸಿಕ ಕ್ಷೇತ್ರವನ್ನು ಅಧ್ಯಯನ ಮಾಡಲು ಹೊರತಾಗ ಪ್ರಮುಖವಾಗಿ ಗಮನಿಸಬೇಕಾದ್ದು ಅಲ್ಲಿನ ಸಾಂಸ್ಕೃತಿಕ ಆಯಮಗಳು, ಸಾಂಸ್ಕೃತಿಕ ಅಧ್ಯಯನಕ್ಕೆ ಒಳಪಡುವ ಈ ಗ್ರಾಮವು ತನ್ನ ತೆಕ್ಕೆಯಲ್ಲಿ ವಿವಿಧ ಬಗೆಯ ಸಾಂಸ್ಕೃತಿಕ ಪರಿಕಲ್ಪನೆಗಳನ್ನು ಒಳಗೊಂಡಿದೆ.

ಸಂಸ್ಕೃತಿಯಿಂದ ಕೂಡಿದ ಈ ಗ್ರಾಮಗಳಲ್ಲಿ ಜನಪದದ ಎಲ್ಲಾ ಮುಖಗಳನ್ನು ಎಲ್ಲಾ ಜನಾಂಗಗಳಲ್ಲೂ ಕಾಣಬಹುದು. ಹಾಗೆಯೇ ಆಂತರ್ಯದಲ್ಲಿ ಸಂಸ್ಕೃತಿಯು ಬಿಂಬಿತವಾಗಿರುವುದು ಸಹ ಕಂಡುಬರುತ್ತದೆ. ಈ ಸಂಸ್ಕೃತಿ ಒಂದು ಗ್ರಾಮಕ್ಕೆ ಮೀಸಲಾಗಿರದೆ ಎಲ್ಲಾ ಕಡೆ ಕಂಡಬರುತ್ತದೆ. ಮೇಲ್ನೋಟಕ್ಕೆ ನಗರ ಪಟ್ಟಣ ಎಂದು ಕಂಡುಬಂದರೂ ಅಲ್ಲ ನಗರ, ತನ್ನ ಗ್ರಾಮ್ಯದ ಬದುಕನ್ನು ತಮ್ಮ ದಿನನಿತ್ಯದ ಜೀವನದ ನಂಬಕೆಗಳಲ್ಲಿ ಅವನ ಬದುಕಿನ ರೀತಿನೀತಿಗಳಲ್ಲಿ ಹಾಸುಹೊಕ್ಕಾಗಿರುವುದನ್ನು ಕಾಣಬಹುದು.

ಪ್ರಾದೇಶಿಕವಾಗಿ ಪ್ರತಿಯೊಂದು ಪ್ರದೇಶದ ಸಂಸ್ಕೃತಿಯ ವೈವಿದ್ಯಗಳನ್ನು ತಿಳಿಯಬೇಕಾದರೆ ಅಲ್ಲಿನ ಜನಾಂಗಗಳು ಅವರ ವೃತ್ತಿ ಜೀವನ ವಿಧಾನ, ಆಚಾರ ವಿಚಾರಗಳು, ನಂಬಿಕೆ, ಸಂಪ್ರದಾಯ, ಭಾಷೆ, ಧರ್ಮ, ಸಾಮಾಜಿಕ ಪದ್ದತಿ, ಕಟ್ಟುಪಾಡುಗಳು, ಸಾಂಸ್ಕೃತಿಕ ವಿಶಿಷ್ಟತೆಗಳು, ಸಂಸ್ಕೃತಿಕ ಪಲ್ಲಟಗಳು ಮುಂತಾದ ಅಂಶಗಳನ್ನು ತಿಳಿಯಬೇಕಾದ ಅಗತ್ಯತೆ ಅತ್ಯವಶ್ಯಕವಾಗಿದೆ. ಈ ದೃಷ್ಠಿಯಿಂದ ಪುರಾತನ ವೈಷ್ಣವ ಕ್ಷೇತ್ರವಾದ ಬನ್ನೇರುಘಟ್ಟ ಪ್ರವೇಶವನ್ನು ಅಧ್ಯಯನದ ಅನುಕೂಲಕ್ಕೆ ಸೀಮಿತಗೊಳಿಸಿಕೊಂಡು ಅದರ ವ್ಯಾಪ್ತಿಯಲ್ಲಿ ಕಂಡುಬರುವ ಸಾಂಸ್ಕೃತಿಕ ವೈಶಿಷ್ಯತೆಗಳನ್ನು ಗುರುತಿಸುವ ಪ್ರಯತ್ನವೇ ಈ ಸಾಂಸ್ಕೃತಿಕ ಅಧ್ಯಯನದ ಕಾರ್ಯವಾಗಿದೆ.

ಇತ್ತೀಚಿನ ಬೆಳವಣಿಗೆಯಲ್ಲಿ ಸಾಂಸ್ಕೃತಿಕ ಅಧ್ಯಯನವೆಂಬುದು ಮಹತ್ವದ ಅಧ್ಯಯನವಾಗಿದ್ದು, ಸಾಹಿತ್ಯದ ಒಂದು ಭಾಗವಾಗಿ ಚರ್ಚಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಒಂದು ಊರಿನ ಸಾಂಸ್ಕೃತಿಕ ಅಧ್ಯಯನ ಮಾಡುವುದು ಸೂಕ್ತ ಹಾಗೂ ಸಮರ್ಪಕವೆಂದು ತಿಳಿದುಕೊಂಡಿರುವ ನನಗೆ ಬನ್ನೇರುಘಟ್ಟದ ಬಗ್ಗೆ ಸಾಂಸ್ಕೃತಿಕವಾಗಿ ಐತಿಹಾಸಿಕವಾಗಿ ಮತ್ತು ಸಾಮಾಜಿಕವಾಗಿ ಸಮಗ್ರಚಿತ್ರಣವನ್ನು ಕಟ್ಟಿಕೊಡುವ ಕಾರ್ಯವನ್ನು ಮಾಡಬೇಕಾಗಿದೆ.

'ಬನ್ನೇರುಘಟ್ಟ – ಒಂದು ಸಾಂಸ್ಕೃತಿಕ ಅಧ್ಯಯನ' ಎಂದರೆ ಇಡೀ ಪ್ರದೇಶವನ್ನು ಕುರಿತ ಅಧ್ಯಯನವಾಗಿದೆ ಈ ಬನ್ನೇರುಘಟ್ಟ ಪ್ರದೇಶವು ಅನೇಕ ದೃಷ್ಠಿಗಳಿಂದ ವಿಶಿಷ್ಠವಾದ ಪ್ರದೇಶವಾಗಿದೆ. ಭೌಗೋಳಿಕವಾಗಿ ರಾಜಧಾನಿಯಾದ ಬೆಂಗಳೂರಿನ ಸಮೀಪವಿದ್ದರೂ ಆಧುನಿಕತೆಯ ಪ್ರಭಾವ ಅಧಿಕವಾಗಿದ್ದರೂ ಸಹ ಈಗಲೂ ಸಹ ಸಾಂಸ್ಕೃತಿಕವಾದ, ಧಾರ್ಮಿಕವಾದ, ಐತಿಹಾಸಿಕವಾದ ವಿಚಾರಗಳನ್ನು ತನ್ನ ಗರ್ಭದಲ್ಲಿರಿಸಿಕೊಂಡು ಕಾಪಾಡಿದೆ, ಇದರ ಮಹತ್ವವೆಂದರೆ ಇಷ್ಟೆಲ್ಲಾ ಆಧುನಿಕತೆಯ ಗಾಢ ಪ್ರಭಾವವಿದ್ದರೂ ಸಹ ಈ ಕ್ಷೇತ್ರ ಪುರಾತನಕಾಲದಿಂದ ಪ್ರಸ್ತುತ

ಇಂದಿನವರೆಗೂ ಅನೇಕ ರೀತಿಯ ರೂಢಿ ಸಂಪ್ರದಾಯಗಳು, ನಂಬಿಕೆಗಳು, ಧಾರ್ಮಿಕ ಆಚಾರಗಳು, ಹಬ್ಬ-ಹರಿದಿನಗಳು, ಜಾತ್ರ-ಉತ್ಸವಗಳು, ಸಂತೆ ಅಲ್ಲಿನ ಮದುವೆಯ ಛತ್ರಗಳು, ಅಲ್ಲಿ ನೆಡೆಯುವ ವಿವಾಹ ಕಾರ್ಯಗಳು, ಸಾಮೂಹಿಕ ಸಮಾರಂಭಗಳು, ಇನ್ನೂ ಮುಂತಾದವುಗಳನ್ನು ಈ ಕ್ಷೇತ್ರ ಇಂದಿಗೂ ಕಾಪಾಡಿಕೊಂಡು ಬಂದಿದೆ.

ಇಲ್ಲಿನ ಐತಿಹಾಸಿಕವಾದ ಬೆಟ್ಟ, ಪ್ರಕೃತಿ ಸೊಬಗಿನಿಂದ ಕೂಡಿದ ಕಾಡಿನ ಪ್ರದೇಶ, ದೇವಾಲಯಗಳು, ಶಾಸನಗಳು, ವೀರಗಲ್ಲುಗಳು, ಆತ್ಮಾಹುತಿಕಲ್ಲುಗಳು, ಚರ್ಚು, ಮಠ ಮಂದಿರಗಳು, ವಿವಾಹದ ಛತ್ರಗಳು. ಸುವರ್ಣಮುಖಿ ಕೊಳ, ಬೃಹತ್ ಶಿಲಾಯುಗದ ನೆಲೆಗಳು, ರಾಷ್ಟ್ರೀಯ ಉದ್ಯಾನವನ, ಚಿಟ್ಟೆವನ, ಟಿ.ಕೆ.ಪಾಲ್ಸ್, ಇತ್ಯಾದಿಗಳು ಓದುಗರ ಮತ್ತು ನೋಡುಗರ ಮನಸ್ಸನ್ನು ಸೂರೆಗೊಳ್ಳುತ್ತದೆ.

ಪ್ರಸ್ತುತ ಈಗಾಗಲೇ ಈ ಕ್ಷೇತ್ರ ಬಗ್ಗೆ ಡಾ॥ ದೇವರಕೊಂಡಾರೆಡ್ಡಿ, ಪ್ರೊ॥ ಪಿ.ವಿ.ಕೃಷ್ಣಮೂರ್ತಿ, ಡಾ॥ವೇಮಗಲ್ ಸೋಮಶೇಖರ್, ಡಾ॥ ಅಪರ್ಣಾ ಕೂಸಾ, ಇನ್ನೂ ಮುಂತಾದ ವಿದ್ವಾಂಸರು ಇಲ್ಲಿನ ಪ್ರಾಗೈತಿಹಾಸಿಕ ನೆಲೆಗಳು, ಶಾಸನಗಳು, ಭೌಗೋಳಿಕ ಪರಿಸರ, ದೇವಾಲಯದ ಕಲೆ ಮತ್ತು ವಾಸ್ತು ಶಿಲ್ಪ ಮುಂತಾದವುಗಳ ಬಗ್ಗೆ ಅಧ್ಯಯನ ಮಾಡಿ ಕೇವಲ ಬಿಡಿ ಬಿಡಿಯಾದ ಲೇಖನಗಳ ಮೂಲಕ ಗಮನ ಸೆಳೆದಿದ್ದಾರೆ. ಆದರೆ ಯಾವೊಬ್ಬ ವಿದ್ವಾಂಸರು ಸಹ ಇಲ್ಲಿಯವರೆಗೆ ಈ ಪ್ರದೇಶದ ಬಗ್ಗೆ ಸಾಂಸ್ಕೃತಿಕ ವಿಚಾರಗಳನ್ನು ಒಳಗೊಂಡಂತೆ ಯಾವುದೇ 'ಸಾಂಸ್ಕೃತಿಕ ಅಧ್ಯಯನ' ವನ್ನು ಇದುವರೆಗೂ ಮಾಡಲಿಲ್ಲ, ಆಗಾಗಿ ಅಂಥದೊಂದು ಕೊರತೆಯನ್ನು ನೀಗಿಸುವ ಪ್ರಯತ್ನವೇ ನನ್ನ ಈ ಸಂಶೋಧನೆಯ ಬಹುಮುಖ್ಯ ಉದ್ದೇಶವಾಗಿದೆ.

ಪ್ರಸ್ತುತ ಅಧ್ಯಯನದ ವಿಷಯವಾದ ಬನ್ನೇರುಘಟ್ಟ – ಒಂದು ಸಾಂಸ್ಕೃತಿಕ ಅಧ್ಯಯನ ನಿರ್ದಿಷ್ಟಪಡಿಸಿದ ಚೌಕಟ್ಟಿನಲ್ಲಿ ಇಲ್ಲಿನ ವಿವಿಧ ಸಾಂಸ್ಕೃತಿಕವಾದ ಆಯಾಮಗಳನ್ನು ಕುರಿತ ಅಧ್ಯಯನವಾಗಿದೆ. ಸಾಂಸ್ಕೃತಿಯನ್ನು ಕುರಿತು ಈಗಾಗಲೇ ಅನೇಕ ರೀತಿಯ ಅಧ್ಯಯನಗಳು ನಡೆದಿವೆ. ಅವುಗಳೆಲ್ಲ ಒಂದು ನಿರ್ದಿಷ್ಟವಾದ ಗ್ರಾಮ, ಜನಾಂಗ, ಆಚರಣೆ ಸಂಪ್ರದಾಯಗಳಿಗೆ ಸಂಬಂಧಿಸಿದವುಗಳಾಗಿವೆ. ಹೆಚ್.ಎಲ್. ನಾಗೇಗೌಡರ 'ನನ್ನೂರು'. ಡಾ॥ ತೀ.ನಂ.ಶಂಕರ ನಾರಾಯಣ ಅವರ 'ಕಾಡುಗೊಲ್ಲರ ಸಂಪ್ರದಾಯಗಳು' ಪುರುಷೋತ್ತಮ ಬಿಳಿಮಲೆ ಅವರ 'ಸುಳ್ಯ ಪರಿಸರದ ಗೌಡ ಜನಾಂಗ' ಒಂದು ಸಾಂಸ್ಕೃತಿಕ ಅಧ್ಯಯನ' ಡಾ॥ ಡಿ.ಬಿ.ನಾಯಕ್ ಅವರ 'ಲಂಬಾಣಿ ಜನಪದ ಸಾಹಿತ್ಯ' ಮುಂತಾದವು ಒಂದು ವಿಷಯವನ್ನು ಕುರಿತ ವಿವರಣಾತ್ಮಕ (Micro Study) ಅಧ್ಯಯನಗಳಾಗಿವೆ.

ಒಂದು ಸಾಂಸ್ಕೃತಿಕ ಅಧ್ಯಯನದಿಂದ ಒಂದು ಕ್ಷೇತ್ರದ ಸಂಪೂರ್ಣ ಇತಿಹಾಸ ಬೆಳಕಿಗೆ ಬರುತ್ತದೆ. ಪ್ರಸ್ತುತ ಈ ವಿಷಯದ ವ್ಯಾಪ್ತಿ ಭೌಗೋಳಿಕವಾಗಿ ಒಂದು ಎಲ್ಲೆಕಟ್ಟಿಗೆ ಸೀಮಿತವಾಗಿದ್ದರೂ ಇಲ್ಲಿನ ಇತಿಹಾಸ, ಧರ್ಮ ಭಾಷೆ, ಕಲೆ, ವಿವಿಧ ಜಾತಿ, ಜನಾಂಗಗಳು ಬುಡಕಟ್ಟುಗಳ ಆಚರಣೆ, ನಂಬಿಕೆ, ಸಂಪ್ರದಾಯಗಳು, ಹಬ್ಬ-ಹರಿದಿನಗಳು, ಜಾತ್ರೆ ಉತ್ಸವಗಳು ಸಾಂಪ್ರದಾಯಕ ಪದ್ಧತಿಗಳು ಮತ್ತು ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ರಾಜಕೀಯವಾದ

ಸ್ಥಿತಿಗತಿಗಳನ್ನು ಕುರಿತದ್ದಾಗಿದೆ. ಪ್ರತಿಯೊಂದು ವಿಷಯವನ್ನು ಪ್ರತ್ಯೇಕವಾದ ಅಧ್ಯಯನಕ್ಕೆ ಒಳಪಡಿಸುವುದು ಪ್ರಬಂಧದ ವ್ಯಾಪ್ತಿಯಲ್ಲಿ ಅಸಾಧ್ಯವಾದುದು ನಿರ್ದಿಷ್ಟಪಡಿಸಿಕೊಂಡಿರುವ ವ್ಯಾಪ್ತಿಯಲ್ಲಿನ ಸಾಂಸ್ಕೃತಿಕ ಅಂಶಗಳನ್ನು ಅಧಿಕೃತವಾದ ದಾಖಲೆಗಳು ಮತ್ತು ಕ್ಷೇತ್ರಕಾರ್ಯದ ಮೂಲಕ ದೊರೆತಿರುವ ಮಾಹಿತಿಗಳನ್ನಾಧರಿಸಿದ ಅಧ್ಯಯನವಾಗಿದ್ದು ಅವುಗಳನ್ನು ಬೇರೆ ಬೇರೆ ಅಧ್ಯಯಗಳಾಗಿ ವಿಂಗಡಿಸಿ ಪ್ರಸ್ತುತ ಈ ಪ್ರಬಂಧದಲ್ಲಿ ಕ್ರೋಢಿಕರಿಸಿದ್ದೇನೆ.

ಅಧ್ಯಯನದ ವ್ಯಾಪ್ತಿ :

ಈಗಾಗಲೇ ತಿಳಿಸಿರುವಂತೆ ಈ ವಿಷಯಕ್ಕೆ ಸಂಬಂಧಿಸಿದಂತೆ ಸಾಂಸ್ಕೃತಿಕ ಅಧ್ಯಯನ ನಡೆಸುವಾಗ ಅದರ ಆಳ-ಹರವುಗಳನ್ನು ತಿಳಿದುಕೊಂಡೆ ಅಧ್ಯಯನ ನಡೆಸಬೇಕಾಗುತ್ತದೆ. ಹಾಗಾಗಿ ಈ ಅಧ್ಯಯನದಲ್ಲಿ ಒಂದು ವ್ಯಾಪ್ತಿಯನ್ನು ನಿರ್ಮಿಸಿಕೊಂಡು ಅನುಕೂಲಕ್ಕಾಗಿ ಹಲವು ಭಾಗಗಳನ್ನಾಗಿ ವಿಂಗಡಿಸಿದ್ದೇನೆ. ಸಾಂಸ್ಕೃತಿಕ ಅಧ್ಯಯನವನ್ನು ಕುರಿತು ಬೇರೆ ಬೇರೆ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಸಂಸ್ಕೃತಿಯ ಸ್ವಭಾವ ಸ್ವರೂಪವನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನದ ಉದ್ದೇಶವನ್ನು ಮೊದಲನೇಯ ಅಧ್ಯಾಯದಲ್ಲಿ ಸೃಷ್ಠಿಪಡಿಸಿದ್ದೇನೆ. ಇದು ಪರಿಚಯಾತ್ಮಕವಾಗಿದ್ದು, ಈ ಕ್ಷೇತ್ರದ ವಿಶಿಷ್ಟ ಸ್ವರೂಪಗಳನ್ನಾಧರಿಸಿದ ಸಂಸ್ಕೃತಿ ವಿವರಗಳ ಪೀಠಿಕೆಯಾಗಿದೆ.

ಎರಡನೇಯ ಅಧ್ಯಾಯದಲ್ಲಿ ಈ ಪ್ರದೇಶದ ಭೂಪಟದ ಪರಿಧಿಗೆ ಸೇರಿದ ಭೌಗೋಳಿಕ ಹಿನ್ನೆಲೆಯನ್ನು ಒಂದೆಡೆ ಸಂಯೋಜಿಸಲಾಗಿದೆ. ಈ ಪ್ರದೇಶವನ್ನು ಆವರಿಸಿರುವ ಅರಣ್ಯ ಪ್ರದೇಶ, ನೈಸರ್ಗಿಕ ಸಂಪನ್ಮೂಲಗಳು, ಹವಾಮಾನ, ಮಣ್ಣಿನ ಗುಣಲಕ್ಷಣಗಳು, ಹಳೆಶಿಲಾಯುಗದ ಪ್ರಾಗೈತಿಹಾಸಿಕ ನೆಲೆಗಳು, ಸುವರ್ಣಮುಖಿಕೊಳ, ಮುಂತಾದವುಗಳ ಕುರಿತು ಅಧ್ಯಯನವಾಗಿದೆ.

ಚಾರಿತ್ರಿಕವಾಗಿ ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ ರಾಜವಂಶಗಳು ಯಾವುವು, ಅವುಗಳ ಸಂಬಂಧವಾಗಿ ಅಧೀನವಾಗಿ ಅಡಳಿತ ನಡೆಸಿದ ಪಾಳೇಯಗಾರರು, ಇವರುಗಳ ಇತಿಹಾಸ, ಶಾಸನಗಳು, ವೀರಗಲ್ಲುಗಳು ಮಾಸ್ತಿಕಲ್ಲುಗಳು, ಆತ್ಮಾಹುತಿಕಲ್ಲುಗಳ ದಾಖಲೆಗಳನ್ನಾಧರಿಸಿದ ವಿವರಗಳನ್ನು ಮೂರನೇಯ ಅಧ್ಯಾಯದಲ್ಲಿ ವಿವರಸಿದ್ದೇನೆ.

ನಾಲ್ಕನೇಯ ಅಧ್ಯಾಯದಲ್ಲಿ ಈ ಬನ್ನೇರುಘಟ್ಟದ ಶಾಸನಗಳ ಮಹತ್ವವನ್ನು ವಿವರಿಸಲಾಗಿದೆ.

ಐದನೇ ಅಧ್ಯಾಯದಲ್ಲಿ ಧಾರ್ಮಿಕವಾಗಿ ಬನ್ನೇರುಘಟ್ಟದ ಪ್ರಾಮುಖ್ಯತೆಯನ್ನು ತಿಳಿಸಿಲಾಗಿದೆ.

ಆರನೇಯ ಅಧ್ಯಾಯದಲ್ಲಿ ಬನ್ನೇರುಘಟ್ಟದ ಸಾಂಸ್ಕೃತಿಕ ವಿವರಗಳಾದ ಇಲ್ಲಿನ ಜಾತಿ ಪದ್ಧತಿ, ಧಾರ್ಮಿಕ ನಂಬಿಕೆಗಳು, ಆಚರಣೆಗಳು, ಸಂತೆ, ಕಲ್ಯಾಣಿಗಳು, ತೀರ್ಥಬಾವಿಗಳು ಮತ್ತು ಬ್ರಹ್ಮರಥೋತ್ಸವದ ಬಗ್ಗೆ ಚಿತ್ರಿಸಲಾಗಿದೆ.

ಏಳನೇಯ ಅಧ್ಯಾಯದಲ್ಲಿ ಪ್ರಸ್ತುತ ಜಾಗತೀಕರಣದ ಹಿನ್ನೆಲೆಯಲ್ಲಿ ಬದಲಾಗುತ್ತಿರುವ ಬನ್ನೇರುಘಟ್ಟದ ಸ್ಥಿತಿಗತಿಗಳನ್ನು ಚಿತ್ರಿಸಲಾಗಿದೆ.

ಎಂಟನೇ ಅಧ್ಯಾಯದಲ್ಲಿ ಬನ್ನೇರುಘಟ್ಟ ಪ್ರದೇಶದಲ್ಲಿರುವ ಪ್ರವಾಸಿ ತಾಣಗಳು ಮತ್ತು ಇಲ್ಲಿನ ಪ್ರೇಕ್ಷಣೀಯ ಸ್ಥಳಗಳ ಬಗ್ಗೆ ವಿವರಗಳನ್ನು ನೀಡಲಾಗಿದೆ.

ಇದೇ ಅಧ್ಯಯನದಲ್ಲಿರುವ ಮುಖ್ಯ ಸಂಗತಿಗಳನ್ನು ಕಲೆಹಾಕಿ 'ಉಪಸಂಹಾರ' ಎಂಬ ಭಾಗದಲ್ಲಿ ನೀಡಲಾಗಿದೆ ಈ ಕ್ಷೇತ್ರದ ಸುಧಾರಣೆಗೆ ಪೂರಕವೆನಿಸಿದ ಕೆಲವು 'ಸಲಹೆ'ಗಳನ್ನು ಇಲ್ಲಿ ನೀಡಿದೆ. 'ಸಾಂಸ್ಕೃತಿಕ ಅಧ್ಯಯನ' ಎಂಬ ಶೀರ್ಷಿಕೆ ಅಡಿಯಲ್ಲಿ ನಡೆಸುವ ಅಧ್ಯಯನ ಬಹಳವೇ ವ್ಯಾಪಕವಾದದ್ದು. ಒಂದರ್ಥದಲ್ಲಿ ಇದರಲ್ಲಿ ಸೇರದಿರುವ ವಿಷಯಗಳೇ ಇಲ್ಲ. ಆದ್ದರಿಂದ ಈ ಅಧ್ಯಯನಕ್ಕೆ ಒಳಪಡಬಹುದಾದ ಬಹುತೇಕ ವಿಷಯಗಳನ್ನು ಇಲ್ಲಿ ಪ್ರಸ್ತಾಪಿಸಿದ್ದೇವೆ.

ಬನ್ನೇರುಘಟ್ಟ ಶಾಸನಗಳ ಅಧ್ಯಯನ

ಶಾಸನಗಳು ಇತಿಹಾಸದ ಕಣಜ, ಯಾವುದೇ ಪ್ರದೇಶದ ಭಾಷೆ ಸಾಹಿತ್ಯ ಸಂಸ್ಕೃತಿ ಇತಿಹಾಸ ಪುಂಜದ ಅವಿಸ್ಮಾರಣೀಯ ಪುಟಗಳ ಅಧ್ಯಯನಕ್ಕೆ ಅಮೂಲ್ಯ ಆಕರಗಳು, ಇತಿಹಾಸವನ್ನು ಕೆದಕಿದಾಗ ಅಲ್ಲಿನ ರಾಜರುಗಳ ಆಳ್ವಿಕೆ ಕಲೆ, ಸಂಸ್ಕೃತಿ. ಸಂಗೀತ ಇನ್ನೂ ಮುಂತಾದವುಗಳನ್ನಲ್ಲ ತಿಳಿಯುವ ಬಹುಮುಖ್ಯವಾದ ಆಧಾರಗ್ರಂಥಗಳೇ ಈ ಶಾಸನಗಳು.

ಬನ್ನೇರುಘಟ್ಟ ಶಾಸನಗಳನ್ನು ಒಪ್ಪನಾಗಿ ಕಾಲಕ್ರಮವಾಗಿ ಜೋಡಿಸಿ ಇವುಗಳನ್ನು ಓರಣವಾಗಿ ತೋರಣ ಕಟ್ಟುವ ಪ್ರಯತ್ನವನ್ನು ಮಾಡಲಾಗಿದೆ. ಇಲ್ಲಿ ಶಾಸನಗಳಲ್ಲಿ ಬನ್ನೇರುಘಟ್ಟದ ಪ್ರಸ್ತಾಪವಿದೆ.

ಪುರಾತನ ವೈಷ್ಣವ ಕ್ಷೇತ್ರವಾದ "ಬನ್ನೇರುಘಟ್ಟ" ಪ್ರದೇಶದ ಇತಿಹಾಸವನ್ನು ಈ ಶಾಸನಗಳ ಮೂಲಕ ತಿಳಿಯಬಹುದಾಗಿದೆ. ಪ್ರಸ್ತುತ ಬನ್ನೇರುಘಟ್ಟದಲ್ಲಿ ದೊರೆತಿರುವ ಶಾಸನಗಳು ಚೋಳರು, ಹೊಯ್ಸಳರು, ವಿಜಯನಗರದ ಅರಸರ ಆಳ್ವಿಕೆಗೆ ಸೇರಿದ ಮಾಹಿತಿಯ ದಾಖಲೆಗಳಾಗಿವೆ.

ಈ ಬನ್ನೇರುಘಟ್ಟ ಪ್ರದೇಶ ಸಾಕಷ್ಟು ಪ್ರಾಚೀನ ಪರಂಪರೆಯ ಆಗರವಾಗಿರುವ ಧಾರ್ಮಿಕ ಕ್ಷೇತ್ರವಾಗಿದ್ದು ಇದು ಸುಮಾರು 25ಕ್ಕೂ ಹೆಚ್ಚು ಶಾಸನಗಳ ತಾಣವೂ ಆಗಿದೆ.

ಕ್ರಿ.ಶ. 13ನೇ ಶತಮಾನದಿಂದ 19ನೇ ಶತಮಾನದವರೆಗೆ ಹುಟ್ಟಿಕೊಂಡಿರುವ ಈ ಶಾಸನಗಳು ಪ್ರಧಾನವಾಗಿ ಈ ಪ್ರದೇಶದ ನಾಡದೇವರಾದ ದಾಮೋದರ ದೇವರು ಅಂದರೆ ಚಂಪಕಧಾಮ ಸ್ವಾಮಿಯ ಪೂಜಾ ಕೈಂಕರ್ಯಗಳಿಗೆ ಸಂಬಂಧಿಸಿದವಾಗಿದೆ.

ಈ ಚಂಪಕಧಾಮಸ್ವಾಮಿ ದೇವಾಲಯದ ಹೊರಭಿತ್ತಿ. ಅಧಿಷ್ಠಾನ ಮಹಾದ್ವಾರದ ಕಂಬ, ಭಿತ್ತಿಗಳ ಮೇಲೆ ಮತ್ತು ದೇವಾಲಯ ಗರ್ಭಗುಡಿಯ ಗೋಡೆಗಳ ಮೇಲೆ ಈ ಶಾಸನಗಳು ಲಿಖಿತಗೊಂಡಿವೆ. ಗ್ರಾಮದ ಆಂಜನೇಯ ಸ್ವಾಮಿ ಗುಡಿಯ ಮುಂದಿನ ಕಂಬದ ಬುಡದಲ್ಲಿ ಮತ್ತು ಸುವರ್ಣಮುಖಿ ತೀರ್ಥದ ಬಳಿಯ ಮಂಟಪದ ತೋಲೆ ಮುಂತಾದ ಕಡೆಗಳಲ್ಲಿ ಶಾಸನಗಳು ಕಂಡುಬರುತ್ತದೆ.

ಚಂಪಕಧಾಮ ದೇವಾಲಯದ ಗರ್ಭಗುಡಿಯ ಹೊರಭಿತ್ತಿ ಮತ್ತು ಅಧಿಷ್ಠಾನದಲ್ಲಿರುವ ತಮಿಳು ಶಾಸನಗಳಲ್ಲಿ ಬಹಳಷ್ಟು ಶಾಸನಗಳು ಹೊಯ್ಸಳರ ಮುಮ್ಮಡಿ ನರಸಿಂಹ, ರಾಮನಾಥ, ಮುಮ್ಮಡಿ ವೀರಬಲ್ಲಾಳ ಹಾಗೂ ವಿಜಯನಗರದ ವೀರ ಕಂಪಣ್ಣ ಒಡೆಯರಿಗೆ ಸೇರಿದವಾಗಿದೆ.

<u>ಬನ್ನೇರುಘಟ್ಟವನ್ನು ಶಾಸನಗಳಲ್ಲಿ ಹಲವಾರು ಹೆಸರುಗಳಿಂದ ಉಲ್ಲೇಖಿಸಿರುವುದನ್ನು ಕಾಣಬಹುದು.</u>

ಕ್ರಿ.ಶ. 1316ರಲ್ಲಿ ಹೊಯ್ಸಳರ ಶಾಸನವೊಂದರಲ್ಲಿ ಬನ್ನೇರುಘಟ್ಟವನ್ನು 'ಹೊಮ್ಮಳಿಗೆ ನಾಡು' ಎಂದು ಉಲ್ಲೇಖಿಸಲಾಗಿದೆ. 'ಹೊಮ್ಮಳಿಗೆ' ಎಂಬುದರ ಮೂಲವು ಪ್ರಾಯಶಃ 'ಪೊನ್ನಳಿಕೆ' ಆಗಿರಬೇಕು, ಪೊನ್ನಳಿಕೆ ಎಂಬುದು ಪೊನ್ + ಅಳಿಕೆ ಎಂದು ಎರಡು ಪದಗಳಿಂದ ರೂಪುಗೊಂಡಿರುವುದಾಗಿದೆ, ಪೊನ್ ಎಂದರೆ ಚಿನ್ನ, ಅಳಿಕೆ ಎಂದರೆ "ಗುಡ್ಡಗಾಡುಗಳಿಂದ ಕೂಡಿದ ಕಾಡುಮರಗಳಿಂದ ಕೆಲವೊಮ್ಮೆ ಕೂಡಿದ್ದು ನೂರಾರು ವರ್ಷಗಳವರೆಗೆ ಈಗಲೂ ಸ್ವಲ್ಪ ಮಟ್ಟಿಗೆ ಕೃಷಿ ನಡೆಯದಿದ್ದ, ಪಾಳುಬಿದ್ದ ಜಾಗವನ್ನು ಸೂಚಿಸುತ್ತದೆ" ಎಂದು ಸ್ಥಳನಾಮದ ವಿದ್ವಾಂಸರ ಅಭಿಪ್ರಾಯಪಟ್ಟಿರುತ್ತಾರೆ. ಹೀಗಾಗಿ ಚಿನ್ನವನ್ನು ಹೊಂದಿದ್ದ ಗುಡ್ಡಗಾಡೇ 'ಪೊನ್ನಳಿಕೆ' ಅಥವಾ ಪೊನ್ನಳಿಕೆಯಾಗಿದ್ದು, ಕಾಲಾಂತರದಲ್ಲಿ 'ಪೊನ್ನಣಿಕ' ಮತ್ತು 'ಹೊಮ್ಮಳಿಗೆ' ಎಂಬ ರೂಪಗಳು ಈ ಶಾಸನದಲ್ಲಿ ಉಕ್ತವಾಗಿದೆ.

'ಸುವರ್ಣಮುಖಿ' ಹೆಸರಿನ ಅರ್ಥಾತ್ ಕನ್ನಡದ ನಿಜರೂಪ 'ಪೊನ್ನೆರೆಪಟ್ಟು' (ಪೊನ್ + ಎರೆಪಟ್ಟು) ಎಂದಾಗಿದ್ದು ಪೊನ್ – ಚಿನ್ನ, ಎರೆಪಟ್ಟು – ಮೂಲ ಸ್ಥಳ, ಆದ್ದರಿಂದ ಈಗಿನ ಬನ್ನೇರುಘಟ್ಟ ಮತ್ತು ಸುವರ್ಣಮುಖಿ ಎಂಬುವು ಪೊನ್ನೇರುಪಟ್ಟು ಎಂಬುದರಿಂದಲೇ ರೂಪಾಂತರ ಹೊಂದಿರಬೇಕೆಂದು ತೋರುತ್ತದೆ. ಪೊನ್ನೆರೆಪಟ್ಟು > (ವನ್ನಿಯಪಟ್ಟಂ) > ಬನ್ನೆರವಟ್ಟ > ಬನ್ನೂರುಗಟ್ಟ > ಬನ್ನೇರುಘಟ್ಟ ಎಂದಾಗಿರಬೇಕು.

ವಿಜಯನಗರದ ಆರಸರ ಕಾಲದಲ್ಲಿ ಶಾಸನಗಳಲ್ಲಿ ಬಂನೂರುಘಟ್ಟ, ಬನ್ನೂರುಘಟ್ಟ, ಬಂನಿಜಿರಘಟ್ಟ ಎಂಬ ಉಲ್ಲೇಖವಿದೆ. ತಮಿಳು ಶಾಸನಗಳಲ್ಲಿ 'ವಣ್ಣಿಯಾರ್‌ಘಟ್ಟಂ' ಎಂದು ಉಲ್ಲೇಖಿಸಿದೆ. ಹೀಗೆ ಅನೇಕ ಶಾಸನಗಳಲ್ಲಿ ಬಿನ್ನಿಯಗಟ್ಟ, ಬನ್ನಿಶರಘಟ್ಟ, ವನ್ನಿಯಗಟ್ಟ, ವರದರಾಜಪಟ್ಟಣ, ವಹ್ನಿಗಿರಿ ಎಂಬ ಹೆಸರುಗಳಿಂದ ಕಾಣಿಸಿಕೊಂಡಿವೆ ಎನ್ನಬಹುದು.

ಅಧ್ಯಾಯ – 2
ಬನ್ನೇರುಘಟ್ಟದ ಭೌಗೋಳಿಕ ಹಿನ್ನೆಲೆ

ಭೌಗೋಳಿಕತೆ ಎಂದರೆ ನಮ್ಮ ಸುತ್ತಮುತ್ತ ಹರಿದು ಹಂಚಿ ಹೋಗಿ ಕಣ್ಣಿಗೆ ಕಾಣುವಂತಹದ್ದು, ಇದು ಭೌಗೋಳಿಕ ವ್ಯಾಪ್ತಿಯ ವಿಸ್ತೀರ್ಣವಾದದ್ದಾಗಿದೆ. ಈ ನೆಲೆ–ಜಲ, ಮಳೆ–ಬೆಳೆ, ಮರ–ಗಿಡ, ಬೆಟ್ಟ–ಗುಡ್ಡ, ಪ್ರಾಣಿ–ಪಕ್ಷಿ, ಕ್ರಿಮಿ–ಕೀಟ, ಇವುಗಳೆಲ್ಲವೂ ಭೌಗೋಳಿಕ ಪರಿಸರದಲ್ಲಿ ಇರುವಂಥದ್ದು. ಅಂದರೆ ಮನುಷ್ಯ ತನ್ನ ಬದುಕಿನ ಜೊತೆಗೆ ಸುತ್ತಮುತ್ತಲು ಅನೇಕ ಜೀವರಾಶಿಗಳು ಬದುಕಬೇಕೆಂಬ ಹಂಬಲವನ್ನು ಹೊಂದಿರುತ್ತಾನೆ. ಈ ರೀತಿಯ ಭೌಗೋಳಿಕ ಹಿನ್ನೆಲೆಯಿಂದಲೇ ಸಾಂಸ್ಕೃತಿಕ ಅಧ್ಯಯನ ಅನಾವಣರಗೊಳ್ಳುತ್ತದೆ.

'ಬನ್ನೇರುಘಟ್ಟ' – ಬೆಂಗಳೂರುನಗರ ಜಿಲ್ಲೆ ಆನೇಕಲ್ ತಾಲ್ಲೂಕಿನ ಜಿಗಣಿ ಹೋಬಳಿಯ ಒಂದು ಗ್ರಾಮ. ಬೆಂಗಳೂರು ಮತ್ತು ಆನೇಕಲ್ ನಡುವಿನ ಮುಖ್ಯರಸ್ತೆಯಲ್ಲಿ ಸುಂದರ ಗಿರಿಕಂದರಗಳಿಂದ ಕೂಡಿದ ವಹ್ನಿಗಿರಿ ಬೆಟ್ಟದ ತಪ್ಪಲಿನಲ್ಲಿರುವ ಪುಣ್ಯಕ್ಷೇತ್ರ.

ಬೆಂಗಳೂರಿನಿಂದ ಸುಮಾರು 22 ಕಿ.ಮೀ ಮತ್ತು ಆನೇಕಲ್‌ನಿಂದ ಸುಮಾರು 20 ಕಿ.ಮೀ ನಡುವಿನ ಅಂತರದಲ್ಲಿರುವ ಈ ಗ್ರಾಮ ಕಗ್ಗಲಿಪುರದಿಂದ 11 ಕಿ.ಮೀ ದೂರದಲ್ಲಿದೆ. ಅಂದರೆ ಈ ಕ್ಷೇತ್ರವು ಬೆಂಗಳೂರು, ಆನೇಕಲ್ ಮತ್ತು ಕಗ್ಗಲಿಪುರ ರಸ್ತೆಗಳ ಮಧ್ಯಭಾಗದಲ್ಲಿದೆ ಮತ್ತು ಬಿ.ಬಿ.ಎಂ.ಪಿ ವಾಪ್ತಿಯ ಗೊಟ್ಟಿಗೆರೆಯಿಂದ 4 ಕಿ.ಮೀ ಅಂತರದಲ್ಲಿದೆ.

ಈ ಬನ್ನೇರುಘಟ್ಟ ಗ್ರಾಮವನ್ನು ಕೇಂದ್ರ ಸ್ಥಾನದಲ್ಲಿಟ್ಟುಕೊಂಡು ಗುರ್ತಿಸುವುದಾದರೆ ಇಲ್ಲಿನ ಶ್ರೀ ಚಂಪಕಧಾಮಸ್ವಾಮಿ ದೇವಲಾಯದ ಮಹಾದ್ವಾರ ಪೂರ್ವಾಭಿಮುಖವಾಗಿದೆ. ಈ ದೇವಲಾಯವನ್ನು ಕೇಂದ್ರ ಬಿಂಧುವಾಗಿಟ್ಟುಕೊಂಡು ಭೌಗೋಳಿಕವಾಗಿ ಈ ಬನ್ನೇರುಘಟ್ಟ ಗ್ರಾಮದ ಸುತ್ತಮುತ್ತಲಿನ ಪ್ರದೇಶಗಳನ್ನು ಈ ಕೆಳಗಿನಂತೆ ಗುರ್ತಿಸಲಾಗಿದೆ.

ಪೂರ್ವಕ್ಕೆ	:	ಕೆಂಪನಾಯಕನ ಹಳ್ಳಿ, ಹುಲ್ಲುಕಸವನಹಳ್ಳಿ
ಪಶ್ಚಿಮಕ್ಕೆ	:	ವಹ್ನಿಗಿರಿ ಬೆಟ್ಟ, ಬ್ಯಾಟರಾಯನದೊಡ್ಡಿ, ಸಿಲೀಂದ್ರದೊಡ್ಡಿ.
ಉತ್ತರಕ್ಕೆ	:	ಕಲ್ಕೆರೆ ಮತ್ತು ಗೊಟ್ಟಿಗೆರೆ
ದಕ್ಷಿಣಕ್ಕೆ	:	ಬೈರಪ್ಪನ ಹಳ್ಳಿ, ರಾಗಿಹಳ್ಳಿ ಮತ್ತು ಶಿವನಹಳ್ಳಿ
ವಾಯವ್ಯ	:	ಕ್ಯಾಸರಗುಪ್ಪೆ, ಭೂತಾನಹಳ್ಳಿ, ಮುನಿಮಾರಯ್ಯನದೊಡ್ಡಿ, ಕಂಚಿಗಯ್ಯನದೊಡ್ಡಿ, ಶಾನುಬೋಗನಹಳ್ಳಿ
ಈಶಾನ್ಯಕ್ಕೆ	:	ಲಕ್ಷ್ಮೀಪುರ
ಆಗ್ನೇಯಕ್ಕೆ	:	ಕರಿಯಪ್ಪನ ಹಳ್ಳಿ, ವಾಜರಹಳ್ಳಿ, ಜಂಗಲಪಾಳ್ಯ, ಮಂಟಪ, ಕಾಳೇಶ್ವರ ಮತ್ತು ಬೇಗಿಹಳ್ಳಿ
ನೈರುತ್ಯಕ್ಕೆ	:	ಸಂಪಿಗೆಹಳ್ಳಿ, ಬನ್ನೇರುಘಟ್ಟ ನ್ಯಾಷನಲ್ ಪಾರ್ಕ್, ಗುಲಕಮಲೆ, ಹಕ್ಕಿಪಿಕ್ಕಿಕಾಲೋನಿ.

ಈ ರೀತಿಯಾಗಿ ಈ ಬನ್ನೇರುಘಟ್ಟದ ಸುತ್ತಮುತ್ತ ಈ ಎಲ್ಲಾ ಪ್ರದೇಶಗಳಿಗೂ ಇವುಗಳು ಪ್ರಾಚೀನ ಕಾಲದಿಂದಲೂ ಸಹ ಬನ್ನೇರುಘಟ್ಟಕ್ಕೆ ಒಂದೊಂದು ರೀತಿಯ ಸಂಬಂಧವನ್ನು ಹೊಂದಿವೆ. ಈ ಎಲ್ಲಾ ಹಳ್ಳಿಗಳ ಕೇಂದ್ರ ಸ್ಥಾನವಾಗಿ 'ಬನ್ನೇರುಘಟ್ಟ ಪ್ರದೇಶ' ಪ್ರಾಚೀನತೆಯಿಂದ ಪ್ರಸ್ತುತ ಇಂದಿನ ವರೆಗೂ ತನ್ನ ಸ್ಥಾನವನ್ನು ಉಳಿಸಿಕೊಂಡು ಬಂದಿರುವುದನ್ನು ಕಾಣಬಹುದು.

ಯಾವುದೇ ಒಂದು ಗ್ರಾಮಕ್ಕೆ ಒಂದು ವಿಶಿಷ್ಟತೆ ಬರುವುದು ಆ ಗ್ರಾಮದ ಭೌಗೋಳಿಕ ಸ್ವರೂಪದಿಂದ, ಭೌಗೋಳಿಕ ನೆಲೆಯಲ್ಲಿ 'ಬನ್ನೇರುಘಟ್ಟ' ಬೆಟ್ಟಗುಡ್ಡ, ಕಣಿವೆ, ಪ್ರದೇಶಗಳಿಂದ ಕೂಡಿದ್ದು ಸುತ್ತಲೂ ಹಸಿರಿನ ವನರಾಶಿಯಿಂದ ಕಂಗೊಳಿಸುತ್ತಿದ್ದು, ಅನೇಕ ಜೀವರಾಶಿಗಳಿಗೆ ನೆಲೆಬೀಡಾಗಿದೆ ಮತ್ತು ಪ್ರಾಕೃತಿಕ ಸಂಪನ್ಮೂಲಗಳಿಗೆ ಕೇಂದ್ರವಾಗಿದೆ.

ಬನ್ನೇರುಘಟ್ಟ ಅರಣ್ಯ ಪ್ರದೇಶದಲ್ಲಿರುವ ಹಳ್ಳ ಕೊಳ್ಳ, ದಿಣ್ಣೆ, ತಗ್ಗು,ಕಣಿವೆ ಪ್ರದೇಶಗಳನ್ನೊಳಗೊಂಡ ಆಳವಾದ ಕೊರಕಲು ಹಾಗೂ ಬಂಡೆಗಲ್ಲು ಪ್ರದೇಶಗಳ ಎತ್ತರ ಸಮುದ್ರ ಪಾತಾಳದಿಂದ 760 – 1035 ಮೀಟರ್ ಎತ್ತರದಲ್ಲಿದೆ.

ಬನ್ನೇರುಘಟ್ಟದ ಜೈವಿಕ ಉದ್ಯಾನವನದಿಂದ 77^{0}33'30.59"– ಪೂರ್ವದಿಂದ 77^{0}34'6.96" – ಪೂ.ರೇಶಾಂಶ 12^{0}46'31.31" – ಉ.ದಿಂದ 12^{0}48'18.93" – ಉ ಅಕ್ಷಾಂಶ ವರೆಗೆ ಹಬ್ಬಿದೆ.

ಆನೇಕಲ್ ತಾಲ್ಲೂಕಿನ ಪಶ್ಚಿಮದಿಕ್ಕಿನಲ್ಲಿರುವ ಈ ಬನ್ನೇರುಘಟ್ಟ ಪ್ರದೇಶವು ಬೆಟ್ಟಗುಡ್ಡ, ಗಿರಿ–ಕಂದರ ಕಣಿವೆಗಳಿಂದ ಕೂಡಿದ್ದು. ಸದಾ ಹಚ್ಚಹಸಿರಿನಿಂದ ಕಂಗೊಳಿಸುತ್ತಿದೆ. ಈ ಬನ್ನೇರುಘಟ್ಟದ ಸುತ್ತಮುತ್ತಲಿನ ಗ್ರಾಮಗಳು ದಟ್ಟ ಅರಣ್ಯ ಪ್ರದೇಶಗಳಿಂದ ಆವೃತ್ತವಾಗಿದ್ದು. ಇಲ್ಲಿ ಪ್ರಾರಂಭವಾಗುವ ಬೆಟ್ಟ ಗುಡ್ಡಗಳ ಸಾಲು ಕನಕಪುರ, ಮಲೈ ಮಹದೇಶ್ವರ ಬೆಟ್ಟ, ತಮಿಳುನಾಡಿನ ನೀಲಗಿರಿ ರವರೆಗೂ ವಿಸ್ತರಿಸಿದೆ. ಬನ್ನೇರುಘಟ್ಟ ಮತ್ತು ಶಿವನಹಳ್ಳಿ ಅರಣ್ಯಪ್ರದೇಶದಲ್ಲಿ ಗಣಿಗಾರಿಕೆ ಗಣನೀಯವಾಗಿ ಸಾಗಿ ಬರುತ್ತಿದ್ದು ಕೆಲವು ವರ್ಷಗಳ ಹಿಂದೆಯಷ್ಟೆ ಸರ್ಕಾರ ಅಲ್ಲಿ ನಡೆಯುವ ಗಣಿಗಾರಿಕೆಯನ್ನು ನಿಷೇದಿಸಿದೆ. ಬನ್ನೇರುಘಟ್ಟದ ಅರಣ್ಯ ಪ್ರದೇಶದಲ್ಲಿರುವ ಬೆಟ್ಟಗಳು ಈ ಕಾಡಿಗೆ ಕಲಶವಿಟ್ಟಂತೆ ಕಂಗೊಳಿಸುತ್ತಿವೆ, ಹಲವಾರು ವನ್ಯಮೃಗಗಳ ಆಶ್ರಯತಾಣವಾಗಿ ಸಸ್ಯಶ್ಯಾಮಲೆಯ ಮಡಿಲಲ್ಲಿ ಸದಾ ಹಚ್ಚಹಸಿರಿನಿಂದ ಕಂಗೊಳಿಸುತ್ತಿವೆ. ಈ ಅರಣ್ಯ ಪ್ರದೇಶದಲ್ಲಿರುವ ಪ್ರಮುಖ ಬೆಟ್ಟಗಳೆಂದರೆ ದೊಡ್ಡರಾಗಿಹಳ್ಳಿ ಬೆಟ್ಟದ ಎತ್ತರ 1035 ಮೀಟರ್‌ಗಳ ಎತ್ತರವಿದೆ, ಇತರೇ ಬೆಟ್ಟಗಳೆಂದರೆ ಚಿಕ್ಕರಾಗಿಹಳ್ಳಿ ಬೆಟ್ಟ – 969ಮೀ, ಹಜಾಮನಬಂಡೆ – 614ಮೀ, ಮಿರ್ಜಾಬೆಟ್ಟ – 952ಮೀ, ಮೆಟ್ಟುಬಂಡೆ – 948ಮೀ ಮತ್ತು ಸುವರ್ಣಮುಖಿ ಬೆಟ್ಟ –1002ಮೀ ಎತ್ತರವಾಗಿವೆ.

ಸಸ್ಯ ಮತ್ತು ಪ್ರಾಣಿ ಸಂಪತ್ತು

ಈ ಬನ್ನೇರುಘಟ್ಟ ಅರಣ್ಯ ಪ್ರದೇಶದ ವಿಸ್ತೀರ್ಣ 731 ಹೆಕ್ಟೇರ್ ಇದೆ, ಇದು ರಾಜಧಾನಿ ಬೆಂಗಳೂರಿನಿಂದ ಸುಮಾರು 22 ಕಿ.ಮೀ ದೂರದಲ್ಲಿರುವ ನೈಜ ಕಾಡಾಗಿದೆ, ಸದಾಕಾಲ ಹಸಿರಿನ ವನರಾಶಿಯಿಂದ ಕಂಗೊಳಿಸುತ್ತಿರುವ ಈ ಪ್ರದೇಶವು ಅನೇಕ ರೀತಿಯ ಜೀವಸಂಕುಲಕ್ಕೆ ಆವಾಸಸ್ಥಾನವಾಗಿದೆ.

ಈ ಅರಣ್ಯ ಪ್ರದೇಶದಲ್ಲಿ 120 ಜಾತಿಯ ಪಕ್ಷಿಗಳು, ಆನೆ, ಚಿರಚಿತಜ, ಕಾಡುಕೋಣ, ಜಿಂಕೆ ಮತ್ತಿತರ ವನ್ಯಜೀವಿಗಳ ನೆಲೆಯಾಗಿದೆ. ಈ ಅರಣ್ಯ ಪ್ರದೇಶದ ಶ್ರೀಮಂತಿಕೆಯನ್ನು ಗಮನಿಸಿದ ಸರ್ಕಾರ ಇದನ್ನು ರಾಷ್ಟ್ರೀಯ ಉದ್ಯಾನವನ (National Park) ಎಂದು 1974ರಲ್ಲಿ ಘೋಷಿಸಲಾಗಿದೆ. ಇದರ ಉದ್ದೇಶ ಸ್ಥಳೀಯ ಸಸ್ಯ ಮತ್ತು ಪ್ರಾಣಿವರ್ಗ ರಕ್ಷಣೆ. 104.27 ಚ.ಕಿ.ಮೀ ಇದರ ಅಳತೆ ಇದ್ದು ಇತ್ತೀಚಿಗೆ ಇದನ್ನು ಕರ್ನಾಟಕ ಸರ್ಕಾರದ ಮೃಗಾಲಯ ಪ್ರಾಧಿಕಾರದ ವ್ಯಾಪ್ತಿಗೆ ತರಲಾಗಿದೆ.

ಈ ಅರಣ್ಯಪ್ರದೇಶದಲ್ಲಿ ಹಳ್ಳಿ ದಿಣ್ಣೆ, ಏರು ತಗ್ಗು ಹಾಗೂ ಬಂಡೆಗಳಿಂದ ಕೂಡಿರುವ ಈ ವನರಾಶಿಯು ಅನೇಕ ಇಳಿಜಾರು ಕಲ್ಲುಗುಡ್ಡಗಳಿಂದ ತುಂಬಿದೆ. ಅವುಗಳ ಪೈಕಿ ಅತ್ಯಂತ ಎತ್ತರದ ಕಲ್ಲು ಗುಡ್ಡವಾದ ದೊಡ್ಡರಾಗಿಹಳ್ಳಿ ಬೆಟ್ಟ 1035 ಮೀ ಎತ್ತರವಿದೆ. ಈ ವನ ಕರ್ನಾಟಕ ಅರಣ್ಯ ವಿಭಾಗಕ್ಕೆ ಸೇರಿದ ಕಣಿವೆ ಕಂದರಗಳಲ್ಲಿ ಶ್ರೀ ಗಂಧ, ಜಾಲಾರಿ, ಚುಜ್ಜಲು, ಬೇವು, ಹುಣಸೆ, ಬೋರೆ ಮುತ್ತುಗ, ಬೇಲ, ಹೊನ್ನೆ, ತಾರೆ ಮುಂತಾದ ಅನೇಕ ಮರಗಳು ಬೆಳೆದಿದೆ. ಇವುಗಳ ಮಧ್ಯೆ ಅಲ್ಲಲ್ಲೆ ವಿಫುಲವಾದ ಬಿದಿರು ಮೆಳೆಗಳು ಬೆಳೆದಿರುವ ಕಾರಣ ಈ ಕಾಡು ಆನೆಗಳ ಆವಾಸಸ್ಥಾನವೂ ಹೌದು.

ಸುಮಾರು ನಲವತ್ತುಕ್ಕೂ ಮೀರಿದ ಹಳ್ಳಗಳು ತೊರೆಗಳು ಮಳೆಗಾಲದಲ್ಲಿ ತುಂಬಿ ಹರಿಯುತ್ತವೆ. ಒಟ್ಟು 104 ಚ.ಕಿ. ವಿಸ್ತೀರ್ಣದ ಈ ಕಾಡಿನ ಪ್ರದೇಶದಲ್ಲಿ ಅಲ್ಲಲ್ಲೆ ಹದಿನಾಲ್ಕು ಕಾಡುಗಳನ್ನು 'ರಕ್ಷಿತವನ'ಗಳೆಂದು ಘೋಷಿಸಲಾಗಿದೆ. ಈ ಹದಿನಾಲ್ಕು ವನಗಳು ಬೆಂಗಳೂರು ಜಿಲ್ಲೆಯ ಸರಹದ್ದಿನಲ್ಲಿದೆ. ಅರಣ್ಯದ ಉತ್ತರಕ್ಕೆ ತಮಿಳುನಾಡಿನ ಗಡಿಭಾಗ ಇದೆ. ದೊಡ್ಡರಾಗಿ ಹಳ್ಳಿ ಮತ್ತು ಚಿಕ್ಕರಾಗಿಹಳ್ಳಿಗಳ ನಡುವಣ ಕಣಿವೆಯಲ್ಲಿ ಹರಿದುಬರುವ ಸುವರ್ಣಮುಖಿ ನದಿಯನ್ನು ನೋಡುವುದೇ ಒಂದು ಆನಂದ, ಗಿರಿಕಂದರಗಳ ನಡುವೆ ಚಿಕ್ಕ ಚಿಕ್ಕ ತೊರೆಗಳ ಮೂಲಕವಾಗಿ ಹರಿದುಬರುವ ಈ ನದಿ ಔಷದಿಯ ಗುಣವನ್ನು ಹೊಂದಿದೆ ಎಂಬ ಪ್ರತೀತಿಯಿದೆ.

ಬಂಡೆಯ ಬುಡದಲ್ಲಿ ಪ್ರವಾಸಾರ್ಥಿಗಳ ಆರಾಧ್ಯದೈವವಾದ ಚಂಪಕಧಾಮ ಸ್ವಾಮಿಯ ದೇಗುಲವಿದೆ. ಈ ಅರಣ್ಯ ಪ್ರದೇಶದ ರಾಗಿಹಳ್ಳಿ ಬೆಟ್ಟದಲ್ಲಿ ಪ್ರಾಚೀನಕಾಲದ ಗುಹೆಯಿದೆ, ಈ ಗುಹೆ ದಟ್ಟವಾದ ಕಾಡಿನ ಮಧ್ಯಭಾಗದ ಈ ಬೆಟ್ಟದಲ್ಲಿದೆ, ನೈಸರ್ಗಿಕವಾಗಿ ನಿರ್ಮಾಣಗೊಂಡಿರುವ ಈ ಗುಹೆ ತುಂಬಾ ಕುತೂಹಲಕಾರಿಯಾಗಿದೆ.

ಈ ಅರಣ್ಯದಲ್ಲಿ ಕಂಡುಬರುವ ಮತ್ತೆರಡು ಪ್ರಮುಖ ಸ್ಥಳಗಳೆಂದರೆ, ಉಡಿನಬಂಡೆ ಮತ್ತು ಹಜಾಮನ ಬಂಡೆ. ಈ ಹಜಾಮನ ಬಂಡೆಯು ಸಾಮಾನ್ಯವಾಗಿ ಇಲ್ಲಿಗೆ ಆಗಮಿಸುವ ವಿದೇಶಿಯರು "Hajjam's Rock" ಎಂದು ಹೇಳುತ್ತಾರೆ. ಈ ಬಂಡೆಯ ತುದಿ ಚೂಪಾಗಿದ್ದು, ಕ್ಷೌರಿಕರು ಕತ್ತಿ ಹರಿತ ಮಾಡಲು ಉಜ್ಜುವ ಕಲ್ಲಿನಂತೆ ಕಾಣುತ್ತದೆ ಎಂದು ಈ ಬಂಡೆಗೆ 'ಹಜಮನ ಬಂಡೆ' ಎಂದು ಹೆಸರು ಇಡಲಾಗಿದೆ.

ಉಡಿನಬಂಡೆಯಿಂದ ಕಾಡಾನೆಗಳು ಓಡಾಡುವುದನ್ನು ಸುರಕ್ಷಿತವಾಗಿ ನೋಡಬಹುದು ಈ ಎತ್ತರವಾದ ಪ್ರದೇಶದಲ್ಲಿ ನಿಂತು ಈ ಅರಣ್ಯ ಪ್ರದೇಶಗಳನ್ನು ವೀಕ್ಷಿಸುತ್ತಿದ್ದರೆ ಇಡೀ ವನರಾಶಿಯು ಹಚ್ಚಹಸಿರಾಗಿ ಕಂಗೊಳಿಸುತ್ತಿರುವುದನ್ನು ಕಣ್ತುಂಬಿಕೊಳ್ಳಬಹುದು.

ಮಿರ್ಜಾಬೆಟ್ಟ ಹಾಗೂ ದೇವ್‌ಭಾಗ್ ಇವೆರಡು ಚಾರಣಸ್ಥಳಗಳು, ಅಲ್ಲದೆ ಆನೆಯ ಮೇಲೆ ಹೋಗುವ ಸಫಾರಿ ಕಾರ್ಯಕ್ರಮವೂ ಇದೆ. ಮುಂಚಿತವಾಗಿಯೇ ಈ ಕಾರ್ಯಕ್ರಮಗಳನ್ನು ಗೊತ್ತುಪಡಿಸಬಹುದು.

<u>ಮಣ್ಣು</u> : ಈ ಪ್ರದೇಶದ ಭೂಮಿಯ ಮೇಲ್ಭಾಗದಲ್ಲಿ ಸಿಗುವ ಮಣ್ಣು 'ಕೆಂಪು ಮಣ್ಣು', ಸುವರ್ಣಮುಖಿ ಕಣಿವೆಯಲ್ಲಿರುವ ಮಣ್ಣು – ನಯವಾದ ಮಣ್ಣು, ಅರಣ್ಯದಲ್ಲಿ ಬೆಟ್ಟಗುಡ್ಡಗಳ ಅಡಿಯಲ್ಲಿ ಸದಾ ಹರಿಯುವ ನೀರಿನಿಂದ ಸಣ್ಣಸಣ್ಣ ಶಿಲೆಗಳು ಚೂರಾಗಿ ಈ ಮಣ್ಣು ಉಂಟಾಗಿದೆ. ಆದ್ದರಿಂದ ನಯವಾದ ಮಣ್ಣನ್ನು ಈ ಕಣಿವೆ ಪ್ರದೇಶದಲ್ಲಿ ನೋಡಬಹುದು.

ಈ ಅರಣ್ಯ ಪ್ರದೇಶದ ಬೆಟ್ಟಗಳ ಮೇಲೆ ಈ ಮಣ್ಣಿನ ಪ್ರಮಾಣ ಕಡಿಮೆಯಿದೆ. ತಗ್ಗು ಪ್ರದೇಶಗಳಲ್ಲಿ ಈ ಮಣ್ಣಿನ ಪ್ರಮಾಣ ಹೆಚ್ಚಾಗಿದೆ.

<u>ಹವಾಮಾನ</u> :

ಈ ಪ್ರದೇಶಕ್ಕೆ ಸಂಬಂಧಿಸಿದ ಹಾಗೆ ತಜ್ಞರು 3 ರೀತಿಯ ಹವಾಮಾನವನ್ನು ಗುರ್ತಿಸಿದ್ದಾರೆ, ಇಡೀ ವರ್ಷಪೂರ್ತಿ ಈ ಪ್ರದೇಶದಲ್ಲಿ ವಾಯುಗುಣ ಆಹ್ಲಾದಕರವಾಗಿರುತ್ತದೆ.

<u>ಬೇಸಿಗೆಕಾಲ</u> :

ಇದು ಫೆಬ್ರವರಿ ಮಧ್ಯಭಾಗದಿಂದ ಮೆ ಕೊನೆಯವರೆಗೆ ಇರುತ್ತದೆ.

ಇಲ್ಲಿನ ಉಷ್ಣಾಂಶ – 27^0 ಸೆಲ್ಸಿಯಸ್ – ಕನಿಷ್ಠ

– 30^0 ಸೆಲ್ಸಿಯಸ್ – ಗರಿಷ್ಠ

ಮಾರ್ಚ್ ಕೊನೆಯವಾರ ಅಥವಾ ಮೇ ಮೊದಲವಾರದಲ್ಲಿ – 35^0 ಸೆಲ್ಸಿಯಸ್‌ನಲ್ಲಿ ಗರಿಷ್ಠ ಉಷ್ಣಾಂಶವಿರುತ್ತದೆ.

<u>ಮಳೆಗಾಲ</u> :

ಜೂನ್ ಪ್ರಾರಂಭದಿಂದ ನವೆಂಬರ್ ತಿಂಗಳವರೆಗೆ ಇರುತ್ತದೆ

ಈ ಪ್ರದೇಶದಲ್ಲಿ ಜುಲೈ ತಿಂಗಳಲ್ಲಿ ಹೆಚ್ಚಿನ ಮಳೆ ಸುರಿಯುತ್ತದೆ

ನೈರುತ್ಯದಿಂದ ವಾಯವ್ಯದ ಮಾನ್‌ಸೂನ್ ಮಾರುತಗಳು ಈ ಅರಣ್ಯ ಪ್ರದೇಶದ ಕಡೆ ಹೆಚ್ಚಾಗಿ ಬೀಸುತ್ತವೆ.

ಚಳಿಗಾಲ :

ಈ ಪ್ರದೇಶದಲ್ಲಿ 'ಚಳಿಗಾಲ' ತುಂಬಾ ಆಹ್ಲಾದಕರವಾಗರುತ್ತದೆ.
ಇದು ತುಂಬಾ ಶೀತದಕಾಲವಾಗಿದ್ದು, ನವೆಂಬರ್ ನಿಂದ ಫೆಬ್ರವರಿ ಮಧ್ಯಭಾಗದವರೆಗೂ ಇರುತ್ತದೆ.

ಮಳೆ ಪ್ರಮಾಣ :

ಬನ್ನೇರುಘಟ್ಟ ಪ್ರದೇಶದಲ್ಲಿ ಮಳೆ ಪ್ರಮಾಣ ಮೊದಲಿನಿಂದಲೂ ಉತ್ತಮವಾಗಿ ಬೀಳುತ್ತದೆ. ದಟ್ಟವಾದ ಅರಣ್ಯ ಪ್ರದೇಶ ಆವರಿಸಿರುವುದರಿಂದ ಆಗಾಗ ಮಳೆ ಬೀಳುತ್ತಿರುತ್ತದೆ. ರೈತರು ಈ ಪ್ರದೇಶದಲ್ಲಿ ಮಳೆಯಶ್ರಿತರಾಗಿ ಬೇಸಾಯವನ್ನು ಅವಲಂಭಿಸಿದ್ದಾರೆ. ಆಗಾಗ ಅತಿವೃಷ್ಠಿ-ಅನಾವೃಷ್ಠಿಯಿಂದ ಏರುಪೇರಾಗುವುದು ಉಂಟು. ಸಾಮಾನ್ಯವಾಗಿ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಿನಲ್ಲಿ ಮಳೆಯ ಪ್ರಮಾಣ ಅಧಿಕವಾಗಿರುತ್ತದೆ. ಜೂನ್ ಮತ್ತು ಆಗಸ್ಟ್ ತಿಂಗಳಲ್ಲಿ ಧಾರಾಕಾರವಾಗಿ ಮಳೆ ಬೀಳುತ್ತಿರುತ್ತದೆ.

ಈ ಅರಣ್ಯ ಪ್ರದೇಶದಲ್ಲಿ ವಾರ್ಷಿಕ ಸರಾಸರಿ ಮಳೆಯ ಪ್ರಮಾಣ – 625 ಮಿಮಿ ನಿಂದ 750 ಮಿಮೀ ವರೆಗೂ ಬೀಳುತ್ತಿರುತ್ತದೆ.

ಅನಿರ್ದಿಷ್ಟ ಸಂದರ್ಭಗಳಲ್ಲಿ ಚಂಡಮಾರುತಗಳಿಂದ ಕೂಡಿದ ಮಳೆ ಅಕ್ಟೋಬರ್ / ನವೆಂಬರ್ ತಿಂಗಳಲ್ಲಿ ಬೀಳಬಹುದು. ಈ ಬನ್ನೇರುಘಟ್ಟ ಪ್ರದೇಶದಲ್ಲಿ 'ಮಳೆಮಾಪನ' ಕೇಂದ್ರವಿದೆ.

ಉಷ್ಣಾಂಶ :

ಈ ಪ್ರದೇಶದಲ್ಲಿ ಉಷ್ಣಾಂಶ ಆಹ್ಲಾದಕರವಾಗಿರುತ್ತದೆ.
ಕನಿಷ್ಠ – 27^0 ಸೆಲ್ಸಿಯಸ್
ಗರಿಷ್ಠ – 37^0 ಸೆಲ್ಸಯಸ್
ಸಮಾನ್ಯವಾಗಿ ಬೆಟ್ಟ ಪ್ರದೇಶಗಳ ಕಡೆ $10–12^0$ ಸೆಲ್ಸಿಯಸ್‌ನಷ್ಟು ಉಷ್ಣಾಂಶವಿರುತ್ತದೆ. ಬೇಸಿಗೆಯ ಕಾಲದಲ್ಲಿ ಸೂರ್ಯನು ಪ್ರಖರನಾಗಿರುತ್ತಾನೆ. ಬೇಸಿಗೆ ಕಾಲ ಬಿಟ್ಟು ಬೇರೆ ಕಾಲಗಳಲ್ಲಿ ಚಳಿಯಿಂದ ರಾತ್ರಿಗಳು ಶೀತವಾಗಿರುತ್ತದೆ.

ಆರ್ದ್ರತೆ :

ಈ ಆರ್ದ್ರತೆಯು ಬೇಸಿಗೆ ಮತ್ತು ಚಳಿಗಾಲದಲ್ಲಿ ಸಾಮಾನ್ಯವಾಗಿ ಕಡಿಮೆಯಿರುತ್ತದೆ. ಏಪ್ರಿಲ್–ಮೇ ತಿಂಗಳಲ್ಲಿ ಈ ಆರ್ದ್ರತೆ ಹೆಚ್ಚಾಗಿರುತ್ತದೆ. ಅಕ್ಟೋಬರ್ ತಿಂಗಳಲ್ಲಿ ಈ ಆರ್ದ್ರತೆ 85^0 ಸೆಲ್ಸಿಯಸ್ ಏರಿಕೆಯಾಗುತ್ತದೆ.

ಮಾರುತಗಳ ವೇಗ :

ಈ ಪ್ರದೇಶದಲ್ಲಿ ಆಗಾಗ ಚಂಡಮಾರುತ ಮತ್ತು ಬಿರುಗಾಳಿ ತೀವ್ರವಾಗಿದ್ದರೂ ಸಹ ಎತ್ತರವಾದ ಬೆಟ್ಟಗಳಿರುವುದರಿಂದ ಯಾವುದೇ ಹಾನಿ ಉಂಟಾಗುವುದಿಲ್ಲ. ಪ್ರಮುಖವಾಗಿ ಜೂನ್–ಜುಲೈ ತಿಂಗಳಲ್ಲಿ ಈ ಮಾರುತಗಳ ವೇಗ ಮಧ್ಯಮವಾಗಿರುತ್ತದೆ.

ಬರಗಾಲ :

ಬರಗಾಲ ಸಾಮಾನ್ಯವಾಗಿ ಕಂಡುಬಂದಿಲ್ಲ. ಆದರೂ ಸಹ 1970–80ನೇ ವರ್ಷದಲ್ಲಿ ಈ ಪ್ರದೇಶದಲ್ಲಿ ನೀರಿನ ಮೂಲಗಳು ಬರಿದಾಗಿ ಕುಡಿಯುವ ನೀರು ಮತ್ತು ಜಾನುವಾರುಗಳಿಗೆ ಆಹಾರವಿಲ್ಲದೆ ಈ ಪ್ರದೇಶ ತೊಂದರೆಗೆ ಒಳಗಾಗಿತ್ತು.

ಆನೆ–ಮಾನವ ಸಂಘರ್ಷ:

ಬನ್ನೇರುಘಟ್ಟದ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಆನೆ–ಮಾನವನ ಸಂಘರ್ಷವಿದೆ. ಮಾನವನ ಅತಿಯಾಸೆಯ ಫಲವೇ ಈ ಸಂಘರ್ಷಕ್ಕೆ ಕಾರಣವಾಗಿದೆ. ಮಾನವನು ಇಲ್ಲಿನ ಕಾಡುಗಳಲ್ಲಿ ಮರಗಳ್ಳತನ, ಗಣಿಗಾರಿಕೆಯಿಂದ ಅವುಗಳ ಆಹಾರ–ಆವಾಸಗಳಿಗೆ ತೀವ್ರ ದಕ್ಕೆ ಉಂಟುಮಾಡಿದ್ದಾನೆ. ಪ್ರತಿದಿನ 200ಕೆ.ಜಿ ಆಹಾರ ಹಾಗೂ 300–400 ಲೀಟರ್ ನೀರಿನ ಅವಶ್ಯಕತೆಯಿರುವ ಆನೆಗಳ ಪ್ರಮುಖ ಆಹಾರವಾದ ಬಿದಿರನ್ನು ಕಡಿದು ಸಾಗಿಸಲಾಗುತ್ತಿದೆ. ಇಲ್ಲಿ ಮರಗಳ ಹಾವಳಿ ಹೆಚ್ಚಾಗಿದ್ದು ಆನೆಗಳು ಹೆಚ್ಚಾಗಿ ತಿನ್ನದ ಮರಜಾತಿಗಳು, ಲಾಂಟವಾ ಇತ್ಯಾದಿ ಕಳಗಿಡಗಳು ಮಾತ್ರ ಉಳಿದುಕೊಂಡಿವೆ. ಇದೇ ಕಾಡಿನ ಹೊರಗೆ ಆನೆಗಳಿಗೆ ಇಷ್ಟವಾದ ಕಬ್ಬು, ರಾಗಿ, ಬತ್ತ, ಪ್ಪಾಯ ಇತ್ಯಾದಿಗಳನ್ನು ಬೆಳೆಯಲಾಗುತ್ತದೆ. ಇದೇ ಇಲ್ಲಿನ ಆನೆಗಳಿಗೆ ಆಕರ್ಷಣೀಯವಾಗಿದೆ ಹೀಗೆ ಮನುಷ್ಯ ತನ್ನ ದುರಾಸೆಯ ಫಲವಾಗಿ ಕಾಡನ್ನು ತನ್ನ ಅನುಕೂಲಕ್ಕಾಗಿ ನಾಶಮಾಡುತ್ತಿದ್ದರೆ ಇದರಿಂದ ಕೋಪಗೊಂಡ ಆನೆಗಳು ಮನುಷ್ಯನ ಆವಾಸಸ್ಥಾನಗಳಿಗೆ ಆಹಾರಕ್ಕಾಗಿ ಆಗಾಗೆ ಲಗ್ಗೆಯಿಡುತ್ತದೆ. ಆನೆಗಳ ದಾಳಿಯಿಂದ ಕುಪಿತನಾದ ಮನುಷ್ಯ ಅನೇಕ ರೀತಿಯಲ್ಲಿ ಕೇಕೆ ಹಾಕುತಾ ಶಬ್ಧಗಳನ್ನು ಮಾಡುತ್ತಾ ಆನೆಗಳನ್ನು ಭಯಭೀತಗೊಳಿಸಿ ಮತ್ತೆ ಅರಣ್ಯಕ್ಕೆ ಅಟ್ಟಲು ಪರಿತಪಿಸುತ್ತಾನೆ. ಇಂಥ ಸಂದರ್ಭದಲ್ಲಿ ಆಗಾಗೆ ಆನೆಯು ದಾಳಿಯಿಂದ ಹಲವಾರು ವ್ಯಕ್ತಿಗಳು ಪ್ರಾಣ ಕಳೆದುಕೊಂಡಿರುವ ಪ್ರಸಂಗಗಳು ಉಂಟಾಗಿದೆ.

ಈ ಅರಣ್ಯ ಪ್ರದೇಶದಲ್ಲಿರುವ ಐವತ್ತಾರು ಆನೆಗಳು ದಿನಂಪ್ರತಿ ಬನ್ನೇರುಘಟ್ಟದ ಸುತ್ತಮುತ್ತಲಿನ 236 ಹಳ್ಳಿಗಳಿಂದ ಮೇಯಲು ಬರುವ 7500 ಜಾನುವಾರುಗಳೊಂದಿಗೆ ಆಹಾರಕ್ಕಾಗಿ ನೇರವಾಗಿ ಸ್ಪರ್ಧಿಸಬೇಕಾಗಿದೆ. ಆನೆಗಳಿಂದ ಬೆಳೆಹಾನಿ ಎಂಬುದು ಮಾತ್ರ ದೊಡ್ಡದಾಗಿ ಕಾಣುತ್ತದೆ. ನಿಜದಲ್ಲಿ ಕಾಡುಪ್ರಾಣಿಗಳಿಂದ ಬೆಳೆಗಾಗುವ ಹಾನಿಯಲ್ಲಿ ಶೇ 40% ರಷ್ಟು ಮಾತ್ರ ಆನೆಯಿಂದಾಗುತ್ತದೆ. ಉಳಿದ ಹಾನಿ ಕಾಡುಹಂದಿ, ಮುಳ್ಳುಹಂದಿ ಹಾಗೂ ಮೂಷಿಕಗಳಿಂದಾಗುತ್ತದೆ.

ನಮ್ಮ ಸಂಸ್ಕೃತಿ, ಸಾಹಿತ್ಯ, ಲಲಿತಕಲೆಗಳಲ್ಲಿ ಹಾಸುಹೊಕ್ಕಾಗಿ ಬೆಸೆದುಕೊಂಡಿರುವ ಈ ಗಜರಾಜನು ರಾಜರನ್ನು ಹಿರಿಯ ಸಾಹಿತಿಗಳನ್ನು ಹೊತ್ತು ತಿರುಗುತ್ತಾನೆ. ಇಂದಿನ ದಿನಗಳಲ್ಲಿ ತನ್ನ ಉಳಿವಿಗಾಗಿ ಮಾನವನೊಂದಿಗೆ ಗೋಡೆಗೆ ಬೆನ್ನುಕೊಟ್ಟು ಹೋರಾಡುವ ಪರಿಸ್ಥಿತಿ ಬಂದೊದಗಿದೆ.

ಅಧ್ಯಾಯ – 3

ಚಾರಿತ್ರಿಕ ಮಹತ್ವ

ಬೆಂಗಳೂರು ಮತ್ತು ಆನೇಕಲ್ಲಿನ ಹೆದ್ದಾರಿಯ ನಡುವೆ ಕಂಡುಬರುವ ಈ ಬನ್ನೇರುಘಟ್ಟ ಪ್ರದೇಶವು ಪ್ರಾಗೈತಿಹಾಸಿಕ ಕಾಲದಿಂದಲೂ ತನ್ನದೇ ಆದ ಐತಿಹಾಸಿಕತೆಯನ್ನು ಕಂಡುಕೊಂಡ ಭೂನೆಲೆ. ಈ ಪ್ರದೇಶದಲ್ಲಿ ಬೃಹತ್ ಶಿಲಾಯುಗದ ಅವಶೇಷಗಳನ್ನು ಇಂದಿಗೂ ಕಾಣಬಹುದು. ಸಾಮಾನ್ಯವಾಗಿ ಬೆಟ್ಟ ಗುಡ್ಡ ಕಾಡು ಕಣಿವೆಗಳನ್ನು ಹೊಂದಿರುವ ಪ್ರದೇಶವನ್ನು ಘಟ್ಟ ಪ್ರದೇಶವೆಂತಲೂ ಕರೆಯುವುದುಂಟು. ಈ ರೀತಿಯಲ್ಲಿ ಈ ಪ್ರದೇಶ ಕಾಡು ಕಣಿವೆ ಕಂದರಗಳನ್ನು ಒಳಗೊಂಡ ಪ್ರದೇಶವಾದ್ದರಿಂದ ಇದಕ್ಕೆ 'ಬನ್ನೇರುಘಟ್ಟ' ಎಂಬ ಹೆಸರು ಇಲ್ಲಿನ ಭೌಗೋಳಿಕತೆಯಿಂದ ಬಂದಿರಬಹುದು. ನೈಸರ್ಗಿಕವಾಗಿ ಈ ಬನ್ನೇರುಘಟ್ಟ ಪ್ರದೇಶದಲ್ಲಿರುವ ವಹ್ನಿಗಿರಿ ಬೆಟ್ಟದ ಬುಡದಲ್ಲಿರುವ ಈ ಸ್ಥಳದ ಚಾರಿತ್ರಿಕತೆಯನ್ನು ಸಾರುವ ಶ್ರೀ ಚಂಪಕಧಾಮ ಸ್ವಾಮಿಯ ದೇವಾಲಯ ಮತ್ತು ಈ ಘಟ್ಟ ಪ್ರದೇಶಗಳ ನಡುವೆ ಪ್ರವಹಿಸುತ್ತಿರುವ ಸುವರ್ಣಮುಖಿ ಸರೋವರ, ಇವೆಲ್ಲವೂ ಪ್ರಕೃತಿ ಮಾತೆ ಈ ಪ್ರದೇಶಕ್ಕೆ ನೀಡಿದ ವರದಾನವಾಗಿದೆ. ಸುಂದರವಾದ ಗಿರಿಕಂದರ ವನಗಳಿಂದ ಕೂಡಿದ ಈ ಪ್ರದೇಶವು ಹಲವಾರು ರಾಜವಂಶಗಳ ಆಳ್ವಿಕೆಗೆ ಸಾಕ್ಷಿಯಾಗಿದೆ. ಈ ರೀತಿಯಾಗಿ ನೈಸರ್ಗಿಕ ಸಂಪತ್ತಿನ ನೆಲೆವೀಡಾದ ಈ ಪ್ರದೇಶ ಭೌಗೋಳಿಕವಾಗಿ ತನ್ನದೆ ಆದ ಅಸ್ತಿತ್ವವನ್ನು ಹೊಂದಿದ್ದರು ಚಾರಿತ್ರಿಕವಾಗಿ ಹಲವಾರು ರೀತಿಯ ಕುರುಹುಗಳು ಬಿಟ್ಟಿಹೋಗಿದೆ. ಈ ಕುರುಹುಗಳೇ ಪ್ರಸ್ತುತ ಈ ಪ್ರದೇಶದ ಇತಿಹಾಸವನ್ನು ಸಾರುವ ಮೂಕಸಾಕ್ಷಿಗಳಾಗಿ ನಿಂತಿವೆ.

ಇತಿಹಾಸ ಪೂರ್ವಕಾಲ[1]

ಈ ಕಾಲವನ್ನು ಆಧಾರಗಳೇ ಇಲ್ಲದ ಕಾಲವೆಂದು ಕರೆಯುವ ಕೇವಲ ಕಲ್ಲುಗಳೇ ಈ ಕಾಲದಲ್ಲಿ ಮಾತಾನಾಡುತ್ತದೆ. ಶಾಸನಗಳು, ಲೇಖನಗಳು, ಸ್ಥಳಪುರಾಣ, ಮೌಖಿಕ ಸಂಪ್ರದಾಯ, ಶಿಲಾಮಂಟಪಗಳು ಇವೆಲ್ಲವೂ ಈ ಪ್ರದೇಶದ ಐತಿಹಾಸಿಕವಾದ ಮಹತ್ವವನ್ನು ಹೇಳುವ ಸಾಕ್ಷಿಗಳಾಗಿವೆ. ಇವೆಲ್ಲವೂ ನಗರ ಪರಿಸರಕ್ಕೆ ಅತಿ ಸಮೀಪದಲ್ಲಿರುವ ಈ ಬನ್ನೇರುಘಟ್ಟ ಪ್ರದೇಶದಲ್ಲಿ ಬೃಹತ್ ಶಿಲಾಯುಗದ ಸಮಾಧಿಗಳು ಅಲ್ಲಲ್ಲಿ ಕಂಡುಬರುತ್ತದೆ. ಬನ್ನೇರುಘಟ್ಟದ ಸುತ್ತಮುತ್ತಲ ಪ್ರದೇಶಗಳಾದ ಸಂಪಿಗೆ ಹಳ್ಳಿ, ಷರೀಸ್ ಗಾರ್ಡನ್, ಶಿವನಹಳ್ಳಿ, ಉದ್ದಿನಬಂಡೆ, (ಬನ್ನೇರುಘಟ್ಟ ನ್ಯಾಷನಲ್ ಪಾರ್ಕಿನಲ್ಲಿದೆ) ಮುಂತಾದ ಕಡೆಗಳಲ್ಲಿ ಈ ಬೃಹತ್ ಶೀಲಾಯುಗದ ಸಮಾಧಿಗಳು ಕಂಡುಬರುತ್ತವೆ. ಇವನ್ನು "ಶಿಲಾಯುಗದ ಗೋರಿಗಳೆಂದು" ಕರೆಯುವರು.

ಪ್ರಾಗೈತಿಹಾಸಿಕ ಕಾಲವನ್ನು ಆದಿಶಿಲಾಯುಗ (ಪೇಲಿಯೋ ಲಿಥಿಕ್ ಏಜ್) ಸೂಕ್ಷ್ಮ ಶಿಲಾಯುಗ (ಮೈಕ್ರೋಲಿಥಿಕ್ ಏಜ್) ನವ ಶಿಲಾಯುಗ (ನಿಯೋಲಿಥಿಕ್ ಏಜ್) ಎಂದು ಸ್ಥೂಲವಾಗಿ ಮೂರು ಭಾಗ ಮಾಡಬಹುದು. ನವಶಿಲಾಯುಗವನ್ನು ಶಿಲಾತಾಮ್ರಯುಗ (ಚಾಲ್ಕೋಲಿಥಿಕ್) ಹಾಗೂ ಬೃಹತ್ ಶಿಲಾಯುಗ (ಮೆಗಾಲಿಥಿಕ್ ಏಜ್) ಅಥವಾ ಕಬ್ಬಿಣಯುಗ (ಐರನ್ ಏಜ್) ಎಂದು ವಿಂಗಡಿಸಲಾಗಿದೆ.

---

[1] ಬೆಂಗಳೂರು ದರ್ಶನ, ಸಂ – ಡಾ॥ ಸೂರ್ಯನಾಥ ಕಾಮತ್ ಪು–06.

ಪ್ರಸ್ತುತ ಈ ಅಧ್ಯಯನಕ್ಕೆ ಸಂಬಂಧಿಸಿದ್ದು 'ಬೃಹತ್ ಶಿಲಾಯುಗ' ಇದು ಕ್ರಿಪೂ ಒಂದು ಸಾವಿರದ ಇನ್ನೂರರಿಂದ ಕ್ರಿ.ಪೂ ಮೂರನೇಯ ಶತಮಾನದವರೆಗೆ ಅಸ್ಥಿತ್ವದಲ್ಲಿತ್ತು. ಈ ಬೃಹತ್ ಶಿಲಾಯುಗದ ಅವಶೇಷಗಳು ಬಾಣಸವಾಡಿ ಬಳಿಯ ಕಣ್ಣೂರು, ಜಾಲಹಳ್ಳಿ, ಬೈರಸಂದ್ರ, ಬೇಗೂರು, ದೊಡ್ಡಜಾಲ, ಚಿಕ್ಕಜಾಲ, ಬೆಳ್ಳಂದೂರು, ಹುಳಿಮಾವು, ನಗರ ಪರಿಸರದ ಬನ್ನೇರುಘಟ್ಟ ಚೌಡಸಂದ್ರ, ಬೂದಿಹೊಲ, ಜಡಿಗೇನಹಳ್ಳಿ ಮುಂತಾದ ಸ್ಥಳಗಳಲ್ಲಿ ದೊರೆತಿವೆ. ಇವರಿಂದ ಕ್ರಿ.ಪೂ 1000 ವರ್ಷಗಳಿಂದ ಈಚೆ (ಎಂದರೆ ಕಳೆದ ಮೂರು ಸಾವಿರ ವರ್ಷಗಳಿಂದ) ಮಾನವನು ಇಲ್ಲಿ ಕೃಷಿಯಲ್ಲಿ ನಿರತನಾಗಿದ್ದನೆಂದು ತಿಳಿಯಬಹುದು. ಇದಲ್ಲದೆ ಚಿಕ್ಕಜಾಲ, ಕಣ್ಣೂರು, ಭೈರಸಂದ್ರ ಮುಂತಾದೆಡೆ ಕಲ್ಲು ಚಪ್ಪಡಿಗಳಿಂದ ಮಾಡಿದ ಪುಟ್ಟ ಕೊಠಡಿಗಳ ರೂಪದ ಕಲ್ಲುಗೋರಿಗಳು ದೊರೆತಿವೆ ಇವು ಬೃಹತ್ ಶಿಲಾಯುಗದ ಸಮಾಧಿಗಳು.

ಬನ್ನೇರುಘಟ್ಟದಿಂದ ರಾಷ್ಟ್ರೀಯ ಜೈವಿಕ ಉದ್ಯಾನವನಕ್ಕೆ ಹೋಗುವ ಮಾರ್ಗದಲ್ಲಿ ಸಿಗುವ ಊರು ಸಂಪಿಗೆಹಳ್ಳಿ, ಈ ಊರ ಒಳಗೆ ಬೃಹತ್ ಶಿಲಾಯುಗದ ಸಮಾಧಿಯ ರಚನೆಯೊಂದುನ್ನು ಪ್ರಸ್ತುತ ಈಗಲೂ ಸಹ ನೋಡ ಬಹುದು. ಈ ಸಮಾಧಿಯ ಸುತ್ತಲೂ ಅನೇಕ ಮನೆಗಳು ನಿರ್ಮಾಣಗೊಂಡಿವೆ ಈ ಸಮಾಧಿಯ ಮೇಲಿನ ಕಲ್ಲುಚಪ್ಪಡಿಯ ಬೃಹತ್ ಗಾತ್ರವಾಗಿದ್ದು, ಸಮಾಧಿಯ ಮೇಲಿನ ಕಲ್ಲಿನ ರಚನೆಯೊಂದೇ ಪ್ರಸ್ತುತ ನಮಗೆ ಕಾಣಿಸುತ್ತದೆ. ಈ ಬೃಹತ್ ಕಲ್ಲಿನ ಸುತ್ತಲು ಹಲವಾರು ತ್ಯಾಜ್ಯ ಮತ್ತು ದಿನಬಳಕೆಗಾಗಿ ಉರುವಲನ್ನು ಹರಡಿದೆ ಹೀಗಾಗಿ ಈ ಸಮಾಧಿ ಇಂದು ಆ ಪ್ರದೇಶದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿದ್ದು ಮುಂದಿನ ದಿನಗಳಲ್ಲಿ ಮನೆಗಳ ನಿರ್ಮಾಣದ ನಿಮಿತ್ತ ಈ ಸಮಾಧಿಯು ಕಣ್ಮರೆಯಾಗುವ ಸಂಭವಗಳು ಹೆಚ್ಚಾಗಿದೆ. ಬನ್ನೇರುಘಟ್ಟ ಗ್ರಾಮದ ದೇವಾಲಯದ ಹಿಂಬದಿಯಲ್ಲಿ ಶಾನುಭೋಗನಹಳ್ಳಿಗೆ ಹೋಗುವ ದಾರಿಯಲ್ಲಿ ಷರೀಫ್ ಗಾರ್ಡನ್ ಇದೆ. ಈ ಷರೀಫ್ ಗಾರ್ಡನ್‌ನಲ್ಲಿ ಪ್ರಸ್ತುತ ಮನೆಗಳ ನಿರ್ಮಾಣಕ್ಕೆ ಹಲವಾರು ನಿವೇಶನಗಳನ್ನು ವಿಂಗಡಿಸಲಾಗಿದ್ದು. ಈ ಸ್ಥಳದಲ್ಲಿ ಈ ಶಿಲಾಯುಗದ ಸಮಾಧಿಗಳು ಬಹಳಷ್ಟು ಹಾಳಾಗಿದೆ. ಪ್ರಸ್ತುತ ಆಧುನಿಕತೆಯ ಹಿನ್ನೆಲೆಯಲ್ಲಿ ಹಲವರು ಮನೆಗಳ ನಿರ್ಮಾಣಕ್ಕೆ ಕೆಲವು ಸಮಾಧಿಗಳನ್ನು ಸ್ಪೋಟಿಸಿ ನಾಶಪಡಿಸಿರುವುದನ್ನು ಕಾಣಬಹುದು[2].

ಬನ್ನೇರುಘಟ್ಟ ಸುತ್ತಮುತ್ತಲು ಇರುವ ಈ ಶಿಲಾಸಮಾಧಿಗಳನ್ನು ಪರಿಶೀಲಿಸಿದಾಗ ಇವೆಲ್ಲವೂ ಬೃಹತ್ ಶಿಲಾಯುಗದ ಕಾಲಕ್ಕೆ ಸೇರಿದ್ದವೆಂಬುದನ್ನು ದೃಢಪಡಿಸುತ್ತದೆ.

ಸಂಪಿಗೆ ಹಳ್ಳಿಯಲ್ಲಿನ ಸಮಾಧಿಯು ಕಲ್ಲುಗಳಿಂದ ಮಾಡಿದ ಕಲ್ಲು ತೊಟ್ಟಿಯಂತಿದ್ದು ಇದರ ಮೇಲೆ ಹೊದಿಸಿರುವ ಕಲ್ಲು ಸುಮಾರು 50 ಸೆಂ.ಮೀ ದಪ್ಪ, 4 ಮೀಟರ್ ಅಗಲ ಮತ್ತು 5.5 ಮೀಟರ್ ಉದ್ದವಾಗಿದೆ. ಸುತ್ತಲು ಮಣ್ಣಿನ ಕೊಂತದಿಂದ ಸ್ವಲ್ಪ ಶಿಥಿಲವಾಗಿದೆ, ಮುಚ್ಚಳದ ಕಲ್ಲು ದಕ್ಷಿಣ ದಿಕ್ಕಿಗೆ ಉದ್ದಕ್ಕೆ ಮುರಿದಿದೆ. ಇದರ ಸುತ್ತಲೂ ಬಯಲಿದೆ. ಇದೇ ತರಹದ ಸಮಾಧಿಗಳು ಬನ್ನೇರುಘಟ್ಟದ ಸುತ್ತಮುತ್ತಲೂ ಸಾಕಷ್ಟು ಸಂಖ್ಯೆಯಲ್ಲಿವೆ.

[2] ಇತಿಹಾಸ ದರ್ಶನ, ಸಂ-8, ಡಾ ॥ ದೇವರಕೊಂಡಾರೆಡ್ಡಿ, ಪು-01

ಶ್ಯಾನುಭೋಗನಹಳ್ಳಿಗೆ ಹೋಗುವ ದಾರಿಯಲ್ಲಿ ಷರಿಫ್ ಗಾರ್ಡನ್ ಬಳಿ ಇರುವ ಪ್ರಾಗೈತಿಹಾಸಿಕ ಗೋರಿಗಳು ಬೃಹತ್ ಶಿಲಾಯುಗದ ಕಾಲಕ್ಕೆ ಸೇರಿದ್ದರೂ ಈ ಪ್ರದೇಶದ ಇತರೆಡೆಗಳಲ್ಲಿ ಕಾಣುವಂತೆ ವೃತ್ತಾಕಾರವಾದ ಕಪ್ಪು ಉರುಟುಕಲ್ಲುಗಳನ್ನು ಹೊಂದಿರುವುದಿಲ್ಲ. ಅಲ್ಲಿಯೇ ದೊರೆಯುವ ಚಪ್ಪಡಿಕಲ್ಲುಗಳನ್ನೇ ವೃತ್ತಾಕಾರವಾಗಿ ಬಳಸಿದೆ. ಅನೇಕ ಸಮಾಧಿಗಳು ತೆರೆದಿರುವುದರಿಂದ ಅವುಗಳ ಒಳರಚನೆಯನ್ನು ಕೂಲಂಕುಷವಾಗಿ ಗಮನಿಸಬಹುದಾಗಿದೆ. ಈ ಸಮಾಧಿಗಳು ಒಳರಚನೆಯಲ್ಲಿ ಆಯುತಾಕಾರವಾಗಿದ್ದು, ನಾಲ್ಕು ಕಡೆ ಚಪ್ಪಡಿಕಲ್ಲುಗಳನ್ನು ಜೋಡಿಸಿ ತೊಟ್ಟಿಯಂತೆ ರಚಿತವಾಗಿದೆ. ಪೂರ್ವಭಾಗದ ಕಲ್ಲಿನಲ್ಲಿ ಸ್ವಲ್ಪಭಾಗವನ್ನು ಅರ್ಧಚಂದ್ರಾಕಾರವಾಗಿ ಕೊರೆದಿದೆ. ಬಳಸಿರುವ ಚಪ್ಪಡಿಗಳು ತೆಳುವಾಗಿವೆ ಮತ್ತು ಅಳತೆಗೆ ಕತ್ತರಿಸಿದಂತೆ ಭಾಸವಾಗುತ್ತದೆ, ಮೇಲಿನ ಮುಚ್ಚಳದ ಕಲ್ಲು ಸಹ ಸ್ಥಳೀಯವಾಗಿ ದೊರೆಯುವ ಕಲ್ಲಾಗಿದ್ದು ಸುತ್ತಲೂ ತೆಳುವಾಗಿ ಮಧ್ಯಭಾಗದಲ್ಲಿ ಮಂದವಾಗಿದೆ. ಇಲ್ಲಿ ಅನೇಕ ಸಮಾಧಿಗಳು ಹಾಳಾಗಿದ್ದು ಹಾಳಾಗದೆ ಉಳಿದಿರುವ ಸಮಾಧಿಗಳ ಮೇಲೆ ಸಣ್ಣ ಸಣ್ಣ ಕಲ್ಲುಗಳ ರಾಶಿ ಕಂಡುಬರುತ್ತದೆ. ಈ ಸಮಾಧಿಯ ರಚನೆಯ ಮಧ್ಯೆ ಮತ್ತು ಆ ಕಡೆ ಈ ಕಡೆಗಳಲ್ಲಿ ಕೆಲವು ಕೋಡುಗಲ್ಲುಗಳಿವೆ ಇವನ್ನು ಇಂದಿಗೂ ಪೂಜೆ ಮಾಡುತ್ತಿದ್ದಾರೆ. ಕಲ್ಲಿನ ಮಧ್ಯೆ ಮತ್ತು ಅಂತ್ಯದಲ್ಲಿ ಅನೇಕ ಕುಳಿಗಳನ್ನು ಬಿಡಿಸಿರುತ್ತಾರೆ. ಅಂತ್ಯದ ಕಲ್ಲು ಎತ್ತರವಾಗಿದ್ದು ಅದರ ಪಕ್ಕದಲ್ಲೂ ಅನೇಕ ಕುಳಿಗಳನ್ನು ಕೆತ್ತಿರುತ್ತಾರೆ. ಹೀಗಾಗಿ ಈ ಸ್ಥಳವು ಪ್ರಾಗೈತಿಹಾಸಿಕ ಸಮಾಧಿಗಳ ಸ್ಥಳವಾಗಿತ್ತು ಎಂಬುದನ್ನು ಇಲ್ಲಿನ ಅವಶೇಷಗಳು ಸಾಬೀತುಪಡಿಸುತ್ತದೆ. ಸ್ಥಳೀಯರು ಇದನ್ನು 'ಪಾಂಡವರಗುಡಿ' – 'ಪಾಂಡವರಕೋಣೆ' ಎಂದು ಕರೆಯುತ್ತಾರೆ.

ಇದೇ ರೀತಿಯ ಅನೇಕ ಸಮಾಧಿಗಳು ಬನ್ನೇರುಘಟ್ಟದ ಸುತ್ತಮುತ್ತಲಿನ ಪ್ರದೇಶದಲ್ಲಿ ಸಾಕಷ್ಟು ದೊರೆಕಿವೆ. ನಾನು ಕಂಡ ಪ್ರಸ್ತುತ ಕ್ಷೇತ್ರಕಾರ್ಯದಲ್ಲಿ ಇದೇ ರೀತಿಯ ಸಮಾಧಿಗಳನ್ನು ನ್ಯಾಷನಲ್ ಪಾರ್ಕಿನ ಒಳಗಡೆ ಇರುವ 'ಉದ್ದಿನಬಂಡೆ' ಎಂಬ ಪ್ರದೇಶದಲ್ಲಿ ಕಂಡಿದ್ದೇನೆ. ಈ ಪ್ರದೇಶದಲ್ಲಿ ಸಮಾಧಿಗಳು ಬಹಳಷ್ಟಿವೆ ಮತ್ತು ಬನ್ನೇರುಘಟ್ಟದಿಂದ 15 ಕಿ.ಮೀ ದೂರದಲ್ಲಿರುವ 'ಶಿವನಹಳ್ಳಿ' ಎಂಬ ಗ್ರಾಮದ ವಿವೇಕಾನಂದ ಶಿಖರ ಮತ್ತು ಧ್ಯಾನ ತರಬೇತಿ ಸಂಸ್ಥೆಯ ಹಿಂದೆ ಒಂದು ಬೆಟ್ಟದ ಪ್ರದೇಶವಿದೆ. ಈ ಬೆಟ್ಟದ ಪ್ರದೇಶದಲ್ಲಿ ಈ ಬೃಹತ್ ಶಿಲಾಯುಗದ ಸಮಾಧಿಯನ್ನು ನೋಡಿದ್ದೇನೆ.

[3]ಚೌಕ, ಆಯುತಾಕಾರದ ಕಲ್ಲು ಚಪ್ಪಡಿಗಳಿಂದ ಸೇರಿಸಿ ರೂಪಿಸಿದ ಈ ಸಮಾಧಿ 2 ಅಡಿ ಎತ್ತರವಾಗಿದೆ. ಸುಮಾರು 5–6 ಅಡಿ ಉದ್ದದ ಬೃಹತ್ ಕಲ್ಲಿನ ಚಪ್ಪಡಿಯನ್ನು ಈ ಸಮಾಧಿಯ ಮೇಲೆ ಹೊದಿಸಿದೆ. ಇಂಥ ಸಮಾಧಿಗಳು ನೋಡುಗರಿಗೆ ಕುತೂಹಲ ಉಂಟುಮಾಡುತ್ತದೆ. ಈ ಶಿಲಾಸಮಾಧಿಗಳು ನಗರ ಪರಿಸರದ ಬನ್ನೇರುಘಟ್ಟದ ಕಾಡಿನ ಬೆಟ್ಟ ಪ್ರದೇಶಗಳಿಂದ ಮುಂದುವರೆದು ಶಿವನಹಳ್ಳಿಯ ಬೆಟ್ಟಗಳಿಂದ ಒಳಗೂಡಿ ಮುಂದೆ ಕನಕಪುರ ಮತ್ತು ರಾಮನಗರ ಬೆಟ್ಟಗಳ ಸಾಲಿನಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಇರುವುದನ್ನು ಕಾಣಬಹುದು. ಬಹುಶಃ ಬೆಟ್ಟಗುಡ್ಡ

[3] ಇತಿಹಾಸ ದರ್ಶನ, ಸಂ–8, ಡಾ. ದೇವರಕೊಂಡಾರೆಡ್ಡಿ – ಪು 02

ಮತ್ತು ಕಾಡಿನ ಪ್ರದೇಶಗಳೇ ಈ (ಪ್ರಾಗೈತಿಹಾಸಿಕ ಕಾಲದ ನೆಲೆಗಳಿಗೆ ಪ್ರಶಸ್ತವಾದ ತಾಣಗಳಾಗಿದ್ದವು) ಎಂಬುದನ್ನು ತಿಳಿಯಬಹುದು.

ಈ ಪ್ರಾಗೈತಿಹಾಸಿಕ ಕಾಲದ ಜನರಿಗೆ ಸತ್ತ ಹಿರಿಯರನ್ನು ಈ ಸಮಾಧಿಯಲ್ಲಿಟ್ಟು ಈ ರಂಧ್ರದ ಮೂಲಕ ಆಹಾರ—ಅವರ ಆತ್ಮಕ್ಕೆ ತೃಪ್ತಿಯಾಗುತ್ತದೆ ಎಂಬ ನಂಬಿಕೆಯಾಗಿತ್ತು. ದೊರಕಿರುವ ಶಿಲಾಸಮಾಧಿಯ ಪೂರ್ವಕದಲ್ಲಿ ವೃತ್ತಾಕಾರವಾಗಿ ರಂಧ್ರಕೊರೆದಿದ್ದು ಬಹುಶಃ ಹಿಂದಿನ ಕಾಲದಲ್ಲೂ ಸತ್ತವರಿಗೆ ವರ್ಷಕ್ಕೆ ಒಂದು ಸಲ ಪೂಜೆ ಸಲ್ಲಿಸಿ ತಿಂಡಿ ನೀರು ಪಿಂಡಗಳನ್ನು ಇಡುವುದಕ್ಕೆ ಮಾಡಿರಬಹುದು ಅಥವಾ ಒಂದು ಮನೆಯಲ್ಲಿ ಬಾಳಿ ಬದುಕಿದವರು ತಾವೂ ಸತ್ತ ಮೇಲೂ ಒಂದಾಗಿರಬೇಕು ಎಂಬ ಉದ್ದೇಶದಿಂದ ಆ ಮನೆಗೆ ಸೇರಿದವರನ್ನು ಸತ್ತ ನಂತರ ಕಲ್ಲಾಸರೆ ಮಾಡಿ ಅವರ ಮೂಳೆಗಳನ್ನು ಆಯ್ದು ಸಂಗ್ರಹಿಸಿ ಆ ಶಿಲಾಸಮಾಧಿಯಲ್ಲಿಡಲು ಈ ರೀತಿ ರಂಧ್ರ ಕೊರೆದಿರಬಹುದು ಎಂದು ಅನಿಸುತ್ತದೆ.

ಶಿಲಾಸಮಾಧಿ ಪುರಾಣ[4]

ಕಲಿಯುಗ ಪ್ರಾರಂಭವಾದಾಗ ಕಲಿಪುರುಷ ಹೆಂಡತಿಯನ್ನು ಕುದುರೆಯ ಮೇಲೆ ಕುಳ್ಳರಿಸಿಕೊಂಡು ತನ್ನ ತಾಯಿಯ ಮೇಲೆ ಚಪ್ಪಲಿಗಳನ್ನು ಹೊರಿಸಿಕೊಂಡು ಪೂರ್ವದಿಂದ ಪಶ್ಚಿಮದ ಕಡೆ ಆಕಾಶಮಾರ್ಗವಾಗಿ ಹೊರಟನಂತೆ, ಆಗ ತ್ರಿಮೂರ್ತಿಗಳು ಕೈಲಾಸದಿಂದ ಇವನನ್ನು ಅಡ್ಡಗಟ್ಟಲು ಬಂದರಂತೆ. ಆಗ ಭೂಲೋಕದಲ್ಲಿ ಚೋಳರು ಗುಡಿಗುಂಡಾರಗಳನ್ನು ಕಟ್ಟಿಕೊಂಡು ಮುಂದೆ ಸಾಗುತ್ತಿದ್ದರಂತೆ. ಇದನ್ನು ಕಂಡ ತ್ರಿಮೂರ್ತಿಗಳ ಇಂಧ್ರನಲ್ಲಿಗೆ ಹೋಗಿ ಭೂಲೋಕದಲ್ಲಿ ಹಲವಾರು ಗುಡಿ-ಗೋಪುರಗಳನ್ನು ಕಟ್ಟಿಕೊಂಡು ದೇವಲೋಕದ ನಮ್ಮನ್ನು ಮರೆತಿರುವರೆಂದು ಮನವಿ ಮಾಡಿಕೊಂಡರಂತೆ. ಆಗ ದೇವೇಂದ್ರನು ಭೂಲೋಕಕ್ಕೆ ವಿಷದ ಕಜ್ಜಾಯಗಳನ್ನು ಸುರಿಸಿದನಂತೆ. ಹಸಿವಿನಿಂದ ಬಳಲುತಿದ್ದ ಜನರು ವಿಷದ ಕಜ್ಜಾಯಗಳನ್ನು ಆಯ್ದುಕೊಂಡು ಖರ್ಜಿಕಾಯಿ ತಿಂದಂತೆ ತಿಂದರು. ಖಾಯಿಲೆಯಿಂದ ಬಳಲುತ್ತಿದ ರೋಗಿಗಳು, ಹೆಳವರು, ಕುಂಟರು ಕುರುಡರೆಲ್ಲಾ ಚೆನ್ನಾಗಿ ಆರೋಗ್ಯವಂತರಾದರಂತೆ. ಇದರಿಂದ ಕೋಪಗೊಂಡ ದೇವೇಂದ್ರನು ಮತ್ತೊಮ್ಮೆ ಬಿಂಕಿಯ ಮಳೆಯನ್ನು ಸುರಿಸಿದನಂತೆ ಇದರಿಂದ ರಕ್ಷಣೆ ಪಡೆಯಲು ತಮ್ಮ ಸುತ್ತಕಲ್ಲು ಚಪ್ಪಡಿಗಳನ್ನು ಅಡ್ಡಲಾಗಿ ಇಟ್ಟುಕೊಂಡು ತಲೆಯ ಮೇಲೊಂದು ಕಲ್ಲು ಚಪ್ಪಡಿಗಳನ್ನು ಹೊತ್ತುಕೊಂಡು ರಕ್ಷಣೆ ಪಡೆದರಂತೆ, ಇದನ್ನು ಕಂಡು ಕೋಪೋದ್ರಿಕ್ತನಾದ ದೇವೇಂದ್ರನು ಮೇಲಿಂದ ಮಣ್ಣನ್ನು ಸುರಿಸಿದನಂತೆ. ಆಗ ಅವರೆಲ್ಲರು ಜೀವಂತ ಸಮಾಧಿಯಾದರು, ಅದರ ಕುರುಹುಗಳೇ ಈ 'ಬೃಹತ್ ಶಿಲಾಸಮಾಧಿಗಳು.'

ಸಮಾಧಿ ಸುತ್ತ ನಿಲ್ಲಿಸಿರುವ ಕಲ್ಲುಗಳು ಸತ್ತವರ ಬಗ್ಗೆ ಅದರಿಗಿದ್ದ ಗೌರವ ಅಥವಾ ಭಯದಿಂದ ಅವುಗಳನ್ನು ರಕ್ಷಿಸುವ ಸಲುವಾಗಿ ರಕ್ಷಣಾಗೋಡೆಗಳಂತೆ ಈ ಕಲ್ಲುಗಳನ್ನು ನೆಟ್ಟಿರಬಹುದು. ಈ ಕಲ್ಲುಗಳನ್ನು ಬೃಹತ್ ಶಿಲಾಸಮಾಧಿಯ ಸುತ್ತ ಹತ್ತು ಅಡಿ ಅಂತರದಲ್ಲಿ ಎರಡು ಅಡಿ ಎತ್ತರದ ಕಲ್ಲುಗಳನ್ನು ಚೌಕಾಕಾರವಾಗಿ ನಿಲ್ಲಿಸಿರುವುದನ್ನು ಗಮನಿಸಿದರೆ ಸಮಾಧಿಯ

[4] ರಾಮನಗರ ಒಂದು ಸಾಂಸ್ಕೃತಿಕ ಅಧ್ಯಯನ, ಲೇ : ಡಾ. ಅಂಕನಹಳ್ಳಿ ಪಾರ್ಥ, ಪು-34

ಸುತ್ತ ಚಪ್ಪಡಿಕಲ್ಲುಗಳನ್ನು ನೆಟ್ಟಗೆ ನಿಲ್ಲಿಸಿರುವುದು ಕಂಡುಬರುತ್ತದೆ. ಇದು ಪ್ರಾಚೀನ ಕಾಲದ ಬೃಹತ್ ಶಿಲಾಸಮಾಧಿಯ ಅನುಕರಣೆಯೇ ಆಗಿದೆ.

ನವಶಿಲಾಯುಗದ ಅಂತ್ಯಕಾಲದಲ್ಲಿ ಶಿಲಾಯುಧಗಳ ಜೊತೆ ಜೊತೆಗೆ ತಾಮ್ರದ ಆಯುಧಗಳನ್ನು ಬಳಸಲಾರಂಭಿಸಿದ್ದರಿಂದ ಈ ಯುಗವನ್ನು "ಶಿಲಾ ತಾಮ್ರಯುಗ" ಅಥವಾ "ಚೋಲ್ಕೋಲಿಥಿಕ್ ಏಜ್" ಎಂದು ಕರೆಯಲಾಗಿದೆ. ನಂತರದ ಕಾಲಘಟ್ಟದಲ್ಲಿ ಕಬ್ಬಿಣದ ಆವಿಷ್ಕಾರವಾಗಿ ಕಬ್ಬಿಣದ ಆಯುಧಗಳ ಬಳಕೆಗೆ ಬಂದು ಶಿಲಾಯುಧಗಳ ಬಳಿಕೆ ನಿಂತಿತ್ತು. ಆದ್ದರಿಂದ ಈ ಯುಗದ ಜನರು ಪ್ರಗತಿಯ ಹಾದಿಯಲ್ಲಿ ದಾಪುಕಾಲನ್ನು ಹಾಕಿದರು. ಈ ಯುಗದ ಜನರು ದೊಡ್ಡ ದೊಡ್ಡ ಬೃಹದಾಕಾರದ ಕಲ್ಲು ಚಪ್ಪಡಿಗಳನ್ನು ಬಳಿಸಿ ಸಮಾಧಿಗಳನ್ನು ನಿರ್ಮಿಸುತ್ತಿದ್ದರಿಂದ ಈ ಸಂಸ್ಕೃತಿಯನ್ನು 'ಬೃಹತ್ ಶಿಲಾ ಸಮಾಧಿ ಸಂಸ್ಕೃತಿ" ಎಂದು ಕರೆಯುತ್ತಾರೆ.

ಬೃಹತ್ ಶಿಲಾಯುಗದ ಜನರು ಬೇಟೆ ಹಾಗೂ ಪಶುಪಾಲನೆಯೊಡನೆ ಅಲ್ಪ ಪ್ರಮಾಣದ ಕೃಷಿಯನ್ನು ಅವಲಂಭಿಸಿದರು. ಕೃಷಿಗೆ ಹಾಗೂ ತಮ್ಮ ಉಪಯೋಗಕ್ಕೆ ಮತ್ತು ತಮ್ಮ ದನಕರುಗಳ ಉಪಯೋಗಕ್ಕೆ ಅನುಕೂಲವಾಗುವಂತೆ ನೀರಿನ ಅನುಕೂಲ ಇರುವಂತಹ ಹೊಳೆಗಳ ದಡದಲ್ಲಿ ತಮ್ಮ ವಸತಿಗಳನ್ನು ಏರ್ಪಡಿಕೊಳ್ಳುತ್ತಿದ್ದರು. ನೈಸರ್ಗಿಕವಾಗಿ ದೊರೆಯುವ ಗವಿಗಳು ಕಲ್ಲಾಸರೆಗಳು ಹಾಗೂ ಕೃತಕವಾಗಿ ಕಟ್ಟಿದಂತಹ ವೃತ್ತಾಕಾರದ ಗುಡಿಸಿಲುಗಳಲ್ಲಿ ವಾಸಿಸುತ್ತಿದ್ದದು ತಿಳಿದು ಬರುತ್ತದೆ.

ಬನ್ನೇರುಘಟ್ಟ ಮತ್ತು ಏಳು ಸುತ್ತಿನ ಕೋಟೆ[5]

ಬನ್ನೇರುಘಟ್ಟದ ವಹ್ನಿಗಿರಿ ಬೆಟ್ಟದಿಂದ ಇಳಿದು ಸುವರ್ಣಮುಖಿ ತೀರ್ಥಕ್ಕೆ ಹೋಗುವ ಮಾರ್ಗಮಧ್ಯದಲ್ಲಿ ದೊಡ್ಡದಾದ ಮತ್ತು ಚಿಕ್ಕದಾದ 'ಶಿಲಾ ಮಂಟಪಗಳು' ಕಂಡುಬರುತ್ತದೆ. ಈ ಶಿಲಾ ಮಂಟಪಗಳು ವಹ್ನಿಗಿರಿ ಬೆಟ್ಟದ ಮೇಲಿನಿಂದ ಪ್ರಾರಂಭವಾಗಿ ಭೂತೇನಹಳ್ಳಿ ಕಡೆಗೆ ಬೆಟ್ಟದ ಇಳಿಜಾರು ಪ್ರಾರಂಭವಾಗುವವರೆಗೆ ಕಂಡುಬರುತ್ತದೆ. ಇಂಥ ಕಲ್ಲಿನ ರಚನೆಗಳು ಬೆಟ್ಟದ ಮೇಲಿನ ಬಯಲಿನಲ್ಲಿ ಮಾತ್ರ ಕಂಡುಬರುತ್ತದೆ. ಇಲ್ಲಿನ ಕಲ್ಲುಗುಪ್ಪೆಗಳ ಸ್ಥೂಲ ರಚನೆಯೆಂದರೆ ಮೂರು ಕಲ್ಲುಗಳನ್ನು ಇಟ್ಟು ಅದರ ಮೇಲೆ ಮತ್ತೊಂದು ಕಲ್ಲನ್ನು ಇಟ್ಟಿರುವುದು. ಇವು ಎಷ್ಟೇ ದೊಡ್ಡ ರಚನೆಗಳಾಗಿದ್ದರೂ ಬಹುತೇಕ ಇದೇ ನಿಯಮವನ್ನು ಪಾಲಿಸಿರುತ್ತಾರೆ.

ಬನ್ನೇರುಘಟ್ಟದ ಬೆಟ್ಟದ ಮೇಲಿನ ದೀಪದ ಕಂಬದ ದಕ್ಷಿಣಕ್ಕಿರುವ ಶಿಲಾಮಂಟಪದ ರಚನೆಯೂ ಕೂಡ ಹೀಗೆಯೇ ಇದೆ, ಉದ್ದವಾದ ಚಪ್ಪಡಿಗೆ ಮೂರು ಕಡೆ ಒಂದರ ಮೇಲೊಂದರಂತೆ ಕಲ್ಲುಗಳನ್ನು ಜೋಡಿಸಿ ಮೂರು ಕಂಬಗಳನ್ನು ರಚಿಸಿ ಅದರ ಮೇಲೆ ಅಗಲವಾದ ಆದರೆ ತ್ರಿಕೋಣಾಕಾರದ ರಚನೆಯನ್ನು ಹೋಲುವ ಚಪ್ಪಡಿಯನ್ನು ಇಟ್ಟಿರುತ್ತಾರೆ. ಕಲ್ಲಿನ ತೋಕೆ (ಬಾಲ) ಬರುವ ಕಡೆ ಒಂದು ಕಾಲನ್ನೂ ತಲೆಯ ಕಡೆ (ಅಗಲದಾಗಿರುವ) ಎರಡು ಕಾಲುಗಳನ್ನು ಇಟ್ಟಿರುತ್ತಾರೆ. ಈ ಬೆಟ್ಟದ ಮೇಲೆ ಕಾಣುವ ಎಲ್ಲಾ ದೊಡ್ಡ ರಚನೆಗಳಲ್ಲಿ ಈ ಬಗೆಯ ಅಂತರ್‌ರಚನೆಗಳನ್ನು ಕಾಣಬಹುದಾಗಿದೆ. ಇಲ್ಲಿನ ದೊಡ್ಡ ರಚನೆಗಳು ಬನ್ನೇರುಘಟ್ಟದ ಬೆಟ್ಟದ

---

[5] ಇತಿಹಾಸ ದರ್ಶನ, ಸಂ–8, ಡಾ. ದೇವರಕೊಂಡಾರೆಡ್ಡಿ ಪು–3

ಸಾಲಿನ ಮೂರು ಗುಡ್ಡಗಳಲ್ಲಿ ಕಾಣಬರುತ್ತದೆ. ಕಾಲದ ರಚನೆಯ ದೃಷ್ಟಿಯಿಂದ ಈ ಬೃಹತ್ ರಚನೆಗಳು ಪ್ರಾಚೀನವಾದವುಗಳಾಗಿದ್ದು ತೀರಾ ಸಣ್ಣವು ಇತ್ತೀಚಿನವು ಪ್ರಾಚೀನ ರಚನೆಗಳ ಅನುಕರಣೆಗಳು ಈ ಸಣ್ಣ ರಚನೆಗಳಾಗಿದೆ. ಇವೆರಡೂ ಮಧ್ಯದ ರಚನೆಗಳು ವಿವಿಧ ಗಾತ್ರದಲ್ಲಿ ಕಾಣಬರುತ್ತದೆ. ಮೇಲಿನ ರಚನೆಯ ಮಧ್ಯದಲ್ಲಿ ಏಳುಸುತ್ತಿನ ಕೋಟೆಯೆಂಬ ರಚನೆಯಿದೆ ಪಶ್ಚಿಮಕ್ಕೆ ಮುಖಮಾಡಿರುವ ಈ ರಚನೆ ಮೊದಲು ಅಲ್ಲಲ್ಲಿ ಕಲ್ಲುಗಳನ್ನು ನೆಟ್ಟು ನಡೆಯುವ ದಾರಿಯನ್ನು ಸೂಚಿಸಿತ್ತು ಮುಂದೆ ನೆಟ್ಟ ಕಲ್ಲುಗಳ ಮಧ್ಯೆ ಕಲ್ಲುಗಳನ್ನಿಟ್ಟು ಗೆರೆಗಳನ್ನು ಸೃಷ್ಟಿವಾಗಿಸಿರುತ್ತಾರೆ. ಈ ಬಗೆಯ ರಚನೆಗಳು ಶಿಲಾಯುಗದ ಸಂಸ್ಕೃತಿಯಿದ್ದು ಸ್ಥಳಗಳ ಬಳಿಯಲ್ಲಿ ಬೆಟ್ಟದ ಇಳಿಜಾರುಗಳಲ್ಲಿ ಕಂಡುಬರುತ್ತದೆ. ಹಂಪೆಯಲ್ಲಿಯೂ ಈ ರಚನೆ ಕಾಣಬರುತ್ತದೆ. ಇಂಥಹ ಕೋಟೆಗಳು ಇದೊಂದೇ ಕಡೆ ಅಲ್ಲದೆ ಚಿತ್ರದುರ್ಗದ ಬಳಿ ದೊಡ್ಡ ಸಿದ್ದವನಹಳ್ಳಿ ಬಳಿ, ಕೊಳಗಳ ಬಳಿ, ದೇವಾಲಯಗಳ ಬಳಿ ಕಾಣಬರುತ್ತದೆ. ಬೇರೆಡೆ ಕಾಣಬರುವ ರಚನೆಗಳಿಗೂ ಇದಕ್ಕೂ ಸ್ವಲ್ಪ ವ್ಯತ್ಯಾಸವಿದ್ದು ಬೇರೆಯವುಗಳಲ್ಲಿ ಒಳಗೆ ಪ್ರವೇಶಿಸಿದರೆ ಹೊರಗೆ ಬರಲು ಆಗುವುದಿಲ್ಲ, ಆದರೆ ಇದರಲ್ಲಿ ಹೊರಗೆ ಬರಲು ಸಾಧ್ಯವುಂಟು. ಹೀಗಾಗಿ ಒಂದರೆಡು ಗೆರೆಗಳು ಹಾಳಾಗಿದೆ. ಇಂಥ ಏಳುಸುತ್ತಿನ ಕೋಟೆಯ ರಚನೆಯನ್ನು ನಾನು ಕ್ಷೇತ್ರ ಕಾರ್ಯವನ್ನು ಕೈಗೊಂಡು ಬನ್ನೇರುಘಟ್ಟದಿಂದು ಸುಮಾರು 8 ಕಿ.ಮೀ ದೂರದಲ್ಲಿರುವ ಬೆಟ್ಟದಾಸನಪುರದ ಬೆಟ್ಟದ ಮೇಲೆ ಕೆತ್ತಿರುವುದುನ್ನು ನೋಡಿದ್ದೇನೆ. ಇಲ್ಲಿನ ಕೋಟೆಯ ಮೇಲಿನ ಶ್ರೀತಿಮ್ಮರಾಯಸ್ವಾಮಿ ಮತ್ತು ಶ್ರೀ ಕಾಶಿವಿಶ್ವನಾಥ ಸ್ವಾಮಿ ದೇವಾಲಯದ ಉತ್ತರ ದಿಕ್ಕಿನ ಕಡೆ ಬೆಟ್ಟದ ಕಲ್ಲಿನ ಮೇಲೆ ಈ ಏಳುಸುತ್ತಿನ ಕೋಟೆಯ ಕೇವಲ ಕೆತ್ತನೆಯ ರಚನೆಯಿದೆ. ಕೆಲವರು ಇದನ್ನು ಮಹಾಭಾರತದ ಅಭಿಮನ್ಯುವಿನ ಪದ್ಮವ್ಯೂಹದ ಪ್ರವೇಶಕ್ಕೆ ನಂಟು ಹಾಕುವುದು ಉಂಟು, ಮೇಲುನೋಟದಲ್ಲಿ ಇದನ್ನು ಸತ್ಯವೆಂದು ನಂಬಿದರೂ ಇದು ಅಲ್ಲವೆಂದೆನಿಸುತ್ತದೆ.

[6]ಈ ಬೆಟ್ಟದಲ್ಲಿ ಕಾಣಬರುವ ಶಿಲಾಮಂಟಪಗಳ ಶಿಲಾಯುಗದ ಜನರು ತಮ್ಮ ಹಿರಿಯರ ನೆನಪಿನಲ್ಲಿ ರಚಿಸಿದವುಗಳಾಗಿರಬೇಕು. ಇಲ್ಲಿ ಬಹು ಹಿಂದೆಯೇ ನಾಗರೀಕತೆಯ ವಸತಿಯೊಂದಿದ್ದು ಸತ್ತವರ ನೆನಪಿನಲ್ಲಿ ಇಲ್ಲಿನ ಬೆಟ್ಟಗಳ ಮೇಲೆ ಸಮಾಧಿಗಳನ್ನು ನೆನಪಿಸುವಂತಹ ರಚನೆಗಳನ್ನು ರಚಿಸಿರುವರೆಂದು ಊಹಿಸಬಹುದಾಗಿದೆ. ಸದಾ ನೀರಿನ ಆಸರೆಯಿದ್ದ ಈ ಪ್ರದೇಶವು ಪ್ರಾಚೀನ ನಾಗರೀಕತೆಯ ನೆಲೆಯಾಗಿದ್ದುದರಲ್ಲಿ ಸಂಶಯವಿಲ್ಲ ಹೀಗಾಗಿ ಮೂರು ಬಿಡಿಬಿಡಿ ಕಲ್ಲುಗಳನ್ನು ಜೋಡಿಸಿ ಮೂರು ಕಂಬಗಳನ್ನು ಸುಮಾರು ಎರಡು ಅಡಿಯಷ್ಟು ಎತ್ತರ ಮಾಡಿ ಅದರ ಮೇಲೆ ತ್ರೀಕೋಣಾಕಾರವನ್ನು ಹೋಲುವ ಚಪ್ಪಡಿಯನ್ನು ಇಡುತ್ತಿದ್ದರು. ಮುಂದೆ ಅದರ ಸುತ್ತಲೂ ಕಲ್ಲುಗಳನ್ನು ಜೋಡಿಸಿ ಮುಚ್ಚಿ ಸಣ್ಣ ಕಲ್ಲುಗಳ ರಾಶಿಯನ್ನು ಅದರ ಸುತ್ತಲೂ ಹಾಕುತ್ತಿದ್ದು. ಈಗ ಅನೇಕ ಶಿಲಾಮಂಟಪಗಳು ಹಾಳಾಗಿ ಮುಚ್ಚಿಗೆಯ ಕಲ್ಲುಗಳು ಮಾತ್ರ ನಿಂತಿವೆ. ಕಾರಣಾಂತರಗಳಿಂದ ಈ ನೆಲೆಯನ್ನು ಬಿಟ್ಟ ಜನ ತಮಗೆ ಕಷ್ಟ ಬಂದಾಗ ಅಥವಾ ಇತರ ಸಂದರ್ಭಗಳಲ್ಲಿ ತಮ್ಮ ಹಿರಿಯರು ನೆಲೆಸಿದ ಈ ಸ್ಥಳಕ್ಕೆ ಬಂದು ಸುವರ್ಣಮುಖಿ ತೀರ್ಥದಲ್ಲಿ ಸ್ನಾನಮಾಡಿ ತಮ್ಮ ಹಿರಿಯರ ? ನೆನಪಿನಲ್ಲಿ ಮೂರು ಕಲ್ಲುಗಳನ್ನಿಟ್ಟು ಅದರ ಮೇಲೆ ಒಂದು ಕಲ್ಲನ್ನಿರಿಸಿ ಮಂಟಪದಂತಹ ರಚನೆಯನ್ನು ನಿರ್ಮಿಸಿ ಅದರಲ್ಲಿ ಒಂದೆರಡು ಸಣ್ಣ ಕಲ್ಲುಗಳನ್ನಿರಿಸಿ ಪೂಜಿಸಿ ಅಲ್ಲಿನ ಏಳು ಸುತ್ತಿನ ಕೋಟೆಯನ್ನು ಪ್ರದರ್ಶಿಸಿ ಅಲ್ಲಿನ ಮರ ಅಥವಾ ಗಿಡವೊಂದಕ್ಕೆ

[6] ಇತಿಹಾಸದರ್ಶನ, ಸಂ–8, ಡಾ. ದೇವರಕೊಂಡಾರೆಡ್ಡಿ, ಪು–04

ತೊಟ್ಟಿಲನ್ನು ಕಟ್ಟಿ ಇಷ್ಟಾರ್ಥ ಸಿದ್ಧಿ ಅಥವಾ ಮಕ್ಕಳಿಗಾಗಿ ಪ್ರಾರ್ಥಿಸುತ್ತಾರೆ. ಇಂತಹ ರಚನೆಗಳು ನೀರಿನ ಆಸರೆಯಿರುವ ಬಳಿ ಬೆಟ್ಟಗಳ ಇಳಿಜಾರಿನಲ್ಲಿ ಕಾಣಬರುತ್ತದೆ. ಪ್ರಾಚೀನ ನೆಲೆಯಾದ ಬನ್ನೇರುಘಟ್ಟದಲ್ಲಿ ಹಿರಿಯರ ಪೂಜೆ ಇಂದಿಗೂ ಈ ರೀತಿ ಉಳಿದು ಬಂದಿರುವುದನ್ನು ಕಾಣಬಹುದಾಗಿದೆ.

ಬನ್ನೇರುಘಟ್ಟದಲ್ಲಿನ ಸಂಸ್ಕೃತಿಗೆ ಕಾರಣವಾದ ಜನವಸತಿ ಯಾವುದಾಗಿದ್ದರ ಬಹುದು. ಇಲ್ಲಿನ ಜನರ ಮುಖ್ಯ ಕಸುಬೇನಾಗಿದ್ದಿರಬಹುದು ಎಂಬುದನ್ನು ಗಮನಿಸುವುದು ಸೂಕ್ತ. ಬನ್ನೇರುಘಟ್ಟದ ನೆರೆಹೊರೆಯ ಪ್ರದೇಶಗಳು ಹಲವು ಲೋಹಕೈಗಾರಿಕೆಗಳ ತಾಣಗಳಾಗಿದ್ದವೆಂದು ಹೇಳಬಹುದು. ಬನ್ನೇರುಘಟ್ಟಕ್ಕೆ ಸಮೀಪದಲ್ಲಿರುವ ಕುಲಮೆಪಾಳ್ಯ, ಕಸವರಹಳ್ಳಿ, ವಾಜರಹಳ್ಳಿ, ಕ್ಯಾಸರಗುಪ್ಪೆ, ರಾಗಿಹಳ್ಳಿ, ಕಾಳೇಶ್ವರಿ, ಭೂತೇನಹಳ್ಳಿ, ಶಾನುಭೋಗರಹಳ್ಳಿ ಮುಂತಾದ ಸ್ಥಳಗಳು ಒಂದಲ್ಲ ಒಂದು ರೀತಿಯ ಲೋಹದ ಸಂಬಂಧವನ್ನು ಹೊಂದಿರುವುದು ಗಮನಾರ್ಹ. ಭೂತೇನಹಳ್ಳಿಯು ಹಳೆಯ ಮಧ್ಯಕಾಲದ ಹಾಗೂ ಈಗಿನ ನಿವೇಶನದ ಮೂರು ಸ್ಥಳಗಳನ್ನು ಹೊಂದಿದ್ದು ಮೂರು ಸ್ಥಳಗಳಲ್ಲಿಯೂ ಲೋಹವನ್ನು ಕರಗಿಸಿದ ಕಿಟ್ಟದ ಕಲ್ಲುಗಳು ದೊರೆಯುತ್ತವೆ (ಈಗ ಇಲ್ಲಿ ಯಾರು ಲೋಹಗಾರರಿಲ್ಲವೆಂಬುದು ಗಮನಾರ್ಹ) ಕ್ಯಾಸರಗುಪ್ಪೆ ಕಂಚಿನ ಸಂಬಂಧವನ್ನು, ಕುಲುಮೆಪಾಳ್ಯ ಲೋಹ, ಕಸವರಹಳ್ಳಿ ಚಿನ್ನ, ವಾಜರಹಳ್ಳಿ ಲೋಹಗಾರರ ನೆಲೆಯನ್ನು ಕಾಳೇಶ್ವರಿ ಲೋಹಗಾರರ ದೈವದ ನೆಲೆಯನ್ನು, ರಾಗಿಹಳ್ಳಿ ತಾಮ್ರದ ಸಂಬಂಧವನ್ನು ಹೊಂದಿದೆ. ಇದೆಲ್ಲದರ ಕೇಂದ್ರವಾಗಿ ಈ 'ಬನ್ನೇರುಘಟ್ಟ'ವಿತ್ತು. ಹೀಗಾಗಿ ಗಣಿಗಾರರು ಇಲ್ಲಿ ನೆಲೆಸಿದ್ದು ಮುಂದೆ ಬೇರೆ ಬೇರೆ ಕಡೆ ಚದುರಿರಬಹುದು. ಇದು ಮುಖ್ಯವಾಗಿ ಚಿನ್ನದ ಗಣಿಗಾರಿಕೆಯ ಕೇಂದ್ರವಾಗಿತ್ತು[7].

ಒಟ್ಟಿನಲ್ಲಿ ಬನ್ನೇರುಘಟ್ಟವು ಪ್ರಾಚೀನ ಸಂಸ್ಕೃತಿಯ ಆಚರಣೆಯನ್ನು ಇಂದಿಗೂ ಉಳಿಸಿಕೊಂಡು ಬಂದಿದ್ದು, ಶಿಲಾಯುಗದ ಸಂಸ್ಕೃತಿಯೊಂದರ ಕೇಂದ್ರವಾಗಿತ್ತು. ಲೋಹಗಾರರ ಪ್ರಮುಖ ಕೇಂದ್ರವಾಗಿದ್ದುದಲ್ಲದೆ ವಿಶೇಷವಾಗಿ ಚಿನ್ನದ ಅದಿರು ದೊರೆಯುತ್ತಿದ್ದ ಸ್ಥಳವಾಗಿದ್ದು ಅದರಿಂದ ಆ ಸ್ಥಳಕ್ಕೆ 'ಪೊನ್ನೂರುಘಟ್ಟ' ಎಂದು ಹೆಸರು ಬಂದು ಅದೇ ಈಗಿನ 'ಬನ್ನೇರುಘಟ್ಟ' ಎಂಬ ಹೆಸರಿನ ಮೂಲವಾಗಿದೆ.

<u>ಬನ್ನೇರುಘಟ್ಟದ ಚಾರಿತ್ರಿಕ ನೋಟ</u>

ಯಾವುದೇ ಒಂದು ಪ್ರದೇಶದ ಕಳೆದುಹೋದ ಕಾಲಘಟ್ಟದ ವಿವರಗಳನ್ನು ಗತಿಸಿದ ಬದುಕಿನ ಘಟನೆಗಳನ್ನು ಚರಿತ್ರೆಯ ಮೂಲಕ ತಿಳಿಯುವುದೆಂದರೆ ಪರಂಪರೆಯನ್ನು ಅರಿಯುವ ಬಗೆಯಾಗಿರುತ್ತದೆ. ಇಲ್ಲಿ ಸರಿತಪ್ಪುಗಳ ಮೌಲ್ಯಮಾಪನವೂ ನಡೆಯುತ್ತದೆ. ಈ ಮೂಲಕ ವರ್ತಮಾನ ಮತ್ತು ಭವಿಷ್ಯತ್ತುಗಳಿಗೆ ಒಂದು ರೀತಿಯ ಮಾರ್ಗದರ್ಶನ ಮತ್ತು ಎಚ್ಚರಿಕೆಯನ್ನು ಮೂಡಿಸಿ ಬದುಕನ್ನು ನಿರಂತರ ಗೊಳಿಸುವುದು ಚರಿತ್ರೆಯ ಬಹುಮುಖ್ಯ ಕೆಲಸ.

---

[7] ಇತಿಹಾಸ ದರ್ಶನ ಸಂ-8, ಡಾ.ದೇವರಕೊಂಡಾರೆಡ್ಡಿ, ಪು-04

ಬನ್ನೇರುಘಟ್ಟ ಪ್ರದೇಶವನ್ನು ವಿವಿಧ ಕಾಲಘಟ್ಟಗಳಲ್ಲಿ ಆಳ್ವಿಕೆ ನಡೆಸಿ ತಮ್ಮದೇ ಆದ ಅಧಿಪತ್ಯವನ್ನು ಹೊಂದಿ ಧಾರ್ಮಿಕ ಉತ್ಕ್ರಾಂತಿಗೆ ಕಾರಣಪುರುಷರಾದ ಹಲವಾರು ರಾಜಮನೆಗಳನ್ನು ಬಗ್ಗೆ ತಿಳಿಯುವುದು ಪ್ರಸ್ತುತ ಇಂದಿನ ಅಗತ್ಯವಾಗಿದೆ.

ಚೋಳರು :

ದಕ್ಷಿಣಭಾರತದ ಅತಿಪ್ರಾಚೀನ ರಾಜಮನೆತನಗಳಲ್ಲಿ ಚೋಳಸಾಮ್ರಾಜ್ಯವೂ ಒಂದು, ಚೋಳರು ಕ್ರಿ.ಶ 1004ರಲ್ಲಿ ಗಂಗರನ್ನು ಸೋಲಿಸಿ ತಲಕಾಡನ್ನು ವಶಪಡಿಸಿಕೊಳ್ಳುವುದಕ್ಕಿಂತ ಪೂರ್ವದಲ್ಲೆ ಬೆಂಗಳೂರು ಜಿಲ್ಲೆಯ ಪೂರ್ವಭಾಗಗಳು ಚೋಳರ ವಶವಾಗಿದ್ದವೆಂದು ಹೊಸಕೋಟೆ ತಾಲ್ಲೂಕಿನ ಶಾಸನಗಳಿಂದ ತಿಳಿದುಬರುತ್ತದೆ. ಸುಮಾರು ಕ್ರಿ.ಶ. 1000ರ ವೇಳೆಗೆ ಈ ಆನೇಕಲ್ ತಾಲ್ಲೂಕು ಪ್ರವೇಶ ಚೋಳರ ವಶವಾಗಿರಬೇಕು, ಮುಂದೆ ಸುಮಾರು 115 ವರ್ಷಗಳ ಕಾಲ ಅಂದರೆ ಕ್ರಿ.ಶ 1115ರ ಸುಮಾರಿಗೆ ಹೊಯ್ಸಳರು ಈ ಪ್ರದೇಶವನ್ನು ಆಳುತ್ತಿರುವಾಗ ಚೋಳರ ಕಾಲಕ್ಕೆ ಸೇರಿದ ಒಂದು ಶಾಸನವು ಕೂಡ ಈ ತಾಲ್ಲೂಕಿನಲ್ಲಿ ದೊರಕಿಲ್ಲ. ಆದರೂ ಬನ್ನೇರುಘಟ್ಟದಲ್ಲಿರುವ ಐತಿಹಾಸಿಕವಾದ ಶ್ರೀ ಚಂಪಕಧಾಮ ಸ್ವಾಮಿ ದೇವಾಲಯವನ್ನು ಚೋಳರ ರಾಜ ಪೂರ್ವಾಧಿರಾಯ ಎಂಬುವವನು ಕಟ್ಟಿಸಿದ್ದನೆಂದು ಅಲ್ಲಿನ ಜನಪದರ ಅಭಿಪ್ರಾಯವಾಗಿದೆ ಅಲ್ಲದೆ ಕೆಲವು ದಿನ ಪತ್ರಿಕೆಗಳಲ್ಲಿ ಲೇಖನವಾಗಿ ಈ ವಿಷಯ ಪ್ರಕಟವಾಗಿರುವುದನ್ನು ಕಾಣಬಹುದು, ಮಾರ್ಚ್ 8, ಗುರುವಾರ 2007ನೇ ವರ್ಷದಲ್ಲಿ 'ಉದಯವಾಣಿ' ದಿನಪತ್ರಿಕೆಯಲ್ಲಿ ಈ ವಿಷಯ ಮುದ್ರಣವಾಗಿದೆ. ಈ ಪತ್ರಿಕೆಯಲ್ಲಿರುವಂತೆ ಚೋಳರಾಜ 'ಪೂರ್ವಾಧಿರಾಯ' ಎಂಬಾತ ಈಗಿನ ತಮಿಳುನಾಡಿಗೆ ಸೇರಿರುವ ಹೊಸೂರನ್ನು ರಾಜಧಾನಿಯಾಗಿ ಮಾಡಿಕೊಂಡು ಆಳ್ವಿಕೆ ನಡೆಸುವಾಗ ಬನ್ನೇರುಘಟ್ಟದಲ್ಲಿ 'ದಾಮೋದರ ಪೆರುಮಾಳ್' ಎಂಬ ಹೆಸರಿನ ದೇವಾಲಯವನ್ನು ಕಟ್ಟಿಸಿದನೆಂದು ಹಾಗಾಗಿ ಈ ದೇವರಿಗೆ ತಮಿಳು ಮೂಲದ ಭಕ್ತರೇ ಹೆಚ್ಚು ಎಂಬ ಮಾಹಿತಿಯ ಪ್ರಸ್ತಾಪವಾಗಿರುವುದನ್ನು ಕಾಣಬಹುದು, ಆದರೆ ಚೋಳರು ಈ ದೇವಾಲಯವನ್ನು ಕಟ್ಟಿಸಿದರೆಂದು ನನಗೆ ತಿಳಿದಿರುವಂತೆ ಯಾವುದೇ ಒಂದು ಶಾಸನದಲ್ಲಿ ಈ ಬಗ್ಗೆ ಉಲ್ಲೇಖವಿಲ್ಲ. ಆದರೂ ಈ ದೇವಾಲಯದ ವಾಸ್ತು ಶೈಲಿಯ ಮೇಲೆ ಚೋಳರ ಪ್ರಭಾವ ಬೀರಿರುವುದನ್ನು ಕಾಣಬಹುದು. ಹೀಗೆ ಚೋಳರ ಕಾಲದ ಆಡಳಿತದ ನೇರೆ ಕುರುಹುಗಳು ಈ ಪ್ರದೇಶದಲ್ಲಿ ದೊರೆಯದಿದ್ದರು ಅವರ 115 ವರ್ಷಗಳ ಆಳ್ವಿಕೆಯ ಪರಿಣಾಮ ಪ್ರಭಾವಗಳಂತೂ ಮುಂದೆ ಈ ಪ್ರದೇಶವನ್ನು ಆಳಿದ ಹೊಯ್ಸಳರ ಕಾಲದಲ್ಲಿ ಮುಂದುವರೆದಿರುವುದು ಎದ್ದು ಕಾಣುತ್ತದೆ.

ಹೊಯ್ಸಳರು :

ಕರ್ನಾಟಕದ ಮಲೆನಾಡಿನಲ್ಲಿ ತಲೆಯೆತ್ತಿದ್ದ ಹೊಯ್ಸಳರು ಗಂಗರ ಪ್ರಾಚೀನ ರಾಜಧಾನಿ ತಲಕಾಡನ್ನು ವಶಪಡಿಸಿಕೊಳ್ಳುವುದರ ಮೂಲಕ ಚೋಳರನ್ನು ಈ ಪ್ರವೇಶದಿಂದ ಹಿಮ್ಮೆಟ್ಟಿಸಿದರು. ಆಗ ಬೆಂಗಳೂರು ಪ್ರದೇಶವೂ ಹೊಯ್ಸಳರು ಆಳ್ವಿಕೆಗೆ ಒಳಪಟ್ಟಿತು.

ಅಚ್ಚ ಕನ್ನಡ ಅರಸುಮನೆತನದವರಾದ ಈ ಹೊಯ್ಸಳರು ಆಳ್ವಿಕೆಯ ಸಾಕ್ಷ್ಯಗಳಾಗಿ ಸುಮಾರು ಶಾಸನಗಳು ಈ ಆನೇಕಲ್ ತಾಲ್ಲೂಕಿನಲ್ಲಿ ದೊರೆತಿದ್ದರೂ ಅವೆಲ್ಲವೂ ತಮಿಳು ಭಾಷೆಯಲ್ಲಿದೆ.

ಚೋಳರ ಆಳ್ವಿಕೆಯ ಕಾಲದಲ್ಲಿದ್ದ 'ಎರುಮಲೈನಾಡು', 'ಮುಡಿಗೊಂಡ' ಚೋಳಮಂಡಲ ಮಾಶಂಡಿನಾಡು. ಪೆರಿಯನಾಡು ಮುಂತಾದ ಆಡಳಿತ ವಿಭಾಗಗಳು ಮುಂದುವರೆದು ಅವರ ಆಳ್ವಿಕೆಯ ಪ್ರಭಾವ ಹೊಯ್ಸಳರ ಕಾಲದಲ್ಲೂ ಪಡಿಮೂಡಿರುವುದುನ್ನು ಸೂಚಿಸುತ್ತದೆ.

ಕ್ರಿ.ಶ 1250ರ ಸುಮಾರಿಗೆ ಹೊಯ್ಸಳರ ಮಹಾಮಂಡಳೇಶ್ವರರಾದ ಪೂರ್ವಾಧಿರಾಯರ ಆಳ್ವಿಕೆಗೆ ಬನ್ನೇರುಘಟ್ಟ ಪ್ರದೇಶವು ಒಳಪಟ್ಟಿದ್ದಿತು. ಚೋಳರ ಆಳ್ವಿಕೆಯ ಕಾಲದಲ್ಲಿ ಕಂದಾಯಾದ ಅಧಿಕಾರಿಗಳಾಗಿ ಅಂದರೆ 'ಪುರುವವರಿ' ರಾಯರೆಂದು ನೇಮಕಗೊಂಡಿದ್ದವರೇ ಮುಂದೆ ಹೊಯ್ಸಳರ ಕಾಲದಲ್ಲಿ 'ಪೂರ್ವಾಧಿರಾಯರು' ಎಂಬ ಹೆಸರಿನ ಮಹಾಮಂಡಳೇಶ್ವರರಾಗಿ ಬದಲಾಗಿದ್ದರು. ಇವರು ಈ ಪ್ರದೇಶದ ಅನೇಕ ದೇವಾಲಯಗಳಿಗೆ ವಿಫಲ ದಾನದತ್ತಿಗಳನ್ನು ನೀಡಿರುತ್ತಾರೆ ಕ್ರಿ.ಶ.ಸುಮಾರು 1257ರಲ್ಲಿ 'ಧರ್ಮತ್ತಾಳ್ವರ'ನೆಂಬ ಪೂರ್ವಾಧಿರಾಯನು ಬನ್ನೇರುಘಟ್ಟದಲ್ಲಿ ದಾಮೋದರ ದೇವರ ದೇಗುಲವನ್ನು ಎತ್ತಿಸಿದನೆಂದು ತಿಳಿದು ಬರುತ್ತದೆ. ಆ ನಂತರದಲ್ಲಿ ಬನ್ನೇರುಘಟ್ಟದಲ್ಲಿ ಶಾಸನಗಳು ವಿಶೇಷವಾಗಿ ಕಾಣಿಸಿಕೊಂಡಿವೆ.

1278ರಲ್ಲಿ ದೊರೆತ ಶಾಸನದಲ್ಲಿ ಉಲ್ಲೇಖಿಸಿರುವಂತೆ ಚಿಕ್ಕವೀರ ಕೇತಯ ದಂಡನಾಯಕನೆಂಬ ಸೇನಾನಿ ಮುಮ್ಮಡಿ ನರಸಿಂಹನ ಆಯುಧ ಮತ್ತು ಸೈನ್ಯಗಳಿಗೆ ಜಯವಾಗಲೆಂದು ದಾನ ನೀಡಿರ ಶಾಸನವಿದೆ. 'ಅಲ್ಲದೆ ಜಿಗಣಿ ಗ್ರಾಮದ ಆದಾಯವನ್ನು ದಾಮೋದರ ದೇವಾಲಯಕ್ಕೆ ಹೊಯ್ಸಳರ ಇಮ್ಮಡಿ ನರಸಿಂಹನು ನೀಡಿದ ಸಂಗತಿಯನ್ನು ಈ ಶಾಸನದಲ್ಲಿ ದಾಖಲಿಸಿಲಾಗಿದೆ.

[8]1297ರಲ್ಲಿ ಬನ್ನೇರುಘಟ್ಟದ ಶಾಸನಗಳಲ್ಲಿ ಪೆರಿಯನಾಡಿನ' ಉಲ್ಲೇಖ ಬಂದಿದೆ. ಇದು ಪೊನ್ನಣಿಗೆ ನಾಡಿನ ಒಂದು ಉಪವಿಭಾಗವಾಗಿದ್ದ ಬಗ್ಗೆ ಶಾಸನವೊಂದರಿಂದ ತಿಳಿಯುತ್ತದೆ. 'ಪೊನ್ನಣಿಗನಾಡು' ಎಂಬುದು ಹೊಮ್ಮಳಿಗೆ ನಾಡಿನ ಪೂರ್ವರೂಪವಾಗಿದೆ. ಬನ್ನೇರುಘಟ್ಟದ ಸುತ್ತಮುತ್ತಲ ಪ್ರದೇಶ ಈ ಪೆರಿಯನಾಡಿನ ವ್ಯಾಪ್ತಿಯಲ್ಲಿ ಬರುತ್ತಿತ್ತೆಂದು ತೋರುತ್ತದೆ. ಪೆರಿಯನಾಡು ಅಥವಾ ಹಿರಿಯನಾಡು ಎಂಬುದು ಬೇರೆ ಬೇರೆ ಜಿಲ್ಲಾ ಪ್ರದೇಶಗಳಲ್ಲೂ ಕಂಡುಬಂದಿದ್ದು. ಸಾಮಾನ್ಯವಾಗಿ ಅಂತಹ ನಾಡುಗಳ ಮೇಲೆ ರಾಜಕುಮಾರರನ್ನು ಆಡಳಿತದ ತರಬೇತಿಗಾಗಿ ನೇಮಿಸುತ್ತಿದ್ದರೆಂದು ಭಾವಿಸಲಾಗಿದೆ.

ಕ್ರಿ.ಶ 1316ರ ಹೊಯ್ಸಳರ ಶಾಸನವೊಂದರಲ್ಲಿ 'ಹೊಮ್ಮಳಿಗೆ ನಾಡಿ'ನ ಉಲ್ಲೇಖವಿದೆ. ಬನ್ನೇರುಘಟ್ಟ ಹೊಮ್ಮಳಿಗೆ ನಾಡಿನ ಕೇಂದ್ರ ಸ್ಥಳವಾಗಿದ್ದಿತು. ಬನ್ನೇರುಘಟ್ಟ ಮತ್ತು ಹೊಮ್ಮಳಿಗೆ ನಾಡು ಎಂಬ ಸ್ಥಳ ಮತ್ತು ನಾಡಿನ ಹೆಸರುಗಳೆರುಡು ಹೊನ್ನಿಗೆ (ಚಿನ್ನಕ್ಕೆ) ಸಂಬಂಧಸಿದೆ. ಪೊನ್

[8] ಬೆಂಗಳೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಲೇ : ಡಾ. ಆರ್.ಗೋಪಾಲ್, ಪು–88

ಎರಡುಪಟ್ಟು ಎಂಬುದು ಬನ್ನೇರುಘಟ್ಟದ ಮೂಲ. ಪೊನ್ ಎಂದರೆ ಚಿನ್ನ ಎರೆಪಟ್ಟು ಎಂದರೆ ಮೂಲಸ್ಥಾನ. ಅಂದರೆ ಇಂದಿನ ಬನ್ನೇರುಘಟ್ಟದ ಪಶ್ಚಿಮಕ್ಕೆ ಇರುವ ಸುವರ್ಣಮುಖಿ ಸ್ಥಳವನ್ನು ಒಳಗೊಂಡಂತೆ ಈ ಪ್ರದೇಶವನ್ನು ಹೆಸರಿಸುತ್ತಿದ್ದರೆಂದು ತೋರುತ್ತದೆ. 'ಪೊನ್ನೆರೆಪಟ್ಟಿ' ಕಾಲಾಂತರದಲ್ಲಿ ಬನ್ನೇರುಘಟ್ಟ ವಾಗಿ ರೂಪಾಂತರವಾಗಿರುವ ಸಾಧ್ಯತೆಗಳಿವೆ. ಹಾಗೆ ಹೊಮ್ಮಳಿಗೆ ನಾಡಿನ ಕೇಂದ್ರಸ್ಥಳ ಬನ್ನೇರುಘಟ್ಟ ಎಂಬುದು ಸರಿಯಷ್ಟೆ. ಹೊಮ್ಮಳಿಗೆ ನಾಡನ್ನು 'ಪೊನ್‌ಮಣಿಗ ನಾಡು' ಎಂದು ಕರೆದಿರುವುದಕ್ಕೆ ಶಾಸನಾಧಾರವಿದೆ ಪೊನ್+ ಅಳಿಕೆ ಎಂಬುದೇ ಹೊಮ್ಮಳಿಕೆ ಹೊಮ್ಮಳಿಗೆ ಆಗಿರಬೇಕು, ಅಳಿಕೆ ಎಂದರೆ ವ್ಯವಸಾಯಕ್ಕೆ ಒಳಪಡುವ ಗುಡ್ಡಗಾಡು ಎಂಬರ್ಥವಿದೆ, ಚಿನ್ನ ದೊರೆಯುತ್ತಿದ್ದ ಸಣ್ಣಪುಟ್ಟ ಗುಡ್ಡಗಳಿಂದ ಕೂಡಿದ ಈ ಪ್ರದೇಶವೇ 'ಹೊಮ್ಮಳಿಗೆನಾಡು' ಆಗಿದ್ದಿತೆಂದು ಹೇಳಬಹುದಾಗಿದೆ. ಈ ಪ್ರದೇಶದಲ್ಲಿ ಆರಂಭದಲ್ಲಿ ಮೇಲ್ಪಡದ ಚಿನ್ನದ ಕಣಗಳು ಇಲ್ಲಿನ ಗುಡ್ಡಗಳಲ್ಲಿ ಇದ್ದಿತೆಂದು ತೋರುತ್ತದೆ. ಅದನ್ನು ಜಲಗಾರರು ಬೇರ್ಪಡಿಸುತ್ತಿದ್ದರೆಂದು ತೋರುತ್ತದೆ. ಈಗ ಈ ನಾಡಿನಲ್ಲಿ ಚಿನ್ನ ದೊರೆಯದಿದ್ದರು, ಪ್ರಾಚೀನಕಾಲದಲ್ಲಿ ಇದು ಚಿನ್ನಕ್ಕೆ ಹೆಸರಾಗಿ 'ಹೊಮ್ಮಳಿಗೆ ನಾಡು' ಎನಿಸಿಕೊಂಡಿತ್ತೆಂದು ಹೇಳಬಹುದಾಗಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ದಕ್ಷಿಣಭಾಗ ಆನೇಕಲ್ ತಾಲ್ಲೂಕಿನ ಪಶ್ಚಿಮಭಾಗ ಬಹುಮಟ್ಟಿಗೆ ಗುಡ್ಡಗಾಡು ಮತ್ತು ಕುರುಚಲು ಕಾಡಿನಿಂದ ಕೂಡಿರುವ ಪ್ರದೇಶ ಈ ಹೊನ್ನಳಿಗೆ ನಾಡಿನ ವ್ಯಾಪ್ತಿಯಲ್ಲಿ ಇದ್ದಿತೆಂದು ಹೇಳಬಹುದಾಗಿದೆ. ಈ ಬನ್ನೇರುಘಟ್ಟದ ಶ್ರೀಚಂಪಕಧಾಮಸ್ವಾಮಿ ಗರ್ಭಗೃಹದ ಹೊರಭಿತ್ತಿ ಮತ್ತು ಅಧಿಷ್ಠಾನದಲ್ಲಿರುವ ತಮಿಳು ಶಾಸನಗಳಲ್ಲಿ ಬಹಳಷ್ಟು ಹೊಯ್ಸಳ ಮುಮ್ಮಡಿ ನರಸಿಂಹ, ರಾಮನಾಥ, ಮುಮ್ಮಡಿ ವೀರಬಲ್ಲಾಳ ಮುಂತಾದವರಿಗೆ ಸೇರಿದ ಶಾಸನಗಳಿವೆ. ಈ ಶಾಸನಗಳಲ್ಲಿ ಬನ್ನೇರುಘಟ್ಟವನ್ನು 'ವರದರಾಜ ಪಟ್ಟಣ' ಎಂದು ಕರೆದಿದ್ದು ಅದು 'ಮೊರಸುನಾಡಿನ ಸ್ಥಳ' ಎಂದು ಉಲ್ಲೇಖಿಸಲಾಗಿದೆ.

ಕ್ರಿ.ಶ 1295ರ ಶಾಸನವೊಂದರಲ್ಲಿ ಹೊಯ್ಸಳ ವೀರರಾಮನಾಥನ ಮಹಾಮಂಡಲೇಶ್ವರ ರಾಜರಾಜ ಕರ್ಕಡ ಮಹಾರಾಯನು 'ವಣ್ಣಿಯಹಟ್ಟ"ದ ದಾಮೋದರ ದೇವರಿಗೆ ದತ್ತಿಯೊಂದನ್ನು ನೀಡಿರುವುದನ್ನು ದಾಖಲಿಸಿದೆ. ಮುಮ್ಮಡಿ ವೀರಬಲ್ಲಾಳನ ಕಾಲದ ಮತ್ತೊಂದು ಶಾಸನದಲ್ಲಿ ಪೊನ್ ಮಣಿಯ ಪಟ್ಟುವಿನ ಅಧೀಕ್ಷಕರಾದ ಅಲ್ಲಪ್ಪ ಮತ್ತು ಯಂಜಿಗಾಮುಮಂಡರು ಹಾಗೂ ಮಹಾಪಸಾಯತ ನಿನ್ರಾನ್ ತಿರುವೆಂಗಡಮುಡ್ಯೆಯಾರ್ ಎಂಬುವರು ಸೇರಿ ದಾಮೋದರ ದೇವರಿಗೆ ದತ್ತಿ ಬಿಟ್ಟಿರುವುದನ್ನು ದಾಖಲಿಸಲಾಗಿದೆ.

ಈ ರೀತಿಯಾಗಿ ಹೊಯ್ಸಳರು ಹೊಮ್ಮಳಿಗೆ ನಾಡಾಗಿ ಹೆಸರಾದ ಈ ಬನ್ನೇರುಘಟ್ಟ ಪ್ರದೇಶದಲ್ಲಿ ಆಳ್ವಿಕೆ ನೆಡೆಸಿ ಇಲ್ಲಿನ ದಾಮೋದರ ದೇವರಿಗೆ ದಾನದತ್ತಿಗಳನ್ನು ನೀಡಿದರಲ್ಲದೆ. ಜಿಗಣಿಗ್ರಾಮದ ಆದಾಯವನ್ನು ಈ ದೇವಾಲಯಕ್ಕೆ ನೀಡಿ ಇಂದಿಗೂ ಇತಿಹಾಸದ ಪುಟಗಳಲ್ಲಿ ತಮ್ಮ ಹೆಸರು ಚಿರಕಾಲ ಉಳಿದಿರುವಂಥ ಕಾರ್ಯಗಳನ್ನು ಮಾಡಿದ್ದಾರೆ.

ವಿಜಯನಗರ ಸಾಮ್ರಾಜ್ಯ :

ಕರ್ನಾಟಕ ಚರಿತ್ರೆಯಲ್ಲಿ ಮಾತ್ರವಲ್ಲ ಇಡೀ ಭಾರತದ ಚರಿತ್ರೆಯಲ್ಲಿ ಈ ವಿಜಯನಗರ ಸಾಮ್ರಾಜ್ಯದ ವೈಭವವನ್ನು ಸುವರ್ಣಾಕ್ಷರಗಳಲ್ಲಿ ದಾಖಲಿಸುವಂಥ ಆಡಳಿತವನ್ನೂ ನೀಡಿದ್ದಾರೆ, ಇದೊಂದು ಯುಗಾಂತರ ಕಾರಕವಾದ ಘಟವೆಯಾಗಿದೆ.

ಹೊಯ್ಸಳರ ಸಾಮ್ರಾಜ್ಯದ ಮೂರನೇಯ ವೀರಬಲ್ಲಾಳನ ಕೊನೆಕೊನೆಯ ಕಾಲಕ್ಕಾಗಲೇ ಬೆಂಗಳೂರು ಜಿಲ್ಲೆಯಲ್ಲಿ ವಿಜಯನಗರ ಅರಸರ ಆಳ್ವಿಕೆ ಪ್ರಾರಂಭವಾಗಿತ್ತು. ಕ್ರಿ.ಶ 1355ರ ನಂತರದಲ್ಲಿ ಆನೇಕಲ್ ಪ್ರದೇಶದಲ್ಲಿ ವಿಜಯನಗರದ ಬುಕ್ಕಣ್ಣ ಒಡೆಯ (1355)ನಿಂದ ಹಿಡಿದು ವೆಂಕಟಪತಿರಾಯ (1601) ಮತ್ತು ರಾಮದೇವರಾಯ (1614) ಮುಂತಾದ ಅರಸರ ಕಾಲದವರೆಗಿನ ಶಾಸನಗಳು ಬನ್ನೇರುಘಟ್ಟ ಕತ್ತರಿಗುಪ್ಪೆ ಆನೇಕಲ್, ನಾರಾಯಣಘಟ್ಟ, ಜಿಗಣಿ, ಮಾಸ್ತೇನಹಳ್ಳಿ, ಚಿಕ್ಕಭೂತಾನಹಳ್ಳಿ ಮುತ್ತಾನಲೂರು, ಗೋಣಿಘಟ್ಟಪುರ ಗ್ರಾಮಗಳಲ್ಲಿ ದೊರೆತಿರುತ್ತದೆ. ಆನೇಕಲ್ ತಾಲ್ಲೂಕು ಪ್ರದೇಶವು ಮುಳುಬಾಗಿಲು ರಾಜ್ಯದ ಭಾಗವಾಗಿದ್ದಿತು. ಈ ರಾಜ್ಯದಲ್ಲಿ ಅನೇಕ ನಾಡುಗಳಿದ್ದವು. ಆನೇಕಲ್ ತಾಲ್ಲೂಕಿನ ವಾಯವ್ಯಭಾಗದಲ್ಲಿ ಬೇಹೂರು (ಬೆಂಪೂರು) ನಾಡು, ಈಶಾನ್ಯಭಾಗದಲ್ಲಿ ಎಳುಮರೈನಾಡು ಅಥವಾ ಹಿಂಮಳೆನಾಡು, ಮತ್ತು ಬನ್ನೇರುಘಟ್ಟದ ಸುತ್ತಮುತ್ತಲ ಪ್ರದೇಶಗಳು ಹೊಂಮಳಿಗೆ / ಪೊಂಮಳಿಗೆ ನಾಡಿಗೆ ಸೇರಿದ ಭಾಗವಾಗಿದ್ದುವು.

[9]ವಿಜಯನಗರದ ಅರಸರ ಕಾಲದ ಶಾಸನಗಳಲ್ಲಿ ಸಣ್ಣಿನಾಡು, ಬೇಹೂರನಾಡು, ಹೊಮ್ಮಳಿಗೆನಾಡು, ಕುಕ್ಕಲನಾಡು, ಮೊರಸುನಾಡು, ಎರುಮರೈನಾಡು ಮುಂತಾದವು ಇವುಗಳಿಗೆ ಅನೇಕವು ಗಂಗ, ಚೋಳ, ಹೊಯ್ಸಳರ ಕಾಲದಿಂದಲೂ ಅಸ್ಥಿತ್ವವನ್ನು ಪಡೆದಿದ್ದವು. ಕ್ರಿ.ಶ.1400ರ ನಂತರದ ಶಾಸನಗಳಲ್ಲಿ ವಿಜಯನಗರ ಕಾಲದಲ್ಲಿ 'ನಾಡು'ಗಳಿಗೆ ಪರ್ಯಾಯವಾಗಿ 'ಸೀಮೆ'ಗಳು ಸ್ಥಾನ ಪಡೆದವು ಉದಾ: ಶಿವನಸಮುದ್ರಸೀಮೆ, ಹೊಸಕೋಟೆಸೀಮೆ, ನೆಲಮಂಗಲಸೀಮೆ, ಇತ್ಯಾದಿಗಳು ಕ್ರಿ.ಶ 1364 ರಲ್ಲಿ ಬುಕ್ಕರಾಯನು ಬನ್ನೂರುಘಟ್ಟದ ದಾಮೋದರ ದೇವರಿಗೆ ಗ್ರಾಮವೊಂದನ್ನು ದತ್ತಿ ನೀಡಿದ್ದು ಬುಕ್ಕರಾಯನ ಆಳ್ವಿಕೆಯ ಬಗ್ಗೆ ಅನೇಕ ದಾಖಲೆಗಳು ದೊರೆಯುತ್ತದೆ.

ಬುಕ್ಕರಾಯನಿಗೆ ಮಲ್ಲಪ್ಪ ಒಡೆಯ, ಕಂಪಣ್ಣ ಒಡೆಯ, 2ನೇ ಹರಿಹರ ಎಂಬ ಮಕ್ಕಳಿದ್ದರು, ಬುಕ್ಕರಾಯನ ನಂತರ ಮಲ್ಲಪ್ಪ ಒಡೆಯನ ಆಳ್ವಿಕೆ ಈ ಪ್ರದೇಶದಲ್ಲಿ ಮುಂದುವರೆಯಿತು ಕ್ರಿ.ಶ 1362ರಲ್ಲಿ ಮಲ್ಲಪ್ಪ ಒಡೆಯನು ಬನ್ನೇರುಘಟ್ಟದ ದಾಮೋದರ ದೇವಾಲಯಕ್ಕೆ ದಾನದತ್ತಿಗಳನ್ನು ನೀಡಿದನು.

ಕ್ರಿ.ಶ 1360ರ ವಿಜಯನಗರದ ಶಾಸನವೊಂದು ಬುಕ್ಕಣ್ಣ ಒಡೆಯರ ಮಗ ಹಾಗೂ ಕೆಂಪಣ್ಣ ಒಡೆಯನು ದೇವಾಲಯಕ್ಕೆ ದತ್ತಿ ಬಿಟ್ಟಿರುವುದನ್ನು ಪ್ರಸ್ತಾಪಿಸುತ್ತದೆ. ಕ್ರಿ.ಶ 1468ರ ಶಾಸನವು ವೀರ

---

[9] ಬೆಂಗಳೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಲೇ : ಡಾ.ಆರ್.ಗೋಪಾಲ್, ಪು–90–91

ವಿರೂಪಾಕ್ಷರಾಯನ ಆಳ್ವಿಕೆಯ ಕಾಲಕ್ಕೆ ಸೇರಿದ್ದ ಶ್ರೀರಂಗನಾಥ, ಶ್ರೀರಂಗರಾಜ ಎಂಬುವವರ ತ್ರುಚಿತ ಉಲ್ಲೇಖವನ್ನೊಳಗೊಂಡಿದೆ.

[10]ವಿಜಯನಗರ ಅರಸರಾದ ಬುಕ್ಕಣ್ಣ ಒಡೆಯರ ಮಗ ಮಲ್ಲಪ್ಪ ಒಡೆಯ (1362) ಹರಿಹರರಾಯರ ಕುಮಾರ ಇಮ್ಮಡಿ ವೀರಬುಕ್ಕಣ್ಣ, ಒಡೆಯ (1364) ಮಾಯಿನಾಯ್ಕನ ಕುಮಾರ ಮಲ್ಲಪ್ಪನು (1364) ಶ್ರೀವೀರ ಬುಕ್ಕಣ್ಣ ಒಡೆಯರು (1386) ಚೊಕ್ಕಣ್ಣಗಳ ಮಕ್ಕಳು ಸಂಕಪ್ಪಗಳು (1415) ಮಹಾಪ್ರಧಾನ ಈರಣ್ಣ ದಂಡನಾಯಕರು (1421) ಶ್ರೀವೀರಮಲ್ಲಪ್ಪ ಒಡೆಯೆಲ್ಲರಿಗೂ ಸಕಲಸೌಖ್ಯವಾಗಲೆಂದು ಶ್ರೀ ದಾಮೋದರ ದೇವಾಲಯಕ್ಕೆ ಉಪಾರ ನಂದಾದೀವಿಗೆ ಮತ್ತು ವನಮಾಲೆಗಳ ವಿಪುಲದತ್ತಿಗಳನ್ನು ನೀಡಿರುವುದಕ್ಕೆ ಇಲ್ಲಿನ ಶಾಸನಗಳು ಸಾಕ್ಷಿಯಾಗಿದೆ. ವಿಜಯನಗರದ ಅರಸರ ಕಾಲದಲ್ಲಿ ಬಂನೂರಘಟ್ಟ, ಬಂನಿರರಘಟ್ಟ ಎಂದು ಉಕ್ತವಾಗಿರುವ ಇಂದಿನ ಬನ್ನೇರುಘಟ್ಟದ ಚಂಪಕಧಾಮಸ್ವಾಮಿ ಹೆಸರನ್ನು ದಾಮೋದರ ದೇವರೆಂದು ಕರೆಯಲಾಗಿದ್ದು, ಪಾತ್ರ ಪವಿತ್ರ, ಉಪಾರ ನಂದಾದೀವಿಗೆ ವನಮಾಲೆ ಮುಂತಾದ ಪೂಜಾಕೈಂಕರ್ಯಗಳಿಗೆ ಅನೇಕ ದಾನದತ್ತಿಗಳನ್ನು ವಿಜಯನಗರದ ಅರಸರು ಮತ್ತು ಅವರ ಅಧಿಕಾರಿಗಳು ಧಾರಾಳವಾಗಿ ಬಿಟ್ಟಿರುವುದು ಕಂಡುಬರುತ್ತದೆ.

ಈ ರೀತಿಯಾಗಿ ವಿಜಯನಗರದ ಅರಸರು ಉತ್ತಮ ಆಡಳಿತದಿಂದ, ಧಾರ್ಮಿಕವಾಗಿ, ಸಾಮಾಜಿಕವಾಗಿ ದೇಗುಲಗಳಿಗೆ ಅನೇಕ ರೀತಿಯ ದಾನದತ್ತಿಗಳನ್ನು ನೀಡುವುದರ ಮೂಲಕ ಇತಿಹಾಸದ ಪುಟಗಳಲ್ಲಿ ತಮ್ಮ ಹೆಸರು ಅಜರಾಮರವಾಗಿ ಉಳಿಯುವಂತೆ ಮಾಡಿದ್ದಾರೆ.

ಮೈಸೂರು ಅರಸರ ಕಾಲ

ಮೈಸೂರು ಸಂಸ್ಥಾನವು ತಮ್ಮ ಆಡಳಿತ ವೈಖರಿಯಿಂದ ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ದಕ್ಷಿಣಭಾರತದ ರಾಜ್ಯಗಳಲ್ಲಿ ಪ್ರಖ್ಯಾತಿಯನ್ನು ಹೊಂದಿದೆ. ಕ್ರಿ.ಶ 1626ರ ವೇಳೆಗೆ ದಳವಾಯಿ ಲಿಂಗಣ್ಣ ದಳವಾಯಿ ಬಸವಲಿಂಗಣ್ಣ ನಂತರದ ದಳಿವಾಯಿ ವಿಕ್ರಮರಾಯನ ಕಾಲದಲ್ಲಿ ಮತ್ತು ಚಿಕ್ಕದೇವರಾಯರ ಕಾಲದಲ್ಲಿ ಆನೇಕಲ್ಲಿನ ನೆರೆಹೊರೆಯ ಕೆಲವು ಪ್ರದೇಶಗಳು ಮೈಸೂರು ಅರಸರ ವಶಕ್ಕೆ ಒಳಪಟ್ಟಿರಬಹುದಾದರೂ ಆನೇಕಲ್ ಸ್ಥಳ ಮಾತ್ರ ಅವರ ವಶವಾಗಿರಲಿಲ್ಲ.

[11]1765ರಲ್ಲಿ ಬನ್ನೇರುಘಟ್ಟದ ಸಮೀಪದ ಗ್ರಾಮವಾದ ವಾಜರಹಳ್ಳಿಯ ಶ್ರೀಯವರ ದೇವಸ್ಥಾನಕ್ಕೆ ಪುರಾಣ ಅಭಿಷೇಕ, ಹಬ್ಬ, ಪರ್ವ, ತಿಥಿ ಮುಂತಾದ ಸೇವೆಗಳಿಗಾಗಿ ಮಹಾರಾಜೇಶ್ರೀಯವರು ಎಂದು ಮಾತ್ರ ಉಲ್ಲೇಖಿಸಿರುವುದು ಗಮನಿಸಬೇಕಾದ ಅಂಶವಾಗಿದೆ.

ಕ್ರಿ.ಶ 1818ರಲ್ಲಿ ಬೇವೂರು ಸ್ಥಳದ ಬೆಂಗಳೂರು ಫೌಜುಧಾರರಾಗಿದ್ದ ಲಿಂಗರಾಜಯ್ಯ ಅರಸಿರವರು ಬನ್ನೇರುಘಟ್ಟದ ಶ್ರೀಚಂಪಕಧಾಮ ರಾಮದೇವರ ಪ್ರೀತ್ಯರ್ಥವಾಗಿ ವಂಹ್ನಿಗಿರಿ, ಸುವರ್ಣಮುಖಿ ಸರೋವರದ ಸೋಪಾನಗಳನ್ನು ರಮ್ಯವಾಗಿ ಕಲ್ಪಿಸಿದರೆಂದು ಸುವರ್ಣಮುಖಿ ತೀರ್ಥದ ಸಮೀಪದ ಶಾಸನದಿಂದ ತಿಳಿದುಬರುತ್ತದೆ.

---

[10] ಶಾಸನ ಮಂಥನ, ಲೇ : ಡಾ.ಪಿ.ವಿ.ಕೃಷ್ಣಮೂರ್ತಿ, ಪು 193-194

[11] ಶಾಸನ ಮಂಥನ, ಲೇ : ಡಾ.ಪಿ.ವಿ.ಕೃಷ್ಣಮೂರ್ತಿ, ಪು 275-276

ಒಟ್ಟಾರೆಯಾಗಿ ಮೈಸೂರು ಅರಸರ ಆಳ್ವಿಕೆಯಿಂದ ಈ ಬನ್ನೇರುಘಟ್ಟದ ಸುತ್ತಮುತ್ತಲ ಪ್ರದೇಶಗಳಿಗೆ ತನ್ನದೇ ಆದ ಪ್ರಭಾವ ಬೀರಿರುವುದನ್ನು ಕಾಣಬಹುದು. ನನ್ನ ಕ್ಷೇತ್ರಕಾರ್ಯದ ನಿಮಿತ್ತ ತಿಳಿದುಬಂದ ಸಂಗತಿಯೆಂದರೆ, ಈ ಬನ್ನೇರುಘಟ್ಟಕ್ಕೆ ಮೈಸೂರಿನ ಕೊನೆಯ ಅರಸ ಶ್ರೀ ಜಯಚಾಮರಾಜೇಂದ್ರ ಒಡೆಯರು ಆಗಮಿಸಿದ್ದರೆಂದು ಕಾರಣ 1963ರಲ್ಲಿ ಬನ್ನೇರುಘಟ್ಟದಲ್ಲಿ ಬರಗಾಲವಿದ್ದ ಕಾರಣ ಲೋಕಕಲ್ಯಾಣರ್ಥವಾಗಿ ನವಗ್ರಹಶಾಂತಿ ಹೋಮ ನಡೆಸಲು ಬಂದಿದ್ದರೆಂದು ಗ್ರಾಮದ ಹಿರಿಯರೊಬ್ಬರು ಅಭಿಪ್ರಾಯವಾಗಿದೆ.

[12]ಇದೇ ಗ್ರಾಮದ ಮತ್ತೊಬ್ಬ ಹಿರಿಯರ ಅಭಿಪ್ರಾಯದಂತೆ ಮೈಸೂರು ಅರಸರಾದ ಶ್ರೀಜಯಚಾಮರಾಜೇಂದ್ರ ಒಡೆಯರು, ಅರಸರಿಗೆ ಬೆನ್ನುನೋವಿನ ನಿಮಿತ್ತವಾಗಿ ಈ ಕ್ಷೇತ್ರಕ್ಕೆ ಆಗಮಿಸಿ ಚಂಪಕಧಾಮ ದರ್ಶನ ಪಡೆದು, ಇದೇ ಗ್ರಾಮದ ಕೊಮ್ಮಟಗರಿಛತ್ರ (ಶ್ರೀ ಚಂಪಕಧಾಮ ದೇವಾಲಯದ ಮುಂಭಾಗದ ಪ್ರಧಾನ ರಸ್ತೆಯ ಎಡಬದಿಯಲ್ಲಿದೆ) ಛತ್ರವೊಂದರಲ್ಲಿ ಸುಮಾರು ಒಂದುವಾರ ಕಾಲ ವಿಶ್ರಾಂತಿಪಡೆದು ನಂತರ ತೆರಳಿದರೆಂದು ತಮ್ಮ ನೆನಪಿನ ಬುತ್ತಿಯನ್ನು ಬಿಚ್ಚಿಟ್ಟರು. ಕಾರಣ ಏನೇ ಇರಬಹುದು ಮೈಸೂರಿನ ಅರಸರು ಈ ಕ್ಷೇತ್ರಕ್ಕೆ ಆಗಮಿಸಿದ್ದಂತು ನಿಜ ಎಂಬುದನ್ನು ಕ್ಷೇತ್ರ ಕಾರ್ಯದ ನಿಮಿತ್ತವಾಗಿ ತಿಳಿದುಬಂದ ಸಂಗತಿಯಾಗಿದೆ.

ಸ್ಮಾರಕ ಶಿಲೆಗಳು

ಪ್ರಾಚೀನ ಸ್ಮಾರಕ ಶಿಲೆಗಳು ಪ್ರಪಂಚದಾದ್ಯಂತ ಬಹುಮುಖ್ಯ ಸ್ಥಾನವನ್ನು ಪಡೆದುಕೊಂಡು ಬಂದಿರುವುದು ಸಾಮಾನ್ಯವಾದ ಸಂಗತಿ. ಆದರೆ ಭಾರತ ಇತಿಹಾಸವನ್ನು ಗಮನಿಸಿದಾಗ ಪ್ರಾಗೈತಿಕಾಸಿಕ ಕಾಲದಿಂದಲೂ ಕೆಲವು ಮುಖ್ಯವಾದ ಸ್ಮಾರಕಗಳು ಇಂದಿಗೂ ಕಂಡು ಬರುತ್ತಿರುವುದು ಮಹತ್ವ ವಿಷಯವಾಗಿದೆ. ಅಂದಿನ ಕಾಲದಲ್ಲಿ ಒಂದು ಮುಖ್ಯ ಘಟನೆಯನ್ನು ಪುನಃ ಪುನಃ ಸ್ಮರಿಸಿಕೊಳ್ಳುವ ಸಲುವಾಗಿಯೋ ಅಥವಾ ಆ ಘಟನೆ ಚಿರಃಸ್ಥಾಯಿಯಾಗಿ ಉಳಿಯಲೆಂದೂ ಸ್ಮಾರಕಗಳನ್ನು ನಿರ್ಮಿಸುತ್ತಿದ್ದರು. ಈ ರೀತಿಯ ಘಟನೆಯ ಆಧಾರಿತವಾಗಿ ಹಲವಾರು ಸ್ಮಾರಕಗಳನ್ನು ಇಂದಿಗೂ ಸಹ ಕಾಣುತ್ತೇವೆ. ಹಾಗೆಯೇ ಕೇವಲ ಘಟನೆಯ ಆಧಾರವಾಗಿಯೇ ಅಲ್ಲದೇ ಒಬ್ಬವ್ಯಕ್ತಿ ಈ ನಾಡಿನ ರಕ್ಷಣೆಗಾಗಿ ತನ್ನ ಪಾಲೆವ್ರತ್ಯದ ಉಳಿವಿಗಾಗಿ. ತನ್ನ ಸ್ವಾಮಿಯ ನಿಷ್ಟೆಗಾಗಿ ಹೋರಾಡಿ ಮಡಿದವರ ನೆನಪಿಗಾಗಿ ನಿಲ್ಲಿಸಿದ ಕಲ್ಲುಗಳೇ ಈ ಸ್ಮಾರಕ ಶಿಲೆಗಳು ಈ ಎಲ್ಲಾ ಸ್ಮಾರಕಗಳು ಬಹುಪಾಲು ಕಲ್ಲಿನಿಂದ ಮಾಡಿದವುಗಳಾಗಿವೆ. ಈ ಬನ್ನೇರುಘಟ್ಟ ಪ್ರದೇಶವು ಬಹು ಹಿಂದಿನಿಂದಲೂ ಹಲವಾರು ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟ ಪ್ರದೇಶ. ಈ ಆಳ್ವಿಕೆಯ ನಿರ್ದೇಶನವನ್ನು ಮತ್ತೆ ಮತ್ತೆ ನಮಗೆ ನೆನೆಪಿಸುವಂತೆ ಮೂಕಸಾಕ್ಷಿಗಳಾಗಿ ಕಲ್ಲಿನಗ್ಗಪದಲ್ಲಿ ನೆಲೆನಿಂತ ಪ್ರತಿಮೆಗಳೇ ಈ ಸ್ಮಾರಕ ಶಿಲೆಗಳು. ಈ ಶಿಲೆಗಳಿಂದ ನಮ್ಮ ಹಿಂದಿನ ಇತಿಹಾಸ ಮೌಲ್ಯಗಳು ನಮಗೆ ಮತ್ತೆ ಮರುಕಳಿಸುತ್ತದೆ. ಇಂಥ ಹಲವಾರು ಶಿಲೆಗಳನ್ನು ಬನ್ನೇರುಘಟ್ಟ ಗ್ರಾಮದ ಹೃದಯಭಾಗದಲ್ಲಿರುವ ಶ್ರೀ ವೀರಾಂಜನೇಯ ಸ್ವಾಮಿಯ ದೇವಾಲಯದ

---

[12] ವಕ್ತೃ : ವೆಂಕಟರಾಮ್, ಜಾತಿ ಒಕ್ಕಲಿಗ, ವಯಸ್ಸು 79

ಮುಂಭಾಗದಲ್ಲಿ ಕಾಣಬಹುದು. ಈ ಪ್ರದೇಶದಲ್ಲಿ ನೆಲೆನಿಂತ ಪ್ರಮುಖ ಸ್ಮಾರಕ ಶಿಲೆಗಳೆಂದರೆ ವೀರಗಲ್ಲುಗಳು ಮಾಸ್ತಿಕಲ್ಲುಗಳು ಮತ್ತು ಆತ್ಮಾಹುತಿ ಕಲ್ಲುಗಳು.

ವೀರಗಲ್ಲುಗಳು :

ಉದಾತ್ತವಾದ ಉದ್ದೇಶದಿಂದ ವಿವಿಧ ಕಾರಣಗಳಿಗಾಗಿ ಕಾಳಗದಲ್ಲಿ ಹೋರಾಟ ಮಾಡಿ ವೀರ ಮರಣವನ್ನಪ್ಪಿದ ವೀರರ ಸ್ಮರಣಾರ್ಥ ನಿಲ್ಲಿಸಿದ ಕಲ್ಲುಗಳೇ ಈ ವೀರಗಲ್ಲುಗಳು. ವೀರಗಲ್ಲುಗಳನ್ನು ಹಾಕಿಸುವ ಉದ್ದೇಶ ವೀರನಿಗೆ ಗೌರವ ತೋರಿಸುವುದಾಗಿದೆ. ಹೀಗೆ ತೋರಿಸಿದ ಗೌರವ ಸಾರ್ವಜನಿಕ ಗಮನಕ್ಕೆ ತರುವುದು ಮುಖ್ಯವಾಗುತ್ತದೆ. ಆದ್ದರಿಂದ ವೀರಗಲ್ಲುಗಳನ್ನು ಸಾಮಾನ್ಯವಾಗಿ ಜನಸೇರುವ ಸ್ಥಳಗಳು ಊರಬಾಗಿಲ ಮುಂದೆ, ಹೊಲಗದ್ದೆಗಳು ಮತ್ತು ದೇವಾಲಯಗಳ ಮುಂದೆ ಹಾಕಿಸುವುದುಂಟು.

ಪ್ರಸ್ತುತ ಬನ್ನೇರುಘಟ್ಟದ ಶ್ರೀ ವೀರಾಂಜನೇಯ ಸ್ವಾಮಿಯ ದೇವಾಲಯದ ಮುಂದಿರುವ ಒಂದು ಕಲ್ಲಿನಲ್ಲಿ ವೀರನೊಬ್ಬನು ಬಲಗೈಯಲ್ಲಿ ಕತ್ತಿಯನ್ನು ಮತ್ತು ಎಡಗೈಯಲ್ಲಿ ಹೆಂಡತಿಯನ್ನು ಹಿಡಿದುಕೊಂಡು ನಿಂತಿರುವ ದೃಶ್ಯವಿದೆ. ಬಹುಶಃ ಈ ದೃಶ್ಯ ವೀರನೊಬ್ಬನು ವೀರಮರಣವನ್ನಪ್ಪಿ ಪತ್ನಿಯ ಸಂಗಡ ಸ್ವರ್ಗಕ್ಕೆ ಹೋಗುತ್ತಿರ ಬಹುದು. ಮತ್ತೊಂದು ವೀರಗಲ್ಲಿನ ದೃಶ್ಯದಲ್ಲಿ ವೀರನೊಬ್ಬನು ಕೈಯಲ್ಲಿ ಆಯುಧವನ್ನು ಹಿಡಿದು ನಿಂತಿರುವುದು ಈ ದೃಶ್ಯವು ಸಹ ಅವರ ವೀರಮರಣವನ್ನು ಸಂಕೇತಿಸುತ್ತದೆ.

ಮತ್ತೊಂದು ಕಲ್ಲಿನ ದೃಶ್ಯ : ವೀರನೊಬ್ಬನು ವೀರಾವೇಶದಿಂದ ಹೋರಾಡಿ ವೀರಮರಣವನ್ನಪ್ಪಿ ವೀರಸ್ವರ್ಗಸೇರಿದವನನ್ನು ಅಪ್ಸರೆಯರು ಮೇಲಕ್ಕೊಯ್ಯುತ್ತಿರವ ಚಿತ್ರವಿದೆ.

ಇನ್ನೊಂದು ದೃಶ್ಯದಲ್ಲಿ ಸ್ತ್ರೀಯೊಬ್ಬಳು ಕೈಮುಗಿದು ನಿಂತಿರುವ ದೃಶ್ಯವಿದೆ. ಬಹುಶಃ ಈ ಚಿತ್ರ ಇಹಲೋಕದ ಜೀವನವನ್ನು ಮುಗಿಸಿ ಪರಲೋಕವನ್ನು ಸೇರುವ ಕೊನೆಯ ನಮನದ ದೃಶ್ಯವಿದ್ದಂತೆ ತೋರುತ್ತದೆ. ಇಲ್ಲಿರುವ ಮಾಸ್ತಿಕಲ್ಲಿನಲ್ಲಿ ಸ್ತ್ರೀಯರಿಬ್ಬರು ಪರಸ್ಪರ ಕತ್ತಿಗಳನ್ನಿಡಿದುಕೊಂಡು ಪರಸ್ಪರ ಹೋರಾಡುತ್ತಿರುವ ದೃಶ್ಯವಿದೆ. ಬಹುಶಃ ಇದು ಕಾಳಗದ ದೃಶ್ಯವಿರಬಹುದು. ಮೇಲೆ ಸೂರ್ಯ ಚಂದ್ರದ ಮಧ್ಯಯಲ್ಲಿ ಲಿಂಗದ ಕೆತ್ತನೆಯ ದೃಶ್ಯವಿದೆ ಪ್ರಾಯಶಃ ಈ ದೃಶ್ಯ ಹೋರಾಟದಲ್ಲಿ ಮಡಿದರೆ ಕೈಲಾಸಪ್ರಾಪ್ತಿ, ನಮ್ಮ ಹೋರಾಟ ಸೂರ್ಯ-ಚಂದ್ರರಿರುವ ಪರ್ಯಂತ ಶಾಶ್ವತವಾಗಿರಲಿ ಎಂಬ ಉದ್ದೇಶವಿರಬಹುದು. ಮತ್ತೊಂದು ಕೆತ್ತನೆಯ ದೃಶ್ಯದಲ್ಲಿ ವೀರ ವನಿತೆಯರಿಬ್ಬರು ಪರಸ್ಪರ ಕಾದಾಟವಿರುವ ದೃಶ್ಯವಿದೆ, ಬಹುಶಃ ಈ ದೃಶ್ಯ ಸವತಿ ಮತ್ಸರವಿರುವಂತೆ ತೋರುತ್ತದೆ.

ಬನ್ನೇರುಘಟ್ಟದ ವೃತ್ತಭಾಗದ ಅಂಚಿನಲ್ಲಿರುವ ಮಾಸ್ತಿಕಲ್ಲಿನ ದೃಶ್ಯವಿದೆ. ಈ ದೃಶ್ಯದಲ್ಲಿರುವ ಸ್ತ್ರೀಚಿತ್ರಗಳನ್ನು ಸ್ಥಳೀಯರು ಹೊನ್ನಮ್ಮ-ಚೆನ್ನಮ್ಮರೆಂದು ಕರೆಯುತ್ತಾರೆ, ಚನ್ನಪಟ್ಟಣ ಮತ್ತು ಕಬ್ಬಾಳಿನ ಜನಾಂಗದವರಿಗೆ ಇವರು 'ಕುಲದೇವತೆ'ಗಳಾಗಿ ಅವರು ಆಗಾಗ ಆಗಮಿಸಿ ಈ ಕಲ್ಲಿಗೆ ಪೂಜೆಸಲ್ಲಿಸಿ ಹೋಗುತ್ತಾರೆಂದು ಸ್ಥಳೀಯರು ಹೇಳುತ್ತಾರೆ, ಈ ಚಿತ್ರದಲ್ಲಿ ಇಬ್ಬರು ಸ್ತ್ರೀಯರು

ಆಯುಧಗಳನ್ನು ಹಿಡಿದುಕೊಂಡು ಹೋರಾಡುತ್ತಿರುವ ದೃಶ್ಯವಿದೆ. ಇಬ್ಬರು ಸ್ತ್ರೀಯರು ಕತ್ತಿಗಳನ್ನು ಎತ್ತಿಕೊಂಡು ಹೋರಾಡುತ್ತಿರುವ ದೃಶ್ಯವಿದೆ. ಇದರ ಪಕ್ಕದಲ್ಲೇ ಸ್ತ್ರೀಯೊಬ್ಬಳ ಆಲಿಢಭಂಗಿಯಲ್ಲಿ ನಿಂತ ಧಾನ್ಯಸಕ್ತಳಾಗಿ ಕೈಮುಗಿಯುತ್ತಿದ್ದು ಅವಳನ್ನು ನೋಡುತ್ತಾ ಹಸುವೊಂದು ಅರಸುತ್ತಿರುವ ದೃಶ್ಯವಿದೆ. ಬಹುಶಃ ಇಬ್ಬರು ಸ್ತ್ರೀಯರು ಹೋರಾಟದ ಕಾಳಗದಲ್ಲಿ ಮಡಿದವಳು ಸ್ವರ್ಗಪ್ರಾಪ್ತಿಗಾಗಿ ಕೈ ಮುಗಿಯುತ್ತಿದ್ದರೆ ಅವಳನ್ನು ಅರಸುತ್ತಾ ಗೋವೊಂದು ನಿಂತಿರುವ ದೃಶ್ಯವಿರಬಹುದು. ಈ ಶಿಲ್ಪದ ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಶಿವ ಲಿಂಗದ ಲಾಂಛನವಿದೆ. ಮತ್ತೊಂದು ಕಪ್ಪುಕಲ್ಲಿನ ದೃಶ್ಯದಲ್ಲಿ ಸ್ತ್ರೀಯೊಬ್ಬಳು ಕೈಯಲ್ಲಿ ಬಿಲ್ಲನ್ನು ಹಿಡಿದು ಬಾಣ ಪ್ರಯೋಗಿಸುತ್ತಿದ್ದು ಎದುರಿನಲ್ಲಿ ಸ್ತ್ರೀಯು ಕೈಮುಗಿದು ಧ್ಯಾನಾಮಗ್ನವಾಗಿರುವ ದೃಶ್ಯವಿದೆ. ಈ ಪಟ್ಟಿಕೆಯ ಕೆಳಭಾಗದಲ್ಲಿ ಸ್ತ್ರೀಯೊಬ್ಬಳು ಪದ್ಮಾಸನದಲ್ಲಿ ಕುಳಿತು ಧ್ಯಾನಮಗ್ನರಾಗಿರುವುದನ್ನು ಕಂಡರೆ ಬಹುಶಃ ಸ್ವರ್ಗಪ್ರಾಪ್ತಿಗಾಗಿ ಪ್ರಾರ್ಥಿಸುತ್ತಿರುವಂತೆ ಭಾಸವಾಗುತ್ತದೆ.

<u>ಆತ್ಮಾಹುತಿಕಲ್ಲುಗಳು</u>[13] :

"ಜಿತೇನ ಲಭ್ಯತೆ ರಾಜ್ಯಲಕ್ಷ್ಮಿ ಮೃತ್ಯುನಾಸಿ ಸುರಾಂಗನಾ
ಕ್ಷಣ ವಿಧ್ವಂಸಿಸಿ ಕಾಯೇಕಾ ಚಿರಿತಾ ಮರಣೇ ರಸೇ"

– ಇದು ಪ್ರಾಚೀನ ಕನ್ನಡವೀರರ ಮಂತ್ರವಾಗಿತ್ತು.

ಯುದ್ಧದಲ್ಲಿ ಗೆದ್ದರೆ ಜಯಲಕ್ಷ್ಮೀ, ಸೋತರೆ ಸುರಾಂಗನೆ, ದೂರಕುವಳು ಕ್ಷಣಕಾಲದಲ್ಲಿ ನಾಶವಾಗುವ ಈ ದೇಹದ ಮೇಲೆ ಚಿಂತೆ ಏಕೆ? ಈ ರೀತಿಯ ಭಾವನೆಗಳಿಂದ ರಣರಂಗದಲ್ಲಿ ಮುನ್ನುಗ್ಗಿ ಹೋರಾಡಿ ಗೆದ್ದು ಹಿಂದಕ್ಕೆ ಬರುತ್ತಿದ್ದರು. ಇದು ಅವರ ಧೈರ್ಯವನ್ನು ದೇಶಕ್ಕಾಗಿ ಒಡೆಯನಿಗಾಗಿ ಅವರು ತೋರಿಸಿದ ಮಹಾತ್ಯಾಗವನ್ನು ತೋರಿಸುತ್ತದೆ. ಪ್ರಾಚೀನ ಕರ್ನಾಟಕದಲ್ಲಿ ವ್ಯಕ್ತಿಗಳು ತಮ್ಮ ಪ್ರಾಣವನ್ನು ತಾವೇ ತೆಗೆದುಕೊಳ್ಳುವ ಈ ಪದ್ಧತಿಯನ್ನೇ 'ಆತ್ಮಬಲಿ" ಎಂದು ಕರೆಯುವರು. ಇಲ್ಲಿ ಉತ್ಕಟವಾದ ಸ್ವಾಮಿ ನಿಷ್ಠೆ ಎದ್ದು ಕಾಣುತ್ತದೆ... ಉದಾ : ಹೊಯ್ಸಳರ ಕಾಲದಲ್ಲಿದ್ದ 'ಗರುಡ' ಪದ್ಧತಿ ಒಡೆಯನ ವಿಶ್ವಾಸವನ್ನು ಗಳಿಸಿದವರನ್ನು 'ಗರುಡ' ಎಂದು ಹೊಗಳುವುದುಂಟು. ತನ್ನನ್ನು ಸಾಕಿ ಸಲಹಿದ ಒಡೆಯನಿಗೆ ಗರುಡನಾಗ ಬಯಸತಕ್ಕವನು ತನ್ನ ಒಡೆಯನ ಮುಂದೆ ಭಾಷೆಯನ್ನು ಕೊಟ್ಟು ಎಡಗಾಲಿಗೆ ಗಂಡ ಪೆಂಪಿರವನ್ನು ಕಟ್ಟಿಕೊಳ್ಳುತ್ತಿದ್ದನು. ರಾಜನಿಗಾಗಿ ಈ ತಂಡದ ನಿಷ್ಟೆ ಎಷ್ಟು ಉಗ್ರವಾಗಿರುತ್ತಿತ್ತು ಎಂದರೆ ರಾಜನಿಗೆ ಜ್ವರ ಬಂದರೆ ಈ ತಂಡದ ಸದಸ್ಯರು ಜಜ್ಜಿದ ಬೆಳ್ಳುಳ್ಳಿಯನ್ನು ಪಾದಕ್ಕೆ ಕಟ್ಟಿಕೊಳ್ಳುತ್ತಿದ್ದರು ಇದರಿಂದ ಅವರಿಗೂ ಜ್ವರ ಬರುತ್ತಿತ್ತು. ರಾಜನಕ್ಕರೆ ಇವರು ನಗುವರು, ಆತ ದುಃಖತಪ್ತನಾದರೆ ಇವರೂ ದುಃಖಿತರೇ ಆಕಸ್ಮಾತ್ ರಾಜ ಸತ್ತರೆ ಇವರು ಆತ್ಮಾಹುತಿ (Self Immolation) ಮಾಡಿಕೊಳ್ಳುತ್ತಿದರ್ರು. ಪ್ರಸ್ತುತ ಇಂಥ ಆತ್ಮಾಹುತಿದಳದ ಕಲ್ಲುಗಳನ್ನು ಇಲ್ಲಿನ ವೀರಾಂಜನೇಯ ಸ್ವಾಮಿ ದೇವಾಲಯದ ಮುಂದೆ ಸಾಲಾಗಿ ನಿಲ್ಲಿಸಲಾಗಿದೆ.

---

[13] ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಕೋಶ, ಲೇ : ಡಾ.ಚಿ.ಸಿ.ನಿಂಗಣ್ಣ, ಪು – 434

ಇಲ್ಲಿರುವ ಒಂದು ಕಲ್ಲಿನ ಕೆತ್ತನೆಯನ್ನು ಗಮನಿಸಿದರೆ ವೀರನೊಬ್ಬನು ಎರಡು ಕೈಗಳಿಂದ ಖಡ್ಗವನ್ನಿಡಿದು ತನ್ನ ಹಿಂಬದಿಯ ಶಿರದ ಮೇಲೆ ಇಟ್ಟುಕೊಂಡಿರುವ ದೃಶ್ಯವಿದೆ. ಈ ದೃಶ್ಯ ವ್ಯಕ್ತಿಯು ತನ್ನ ಖಡ್ಗದಿಂದ ತಾನೇ ಸ್ವಯಂಪ್ರೇರಿತನಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವಂತೆ ಕಾಣುತ್ತದೆ. ಇಂಥವಳು ಆತ್ಮಾಹುತಿದಳದ ಸದಸ್ಯರ ಕಲ್ಲುಗಳನ್ನು ಇಲ್ಲಿನ ವೀರಾಂಜನೇಯ ಸ್ವಾಮಿ ದೇವಾಲಯದ ಆವರಣದಲ್ಲಿ ನಿರ್ಮಿಸಲಾಗಿದೆ. ಪ್ರಾಯಶಃ ಈ ಬನ್ನೇರುಘಟ್ಟ ಪ್ರದೇಶ ಹಿಂದೆ ಹೊಯ್ಸಳರ ಆಳ್ವಿಕೆಗೆ ಒಳಪಟ್ಟ ಸಂದರ್ಭದಲ್ಲಿ ಇಂಥ ಘಟನೆಗಳು ನಡೆದು ಈ ಆತ್ಮಾಹುತಿ ಕಲ್ಲುಗಳನ್ನು ಕೆತ್ತಿಸಿರಬಹುದು. ಇಲ್ಲಿನ ಒಂದು ವೀರಗಲ್ಲು ನೋಡುಗರನ್ನು ಆಶ್ಚರ್ಯ ಚಕಿತಗೊಳಿಸುತ್ತದೆ. ಕಾರಣ ಈ ವೀರಗಲ್ಲಿನಲ್ಲಿ ಮಹಿಳೆಯೊಬ್ಬಳ ಮೇಲೆ ಅತ್ಯಾಚಾರಕ್ಕೆ ಯತ್ನಿಸುತ್ತಿರುವ ವೈರಿಯನ್ನು ವೀರನೊಬ್ಬ ಕೊಲ್ಲುವ ಕೆತ್ತನೆ ಇದೆ.

ಈ ಕೆತ್ತನೆಯು ಪ್ರಸ್ತುತ ಸಮಾಜದಲ್ಲಿ ಅತ್ಯಾಚಾರಕ್ಕೆ ಒಳಗಾಗುವ ಹೆಣ್ಣಿನ ಮಾನ ಮತ್ತು ಪ್ರಾಣ ರಕ್ಷಣೆಗಾಗಿ ಇಂಥ ವೀರರ ಅವಶ್ಯಕತೆಯ ಅಗತ್ಯತೆಯನ್ನು ತೋರಿಸುವಂತಿದೆ.

ಈ ಬನ್ನೇರುಘಟ್ಟ ಪ್ರದೇಶ ರಾಜಮಹಾರಾಜರ ನೆಚ್ಚಿನ ತಾಣವೂ ಆಗಿದ್ದು ಈ ಪ್ರದೇಶದಲ್ಲಿ ಹಲವಾರು ಬಾರಿ ಘನಘೋರ ಕಾಳಗಗಳು ನಡೆದಿರಬಹುದು ಎಂಬುದಕ್ಕೆ ಸಾಕ್ಷಭೂತನಾಗಿ ಇಲ್ಲಿರುವ ವೀರಗಲ್ಲುಗಳು ಮಾಸ್ತಿಕಲ್ಲುಗಳು ಮತ್ತು ಆತ್ಮಾಬಲಿ ಕಲ್ಲುಗಳು ಸುಮಾರು 25ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿವೆ.

ಅಧ್ಯಾಯ-4

ಬನ್ನೇರುಘಟ್ಟ ಶಾಸನಗಳ ಅಧ್ಯಯನ

ಬನ್ನೇರುಘಟ್ಟದ ವಹ್ನಿಗಿರಿಬೆಟ್ಟದ ತಪ್ಪಲಿನಲ್ಲಿ ನೆಲೆಸಿರುವ ಶ್ರೀ ಚಂಪಕಧಾಮಸ್ವಾಮಿ ದೇವಾಲಯದಲ್ಲಿರುವ ಶಾಸನಗಳು ದೇವಸ್ಥಾನದ ಹೊರಭಿತ್ತಿ, ಅಧಿಷ್ಠಾನ, ಮಹಾದ್ವಾರದ ಕಂಬ, ಭಿತ್ತಿಗಳ ಮೇಲೆ ಲಿಖಿತಗೊಂಡಿದೆ.

81[14]

ಚಂಪಕಧಾಮಸ್ವಾಮಿ ದೇವಾಲಯದ ಮಹಾದ್ವಾರದ ಉತ್ತರಗೋಡೆಯ ಮೇಲಿನ ಶಾಸನ ಈ ರೀತಿ ಇದೆ.

1 ಸ್ವಸ್ತಿಶ್ರೀಶಕ .... ಸಂದಕ್ರೋಧಿಸಂವತ್ಸರದ ಆಷಾಢಬ
2 ೧೩ ಆಶ್ರೀಮನುಮಹಾಮಂಡಲೇಶ್ವರರಿರಾಯವಿಭಾಡಬಾಸೆಗೆತಪ್ಪು
3 ವರಾಯರಗಂಡರಾಜಾದಿರಾಜಪರಮೇಶ್ವರಚತುಸ್ಸಮು
4 ದ್ರಾದಿಪತಿಶ್ರೀವೀರಹರಿಹರರಾಯಕುಮಾರಶ್ರೀವೀರಬುಕಂಣ
5 ವೊಡೆಯರುಸ್ವಸ್ತಿಶ್ರೀಮನಬನ್ನೂರುಗಟ್ಟದಾಮೋದರದೇವರಿಗೆ
6 ಉಪಾರನಂದಾದೀವಿಗೆಮನಮಾಲೆ .... ಕಾಮನಊರವಿಳಿ
7 ತದರಾಮರಹಳಿಯಸ್ಥಳದಖಿನಮಂಗಲವನೂಆಚಂ
8 ದ್ರಾರ್ಕಸ್ಥಾಯಿಯಾಗಿದಾರಾಪೂರ್ವಕವಾಗಿ ಕೊಟ್ವೆಉಯಿೀಧರ್ಮಕ್ಕೆ ಆ
9 ರುತಪ್ಪಿದವರುಗಂಗೆಯತಡಿಯಕಪಿಲೆಯಕೊಂದಪಾಪದಲ್ಲಿಹೊ
10 ಹರು॥ ಮಂಗಳಮಹಾ ಶ್ರೀ ಶ್ರೀ ಶ್ರೀ ರಾಮನಾಥ

ದೇವಾಲಯಗಳನ್ನು ಕಟ್ಟಿಸಿದ ನಂತರ ಕಟ್ಟಿಸಿದ ವ್ಯಕ್ತಿಯೇ ಆ ದೇವಾಲಯಕ್ಕೆ ಸಂಮೃದ್ಧವಾಗಿ ದಾನ-ದತ್ತಿಗಳನ್ನು ಬಿಡುತ್ತಿದ್ದರು. ಒಬ್ಬವ್ಯಕ್ತಿಯಿಂದ ದೇವಾಲಯವು ನಿರ್ಮಾಣವಾಯಿತೆಂದರೆ ಭಕ್ತ ಜನರು ದೇವರ ಮೇಲಿನ ಭಕ್ತಿಯಿಂದ ಕೈಲಾದಷ್ಟು ದತ್ತಿಗಳನ್ನು ಕೊಡುತ್ತಿದ್ದರು. ಇಂತಹ ದೇವಸ್ಥಾನದ ಆಸ್ತಿಯನ್ನು 'ದೇವಭೋಗ' ಎಂದು ಕರೆಯುತ್ತಿದ್ದರು ಶಾಸನಗಳು ರಾಜರು ಮತ್ತು ಅವರ ಅಧೀನ ಅಧಿಕಾರಿಗಳ ದೇವಸ್ಥಾನಗಳಿಗೆ ಗ್ರಾಮ ಮತ್ತು ಭೂಮಿಯನ್ನು ದತ್ತಿ ನೀಡಿರುವುದನ್ನು ವಿವರಿಸುತ್ತದೆ.

ಈ ಶಾಸನದ ಅರ್ಥ : ಕ್ರಿ.ಶ 1364ರಲ್ಲಿ ವಿಜಯನಗರದ ಅರಸರಾದ ವೀರಬುಕ್ಕಣ್ಣರಾಯರು ಬನ್ನೇರುಘಟ್ಟದ ದಾಮೋದರ ದೇವರಿಗೆ ಉಪಾರ ನಂದಾದೀವಿಗೆಗಳಿಗಾಗಿ 'ಖಿನಮಂಗಲ' ಗ್ರಾಮವನ್ನು ದಾನನೀಡಿದ ವಿವರಣೆಯಿದೆ, ಇದನ್ನು ಯಾರುತಪ್ಪವರೋ ಅವರಿಗೆ ಗಂಗಾನದಿಯ ದಡದಲ್ಲಿ ಹಸುವನ್ನು ಕೊಂದ ಪಾಪವನ್ನು ಹೊಂದುತ್ತಾರೆ ಎಂದು ಚಿತ್ರಿಸಲಾಗಿದೆ.

---

[14] EC IX An 81, 1364 AD, Bhannerughatta, Page No. 254

82

ಅದೇ ಸ್ಥಳದಲ್ಲಿ 2ನೇದು

[1]ಸ್ವಸ್ತಿಶ್ರೀಕಕವರುಷ ೧೨೮೫ ನೇಯಕುಭಕೃತುಸಂವತ್ಸರದಅಶ್ವೀಜಬ ೧೨ವ
[2]ಶ್ರೀಮನುಮಹಾಮಂಡಳಿಕಶ್ರೀವೀರಬುಕ್ಕಂಣವೊಡೆಯರವರಕುಮಾರಮಲ್ಲಪವೊಡೆಯ
[3]ರುಪ್ರಿಥ್ವೀರಾಜ್ಯಂಗೆವುತಿರಲುಶ್ರೀಮನುಮಹಾಸಾಮಂತಾಧಿಪತಿಘಂವುಡ್ಡಗಂಡಬಾಚಣಳ್ಳಿನಿಖರಾಯರಕುಮಾರತೊರಾ
[4]ಹತ್ತಿವಿರಗಂಡೆವೀರಭದ್ರದ್ರೇಶ್ರಕಾಂತಿಮಾಡುವರಾಹುತರಗಂಡವೆಂಣಿಕಲಮಾಯಿನಾಯ್ಕನಕುಮಾರಮಲ್ಲಪ್ಪನ
[5]ವರುಸ್ವಸ್ತಿಶ್ರೀಬನ್ನೂರಘಟ್ಟದಶ್ರೀಧಾಮೋದರದೇವರಿಗೆವೊಪ್ಪಾರನಂದಾದೀವಿಗೆವನಮಾಲಿಗೆಹೊಮಳಿಗೆ
[6]ನಾಡಸುಂನಬರೆಯಸಳಗೆಲೆ ..... ಕಾರುಪ .. ರಾಗಿಕೊಟ್ಟೆವು

ಅರ್ಥ: ವೀರ ಬುಕ್ಕಣ್ಣರಾಯರ ನಂತರ ಮಲ್ಲಪ್ಪ ಒಡೆಯನ ಆಳ್ವಿಕೆ ಈ ಪ್ರದೇಶದಲ್ಲಿ ಮುಂದುವರೆಯಿತು. ಕ್ರಿ.ಶ 1362[15]ರಲ್ಲಿ ಮಲ್ಲಪ್ಪ ಒಡೆಯನು ದಾಮೋದರ ದೇವರಿಸಗೆ ತೂಗುವ ನಂದಾದೀಪ ಮತ್ತು ಹೂಮಾಲೆಯನ್ನು ದಾನವಾಗಿ ಕೊಟ್ಟಿರುವುದನ್ನು ಈ ಶಾಸನದಲ್ಲಿ ಉಲ್ಲೇಖಿಸಿದೆ.

83

ಅದೇ ಮಹಾದ್ವಾರದ ಉತ್ತರಕಡೆ ಗೋಡೆಯ ಕೆಳಭಾಗದಲ್ಲಿ. ಅರವಕ್ಷರ

ಶಾಸನದ ಸಾರಾಂಶ : ಚಿಕ್ಕವೀರಕೇತಯ ದಂಡನಾಯಕನೆಂಬ ಸೇನಾನಿ ಮುಮ್ಮಡಿ ನರಸಿಂಹನ ಆಯುಧ ಮತ್ತು ಸೈನ್ಯಗಳಿಗೆ ಸದಾ ಜಯವಾಗಲೆಂದು 1278ರಲ್ಲಿ ದಾನ ನೀಡಿದ ಶಾಸನವಿದೆ. ಅಲ್ಲದೆ ಜುಗಣಿ(ಜಿಗಣಿ) ಗ್ರಾಮದ ಆದಾಯವನ್ನು ದಾಮೋದರ ದೇವಾಲಯಕ್ಕೆ ಹೊಯ್ಸಳರ ಇಮ್ಮಡಿ ನರಸಿಂಹನು ದಾನ ನೀಡಿದ ಸಂಗತಿಯನ್ನು ಈ ಶಾಸನದಲ್ಲಿ ದಾಖಲಿಸಲಾಗಿದೆ.

84

ಅದೇ ಮಹಾದ್ವಾರದಲ್ಲಿ ಉತ್ತರಕಡೆ ಕಂಭದ ಮೇಲೆ ಅರವಕ್ಷರ

ಅರ್ಥ : ದೇವಾಲಯಗಳಿಗೆ ವಿವಿಧ ಮೂಲಗಳಿಂದ ಆದಾಯವು ಹರಿದುಬರುತ್ತಿತ್ತು. ದೇವಾಲಯದ ಆಸ್ತಿಗಳಿಗೆ ತೆರಿಗೆಯಿಂದ ವಿನಾಯಿತಿ ಮತ್ತು ದೇವಾಲಯಗಳ ನಿರ್ವಹಣೆಗೆ ಅವುಗಳ ಸರಹದ್ದಿನ ಗ್ರಾಮಗಳ ಸುಂಕಗಳನ್ನು ಬಿಟ್ಟುಕೊಡುತ್ತಿದ್ದನ್ನು ಕಾಣಬಹುದು.

ಕ್ರಿ.ಶ. 1297[16]ರಲ್ಲಿ ಸಿಂಗಣ್ಣ ದಣ್ಣಾಯಕರು ಬನ್ನೇರುಘಟ್ಟದ ದಾಮೋದ ಪೆರುಮಾಳ್ ದೇವರಿಗೆ ಸಂಬಂಧಿಸಿದ ಆಸ್ತಿಗಳಿಗೆ ತೆರಿಗೆಗಳಿಂದ ವಿನಾಯಿತಿ ನೀಡಿದರು ಇದು ದೇವಾಲಯಗಳ ನಿರ್ವಹಣೆಗೆ ಅನುಕೂಲವಾಗುತ್ತಿತ್ತು.

---

[15] SP IX, An 82, 1362AD, Bhannerughatta Page : 254
[16] EC IX, An 84, 1297 AD, Bhannerughatta Page 254

85

ಅದೇ ಮಹಾದ್ವಾರದ ದಕ್ಷಿಣಕಡೆ ಪೂರ್ವಭಾಗದ ಕಡೆಯಲ್ಲಿ

[1]ಸ್ವಸ್ತಿಶ್ರೀಶಕ
[2]ರಷ1363ನೆಯ ಮಂ
[3]ಮಥಸಂವತ್ಸರದಪು
[4]ಷ್ಯಶು12ಸೋಲು ಶ್ರೀಮನುಮ
[5]ಹಾರಾಜಾದಿರಾಜರಾಜ
[6]ಪರಮೇಶ್ವರಶ್ರೀವೀರಪ್ರತಾಪ
[7]ದೇವರಾಯಮಹರಾಯರು
[8]ಪೃಥಿವೀರಾಜ್ಯಂಗೆಯು
[9]ತ್ತಿರಲುಶ್ರೀಮನುಮಹಾಪ್ರದಾನಂದ
[10]ಕ್ಷಿಣಸಮುದ್ರಾಧಿಪತಿಯಿರಂಣದಂನಾ
[11]ಯಕರುಬಂನೂರಗಟ್ಟದಶ್ರೀದಾಮೋದರ
[12]ದೇವರಿಂಗೆಎರಡುನಂದಾ
[13]ವನಮಾಲಿಗೆ
(ಮುಂದೆ ಪಂಕ್ತಿಗಳು ಕಾಣುವುದಿಲ್ಲ)

<u>ಈ ಶಾಸನದ ಅರ್ಥ</u> : ಸ್ವಸ್ತಿಶ್ರೀ 1363ರಲ್ಲಿ ವೀರ ಪ್ರತಾಪ ದೇವರಾಯನು ಈ ರಾಜ್ಯವನ್ನು ಆಳುತ್ತಿರಲು ಈ 'ಬಂನೂರಗಟ್ಟ'ದ ಶ್ರೀ ದಾಮೋದರ ದೇವರಿಗೆ ಎರಡು ನಂದಾದೀಪ ಹಾಗೂ ಸಂಪಿಗೆ ಮಾಲೆಯನ್ನು ನೀಡಿರುವುದನ್ನು ಈ ಶಾಸನದಲ್ಲಿ ದಾಖಲಿಸಲಾಗಿದೆ.

86

ಅದೇ ಮಹಾದ್ವಾರದಲ್ಲಿ ದಕ್ಷಿಣ ಕಡೆ ಗೋಡೆ ಮೇಲೆ 1ನೇದು

[1]ಸ್ವಸ್ತಿಶ್ರೀಶಕವರುಷ ೧೩೪೩ ಸಂದಪ್ಲವಸಂವತ್ಸರ ಆಷಾಡಶುಧ ೨ವಾಶ್ರೀಮ
[2]ನ್ಮಹಾಮಂಡಲೇಶ್ವರರಿರಾಯವಿಭಾಡಬಾಸೆಗೆತಪ್ಪುವರಾಯರಗಂಡಚ
[3]ತುಸಮುದ್ರಾಧಿಪತಿಶ್ರೀವೀರಬುಕ್ಕಂಣವೊಡೆಯರಕುಮಾರಶ್ರೀವೀರಮಲ್ಲಪ್ಪ
[4]ವೊಡೆಯರುಪೃಥಿವೀರಾಜ್ಯಂಗೆವುತ್ತಿರಲುಶ್ರೀಮನ್ಮಹಾಪ್ರದಾನಂಕಾಶ್ಯಪಗೋತ್ರದ
[5]ವೀರ ....ಂತಮಲ್ಲಪ್ಪವೊಡೆಯರಿಗೆಸಕಳಸಉಕ್ಯವಾಗಬೇಕೆಂದು
[6]ಸ್ವಸ್ತಿಶ್ರೀಬನ್ನೂರಗಟ್ಟದದಾಮೋದರದೇವರಿಗೆ ....ಂದವೊಪಾರಗೆ
[7].......ವೊಪಾರನಂದಾದೀವಿಗೆಮನಮಾಲೆನಡವ ......ಪೆಮ್ಮಳಿಗದಾರಾದೊ ....
[8]ಯಿಂಡಲವಾಡಿಯನ್ನು ......ಯನೂನಾಡೊ ...... ಮಾಡಿದಆಚಂ
[9]ದ್ರಾರ್ಕಸ್ಥಾಯಿಯಾಗಿದಾರಾಪೂರ್ವಕವಾಗಿಕೊಟೆಉಯಿದರ್ಮಕ್ಕೆ ಆರು
[10]ತಪ್ಪಿದವರುಗಂಗೆಯತಡಿಯಲ್ಲಿಕವಿಲೆಯನ್ನು ಕೊಂಡಪಾಪದಲ್ಲಿಹೋಹರು.

<u>ಅರ್ಥ</u> : ಕ್ರಿ.ಶ.1421[17]ರಲ್ಲಿ ಶ್ರೀವೀರಬುಕ್ಕಣ್ಣ ಒಡೆಯರ ಕುಮಾರ ಶ್ರೀ ಮಲ್ಲಪ್ಪ ಒಡೆಯರಿಗೆ ಸಕಲ ಸೌಖ್ಯ ಉಂಟಾಗಲೆಂದು ಶ್ರೀ 'ಬನ್ನೂರಗಟ್ಟ'ದ ದಾಮೋದರ ದೇವರಿಗೆ ಉಪಾರ ನಂದಾದೀವಿಗೆ ವನಮಾಲೆಯ ಜೊತೆಗೆ 'ಯಿಂಡಲವಾಡಿ' ಎಂಬ ಗ್ರಾಮವನ್ನು ದತ್ತಿ ನೀಡಲಾಯಿತು.

[17] EC IX An 86, 1421 AD, Bhannerughatta Page 225

87

<u>ಅದೇ ಗೋಡೇಮೇಲೆ 2ನೇದು</u>

[1]ಸ್ವಸ್ತಿಶ್ರೀಶಕವರುಷ೧೨೩೪ನೆಯ ಮನ್ಮಥಸಂ
[2]ವತ್ಸರದಭಾದ್ರಪದಶುಧ 11ಬುಧವಾರದಲುಸ್ವಸ್ತಿಶ್ರೀಮ
[3]ನುಮಹಾಮಂಡಲೇಶ್ವರಂಶ್ರೀವೀರಮಲ್ಲಪ್ಪವೊಡೆಯರಕು
[4]ಮಾರಬುಕ್ಕಂಣನುಮಲ್ಲಪ್ಪವೊಡೆಯರಿಗೆದಂಮ್ಮವಾಗಿಬಂ
[5]ನೂರುಗಟ್ಟದಶ್ರೀದಾಮೋದರದೇವರಿಗೆಬಿಟ್ಟಪಾತ್ರಪವಿತ್ರ .....
[6]ಮಾಡಿದೆಉಯಿೀದಂಮ್ಮಕ್ಕೆ
(ಮುಂದೆ ಕಾಣುವದಿಲ್ಲ)

<u>ಅರ್ಥ</u> : ಕ್ರಿ.ಶ. 1234ನೇ ಸಂವತ್ಸರದಲ್ಲಿ ಶ್ರೀ ವೀರಮಲ್ಲಪ್ಪ ಒಡೆಯರ ಮಗ ಬುಕ್ಕಣ್ಣನು ಮಲ್ಲಪ್ಪ ಒಡೆಯರಿಗೆ ಶ್ರೀ 'ಬಂನೂರಗಟ್ಟ'ದ ಶ್ರೀದಾಮೋದರ ದೇವರಿಗೆ ಬಿಟ್ಟಿಪಾತ್ರೆಯನ್ನು ಕೊಟ್ಟಿರುವುದನ್ನು ಈ ಶಾಸನದಲ್ಲಿ ಉಲ್ಲೇಖಿಸಿದೆ.

88

<u>ಅದೇ ಮಹಾದ್ವಾರದ ದಕ್ಷಿಣಕಡೆ ಕಂಭದಲ್ಲಿ</u>

[1]ಶುಭಮಸ್ತುಸ್ವಸ್ತಿಶ್ರೀ
[2]...................ದಾತು
[3]ಸಂವತ್ಸರದಆಶ್ವೀಜಬ
[4]12ಲುಶ್ರೀಮನುಮಹಾ
[5]ಮಂಡಲೇಶ್ವರಂಅರಿರಾಯವಿಬಾಡ
[6]ಬಾಸೆಗೆತಪ್ಪುವರಾಯರಗಂಡ
[7]ಶ್ರೀತಿರಮಣರಾಯನಕು
[8]ಮಾರನಾರಸಿಂಹವೊಡೆಯ
[9]ರುಪೃಥಿವೀಸಾಂಬ್ರಾಜ್ಯಂಗೆಯು
(ಮುಂದಕ್ಕೆ ಸುತರಾಂ ಕಾಣುವದಿಲ್ಲ)

89

ಅದೇ ಗ್ರಾಮದಲ್ಲಿ ಸುವರ್ಣಮುಖಿ ತೀರ್ಥದ ಬಳಿ ಮಂಟಪದಲ್ಲಿ 2ನೇ ಅಂಕಣದ ಪಶ್ಚಿಮ ಕಡೆ ತೋಲೆಮೇಲೆ.

[1]ಶುಭಮಸ್ತು ಶಕ 1841ನೆ ಬಹುಧಾನ್ಯ ಸಂವತ್ಸರದವೈಶಾಖಶುದ್ಧಅಕ್ಷತಿಥಿಯಸುಮುಹೂರ್ತದಲುಬೇವೂರುಸ್ಥಳದಬೆಂಗಳೂರು
[2]ಫವುಜದಾರುಲಿಂಗರಾಜೈಯ್ಯಆರಸಿನವರುಚಂಪಕಧಾಮಸ್ಥರಾಮದೇವರಪ್ರತ್ಯರ್ಥವಾಗಿವಂಹ್ನಿಗಿರಿಸ್ಥಸುವರ್ನಮುಖಿಸರೋವರಸೋ
[3]ಪಾನರಮ್ಯವಾಗಿಕಟ್ಟಿಶಿದುಸುತೀರ್ಥಾಭಿವೃದ್ಧಿ॥

<u>ಶಾಸನದ ಅರ್ಥ</u> : ಕ್ರಿಶ 1818[18]ಕ್ಕೆ ಸೇರಿದ ಮೈಸೂರು ಅರಸರ ಕಾಲದ ಶಾಸನವೊಂದು ಸುವರ್ಣಮುಖಿ ತೀರ್ಥದ ಬಿಳಿಯ ಮಂಟಪದ ತೊಲೆಯಲ್ಲಿದ್ದು, ಬೆಂಗಳೂರಿನ ಫೌಜೇದಾರನಾಗಿದ್ದ ಲಿಂಗರಾಜೇ ಅರಸ್ ಅವರು ಈ ಸುವರ್ಣಮುಖೀ ತೀರ್ಥಕ್ಕೆ 19 ಮೆಟ್ಟಿಲುಗಳುಳ್ಳ ಸುಂದರ ಸೋಪಾನಗಳನ್ನು ಮತ್ತು ಯಾತ್ರಿಕರು ತಂಗಲು ಕೆಲವು ಮಂಟಪಗಳನ್ನು ನಿರ್ಮಿಸಿದನೆಂದು ತಿಳಿದುಬರುತ್ತದೆ.

---

[18] EC IX An 19, 1819 AD Bhannerughatta Page : 256

" .... [19]ಸುರಪಗಳ ಮಗ ತಿಂಮರಸನು ದಾಮೋದರ ದೇವರ ಶ್ರೀಪಾದವ ಕಂಡು ಧನ್ಯನಾದನು" ಎಂಬ ಭಕ್ತನೋರ್ವನ ಬರಹ ಮಹಾದ್ವಾರದ ದಕ್ಷಿಣ ಕಡೆ ಪಶ್ಚಿಮಕ್ಕೆ ಇದ್ದರೆ. "ಶ್ರೀ ವೆಂಕಟೇಗೌಡನ ಭಕ್ತಿ" ಎಂಬ ಭಕ್ತನ ಇನ್ನೊಂದು ಶಾಸನ ಮಹಾದ್ವಾರಕ್ಕೆ ಹೋಗುವ ಮೆಟ್ಟಲೊಂದರ ಮೇಲೆ ಕಂಡಬರುತ್ತದೆ.

[20]ಬ್ರಾಹ್ಮಣಹತ್ಯೆ, ಗೋವಧೆ, ಸ್ತ್ರೀವಧೆ, ಶಿಶುಹತ್ಯೆ, ಬ್ರೂಣಹತ್ಯೆ ಈ ಪಂಚ ಮಹಾಪಾಪಗಳಲ್ಲಿ ಸ್ತ್ರೀಹತ್ಯೆಯು ಪ್ರಮುಖವಾದುದು. ಈ ಪಂಚಮಹಾಪಾಪಗಳಲ್ಲದೆ ಮೃಗವಧೆ, ದೇವಬ್ರಾಹ್ಮಣ ಗುರುಹಿರಿಯ ಶಂಪವಿದ್ದರೆ ಈ ಪಾಪ ನಿವಾರಣೆಯಾಗಬೇಕೆಂದು 'ಪಾಪವಿಮೋಚನಾಕಲ್ಲು'ಗಳನ್ನು ಹಾಕಿಸುತ್ತಿದ್ದರು. ಬನ್ನೇರುಘಟ್ಟ ಚಂಪಕಧಾಮ ದೇವಾಲಯದಲ್ಲಿ ಜೇಷ್ಠ ಬಾರ್ಯಸುಕು ಬಾಯಿಯವರು ಇಂತಹ ಕಲ್ಲನ್ನು ಹಾಕಿಸಿರುವುದು ಕಂಡುಬರುತ್ತದೆ[178].

ಈ ಮೊದಲೇ ಉಲ್ಲೇಖಿಸಿರುವಂತೆ ಬನ್ನೇರುಘಟ್ಟದ ಶಾಸನಗಳು ಅಲ್ಲಿನ ಆದಿದೈವವಾದ ದಾಮೋದರ ದೇವರಿಗೆ ಪಾತ್ರ ಪವಿತ್ರ, ಉಪ್ಪಾರ (ಉಪಹಾರ–ನೈವೇದ್ಯ) ನಂದಾದೀವಿಗೆ, ವನಮಾಲೆ ಮುಂತಾದ ಪೂಜಾ ಕೈಂಕರ್ಯಗಳಿಗೆ ನೀಡಿರುವ ದಾನದತ್ತಿಗಳ ದಾಖಲೆಗಳಾಗಿವೆ, ಅಲ್ಲದೆ ಈ ದೇವಾಲಯದ ಪೂಜಾಕೈಂಕರ್ಯಗಳಿಗಾಗಿ ಹೊಯ್ಸಳರು ವಿಜಯನಗರ ಕಾಲದ ಅರಸರು ಮಹಾಪ್ರಧಾನರು ಮುಂತಾದವರು ಗ್ರಾಮದಾನ–ಭೂದಾನಗಳನ್ನಲ್ಲದೆ ತೆರಿಗೆಗಳಿಂದ ಬರುವ ಆದಾಯಗಳನ್ನು ದತ್ತಿಯಾಗಿ ಈ ದೇವಾಲಯಕ್ಕೆ ನೀಡಿರುವುದನ್ನು ಈ ಶಾಸನಗಳಲ್ಲಿ ದಾಖಲಿಸಿದೆ.

---

[19] ಶಾಸನ ಮಂಥನ ಡಾ. ಪಿ.ವಿ.ಕೃಷ್ಣಮೂರ್ತಿ, ಪು – 191

[20] SP IX, An 111, Bhannerughatta Page - 10

ಅಧ್ಯಾಯ-5

ಧಾರ್ಮಿಕ ಕ್ಷೇತ್ರವಾಗಿ ಬನ್ನೇರುಘಟ್ಟ

ಕರ್ನಾಟಕ ಶಿಲ್ಪಕಲೆಗಳ ತವರೂರು ತನ್ನ ಕಲಾಸೌಂದರ್ಯದಿಂದಲೇ ಈ ರಾಜ್ಯ ಇಂದು ಇಡೀ ವಿಶ್ವದಲ್ಲೇ ಹೆಸರಾಗಿದೆ. ಪ್ರಾಚೀನ ಕಾಲದಿಂದಲೂ ಶಿಲ್ಪಕಲೆ ಮತ್ತು ವಾಸ್ತುಶೈಲಿಗೆ ಹೆಸರಾದ ಈ ನಾಡನ್ನು ಹಿಂದಿನಿಂದಲೂ ಹಲವಾರು ರಾಜಮನೆತನಗಳ ಆಳ್ವಿಕೆ ನಡೆಸಿವೆ. ಗಂಗರು, ಕದಂಬರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು ಇನ್ನೂ ಮುಂತಾದವರು ಈ ನಾಡನ್ನು ಆಳಿ ಎಲ್ಲೆಡೆ ತಮ್ಮ ವಾಸ್ತು ರಚನೆಯನ್ನು ನಿರ್ಮಿಸಿ ಈ ನಾಡನ್ನು ಶ್ರೀಮಂತಗೊಳಿಸಿದ್ದಾರೆ. ಇಂಥ ಕಲಾ ಶ್ರೀಮಂತಿಕೆಯನ್ನು ಹೊಂದಿರುವ ಈ ನಾಡಿನಲ್ಲಿ ಹಲವಾರು ದೇವಾಲಯಗಳನ್ನು ಕಾಣಬಹುದು. ಇಂಥ ದೇವಾಲಯಗಳ ಸಾಲಿನಲ್ಲಿ ಮನೋಹರವಾದ ಶಿಲ್ಪವೈವಿಧ್ಯತೆಯಿಂದ ಕಂಗೊಳಿಸುತ್ತಿರುವ ಪುರಾತನ ದೇವಾಲಯವೇ 'ಬನ್ನೇರುಘಟ್ಟದ ಶ್ರೀ ಚಂಪಕಧಾಮಸ್ವಾಮಿ' ದೇವಾಲಯ, ರಾಜಧಾನಿ ಬೆಂಗಳೂರಿನಿಂದ ಸುಮಾರು 20ಕಿ.ಮೀ ದೂರದಲ್ಲಿರುವ ಈ ಕ್ಷೇತ್ರವು ಆನೇಕಲ್ ತಾಲ್ಲೂಕಿಗೆ ಸೇರಿದ ಒಂದು ಪ್ರಸಿದ್ಧ ಐತಿಹಾಸಿಕ ಕ್ಷೇತ್ರ, ವಹ್ನಿಗಿರಿ ಬೆಟ್ಟದ ತಪ್ಪಲಿನಲ್ಲಿ ಎತ್ತರವಾದ ಸ್ಥಳದಲ್ಲಿ ಪ್ರಕೃತಿಯ ಸೊಬಗಿನ ಮಡಿಲಲ್ಲಿ ಎದ್ದು ನಿಂತಿರುವ ಈ ಬೃಹತ್ ದೇವಾಲಯವು ನೋಡಲು ಭವ್ಯವಾಗಿರುವ ಆಕರ್ಷಕವಾಗಿಯೂ ಕಂಗೊಳಿಸುತ್ತಿದೆ.

ಇತಿಹಾಸದ ಕಾಲವನೊಮ್ಮೆ ಕೆದಕಿದಾಗ ಶ್ರೀ ಚಂಪಕಧಾಮದೇವಾಲಯ ಸುಮಾರು ಸಾವಿರಾರು ವರ್ಷಗಳಿಗೂ ಹಳೆಯದು. ಹಲವು ಮನೆತನಗಳ ಆಳ್ವಿಕೆಗೆ ಒಳಪಟ್ಟ ಈ ದೇವಾಲಯ ಬದಲಾದ ಕಾಲಘಟ್ಟದಲ್ಲಿ ಅಭಿವೃದ್ಧಿಯ ಪಥದತ್ತ ಸಾಗುತ್ತಿದೆ. ಕ್ರಿ.ಶ 1250ರ ಸುಮಾರಿಗೆ ಬನ್ನೇರುಘಟ್ಟ ಪ್ರದೇಶವು ಹೊಯ್ಸಳರ ಮಹಾಮಂಡಲೇಶ್ವರರಾದ ಪೂರ್ವಾಧಿರಾಯರು ಆಳ್ವಿಕೆಗೆ ಒಳಪಟ್ಟಿದಿತ್ತು. ಚೋಳರ ಆಳ್ವಿಕೆಯ ಕಾಲದಲ್ಲಿ ಕಂದಾಯ ಅಧಿಕಾರಿಗಳಾಗಿ ಅಂದರೆ 'ಪುರುವವರಿ ರಾಯ'ರೆಂದು ನೇಮಕಗೊಂಡವರು ಮುಂದೆ ಹೊಯ್ಸಳರ ಕಾಲದಲ್ಲಿ 'ಪೂರ್ವಾಧಿರಾಯರು' ಎಂಬ ಹೆಸರಿನ ಮಹಾಮಂಡಲೇಶ್ವರರಾಗಿ' ಬದಲಾಗಿದ್ದರು.

ಹೀಗೆ ಬದಲಾದ ಕಾಲಘಟ್ಟದಲ್ಲಿ ಕ್ರಿ.ಶ.ಸುಮಾರು 1257 ರಲ್ಲಿ ಹೊಯ್ಸಳರ ಸಾಮಂತನಾಗಿದ್ದ ಚೋಳರಾಜ 'ಧರ್ಮತ್ರಾಳ್ವರ' ಎಂಬ ಪೂರ್ವಾಧಿರಾಯನು ಈಗಿನ ತಮಿಳುನಾಡಿನ ಹೊಸೂರುಪ್ರಾಂತ್ಯವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದಾಗ ಬನ್ನೇರುಘಟ್ಟದಲ್ಲಿ 'ದಾಮೋದರ' ಎಂಬ ಹೆಸರಿನ ದೇವಾಲಯವನ್ನು ಕಟ್ಟಿಸಿದನೆಂದು ತಿಳಿದುಬರುತ್ತದೆ. ಇತನು ತಮಿಳು ಅರಸನಾಗಿದ್ದು ಈ ದೇವಾಲಯಕ್ಕೆ 'ದಾಮೋದರ ಪೆರುಮಾಳ್' ಎಂದು ಕರೆಯುತ್ತಾರೆ. ಹಾಗಾಗಿ ಈ ದೇವಾಲಯಕ್ಕೆ ತಮಿಳುನಾಡು ಮೂಲದ ಭಕ್ತಾದಿಗಳು ಸಹ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಾರೆ.

ವಹ್ನಿಗಿರಿ ಬೆಟ್ಟದ ತಪ್ಪಲಿನಲ್ಲಿರುವ ಈ ಗ್ರಾಮವನ್ನು 1275ರ ಶಾಸನದ ಪ್ರಕಾರ ಬನ್ನೇರುಘಟ್ಟ ಎಂತಲು 1363ರ ಶಾಸನದಲ್ಲಿ 'ಬಂನೂರುಘಟ್ಟ' ವೆಂದು ಮತ್ತೆ 1741ರ ಶಾಸನದ ಪ್ರಕಾರ 'ಬನ್ನೇರುಘಟ್ಟ'ವೆಂದು ಉಲ್ಲೇಖಿಸಲಾಗಿದೆ. 1741ರ ಶಾಸನದಲ್ಲಿ ಇಲ್ಲಿನ ಅಧಿದೈವವಾದ 'ಶ್ರೀ ಚಂಪಕಧಾಮ ಸ್ವಾಮಿಯನ್ನು 'ಶ್ರೀ ಚಂಪಕಧಾಮಸ್ಥರಾಯದೇವ' ಎಂದು ಕರೆದಿದ್ದಾರೆ.

ಪೌರಾಣಿಕ ಹಿನ್ನೆಲೆಯಲ್ಲಿ ಗಮನಿಸುವುದಾದರೆ. ದ್ವಾಪರಯುಗದಲ್ಲಿ ಈ ಕ್ಷೇತ್ರದಲ್ಲಿದ್ದ 'ನಾರಾಯಣ' ಎಂಬ ಮಹಾ ಋಷಿಯು ಈ ಚಂಪಕಾರಣ್ಯದಲ್ಲಿ ತಪ್ಪಸನ್ನು ಆಚರಿಸುತ್ತಿದ್ದನು, ಆಗ ಈ ಋಷಿಯ ತಪಸ್ಸಿಗೆ ಭಂಗ ತಂದ ಚಂಪಕಳೆಂಬ ರಾಕ್ಷಸಿಯ ಸಂಹಾರಕ್ಕೆ ಮುನಿಶ್ರೇಷ್ಠರ ಯಾವ ಮಹಾಮಂತ್ರವೂ ಉಪಯೋಗಕ್ಕೆ ಬಾರದಿದ್ದಾಗ ಶ್ರೀರಾಮ ಮಹಾಮಂತ್ರವನ್ನು ಪ್ರಯೋಗಿಸಲಾಯಿತು. ಆಗ ರಾಕ್ಷಸಿ ಚಂಪಕಾಳು ಮೃತಪಟ್ಟಳೆಂದು ಅಂದಿನಿಂದ ಸ್ವಾಮಿಗೆ 'ಚಂಪಕಧಾಮಸ್ವಾಮಿ' ಎಂಬ ಹೆಸರು ಬಂತೆಂಬ ಕಥೆಯನ್ನು ಸ್ಥಳಿಯರು ಹೇಳುತ್ತಾರೆ.

ಪುರಾತನಕಾಲದಲ್ಲಿ ಚಂಪಕಪುಷ್ಪ ಅಥವಾ ಸಂಪಿಗೆ ಹೂ ದಿನಕ್ಕೆ ಒಂದೇ ಹೂ ಬಿಡುತ್ತಿತಂತೆ, ಆ ಹೂವಿನಿಂದ ಈ ದಾಮೋದರ ದೇವರನ್ನು ಅರ್ಚಿಸುತ್ತಿದ್ದರಿಂದ ಈ ದೇವರಿಗೆ 'ಚಂಪಕಧಾಮ' ಎಂದು ಹೆಸರು ಬಂದಿತೆಂದು ಪ್ರತೀತಿ. ಈ ದೇವಾಲಯದ ಸುತ್ತಮುತ್ತಲು ಚಂಪಕ ಮರಗಳು ಇದ್ದುದ್ದರಿಂದ ಚಂಪಕಧಾಮಸ್ವಾಮಿ ದೇವಾಲಯ ಎಂದು ಕರೆಯುವುದುಂಟು.

'ವನಮಾಲೆ' ಎಂದರೆ 'ಕಾಡಿನ ಹೂಗಳಿಂದ ರಚಿಸಿದ ವಿಶೇಷವಾದ ಹಾರ'. ಶ್ರೀಕೃಷ್ಣನು ಈ ಮಾಲೆಯನ್ನು ಧರಿಸುತ್ತಿದ್ದನೆಂಬ ಪ್ರತೀತಿಯಿದ್ದರೆ, ಚಂಪಕ ಪುಷ್ಪಗಳಿಂದ 'ಚಂಪಕಮಾಲೆಯನ್ನು ದಾಮೋದರ"ನು ಧರಿಸುತ್ತಿದ್ದನೆಂಬ ಪ್ರತೀತಿಯಿದೆ. ಪದನಿಷ್ಪತ್ತಿಯಿಂದ ಗಮನಿಸುವುದಾದರೆ ದಾಮೋದರ–ಶ್ರೀಕೃಷ್ಣ, ಚಂಪಕ – ಹೂವು, ಧಾಮ – ಹಾರ : ಇಲ್ಲಿ ದಾಮೋದರ (ಶ್ರೀಕೃಷ್ಣ)ನು ಚಂಪಕ (ಸಂಪಿಗೆ) ಹೂವಿನಿಂದ ಪೋಣಿಸಿದ ಧಾಮ (ಹಾರ/ಮಾಲೆ)ವನ್ನು ಧರಿಸಿ "ಚಂಪಕಧಾಮ" ಎಂಬ ಹೆಸರಿನಿಂದ ಈ ಕ್ಷೇತ್ರದಲ್ಲಿ ನೆಲೆನಿಂತಿರಬಹುದೆಂಬ ಅಭಿಪ್ರಾಯವನ್ನು ನಾನು ಊಹಾತ್ಮಕವಾಗಿ ವ್ಯಕ್ತಪಡಿಸಿದ್ದೇನೆ.

ವಿಷ್ಣುವಿನ ಚತುರ್ವಿಂಶತಿ ಮೂರ್ತಿಗಳಲ್ಲಿ ಹನ್ನೆರಡನೇಯದಾದ ಪ್ರಸ್ತುತ ಬನ್ನೇರುಘಟ್ಟದ "ದಾಮೋದರ" ದೇವರಿಗೆ ಪ್ರಾಯಶಃ ಸುವಾಸನಭರಿತವಾದ ಚಂಪತಪುಷ್ಪಗಳಿಂದ ಕೂಡಿದ ತುಳಸಿಯ ಮಾಲೆಯಿಂದ ವಿಶೇಷವಾಗಿ ಅಲಂಕರಿಸುತ್ತಿದ್ದರೆಂದು ತೋರುತ್ತದೆ.

ನಿಸರ್ಗಪ್ರಿಯನಾದ 'ವನಮಾಲಿ' ಎಂಬ ಹೆಸರನ್ನು ಪಡೆದ ಶ್ರೀ ಮಹಾವಿಷ್ಣುವಿನ ಪ್ರತಿರೂಪವಾದ ಬನ್ನೇರುಘಟ್ಟ ದಾಮೋದರ ಅಂದರೆ ಚಂಪಕಧಾಮಸ್ವಾಮಿಗೆ ಈ ಸಂಗತಿ ಅನ್ವರ್ಥವಾಗಿರುವುದು ಸರಿಯಷ್ಟೆ, ಅಂದರೆ ಹಿಂದೆ ಈ ದೇವಾಲಯದ ಪರಿಸರವೂ ಕ್ರಿ.ಶ. 1819ರ ಶಿಲಾಶಾಸನವೊಂದರಲ್ಲಿ 'ಚಂಪಕಧಾಮ" ಎಂಬ ಹೆಸರು ಬಹಳ ಇತ್ತಿಚಿನದೆಂದು ಹೇಳಿರುವುದು ಆಸಕ್ತಿಯನ್ನು ಕೆರಳಿಸುತ್ತದೆ.

ಸಂಪಿಗೆ ವನದಿಂದ ಕೂಡಿದ್ದಿರಬೇಕು ಹೀಗೆ ಪ್ರಾಕೃತಿಕ ನೆಲೆ-ಹಿನ್ನೆಲೆಗಳ ತಾಣವೇ ಚಂಪಕಧಾಮ ಎನಿಸಿ ಇಲ್ಲಿ ನೆಲೆಗೊಂಡ ದಾಮೋದರ ದೇವರೇ ಚಂಪಕಧಾಮಸ್ವಾಮಿ ಎನಿಸಿ ಬಹುಕಾಲದಿಂದಲೂ ಆರಾಧಿಸಲ್ಪಡುತ್ತಿದ್ದಾನೆ.

ಚಂಪಕಧಾಮಸ್ವಾಮಿ ದೇವಾಲಯದ ವಾಸ್ತುರಚನೆ

ದೇವಾಲಯಗಳು ಕರ್ನಾಟಕದ ವಾಸ್ತುಶಿಲ್ಪಗಳ ಹೆಮ್ಮೆಯ ಸಾಧನೆಗಳು, ಇಂತಹ ವಾಸ್ತುಶೈಲಿಗೆ ಹಲವಾರು ದೇವಾಲಯಗಳು ಸಾಕ್ಷಿಯಾಗಿದೆ. ಆನೇಕಲ್ ತಾಲ್ಲೂಕಿನ ಬನ್ನೇರುಘಟ್ಟದ ಪ್ರದೇಶವನ್ನು ಆಳಿದ ಪ್ರಮುಖ ರಾಜಮನೆತನಗಳಾದ ಹೊಯ್ಸಳರು, ವಿಜಯನಗರದ ಅರಸರು ಮತ್ತು ಮೈಸೂರು ಸಂಸ್ಥಾನದ ಅರಸರು ತಮ್ಮದೇ ಆದಂತಹ ಶೈಲಿಗಳಲ್ಲಿ ಶ್ರೀ ಚಂಪಕಧಾಮಸ್ವಾಮಿ ದೇವಾಲಯವನ್ನು ನಿರ್ಮಿಸಿದ್ದಾರೆ. ವಿವಿಧ ಕಾಲಘಟ್ಟಗಳಲ್ಲಿ ಹಲವು ರಾಜಮಹಾರಾಜರ ಆಳ್ವಿಕೆಯಲ್ಲಿ ನಿರ್ಮಾಣಗೊಂಡ ಈ ದೇವಾಲಯದ ವಾಸ್ತುಶೈಲಿಯನ್ನು ಗಮನಿಸಬಹುದು. ಬನ್ನೇರುಘಟ್ಟ ಪ್ರದೇಶದ ವಹ್ನಿಗಿರಿ ಬೆಟ್ಟದ ಬುಡದಲ್ಲಿ ಸುಂದರವಾದ ಪ್ರಕೃತಿ ಮಾತೆಯ ಮಡಿಲಲ್ಲಿ ಶ್ರೀಚಂಪಕಧಮಸ್ವಾಮಿ ದೇವಾಲಯವಿದೆ. ಗ್ರಾಮದ ಯಾವುದೇ ಪ್ರದೇಶಕ್ಕೆ ಹೋಲಿಸಿ ನೋಡಿದರೂ ಬಹಳ ಎತ್ತರವಾದ ಸ್ಥಳದಲ್ಲಿ ಈ ದೇವಾಲಯ ಕಂಗೊಳಿಸುತ್ತಿದೆ.

ಶ್ರೀಚಂಪಕಧಾಮಸ್ವಾಮಿ ದೇವಾಲಯವನ್ನು ಬನ್ನೇರುಘಟ್ಟದ ಪ್ರಮುಖ ಬೀದಿಯಿಂದ ವೀಕ್ಷಿಸುತ್ತಾ ನಡೆದರೆ ಬಹಳ ಎತ್ತರವಾದ ಪ್ರದೇಶದಲ್ಲಿ ನಿರ್ಮಾಣಗೊಂಡಿರುವ ದೇವಾಲಯವಾಗಿದೆ. ತಳಮಟ್ಟದಿಂದ ವೀಕ್ಷಿಸಿದರೆ ದೇವಾಲಯಕ್ಕೆ ಬಹಳ ಎತ್ತರವಾದ ವೇದಿಕೆಯನ್ನು ನಿರ್ಮಿಸಿದ್ದಾರೆ, ನೆಲಮಟ್ಟದಿಂದ ಸುಮಾರು 10-15 ಅಡಿ ಎತ್ತರದಲ್ಲಿರುವ ಈ ವೇದಿಕೆ ಚೌಕಾಕಾರವಾಗಿದೆ. ಈ ವೇದಿಕೆಗೆ ಅನೇಕ ಸೋಪಾನಗಳನ್ನು ಹತ್ತಿಕೊಂಡು ಹೋಗಬೇಕು. ಸೋಪಾನಗಳ ಅಕ್ಕಪಕ್ಕದಲ್ಲಿ ಆನೆಗಳ ಸೊಂಡಿಲಿನಾಕಾರದಂತೆ ಚಾಚಿರುವ 'ಹಸ್ತಿಹಸ್ತ'ವಿದೆ ಇಲ್ಲಿ ಸುಂದರವಾದ ಕೆತ್ತನೆಗಳನ್ನು ಚಿತ್ರಿಸಿದ್ದಾರೆ. ಪಾರ್ಶ್ವನೋಟದಲ್ಲಿ ಈ ದೇವಾಲಯವು ಉಪಪೀಠ ಅಧಿಷ್ಠಾನ ಭಿತ್ತಿ, ಕಪೋತ, ಪ್ರಸ್ತಾರ ಮತ್ತು ಶಿಖರವನ್ನು ಹೊಂದಿದೆ.

[21]ದೇವಾಲಯದ ವಾಸ್ತುಶಿಲ್ಪಶಾಸ್ತ್ರದಲ್ಲಿ ವಿವರಿಸಿದಂತೆ ದೇವಾಲಯವು ದೇವದೇವನಾದ ವಿರಾಟ ಪುರುಷನನ್ನು ಸೂಚಿಸುತ್ತದೆ. ಗರ್ಭಗೃಹವು ಅವನ ಶಿರಸ್ಸು, ಮಹಾದ್ವಾರದ ಗೋಪುರವು ಅವನಪಾದ, ಶುಕನಾಸಿ ಅಥವಾ ಆರ್ಧಮಂಟಪ ಅವನ ಮೂಗು, ಅಂತರಾಳವು ಅವನ ಕೊರಳು, ಇತರ ಮಂಟಪಗಳು ದೇಹ ಪ್ರಕಾರವು ಕೈಗಳು. ಇದು ವಿರಾಟಪುರುಷನು ಮಲಗಿರುವಂತೆ ಭಾವಿಸಿಕೊಟ್ಟ ಚಿತ್ರ. ಅವನನ್ನು ನಿಂತಿರುವಂತೆ ಭಾವಿಸಿದರೆ ಗರ್ಭಗೃಹವು ಶಿರಸ್ಸು, ಶಿಖರವು ರೆಖೆ, ಉಳಿದಭಾಗಗಳು ನೆಲದಲ್ಲಿವೆ. ಒಂದು ಮಾತಿನಲ್ಲಿ ಹೇಳುವುದಾದರೆ ದೇವಾಲಯವು ಕಲ್ಲು ಮಣ್ಣು, ಇಟ್ಟಿಗೆಗಳ ನಿರ್ಜೀವ ಕಟ್ಟಡವಲ್ಲ ಬಹು ಅರ್ಥಗರ್ಭಿತವಾದ ತತ್ವಯುಕ್ತ ರಚನೆ. ಈ ದೇವಾಲಯವನ್ನು ಎತ್ತರವಾದ ವೇದಿಕೆಯ ಮೇಲೆ ನಿರ್ಮಸಿ ಅದರ ಮೇಲೆ ಉಪಪೀಠವನ್ನು ನಿರ್ಮಿಸಿದ್ದಾರೆ. ಸಾಮಾನ್ಯವಾಗಿ ದೇವಾಲಯದ ಎತ್ತರವನ್ನು ಹೆಚ್ಚಿಸಿ ಆ ಮೂಲಕ ದೇವಾಲಯಕ್ಕೆ

---

[21] ರಾಮನಗರ ಒಂದು ಸಾಂಸ್ಕೃತಿಕ ಅಧ್ಯಯನ, ಲೇ : ಡಾ. ಅಂಕನಹಳ್ಳಿ ಪಾರ್ಥ, ಪು - 417

ಹೆಚ್ಚಿನ ರಕ್ಷಣೆ, ಔನ್ನತ್ಯ ಮತ್ತು ಶೋಭೆಯನ್ನು ನೀಡಲು ಈ ಉಪಪೀಠವನ್ನು ರಚಿಸಲಾಗುತ್ತದೆ. ಈ ಉಪಪೀಠವು ದೇವಾಲಯದ ಅವಶ್ಯಕತೆ ಮತ್ತು ಶಿಲ್ಪಿಗಳ ಆಶಯವನ್ನೋ ಅವಲಂಭಿಸಿರುತ್ತದೆ. ಈ ದೇವಾಲಯಕ್ಕೆ ವೇದಿಭದ್ರೆ ಉಪಪೀಠದ ರಚನೆಯಿದೆ. ಈ 'ವೇದಿಭದ್ರ ಉಪಪೀಠ'ದಲ್ಲಿ ಪಾದುಕ, ಕಂಪ, ಕಂಠ, ಕಂಪ, ವಾಜನ, ಕಂಪಗಳಿಂದ ಕೂಡಿರುತ್ತದೆ. ಸಾಮಾನ್ಯವಾಗಿ ಎಲ್ಲಾ ದೇವಾಲಯಗಳಲ್ಲೂ ಈ ಉಪಪೀಠದ ರಚನೆ ಇರುವುದಿಲ್ಲ, ಹೆಚ್ಚಾಗಿ ವಿಜಯನಗರದ ಕಾಲದ ದೇವಾಲಯಗಳಲ್ಲಿ ಈ ರೀತಿಯ ಉಪಪೀಠದ ರಚನೆ ಇರುತ್ತದೆ. ಈ ಉಪಪೀಠದ ಮೇಲೆ ನಿರ್ಮಿಸಿರುವ ಭಾಗವೇ 'ಅಧಿಷ್ಠಾನ'. ಈ ದೇವಾಲಯದ ಭಾರವನ್ನು ಹೊರುವ ಶಕ್ತಿಯನು ಈ 'ಅಧಿಷ್ಠಾನವು ಪಡದಿರುತ್ತದೆ. ಈ ದೇವಾಲಯದ ಅಧಿಷ್ಠಾನವು ಚೌಕ (ಆಯುತ)ಕಾರವಾಗಿದ್ದು, 'ಶ್ರೀಬಂಧ ಪ್ರಕಾರ'ವನ್ನು ಹೊಂದಿದೆ. ಈ ಶ್ರೀಬಂಧ ಪ್ರಕಾರದಲ್ಲಿ ಉಪಾನ ಮಹಾಪದ್ಮ, ವೃತ್ತಕುಮುದ, ಕಂಪ–ಗಳ–ಕಂಪ ಕಪೋತ, ಆಲಿಂಗ, ಆಂತರಿಕ, ಪ್ರತೀ ವಾಜನಗಳು ಇರುತ್ತದೆ. ವಿಜಯನಗರ ಕಾಲದಲ್ಲಿ ಈ ಶ್ರೀಬಂಧ ಅಧಿಷ್ಠಾನಗಳು ಹೆಚ್ಚಾಗಿ ಕಂಡುಬರುತ್ತದೆ. ಈ ಅಧಿಷ್ಠಾನವನ್ನು ಈ ದೇವಾಲಯದ 'ಪ್ರತೋಲಿ' ಯಲ್ಲಿ ಕಾಣಬಹುದು. ಇದರ ಕುಮುದಭಾಗದಲ್ಲಿ ಉದ್ದಕ್ಕೂ ಶಾಸನಗಳನ್ನು ಕೆತ್ತಲಾಗಿದೆ. ಭಿತ್ತಿಭಾಗವು ಅಧಿಷ್ಠಾನ ಮತ್ತು ಪ್ರಸ್ತಾರದ ನಡುವೆ ಕಂಡುಬರುತ್ತಿದ್ದು ಇದರೆ ವಿನ್ಯಾಸವು ಅಧಿಷ್ಠಾನದ ವಿನ್ಯಾಸವನ್ನು ಅನುಸರಿಸುತ್ತದೆ. ಭಿತ್ತಿಯಲ್ಲಿ ಸುತ್ತಲೂ ಸುಮಾರು ನಲವತ್ತೆಂಟು ಭಿತ್ತಿಪಾದಗಳಿವೆ. ಇವುಗಳು ಅಲಂಕೃತವಾಗಿದೆ.

ಈ ಭಿತ್ತಿಗಳಲ್ಲಿ ಕೋಷ್ಠಗಳಿವೆ. ಈ ಕೋಷ್ಠಗಳು ಎಂದರೆ ದೇವಾಲಯದ ಹೊರಗೋಡೆಯಲ್ಲಿ ಕುಂಡ್ಯಸ್ತಂಭಗಳ ನಡುವೆ ಇರುವ ಗೂಡುಗಳೇ ಈ 'ಕೋಷ್ಠಗಳು'. ಇವುಗಳನ್ನು ದೇವಾಲಯದ ಗೋಡೆಗೆ ಅಲಂಕಾರ ಪ್ರಾಯವಾಗಿರಲೆಂದು ರಚಿಸಲಾಗುತ್ತದೆ. ಈ ದೇವಾಲಯದ ಕೋಷ್ಠಗಳಲ್ಲಿ ಯಾವುದೇ ದೇವತಾ ಶಿಲ್ಪಗಳನ್ನು ಇಡಲಾಗಿಲ್ಲ. ಇಂತಹ ಏಳು ಕೋಷ್ಠಗಳನ್ನು ಇಲ್ಲಿ ಕಾಣಬಹುದು. ಈ ಕೋಷ್ಠಗಳು ಇಕ್ಕೆಲಗಳಲ್ಲೂ ಭಿತ್ತಿಪಾದಗಳಿದ್ದು. ಈ ಭಿತ್ತಿಪಾದಗಳಲ್ಲಿ ಶಾಲಾಕೋಷ್ಠಗಳನ್ನು ಕಾಣಬಹುದು. ಈ ಭಿತ್ತಿಪಾದಗಳ ಮೇಲೆ ಶಾಲಾಶಿಖರ ಇದೆ. ಈ ಶಾಲಾಶಿಖರದಲ್ಲಿ ಎರಡು ನಾಸಿಗಳನ್ನು ಕಾಣಬಹುದು. ಭಿತ್ತಿಯ ಮೇಲೆ ಕಪೋತ (ಪಾರಿವಾಳದ ತಲೆಯ ಆಕಾರದಲ್ಲಿ ಹೊರಗೆ ಚಾಚಿಕೊಂಡಿರುವ ಅಂಗ) ಇದೆ, ಇದರಲ್ಲಿ ಸಹ ನಾಸಿಗಳನ್ನು ಕಾಣುತ್ತೇವೆ. ಭಿತ್ತಿಯ ಮೇಲಿರುವ ಭಾಗವಾದ ಪ್ರಸ್ತಾರವು ಈ ದೇವಾಲಯದಲ್ಲಿ ನಂತರದ ಕಾಲದಲ್ಲಿ ಸೇರಿಸಲ್ಪಟ್ಟು ಚಪ್ಪಡಿಕಲ್ಲುಗಳಿಂದ ಮುಚ್ಚಿಹೋದಂತಿದೆ. ಈ ಪ್ರಸ್ತಾರದ ಮೇಲೆ ಶಿಖರವನ್ನು ಕಾಣುತ್ತೇವೆ.

ಈ ದೇವಾಲಯದ ಗರ್ಭಗೃಹಕ್ಕೆ ವಿಜಯನಗರದ ಅರಸರ ಕಾಲಿನಲ್ಲಿ ನಿರ್ಮಿಸಲ್ಪಟ್ಟ 'ಶಿಖರ'ವಿದೆ. ಈ ಶಿಖರವು ದ್ರಾವಿಡ ಶೈಲಿಯ ಎರಡು ತಲಗಳನ್ನು ಹೊಂದಿದೆ. ಮೊದಲನೆ ತಳದ ಪ್ರಸ್ತರದ ಮೇಲೆ ಕೂಟ, ಪಂಜರ, ಶಾಲ, ಪಂಜರಕೂಟ, ಈ ರೀತಿಯಾಗಿ ಕಟ್ಟಲ್ಪಟ್ಟು ಹಾರದಿಂದ ಕೂಡಿದೆ. ನಂತರದ ತಳಗಳಿಗೆ ಈ ರೀತಿಯ ಹಾರ ಕಾಣುವುದಿಲ್ಲ. ಮೇಲಿನ ಭಾಗದ ತಳದ ಸುತ್ತಲೂ ಗಾಳಿಶಿಲ್ಪಗಳನ್ನು ಕಾಣಬಹುದು. ಹಯಗ್ರೀವ, ಮಹಾವಿಷ್ಣು, ಗರುಡವಾಹನ ಮೊದಲಾದ ಶಿಲ್ಪಗಳನ್ನು ಈ ಶಿಖರದಲ್ಲಿ ಇಡಲಾಗಿದೆ. ಈ ತಳಗಳ ಮೇಲೆ ಬ್ರಹ್ಮಚ್ಛಂದ ಶಿಖರವಿರುವುದು. ಇದಕ್ಕೆ ಗಾರೆಯಲ್ಲಿ ನಿರ್ಮಿಸಿರುವ ಸ್ತೂಪಿಯಿರುವುದುನ್ನು ಕಾಣಬಹುದು.

ಈ ದೇವಾಲಯದ ತಳಮಟ್ಟದಿಂದ ಎತ್ತರವಾದ ವೇದಿಕೆಯ ವರೆಗೂ ಸುಮಾರು ಇಪ್ಪತ್ತೊಂಭತ್ತು ಸೋಪಾನಗಳನ್ನು ಹತ್ತಿ ಹೋದರೆ ದೇವಾಲಯದ ಈ ದೇಗುಲದ ಮಹಾದ್ವಾರ ಸಿಗುತ್ತದೆ. ಬಹಳ ಎತ್ತರವಾದ ಮಹಾದ್ವಾರವಿರುವ ಈ ಗೋಪುರ ನಿರ್ಮಾಣ ವಿಜಯನಗರದ ಅರಸರ ಕಾಲದಲ್ಲಿ ನಿರ್ಮಾಣವಾಗಿದೆ. ಈ ಗೋಪುರ ಎಡಪಾಶ್ರದಲ್ಲಿ ಶ್ರೀಕೃಷ್ಣನು ಕೊಳಲನ್ನು ಊದುತ್ತಾ ನಿಂತ ಭಂಗಿಯಲ್ಲಿರುವ ಕೆತ್ತನೆಯ ಚಿತ್ರ ನೋಡಲು ಮನಮೋಹಕವಾಗಿದೆ. ಈ ಕೆತ್ತನೆಯ ಮೇಲ್ಭಾಗದ ಚಿತ್ರಪಟದಲ್ಲಿ ಶಂಖ ಚಕ್ರ ಗದೆಯನ್ನು ಹಿಡಿದು ನಿಂತಿರುವ ಕೆತ್ತನೆಯ ದೃಶ್ಯವನ್ನು ಕಾಣಬಹುದು, ಬಹುಶಃ ಈ ಶಿಲ್ಪವು ವೈಕುಂಠದ ದ್ವಾರಪಾಲಕನಾದ ಜಯ ಅಥವಾ ವಿಜಯನ ಶಿಲ್ಪವಿರುವಂತೆ ಭಾಸವಾಗುತ್ತದೆ. ಆದರೆ ಇದೇ ಗೋಪುರದ ಬಲಭಾಗದಲ್ಲಿ ಶ್ರೀಕೃಷ್ಣನ ಮತ್ತು ದ್ವಾರಪಾಲಕನ ಶಿಲ್ಪದ ಕೆತ್ತನೆಯ ರಚನೆ ಕಂಡುಬರುವುದಿಲ್ಲ. ಬಹುಶಃ ಶಿಲ್ಪಿಗಳು ಈ ಕೆತ್ತನೆಯನನ್ನು ಮರೆತಿರುವಂತೆ ಕಂಡರು ಈ ರಚನೆಯ ಕೆಳಭಾಗದಲ್ಲಿ ನೃತ್ಯದ ಭಂಗಿಯಲ್ಲಿರುವ ಅನೇಕ ಸ್ತ್ರೀಯರ ಶಿಲ್ಪಗಳನ್ನು ಕಾಣುತ್ತೇವೆ ಇವರೆಲ್ಲಾ ಶ್ರೀಕೃಷ್ಣನ ಗೋಪಿಕಾ ಸ್ತ್ರೀಯರೇ ಇರಬೇಕೆಂಬ ಕಲ್ಪನೆಯು ಭಾಸವಾಗುವುದುಂಟು ಉಳಿವಂತೆ ಈ ದೇವಾಲಯ ಎಲ್ಲಾಭಾಗಗಳ ಭಿತ್ತಿಗಳಲ್ಲಿ ಅನೇಕ ಕೆತ್ತನೆಗಳನ್ನು ಕಾಣುತ್ತೇವೆ.

ಈ ದೇವಾಲಯದ 'ಮಹಾದ್ವಾರ' ಬಹಳ ಎತ್ತರವಾಗಿದೆ. ಈ ಮಹಾದ್ವಾರವನ್ನು ಪದ್ಮದಳದ ರೇಖೆಗಳಂತೆ ಸುಂದರವಾದ ಕೆತ್ತನೆಗಳಿಂದ ಚಿತ್ರಿಸಿದ್ದಾರೆ. ವಿಜಯನಗರದ ಅರಸರ ಕಾಲದಲ್ಲಿ ಈ ಪ್ರದೇಶದ್ವಾರವನ್ನು ಸಿಂಗರಿಸಲು ಎತ್ತರವಾದ 'ರಾಯಗೋಪುರ'ಗಳನ್ನು ಕಟ್ಟುತ್ತಿದ್ದರು. ಈ ಚಂಪಕಧಾಮ ಸ್ವಾಮಿ ದೇವಾಲಯಕ್ಕೂ ಅನೇಕ ವರ್ಷಗಳ ಹಿಂದೆ ಗೋಪುರ ಇತ್ತೆಂದು ಕಾಲಪುರುಷನ ಹಾವಳಿಯಿಂದ ಆ ಗೋಪುರವು ನಶಿಸಿಹೋಯಿತೆಂಬ ಬಗ್ಗೆ ಅಲ್ಲಿನ ಅನೇಕ ಗ್ರಾಮಸ್ಥರು ಹೇಳುವುದಂಟು.

"ಏನೇ ಆದರೂ ಈ ದೇವಾಲಯದ ಮಹಾದ್ವಾರ ಸುಂದರವಾದ ಕತ್ತೆನೆಯಿಂದ ಕಿತ್ತಲ್ಪಟ್ಟಿದೆ ಈ ದ್ವಾರಬಂಧದ ಉಭಯ ಪಾರ್ಶ್ವಗಳಲ್ಲಿಯೂ ಸುಂದರವಾಗಿ ಅಲಂಕರಿಸಲ್ಪಟ್ಟು ಲಂಖಪಟ್ಟಿಕೆಗಳನ್ನು ಕಾಣುತ್ತೇವೆ. ಈ ದ್ವಾರದ ಮೇಲ್ಭಾಗದಲ್ಲಿ ಅಧೋಮುಖವಾಗಿರುವ ಪದ್ಮದಳದ ಕೆತ್ತನೆಯ ದೃಶ್ಯ ನೋಡುಗರ ಗಮನ ಸೆಳೆಯುತ್ತದೆ.

ವಿಜಯನಗರ ಕಾಲದ ಈ ಪ್ರವೇಶದ್ವಾರ ಬಹಳ ಚಿತ್ತಕರ್ಷಕವಾಗಿದ್ದು. ಎತ್ತರವಾದ ಗೋಪುರವನ್ನು ಹೊಂದಿದೆ. ಇದು ಇಟ್ಟಿಗೆ ಮತ್ತು ಗಾರೆಯಿಂದ ಅಲಂಕೃತಗೊಂಡಿರುವ ಭವ್ಯವಾದ ಗೋಪುರ. ವಿವಿಧ ರೀತಿಯ ಅಲಂಕರಣೆಗಳನ್ನು ಇಟ್ಟಿಗೆ ಮತ್ತು ಗಾರೆಯಲ್ಲಿ ನಿರ್ಮಿಸಿದ್ದಾರೆ. ಕಾಲಪುರುಷನ ಹಾವಳಿಯಿಂದಾಗಿ ಹಾಗೂ ನಿರ್ಮಾಣಕ್ಕೆ ಉಪಯೋಗಿಸಿರುವ ವಸ್ತುಗಳ ಮೃದು ಲಕ್ಷಣಗಳಿಂದಾಗಿ ಈ ಗೋಪುರದ ಬಹುಭಾಗ ಭಗ್ನಾವಸ್ಥೆಯಲ್ಲಿದೆ.

ಈಗ ಮೂಲ ಕಟ್ಟಡಕ್ಕೆ ಭಂಗಬಾರದಂತೆ ಇದನ್ನು ಪುನರ್ ನಿರ್ಮಾಣ ಮಾಡಿದ್ದಾರೆ. ಈ ದೇವಾಲಯದ ವಾಸ್ತುವು ಬಹಳ ಗಮನಾರ್ಹವಾಗಿದ್ದು ಕಣಶಿಲೆಯಲ್ಲಿ ನಿರ್ಮಿಸಿರುವ ಈ

ದೇವಾಲಯವು ಉಪಪೀಠ ಅಧಿಷ್ಠಾನವನ್ನು ಹೊಂದಿದ್ದರೆ ಮಹಾದ್ವಾರವನ್ನು ಎತ್ತರವಾದ ಉಪಪೀಠ ಮತ್ತು ಅದಿಷ್ಠಾನದ ಮೇಲೆ ಕಟ್ಟಲಾಗಿದೆ. ಈ ಮಹಾದ್ವಾರದ ಮುಂಭಾಗ ಮತ್ತು ಹಿಂಭಾಗದಲ್ಲಿ ಸುಂದರವಾದ ಅರೆಗಂಬಗಳಿದ್ದು ಮಧ್ಯಭಾಗದಲ್ಲಿ ಸ್ತಂಭ ಹಾಗೂ ಕುಂಬಪಂಜರಗಳು ಇವೆ. ಕೋಷ್ಠಗಳ ನಡುವೆ ಭಿತ್ತಿಯಲ್ಲಿ ಇರುವ ಅಲಂಕಾರಿಕ ಅಂಗವಾಗಿರುವ ಈ ಕುಂಭಪಂಜರಗಳ ಕುಡ್ಯಸ್ತಂಭಗಳ ನಡುವೆ ಸಾಲಾಗಿರುತ್ತದೆ. ಈ ಕುಂಭಪಂಜರದಲ್ಲಿ ಕುಂಭವನ್ನು ಬಿಡಿಸಿದ್ದು. ಕುಂಭದಿಂದ ಹೊರಚೆಲ್ಲುತ್ತಿರುವಂತೆ ಎಲೆ ಬಳ್ಳಿಗಳನ್ನು ಭಿತ್ತಿಸಲಾಗಿದೆ. ಇದರ ಮೇಲೆ ಕುಂಭದಿಂದ ಹೊರಬಂದಂತೆ ಒಂದು ಪುಟ್ಟ ಸ್ತಂಭವನ್ನು ಬಿಡಿಸಿದ್ದು. ಆ ಸ್ತಂಭದ ಮೇಲ್ಭಾಗದಲ್ಲಿ ಕೂಟದ ಅಲಂಕಾರವು ಇರುವುದು ಇಂಥ ರಚನೆಗೆ 'ಕುಂಭಲತಾ ಅಥವಾ ಕುಂಭಪಂಜರ' ಎಂದು ಹೆಸರು. ವಿಜಯನಗರ ಕಾಲದ ಬಹುಪಾಲು ದೇವಾಲಯಗಳಲ್ಲಿ ಈ ಕುಂಭಪಂಜರಗಳನ್ನು ಕಾಣಬಹುದು. ವಾಸ್ತುಶಿಲ್ಪದಲ್ಲಿ ಇದೊಂದು ರೀತಿಯ ಅಲಂಕಾರಿಕ ಸಂಕೇತವಾಗಿದೆ. ಸ್ತಂಭಪಂಜರದಲ್ಲಿ ಕುಂಭವಿರುವುದಿಲ್ಲ. ನಿಂತಿರುವ ಒಂದು ಸ್ತಂಭದ ಮೇಲ್ತುದಿಯಲ್ಲಿ ಒಂದು ಸಣ್ಣ ಮಂಟವನ್ನು ಕಾಣಬಹುದು. ಈ ಮಹಾದ್ವಾರದ ಹಿಂಭಾಗದ ಗೋಪುರದ ಎರಡು ಸ್ತಂಭ ಪಂಜರಗಳ ನಡುವೆ ಕಾಳಿಂಗನ ಎಡೆಯ ಮೇಲೆ ತನ್ನ ಪಾದವನ್ನು ಇಟ್ಟು ಕಾಳಿಂಗಮರ್ಧನ ವನ್ನು ಮಾಡುತ್ತಿರುವ ಶ್ರೀಕೃಷ್ಣನ ಶಿಲ್ಪವು ನೋಡಲು ಅದ್ಭುತವಾಗಿದೆ. ಈ ಗೋಪುರದ ಮಹಾದ್ವಾರದಲ್ಲಿ ಮುಂಭಾಗ ಮತ್ತು ಹಿಂಭಾಗದಲ್ಲಿ ಶ್ರೀಕೃಷ್ಣನ ಕೆತ್ತನೆಯ ಶಿಲ್ಪವು ನಮಗೆ ಗರ್ಭಗುಡಿಯಲ್ಲಿರುವ ದಾಮೋದರ (ಶ್ರೀಕೃಷ್ಣ)ನನ್ನು ನೆನಪಿಸುತ್ತದೆ. ಬಹುಶಃ ಶ್ರೀಕೃಷ್ಣನ ಈ ಶಿಲ್ಪ ಮತ್ತು ಗರ್ಭಗುಡಿಯಲ್ಲಿರುವ ಚಂಪಕಧಾಮ (ಮಹಾವಿಷ್ಣು) ಮೂರ್ತಿಯು ನಮಗೆ ದ್ವಾಪರಯುಗದ ಶ್ರೀಕೃಷ್ಣಾವತಾರವನ್ನು ನೆನಪಿಗೆ ತರುತ್ತದೆ.

ಈ ದೇವಾಲಯದ ಗೋಪುರದ ಮಹಾದ್ವಾರದ ಗೋಡೆಗಳ ಮೇಲೂ ಈ ಸ್ತಂಭಪಂಜರವನ್ನು ಕಾಣಬಹುದು. ಉಪಪೀಠ ಮತ್ತು ಅಧಿಷ್ಠಾನದ ಮೇಲೆ ಅದರ ಸಮಾನಗಾತ್ರದ ಎರಡು ಕಟ್ಟಡದ ಹಂತಗಳು. ಕೈಪಿಡಿ ಮತ್ತು ಅದರ ಮೇಲೆ ಪಿರಮಿಡ್ಡಿನಾಕಾರದಲ್ಲಿ ಹಂತಹಂತದಲ್ಲಿ ಮೇಲೇರಿರುವ ಗೋಪುರದ ಭಾಗವಿದೆ. ತುದಿಯಲ್ಲಿರುವ ಕಮಾನಿನಾಕಾರದ ಮೇಲ್ಚಾವಣಿ ಮತ್ತು ಅದರ ಬೆನ್ನಿನ ಮೇಲೆ ಇರುವ ಕಳಶದ ಸಾಲು ಬೆಸಸಂಖ್ಯೆಯಲ್ಲಿವೆ. ಕಮಾನಿನ ಛಾವಣಿಯ ಎರಡು ತುದಿಗಳಲ್ಲಿ ಎತ್ತರವಾದ ಬೃಹತ್ತಾದ ಕೀರ್ತಿಮುಖ (ಸಿಂಹ ಶಿಖಾ)ವಿದೆ. ಈ ಕೀರ್ತಿಮುಖಕ್ಕೆ ಹೊಂದಿಕೊಂಡಂತೆ ಗೋವಿನ ಕೊಂಬಿನಾಕಾರದ ಅಲಂಕರಣೆಯ ಭಾಗ ಮುಂತಾದವುಗಳು ಈಗ ಶಿಥಿಲಾವಸ್ಥೆಯಲ್ಲಿ ಇವೆ. ಪ್ರಸ್ತುತ ಈ ದೇವಾಲಯದ ಗೋಪುರ ಸಿಮೆಂಟ್ ಗಾರೆ, ಕೆತ್ತನೆಗಳಿಂದ ನಿರ್ಮಿಸಿ ಅಲಂಕಾರವಾದ ಬಣ್ಣಗಳಿಂದ ಸಿಂಗರಿಸಿರುವುದು ಈ ದೇಗುಲಕ್ಕೆ ಕಲಶಪ್ರಾಯವಿಟ್ಟಂತೆ ಕಂಗೊಳಿಸುತ್ತಿದೆ.

ಶ್ರೀಚಂಪಕಧಾಮಸ್ವಾಮಿ . ದೇವಾಲಯವು ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ಅರ್ಧಮಂಟಪ, ನವರಂಗ, ಮಹಾಮಂಟಪ, ಮುಖಮಂಟಪ, ಕೈಸಾಲೆ ಮತ್ತು ಪಾತಾಶಾಂಕಣಗಳನ್ನು ಹೊಂದಿದೆ.

ದೇವಾಲಯದ ಮೂಲಸ್ಥಾನವೇ ಈ 'ಗರ್ಭಗೃಹ' ಶ್ರೀ ಚಂಪಕಧಾಮ ಸ್ವಾಮಿ ದೇಗುಲದ ಗರ್ಭಗುಡಿಯು ಬಹುಚಿಕ್ಕದಾಗಿದ್ದು ಏಳು ಅಡಿ × ಏಳು ಅಡಿ ವಿಸ್ತಾರವಾಗಿದೆ. ಇಲ್ಲಿರುವ ಗರ್ಭಗೃಹ ಚೌಕಾಕಾರವಾಗಿದ್ದು ಏಕಕೂಟಚಲ ಗರ್ಭಗೃಹವಾಗಿದೆ. ಈ ಗರ್ಭಗೃಹದಲ್ಲಿ ಸ್ವಲ್ಪ ಎತ್ತರವಾದ ವೇದಿಕೆಯ ಮೇಲೆ ಶ್ರೀದೇವಿ ಮತ್ತು ಭೂದೇವಿಯರ ಸಮೇತವಾದ ಶ್ರೀಚಂಪಕಧಾಮಸ್ವಾಮಿಯ ಸಮಭಂಗಿಯಲ್ಲಿ ನಿಂತಿರುವ ಶಿಲ್ಪವಿದೆ. ಚೋಳರ ಶೈಲಿಯಲ್ಲಿರುವ ಈ ಮೂರ್ತಿಗಳ ಕೆತ್ತನೆಯೂ ಬಹಳ ಆಕರ್ಷಕವಾಗಿದೆ. ಸ್ವಾಮಿಯ ಎರಡು ಕೈಯಲ್ಲಿ ಶಂಖ ಚಕ್ರವನ್ನು ಹಿಡಿದಿದ್ದು ಮತ್ತೆರಡು ಕೈಗಳು ಅಭಯ ಮತ್ತು ವರದ ಮುದ್ರೆಯನ್ನು ಪ್ರದರ್ಶಿಸುತ್ತಿದೆ. ಈ ಮೂರ್ತಿಯೂ ನಾಲ್ಕುವರೆ ಅಡಿ ಎತ್ತರದಲ್ಲಿದೆ. ನಾಲ್ಕು ಅಡಿಯಷ್ಟು ಎತ್ತರದಲ್ಲಿರುವ ಶ್ರೀದೇವಿ ಮತ್ತು ಭೂದೇವಿಯು ಸ್ವಾಮಿಯ ಅಕ್ಕ-ಪಕ್ಕದಲ್ಲಿ ನಿಂತಭಂಗಿಯಲ್ಲಿದ್ದು ನೋಡಲು ಆಕರ್ಷಕವಾಗಿ ಕಾಣುತ್ತವೆ.

ಈ ಗರ್ಭಗೃಹ ಮುಂದೆ 'ಅಂತರಾಳ'ವಿದೆ. ಇದರ ವಿಸ್ತಾರ ಸುಮಾರು ಆರು ಅಡಿ × ಆರು ಅಡಿ ಇದೆ. ಈ ಅಂತರಾಳದ ಎಡಪಾಶ್ರದಲ್ಲಿ ಶ್ರೀದೇವಿ ಭೂದೇವಿಯರ ಸಮೇತ ನಿಂತ ಭಂಗಿಯಲ್ಲಿರುವ ಶ್ರೀಚಂಪಕಧಾಮಸ್ವಾಮಿಯ ಉತ್ಸವ ಮೂರ್ತಿಗಳನ್ನು ಕಾಣಬಹುದು. ಇವು ವಿಜಯನಗರ ಕಾಲದ ಮೂರ್ತಿಗಳೆಂದು ಪ್ರತೀತಿಯಿದೆ. ಈ ಮೂರ್ತಿಗಳು ಕಂಚಿನ ಲೋಹದಿಂದಾಗಿದ್ದು ನೋಡಲು ಬಹಳ ಆಕರ್ಷಕವಾಗಿದೆ.

ಈ ದೇವಾಲಯದ ಗರ್ಭಗೃಹ ಮತ್ತು ಅಂತರಾಳಗಳು ಪ್ರಾಚೀನವಾದವು ಗ್ರಾಮದ ಕೆಲವರು ಇವು ಚೋಳರ ಕಾಲದ ರಚನೆಯೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಈ ಅಂತರಾಳಕ್ಕೆ 'ಅರ್ಧಮಂಟಪ'ವನ್ನು ಜೋಡಿಸಿದ್ದಾರೆ. ಕೆಲವರು ಇದನ್ನು ಮತ್ತೊಂದು 'ಅಂತರಾಳ' ಎನ್ನುವುದು ಉಂಟು. ಈ ಅರ್ಧಮಂಟಪವು 6×5 ಅಡಿ ವಿಸ್ತಾರವಾಗಿದೆ. ಇದೊಂದು ಸ್ತಂಭರಹಿತವಾದ ರಚನೆಯಾಗಿದೆ. ಈ ಅರ್ಧಮಂಟಪದವರೆಗೂ ಭಕ್ತಾದಿಗಳು ಆಗಮಿಸಿ ದೇವರ ದರ್ಶನವನ್ನು ಪಡೆಯಬಹುದು.

ಈ ಅರ್ಧಮಂಟಪದ ನಂತರದ ಭಾಗವೇ 'ನವರಂಗ' ಸ್ಥೂಲವಾಗಿ ಗಮನಿಸಿದರೆ ಈ ನವರಂಗದಲ್ಲಿ 16 ಕಂಬಗಳಿವೆ. ಇದರಲ್ಲಿ 4 ಕಂಬ ಗೋಡೆಯಲ್ಲಿದೆ. ಭಕ್ತಾದಿಗಳು ಈ ಭಾಗದಲ್ಲಿ ಆಗಮಿಸಿ ಸ್ವಾಮಿಯ ದರ್ಶವನ್ನು ಪಡೆಯಬಹುದು. ಇದರ ಮೇಲ್ಭಾಗದಲ್ಲಿ ಗಾಳಿ ಮತ್ತು ಬೆಳಕು ಬರುವಂತೆ ಗವಾಕ್ಷಿಗಳನ್ನಿರಿಸಿದ್ದಾರೆ. ಈ ನವರಂಗದ ಬಲಪಾಶ್ವದಲ್ಲಿ ವಿಶ್ವಕ್ಸೇನರ ವಿಗ್ರಹವಿದೆ. ಚತುರ್ಭುಜವನ್ನು ಹೊಂದಿರುವ ಈ ಶಿಲ್ಪ ಕಪ್ಪು ಶಿಲೆಯದ್ದಾಗಿದೆ. ಈ ಶಿಲೆಯ ಬಲಗೈಯಲ್ಲಿ ಚಕ್ರ ಮತ್ತು ಎಡಗೈಯಲ್ಲಿ ಶಂಖವನ್ನು ಹಿಡಿದಿದೆ ಸುಮಾರು 3 ಅಡಿ ಎತ್ತರದಲ್ಲಿರುವ ಈ ಮೂರ್ತಿಯು ಆಸನದ ಮೇಲೆ ಆಸೀನವಾಗಿದೆ. ಇದು ವಿಜಯನಗರದ ಶೈಲಿಯಲ್ಲಿದೆ. ಈ ಮೂರ್ತಿ ತುಂಬಾ ಸೂಕ್ಷ್ಮವಾದ ಕೆತ್ತನೆಯಿಂದ ಕೂಡಿದ್ದು ನೋಡಲು ಬಹಳ ಆಕರ್ಷಕವಾಗಿದೆ. ಈ ನವರಂಗದ ಎಡ ಪಾರ್ಶ್ವದ ಭಿತ್ತಿಯಲ್ಲಿ ವಾತಾಯನ ವಿದೆ. ನವರಂಗದ ಒಳಕ್ಕೆ ಹೊರಗಿನಿಂದ ಬೆಳಕು ಬರಲು ಈ ವಾತಾಯನವನ್ನು ನಿರ್ಮಿಸಿದ್ದಾರೆ. ಇದು ಚೌಕಾಕಾರವಾಗಿದೆ, ಈ ವಾತಾಯವು ವಜ್ರಾಕೃತಿಯ

ಆಕಾರದಲ್ಲಿದೆ. ಈ ವಾತಾಯನಕ್ಕೆ ಒಂಭತ್ತು ರಂದ್ರಗಳು ಇವೆ. ಈ ಸ್ಥಳದಲ್ಲಿ ಗರುಡನ ಮೂರ್ತಿಯನ್ನು ಇರಿಸಲಾಗಿದೆ, ಇದು ಕಂಚಿನ ಪ್ರತಿಮೆಯಾಗಿದೆ.

ಈ ನವರಂಗದ ಮುಂದಿನ ಭಾಗವೇ 'ಕೈಸಾಲೆ' ಈ ಕೈಸಾಲೆಯು ಸುಮಾರು 15 × 35 ಅಡಿ ಜಾಗಹೊಂದಿದೆ. ಈ ಪ್ರದೇಶ ಸ್ವಲ್ಪ ವಿಶಾಲವಾಗಿದ್ದು, ಹಲವಾರು ಕಂಬಗಳ ರಚನೆಯನ್ನು ಹೊಂದಿದೆ. ಈ ಕೈಸಾಲೆಯಿಂದ ದೇವಾಲಯ ಗರ್ಭಗುಡಿಯ ಮೂಲಕ ಪ್ರದಕ್ಷಿಣಾಪಥವಿದೆ. ಈ ಕೈಸಾಲೆಯಿಂದ ಮೂಲದೇವಾಲಯದ ನೆಲಮಟ್ಟವನ್ನು ತಲುಪಲು ಮತ್ತು ಹತ್ತಿಹೋಗಲು ಸೋಪಾನಗಳಿವೆ. ಈ ದೇವಾಲಯದ ಪ್ರದಕ್ಷಿಣಾಪಥವು ನೆಲಮಟ್ಟಕ್ಕಿಂತ ಕೆಳಭಾಗದಲ್ಲಿ ಇರುವುದರಿಂದ ಅಲ್ಲಿಗೆ ಇಳಿದು ಹೋಗಲು ಸೋಪಾನಗಳಿವೆ. ವಿಜಯನಗರದ ಕಾಲದ ಕೆಲವು ದೇವಾಲಯಗಳಲ್ಲಿ ಮಾತ್ರ ಈ ರೀತಿಯ ಪ್ರದಕ್ಷಿಣಾಪಥವಿದೆ. ಈ ಪ್ರದಕ್ಷಿಣಪಥದದ ಸುತ್ತಲೂ ಹಲವಾರು ಕಂಬಗಳಿದ್ದು ಇಲ್ಲಿನ ಸೋಪಾನಗಳು ನೆಲಮಟ್ಟದಲ್ಲಿರುವುದೇ ವಿಶೇಷವಾಗಿದೆ. ಈ ಕೈಸಾಲೆಯ ಗರ್ಭಗೃಹದ ದ್ವಾರದಲ್ಲಿ ಇಬ್ಬರು ದ್ವಾರಪಾಲಕರನ್ನು ಬಲ ಮತ್ತು ಎಡಭಾಗದಲ್ಲಿ ಸ್ಥಾಪಿಸಲಾಗಿದೆ. ಇವುಗಳ ಎತ್ತರ 4 ಅಡಿ ಎತ್ತರವಿದ್ದು, ಕಪ್ಪುಶಿಲೆಯಿಂದ ಕೆತ್ತಲಾಗಿದೆ. ಶಂಖಚಕ್ರಗದಾಧಾರಿಗಳಾದ ಈ ಶಿಲ್ಪಗಳಲ್ಲಿ ಒಂದರ ಕೈಯಲ್ಲಿ ಅಭಯ ಮುದ್ರೆ ಮತ್ತೊಂದು ಶಿಲ್ಪವು ವರದಾಮುದ್ರೆಯನ್ನು ಹೊಂದಿದೆ. ಈ ದ್ವಾರಪಾಲಕರ ಶಿಲ್ಪದ ಮೇಲೆ ಸಿಂಹದ ಮುಖವಿದೆ. ಈ ಕೈಸಾಲೆಯಲ್ಲಿ ಹಲವಾರು ಕಂಬಗಳಿದ್ದು ಇವೆಲ್ಲಾ ವಿಜಯನಗರದ ಶೈಲಿಯಲ್ಲಿವೆ. ಈ ಕೈಸಾಲೆಯ ಎಡಪಾರ್ಶ್ವದಲ್ಲಿ ಚೋಳರ ಕಾಲದ ಶೈಲಿಯಲ್ಲಿರುವ ಆಳ್ವಾರರ ಶಿಲ್ಪಗಳನ್ನು ಕಾಣಬಹುದು. ಸುಮಾರು 15 ಮೂರ್ತಿಗಳಿರುವ ಈ ಶಿಲ್ಪಗಳು ನೋಡಲು ಆಕರ್ಷಕವಾಗಿದೆ. ಈ ವಿಗ್ರಹಗಳನ್ನು ಕಪ್ಪುಶಿಲೆಯಿಂದ ಕೆತ್ತಲಾಗಿದ್ದು ಪ್ರತಿವಿಗ್ರಹವು ಸುಮಾರು 2 ಅಡಿ ಎತ್ತರವಿದೆ. ವಿಗ್ರಹಗಳ ಜೊತೆಯಲ್ಲಿ ಲಕ್ಷ್ಮೀನರಸಿಂಹನ ವಿಗ್ರಹವೂ ಇದೆ. ಈ ಆಳ್ವಾರರ ಮೂರ್ತಿಗಳನ್ನು ತುಂಬಾ ಪ್ರಾಚೀನವಾಗಿದ್ದು ಈ ದೇವಾಲಯಕ್ಕೆ ಚೋಳರ ಪ್ರಭಾವವಿರುವುದನ್ನು ಸೂಚಿಸುತ್ತದೆ.

ಈ ದ್ವಾರಪಾಲಕರ ಶಿಲ್ಪಗಳ ಮುಂದೆ ಕಲ್ಲಿನಿಂದ ಮುಚ್ಚಲ್ಪಟ್ಟ ಗೋಲಾಕದ ರಚನೆಯಿದ್ದು ಇದರ ಮೇಲೆ ಸ್ವಾಮಿಯ ಎರಡು ಪಾದಗಳನ್ನು ಪ್ರತಿಷ್ಠಾಪಿಸಿದ್ದಾರೆ. ಇದಕ್ಕೆ ಒಂದು ಕುತೂಹಲಭರಿತವಾದ ದಂತಕಥೆಯಿದೆ. ಈ ಸ್ವಾಮಿಯ ಪಾದಗಳ ಕಲ್ಲಿನಿಂದ ಮುಚ್ಚಲ್ಪಟ್ಟಿರುವ ಈ ಸ್ಥಳದಲ್ಲಿ ಒಂದು ದ್ವಾರವಿದೆಯಂತೆ, ಈ ದ್ವಾರದ ಮೂಲಕವಾಗಿ ಭೂಗರ್ಭದಲ್ಲಿದ್ದ ದೇವಸ್ಥಾನಕ್ಕೆ ಹೋಗಬಹುದೆಂದು ತ್ರೇತ್ರಾ, ಕೃತಾ ದ್ವಾಪರಯುಗಗಳಲ್ಲಿ ಈ ದೇಗುಲದ ಭೂ ಗರ್ಭದಲ್ಲಿ ದೇವಾಲಯವಿತ್ತೆಂದು ಆ ದೇವಾಲಯದಲ್ಲಿ ಋಷಿ ಸಂಕುಲ ಪಠಿಸುವ ವೇದಗಳು ಇಂದಿಗೂ ಮಧ್ಯರಾತ್ರಿಯಲ್ಲಿ ಕೇಳಬರುತ್ತದೆ ಎಂಬ ಕಥೆಯನ್ನು ಹೇಳುವುದುಂಟು. ದೇವಸ್ಥಾನದ ಪಾವಿತ್ರ್ಯತೆಯನ್ನು ಕಾಪಾಡಲು ಋಷಿಮುನಿಗಳು ಕೆಳಗಿದ್ದ ದೇವಸ್ಥಾನದಲ್ಲಿ ಶಾಸ್ತ್ರೋಕ್ತಪೂಜೆ ವಿಧಿವಿಧಾನಗಳನ್ನು ನಡೆಸಿ ಅದನ್ನು ಶಾಶ್ವತವಾಗಿ ಮುಚ್ಚಿಬಿಟ್ಟಿದ್ದಾರೆಂದು ಈ ದೇಗುಲದ ಪ್ರಧಾನ ಆಗಮಿಕರು ಹೇಳುವುದುಂಟು.

ಈ ಕೈಸಾಲೆಯ ಮುಂಭಾಗದಲ್ಲಿ ವಿಶಾಲವಾದ 'ಮಂಟಪ'ವಿದೆ. ಈ ಮಂಟಪದ ಬಲ ಮತ್ತು ಎಡ ಪಾರ್ಶ್ವದಲ್ಲಿ ಆರು ಕಂಬಗಳ ರಚನೆಯನ್ನು ಕಾಣಬಹುದು. ಈ ಮಂಟಪದ ಬಲ

ಪಾರ್ಶ್ವದಲ್ಲಿ ಉಗ್ರಾಣವಿದೆ. ಈ ಉಗ್ರಾಣದ ಪಕ್ಕದಲ್ಲೇ ದೇವಾಲಯದ ಮೇಲ್ಭಾಗಕ್ಕೆ ಹೋಗಲು ಅನೇಕ ಸೋಪಾನಗಳನ್ನು ರಚಿಸಿದ್ದಾರೆ. ಈ ಉಗ್ರಾಣದ ಮುಂದೆಯೇ ದೇಗುಲದ ಪೂಜಾಕೈಂಕರ್ಯಗಳಿಗೆ ಸೇವಾರಸೀತಿಯನ್ನು ವಿತರಿಸುವ ವ್ಯವಸ್ಥೆಯನ್ನು ಮಾಡಲಾಗಿದೆ. ಈ ಮಂಟಪದ ಎಡಪಾರ್ಶ್ವದಲ್ಲಿಯೂ ಒಂದು ಉಗ್ರಾಣವಿದ್ದು ಇಲ್ಲಿ ದೇವಾಲಯಕ್ಕೆ ಸಂಬಂಧಿಸಿದ ವಸ್ತುಗಳನ್ನು ಇಡುತ್ತಾರೆ. ಈ ಉಗ್ರಾಣದ ಪಕ್ಕದಲ್ಲಿ ದೇವರಿಗೆ ತೆಂಗಿನಕಾಯಿಯನ್ನು ಒಡೆಯಲು ಕಲ್ಲಿನಿಂದ ಮಾಡಿದ ಒಂದು ಸುಂದರವಾದ ರಚನೆಯನ್ನು ಕಾಣಬಹುದು.

ಈ ಮಂಟಪದ ಮುಂಭಾಗದಲ್ಲಿ ನಾವು 'ಮುಖಮಂಟಪ'ವನ್ನು ಕಾಣುತ್ತೇವೆ. ಇದು ದೇವಾಲಯದ ಮುಂಭಾಗದಲ್ಲಿರುವುದರಿಂದ ಇದಕ್ಕೆ 'ಮುಖಮಂಟಪ' ಎಂದು ಇದಕ್ಕೆ 'ಅಗ್ರಮಂಟಪ' ಎಂದೂ ಹೇಳುವರು. ಕೆಲವರು ಇದನ್ನು 'ಪಾತಾಳಾಂಕಣ' ಎಂದು ಕರೆಯುತ್ತಾರೆ. ಈ ಮುಖಮಂಟಪದಿಂದ ದೇವಾಲಯಕ್ಕೆ ಹೋಗಲು 18 ಸೋಪಾನಗಳಿವೆ ಇವು ಸಾಲು ಮೆಟ್ಟಿಲು (ಸೋಪಾನ)ಗಳನ್ನು ಹೊಂದಿದ್ದು, ಇದನ್ನು 'ಸೋಪಾನಮಾಲಾ' ಎನ್ನುವರು ಇವುಗಳಲ್ಲಿ ಮೊದಲ ಮೆಟ್ಟಿಲಿಗೆ 'ಅಶ್ವಪಾದ' ಎಂದು ಕೊನೆಯ ಮೆಟ್ಟಿಲು (ನೆಲದಿಂದ)ಗೆ 'ಫಲಕ' ಎಂದು ಹೆಸರು. ಈ ಸೋಪಾನಗಳಿಗೆ ಹತ್ತಿಹೋಗಲು ಅನುಕೂಲವಾಗುವಾಗುವಂತೆ ಈ ಮಟ್ಟಿಲುಗಳ ಅಕ್ಕಪಕ್ಕದಲ್ಲಿ ಆನೆಗಳ ಕೆತ್ತನೆಯನ್ನು ಕಾಣಬಹುದು. ಈ ಆನೆಗಳ ಕೆಳಭಾಗದಲ್ಲಿ ಮತ್ತೆ ಆನೆಗಳ ಸೊಂಡಿಲಿನಾಕಾರದಂತೆ ಚಾಚಿರುವುದನ್ನು ಕಾಣಬಹುದು ಇದನ್ನು 'ಹಸ್ತಿಹಸ್ತ' ಎಂದು ಕರೆಯುವರು. ಹಸ್ತಿಹಸ್ತದ ಕೆಳಭಾಗವು ಪೂರ್ತಿಯಾಗಿ ಒಂದೇ ಫಲಕದಂತೆಯೂ ಇರುವುದಕ್ಕೆ 'ಪಕ್ಷಶಿಲಾ' ಎಂದು ಹೆಸರು.

ಆನೆಗಳು ವಿಜಯನಗರ ಕಾಲದ ಶಿಲ್ಪಕಲಾಕೌಶಲ್ಯಕ್ಕೆ ಸಾಕ್ಷಿಭೂತವಾಗಿದೆ. ಈ ಎಡ ಮತ್ತು ಬಲ ಪಾರ್ಶ್ವದಲ್ಲಿರುವ ಪಕ್ಷಶಿಲಾದಲ್ಲಿ ಆನೆಯ ಉಬ್ಬುಶಿಲ್ಪವಿದೆ. ಈ ಆನೆಗಳು ಹಿಂಭಾಗದಲ್ಲಿ ವ್ಯಕ್ತಿಯೊಬ್ಬನು ಆನೆಯನ್ನು ತಿವಿಯುತ್ತಿರುವಂತಿದೆ ಮತ್ತು ಓಲಗ ಊದುವವನು. ತಮಟೆ ಬಾರಿಸುವವನು ಹಾಗೂ ಇವರ ಹಿಂದೆ ಜನರುಬರುತ್ತಿರುವ ಹಾಗೆ ಕೆತ್ತಿರುವ ಉಬ್ಬುಶಿಲ್ಪದ ಫಲಕಗಳನ್ನು ಕಾಣಬಹುದು. ಈ ಆನೆಗಳು ಸುಮಾರು 8 ಅಡಿ ಎತ್ತರವಿದೆ. ಈ ಆನೆಗಳ ಸೊಂಡಿಲಿನಿಂದ ವ್ಯಕ್ತಿಯೊಬ್ಬನನ್ನು ಸುತ್ತಿ ಹಿಡಿದುಕೊಂಡಿದೆ. ಈ ಶಿಲ್ಪವು ಆನೆಯ ದಾಳಿಗೆ ಸಿಕ್ಕು ತತ್ತರಿಸಿರುವ ವ್ಯಕ್ತಿಯೊಬ್ಬನನ್ನು ನೆನಪಿಸುತ್ತದೆ. ಈ ಆನೆಗಳ ಮುಂದೆ ಎರಡು ಸಿಂಹಗಳನ್ನು ಕೆತ್ತಿದ್ದಾರೆ. ಬಲಭಾಗದ ಆನೆಯ ಮೇಲ್ಭಾಗದಲ್ಲಿರುವ ಕಲ್ಲಿನ ಮೇಲೆ ಆರು ಜನ ಭಕ್ತರು ನಮಸ್ಕರಿಸುತ್ತಿರುವ ಉಬ್ಬುಶಿಲ್ಪವನ್ನು ಕಾಣಬಹುದು. ಈ ಮಹಾಮಂಟಪದಲ್ಲಿ 15 ಅಡಿ ಎತ್ತರವಿರುವ ಇಪ್ಪತ್ತು ಕಂಬಗಳಿವೆ. ಎಲ್ಲ ಕಂಬಗಳ ಮೇಲೆ ಆನೆ ಸಿಂಹ ಕೋತಿಗಳ ಚಿತ್ರಣವಿದೆ. ಕಥಾನಕಗಳ ಕೆತ್ತನೆಗಳು ಇಲ್ಲ. ಎಲ್ಲ ಕಂಬಗಳ ಕೆಳಗೆ ಸಿಂಹದ ಕೆತ್ತನೆಯ ಚಿತ್ರಣವಿರುವುದನ್ನು ಕಾಣಬಹುದು. ಈ ಎಡ ಮತ್ತು ಬಲಪಾರ್ಶ್ವಗಳಲ್ಲಿರುವ ವಿಶಾಲವಾದ ಕಂಬಗಳಿಂದ ಕೂಡಿರುವ ಜಾಗವಿದೆ. ಈ ಬಲಪಾರ್ಶ್ವದಲ್ಲಿರುವ ಕಂಬಗಳ ಸ್ಥಳದಲ್ಲಿ ಆಗಾಗ ಉತ್ಸವಮೂರ್ತಿಯನ್ನು ಇಟ್ಟು ಭಕ್ತರ ಅಭಿಷ್ಟೆಗಳನ್ನು ಈಡೇರಿಸುವುದಕ್ಕಾಗಿ ದೇವರಿಗೆ ಕಲ್ಯಾಣೋತ್ಸವ, ಗರುಡೋತ್ಸವ ಮುಂತಾದ ಪೂಜಾ ಕೈಂಕರ್ಯಗಳನ್ನು ದೇಗುಲದ ಆಗಮಿಕರು ನಡೆಸುತ್ತಾರೆ.

ಈ ದೇವಾಲಯ ವಿಜಯನಗರದ ಅರಸರ ಕಾಲದಲ್ಲಿ ವಿಸ್ತರಿಸಿದ್ದಕ್ಕೆ ಸಾಕ್ಷಿಯಾಗಿ ಈ ಮುಖಮಂಟಪದ ಬಲಭಾಗದ ಕಂಬವೊಂದರ ಮೇಲೆ ವಿಜಯನಗರದ ಲಾಂಛನವಿದೆ. ಈ ಲಾಂಛನವು ಸೂರ್ಯಚಂದ್ರ, ಮಧ್ಯಭಾಗದಲ್ಲಿ ಕತ್ತಿ ಹಾಗೂ ಈ ಕತ್ತಿಯ ಕೆಳಭಾಗದಲ್ಲಿ ವರಾಹ(ಹಂದಿ)ಯ ಚಿತ್ರಣವಿರುವುದನ್ನು ಕಾಣಬಹುದು.

ಈ ಮುಖಮಂಟಪದ ಹೊರ ಆವರಣದಲ್ಲಿ 'ಬಲಿಪೀಠ' ಇದೆ. ಸಾಮಾನ್ಯವಾಗಿ ದೇವರಿಗೆ ನೈವೇದ್ಯವಾದ ಪದಾರ್ಥಗಳನ್ನು (ಬಲಿಹರಣ) ಪರಿವಾರ ದೇವತೆಗಳಿಗೆ ಇಡಲು ಬಳಸುವ ಪೀಠಕ್ಕೆ 'ಬಲಿಪೀಠ' ಎಂದು ಹೆಸರಿದೆ. ದೇವರಿಗೆ ಎದುರಾಗಿ ಗರ್ಭಗೃಹ (ಅಥವಾ ಕೊನೆಯ ಮಂಟಪ) ಮತ್ತು ಅದರ ಮುಂದಿನ ಧ್ವಜ ಸ್ತಂಭದ ಮಧ್ಯೆ ಇರುವ ಈ ಬಲಿಪೀಠವು ದೇವಾಲಯದ ಅವಶ್ಯವಾದ ಭಾಗಗಳಲ್ಲಿ ಒಂದಾಗಿದೆ. ಇಲ್ಲಿರುವ ಬಲಿಪೀಠವು ಸುಂದಾರವಾದ ಕೆತ್ತನೆಯಿಂದ ಕೂಡಿದ್ದು ಈ ಪೀಠದ ಮೇಲೆ ಸ್ವಾಮಿಯ ಪಾದಗಳನ್ನು ಕೆತ್ತಿರುವ ಚಿತ್ರಣವಿದೆ. ಈ ದೇಗುಲಕ್ಕೆ ಆಗಮಿಸುವ ಭಕ್ತಾದಿಗಳು ಈ ಬಲಿಪೀಠಕ್ಕೆ ನಮಸ್ಕರಿಸಿ ದೇವಾಲಯವನ್ನು ಪ್ರವೇಶಿಸುವುದು ವಾಡಿಕೆ.

ಈ ಬಲಿಪೀಠದ ಎದುರಿನಲ್ಲಿಯೇ ಧ್ವಜಸ್ತಂಭವಿದೆ. ಈ ಧ್ವಜಸ್ತಂಭವನ್ನು ಲೋಹದಿಂದ ಮಾಡಲಾಗಿದ್ದು ಈ ಸ್ತಂಭದ ಪೀಠದಲ್ಲಿ ಶಂಖ ಚಕ್ರ, ಗರುಡಶಿಲ್ಪ ಮತ್ತು ಹನುಮಂತನ ಕೆತ್ತನೆಯ ಮೂರ್ತಿಗಳನ್ನು ಕಾಣಬಹುದು. ಚೌಕಾಕಾರದ ಪೀಠದ ಮೇಲೆ ಈ ಸ್ತಂಭವು ನಿಂತಿದ್ದು ಇದರ ತುದಿಯಲ್ಲಿ ಗರ್ಭಗೃಹಕ್ಕೆ ಎದುರಾಗಿ ಬಾವುಟವನ್ನು ಕಟ್ಟಲು ಮೂರು ಅಡ್ಡಪಟ್ಟಿಗಳನ್ನು ಕಟ್ಟಲಾಗುತ್ತದೆ. ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡ ಈ ದೇವಾಲಯ ಚೋಳರ ಶೈಲಿಯಲ್ಲಿದೆ, ದೇವಾಲಯದ ಅಂಗಗಳು, ಕೋಷ್ಟ, ಭಿತ್ತಿಯಮೇಲಿನ ಭಿತ್ತಪಾದ, ಗರ್ಭಗೃಹಕ್ಕೆ ಪಕ್ಕದಲ್ಲಿಯೇ ಕಟ್ಟಿರುವ ಪ್ರದಕ್ಷಿಣಪಥ, ಆಳ್ವಾರರ ಮೂರ್ತಿಗಳು ಇವೆಲ್ಲಾ ಚೋಳರ ಪ್ರಭಾವವನ್ನು ಸೂಚಿಸುತ್ತವೆ.

ಈ ಮಹಾದ್ವಾರದ ಮುಂದಿರುವ ಬಲಿಪೀಠದ ಬಲಪಾರ್ಶ್ವದಲ್ಲಿ ಶ್ರೀಮಹಾಲಕ್ಷ್ಮೀ ಅಮ್ಮನವರ ಮಂದಿರವಿದೆ. ಈ ಮಂದರವು ಮೂಲದೇವಾಲಯಕ್ಕೆ ಸೇರಿದಂತೆ ಅದರ ಆವರಣದೊಳಗೆ ಇದೆ.

ಶ್ರೀಮಹಾಲಕ್ಷ್ಮೀ ಅಮ್ಮನವರ ದೇವಾಲಯ

ಶ್ರೀಮಹಾಲಕ್ಷ್ಮೀ ಅಮ್ಮನವರ ದೇವಾಲಯವು ಗರ್ಭಗೃಹ, ಅರ್ಧಮಂಟಪ ಮತ್ತು ಮಹಾಮಂಟಪಗಳನ್ನು ಹೊಂದಿದೆ. ಈ ದೇವಾಲಯದ ಗರ್ಭಗೃಹ 5 ಅಡಿ ಹಾಗೂ 8 ಅಡಿ ಉದ್ದವಾಗಿದೆ. ಈ ಗರ್ಭಗುಡಿಯಲ್ಲಿ ಪದ್ಮಪೀಠದ ಮೇಲೆ ಕಪ್ಪು ಶಿಲೆಯಿಂದ ಕೆತ್ತಲ್ಪಟ್ಟ ಸುಂದರವಾದ ಮಹಾಲಕ್ಷ್ಮೀ ಅಮ್ಮನವರ ವಿಗಹ್ರವಿದೆ. ಈ ಮಹಾಲಕ್ಷ್ಮೀ ಅಮ್ಮನವರ ವಿಗ್ರಹ ಸುಮಾರು 2 ಅಡಿ ಎತ್ತರವಾಗಿದ್ದು 3 ಅಡಿ ಅಗಲವಾಗಿದೆ. 4 ಕೈಗಳನ್ನು ಹೊಂದಿರುವ ಶ್ರೀಮಹಾಲಕ್ಷ್ಮೀಯ ಮೇಲಿನ ಎರಡು ಕೈಗಳಲ್ಲಿ 1 ಹಸ್ತದಲ್ಲಿ ಮೊಗ್ಗಾಗಿರುವ ಪದ್ಮದಳ ಮತ್ತೊಂದು ಕೈಯಲ್ಲಿ ಅರಳಿರುವ ಪದ್ಮದಳವಿದೆ. ಕೆಳಗಿರುವ ಬಲಭಾಗದ ಹಸ್ತ ಅಭಯಹಸ್ತವಾಗಿದ್ದು

ಎಡಭಾಗದ್ದು ಕಂಠಹಸ್ತವನ್ನು ಒಳಗೊಂಡಿದೆ. ಶ್ರೀಚಂಪಕಧಾಮಸ್ವಾಮಿಯನ್ನು ಪ್ರತಿಷ್ಠಾಪಿಸಿದ ಶುಭಗಳಿಗೆಯಲ್ಲಿ ಈ ಮಹಾಲಕ್ಷ್ಮೀ ಅಮ್ಮನವರ ವಿಗ್ರಹವನ್ನು ಸಹ ಪ್ರತಿಷ್ಠಾಪಿಸಿದರೆಂದು ಇಲ್ಲಿನ ಆಗಮಿಕರು ಹೇಳುತ್ತಾರೆ. ಈ ದೇವಾಲಯವು ಸಹ ವಿಜಯನಗರದ ಅರಸರ ಕಾಲದ್ದು, ಅರಸರಿಂದ ಬಳುವಳಿಯಾಗಿ ಬಂದಿರುವ ದೀಪವೊಂದು ಈ ದೇವಿಯ ಮುಂದೆ ಉರಿಯುತ್ತಿರುತ್ತದೆ.

ವಿಜಯನಗರದ ಕಾಲದಲ್ಲಿ ತೆರೆದ ಮಹಾಮಂಟಪವಿತ್ತು, ಮುಖಮಂಟಪದ ಮೇಲ್ಭಾವಣೆಯಲ್ಲಿ ಶ್ರೀಚಕ್ರವನ್ನು ಕೆತ್ತಿದ್ದಾರೆ. ಈ ದೇವಾಲಯದ ಅರ್ಧಮಂಟಪದವರೆಗೆ ಭಕ್ತಾದಿಗಳು ಹೋಗಿ ಅಮ್ಮನವರ ದರ್ಶನವನ್ನು ಪಡೆಯಬಹುದು. ಮುಖಮಂಟಪದಲ್ಲಿ ಹಲವಾರು ಕಂಬಗಳಿದ್ದು ಎಲ್ಲಾ ಕಂಬಗಳಲ್ಲೂ ಸುಂದರವಾದ ಕೆತ್ತನೆಯ ದೃಶ್ಯಗಳನ್ನು ಕಾಣಬಹುದು. ಪ್ರತಿಕಂಬಗಳು ಚೌಕಾಕಾರದ ಮುಖಗಳನ್ನು ಹೊಂದಿದ್ದು ಸುಂದರವಾದ ಕೆತ್ತನೆಗಳಿಂದ ಕೂಡಿದೆ. ಈ ಕಂಬಗಳ ಭೋದಿಗೆಗಳಲ್ಲಿ ಹಲವಾರು ಚಿತ್ರಾಲಂಕಾರವನ್ನು ಕೆತ್ತನೆಯಿದ್ದು ಪುಷ್ಪಬೋದಿಗೆಯ ಕೆತ್ತನೆಯ ವೈಭವವನ್ನು ಸಹ ಕಾಣಬಹುದಾಗಿದೆ. ಈ ದೇಗುಲದ ಪ್ರತಿಕಂಬಗಳಲ್ಲಿ ಸುಂದರವಾದ ಪುಷ್ಪಗಳ ಚಿತ್ರಗಳನ್ನು ಕೆತ್ತಲಾಗಿದೆ. ಅವುಗಳಲ್ಲಿ ಗಮನಾರ್ಹವಾದವುಗಳೆಂದರೆ ಮಹಾಭಾರತದ ಸೌಗಂಧಿಕಪುಷ್ಪ ಪ್ರಕರಣದಲ್ಲಿ ಬರುವ ಪುರುಷಾಮೃಗ ಬಾಗವತದ ಗೋಪಿಕಾ ವಸ್ತ್ರಾಪಹರಣದ ದೃಶ್ಯ ಸೊಗಸಾಗಿದೆ.

ಅಶ್ವಾರೂಢಳಾದ ಸ್ತ್ರೀಯ ಕೆತ್ತನೆಯ ದೃಶ್ಯ ರಥಾರೂಢನಾದ ಪುರುಷ, ಕಾಳಿಂಗಮರ್ಧನ ಮತ್ತು ಯೋಗನರಸಿಂಹ ಶಿಲ್ಪಗಳು ಒಂದು ಕಂಬದಲ್ಲಿದ್ದರೆ ಮಹಾಭಾರತದ ಶಿಬಿಚಕ್ರವರ್ತಿಯ ಕಥೆಯ ಎರಡು ದೃಶ್ಯಗಳನ್ನು ಕೆತ್ತಲಾಗಿದೆ. ಕಂಬದ ಒಂದು ಭಾಗದಲ್ಲಿ ಶಿಬಿಚಕ್ರವರ್ತಿಯ ಬಳಿ ಶರಣಾಗತಿ ಯಾಚಿಸುತ್ತಿರುವ ಪಾರಿವಾಳ ಮತ್ತು ನ್ಯಾಯಕೇಳುತ್ತಿರುವ ಹದ್ದು ಈ ಎರಡರ ನಡುವೆ ಸಮಭಂಗಿಯಲ್ಲಿ ನಿಂತಿರುವ ಶಿಬಿಯ ಮೂರ್ತಿಯಿದೆ. ಇದರ ಪಕ್ಕದಲ್ಲಿಯೇ ತಕ್ಕಡಿಯಲ್ಲಿ ಕುಳಿತಿರುವ ಶಿಬಿ ಮತ್ತು ಪಾರಿವಾಳಗಳನ್ನು ಕೆತ್ತಿದ್ದಾರೆ, ಮತ್ತೊಂದು ಕಂಬದಲ್ಲಿ ವೃಕ್ಷಕನ್ಯೆ ಮತ್ತು ಗೋಪಿಕಾ ವಸ್ತ್ರಾಪಹರಣದ ದೃಶ್ಯಗಳಿದ್ದರೆ ವಾನರಯುದ್ಧ (ಬಹುಶಃ ವಾಲಿ–ಸುಗ್ರೀವರ ಕದನವಿರಬೇಕು) ವಾನರಸೈನ್ಯ ಯುದ್ಧ ಮಾಡುತ್ತಿರುವ ದೃಶ್ಯವಿದೆ ಸಾಮಾನ್ಯವಾಗಿ ಎಲ್ಲಾ ಕಂಬಗಳ ಕೆಳಭಾಗದಲ್ಲಿ ಸಿಂಹಗಳ ಮುಖವನ್ನು ಹೊಂದಿರುವ ಕೆತ್ತನೆದೃಶ್ಯ ಮನಮೋಹಕವಾಗಿದೆ. ಇನ್ನೊಂದು ಕೆತ್ತನೆಯಲ್ಲಿ ಆನೆಯು ಒಬ್ಬ ಯುವಕನನ್ನು ಕೊಲ್ಲುತ್ತಿರುವ ದೃಶ್ಯವಿದೆ. ಬಹುಶಃ ಇದು ವಿಜಯನಗರ ಕಾಲದಲ್ಲಿ ಕೊಡುತ್ತಿದ್ದ ಶಿಕ್ಷೆಯ ಚಿತ್ರಣವೋ ಅಥವಾ ದೇವಾಲಯದ ಸುತ್ತಿಮುತ್ತುಲು ಇದ್ದ ಕಾಡಾನೆಗಳು ಚಿತ್ರನವೋಗೊತ್ತಿಲ್ಲ, ಮೊತ್ತೊಂದರಲ್ಲಿ ಸ್ತ್ರೀಯೊಬ್ಬಳು ಕುದುರೆಯ ಮೇಲೆಕುಳಿತು ಯುದ್ಧಕ್ಕೆ ಸಿದ್ಧವಾಗಿರುವಂಥ ದೃಶ್ಯವಿದೆ, ಕೋತಿಯೊಂದು ಹಣ್ಣನ್ನು ತಿನ್ನುತ್ತಿರುವ ದೃಶ್ಯವಿದೆ. ಈ ದೃಶ್ಯ ಪ್ರಸ್ತುತ ಈ ದೇವಾಲಯದ ಗೋಪುರಗಳ ಮೇಲೆ ಇರುವ ಕೋತಿಗಳು ಪೂಜೆಗಾಗಿ ದೇವಾಲಯಕ್ಕೆ ಸೋಪಾನಗಳನ್ನು ಹತ್ತಿಕೊಂಡು ಆಗಮಿಸುವ ಭಕ್ತರ ಪೂಜಾಸಾಮಗ್ರಿಗಳನ್ನು ಕಿತ್ತುಕೊಂಡು ಹೋಗಿ ತಿನ್ನುವ ದೃಶ್ಯವನ್ನು ನೆನಪಿಸುತ್ತದೆ. ಈ ದೇಗುಲದ ಛಾವಣಿಯಲ್ಲಿ ಶ್ರೀಚಕ್ರದ ಪಕ್ಕದಲ್ಲಿ 2 ಮೀನುಗಳನ್ನು ಕೆತ್ತಲಾಗಿದೆ. ಮಹಾಮಂಟಪ ಸುಮಾರು 25 ಅಡಿ ಉದ್ದ ಮತ್ತು ಇಪ್ಪತ್ತೈದು ಅಡಿ ಅಗಲವಾಗಿದೆ. ಗರ್ಭಗೃಹ ಶಿಖರವನ್ನು ಹೊಂದಿದೆ. ಈ ಮಹಾಲಕ್ಷ್ಮೀ

ದೇವಾಲಯಕ್ಕೆ ಒಳಪ್ರಕಾರವಿಲ್ಲ ಹೊಪ್ರಾಕಾರವಿದೆ. ಈ ದೇವಾಲಯವು ದ್ರಾವಿಡ ಶೈಲಿಯಲ್ಲಿ ರಚನೆಯಾಗಿದೆ.

ಈ ದೇವಾಲಯವನ್ನು ಆಧುನಿಕವಾಗಿ ಜೀಣೋದ್ಧಾರವನ್ನು ಮಾಡಿದ್ದು ಗೋಡೆ ಮತ್ತು ತಳಭಾಗಕ್ಕೆ ಗ್ರಾನೈಟ್ ಕಲ್ಲುಗಳನ್ನು ಹಾಕಿ ಸುಂದರವಾಗಿರುವಂತೆ ರಚಿಸಲಾಗಿದೆ.

ಈ ಮಹಾಲಕ್ಷ್ಮೀ ದೇವಾಲಯದ ಪಕ್ಕದಲ್ಲಿಯೇ ಅರಳಿಕಟ್ಟೆ ಮತ್ತು ನಾಗರಕಲ್ಲುಗಳಿವೆ. ಇಲ್ಲಿರುವ ಅರಳಿವೃಕ್ಷವೂ ಬಹಳ ವರ್ಷಗಳ ಹಳೆಯವಾಗಿರುವಂತೆ ಕಾಣುತ್ತಿದೆ. ಈ ನಾಗರಕಟ್ಟೆಯಲ್ಲಿ ಪ್ರತಿಷ್ಠಾಪಿಸಲಾಗಿರುವ ಈ ನಾಗರಕಲ್ಲುಗಳು ಬಹಳ ವರ್ಷಗಳ ಕಾಲದೆಂದು ಭಾಸವಾಗುತ್ತದೆ. ಈ ನಾಗರಕಲ್ಲುಗಳು ಸುಮಾರು 10–13 ಸಂಖ್ಯೆಯಲ್ಲಿದ್ದು ಎರಡು ರಿಂದ ಮೂರು ಅಡಿ ಎತ್ತರವಾಗಿದೆ. ಈ ನಾಗರಕಟ್ಟೆಯ ಶೈಲಿಯನ್ನು ಗಮನಿಸಿದರೆ ಹದಿನೆಂಟು ಮತ್ತು ಹತ್ತೊಂಬತ್ತನೇ ಶತಮಾನದಲ್ಲಿ ನಿರ್ಮಾಣವಾದಂತೆ ತೋರುತ್ತದೆ. ಈ ಹಳೆಯ ನಾಗರಕಲ್ಲುಗಳ ಮುಂದೆ ಹೊಸದಾಗಿ ಆಧುನಿಕ ಶೈಲಿಯಲ್ಲಿ ಹೊಸದಾಗಿ ನಾಗರಕಲ್ಲುಗಳನ್ನು ಪ್ರತಿಷ್ಠಾಪಿಸಿರುವುದನ್ನು ಕಾಣಬಹುದು. ಈ ನಾಗರಕಲ್ಲುಗಳನ್ನು ಹೊಂದಿರುವ ಈ ಅಶ್ವಥಕಟ್ಟೆಗೆ ನಾಗರಪಂಚಮಿ ಅಥವಾ ಷಷ್ಠಿಯ ದಿನದಂದು ಹೆಂಗಳೆಯರು ನಸುಕಿನಲ್ಲಿಯೇ ಎದ್ದು ಸ್ನಾನ ಮಾಡಿ ಮಡಿಯೊಂದಿಗೆ ಹೋಗಿ ನಾಗಪ್ಪನಿಗೆ ಹಾಲು, ತುಪ್ಪ, ಜೇನುತುಪ್ಪ, ಬೆರೆಸಿ ತನಿ ಎರೆಯುವರು, ನಾಗಪೂಜೆಯಿಂದ ಸರ್ಪದೋಷ ವಿಮೋಚನೆಯಾಗುತ್ತದೆ, ಸಾಮಾನ್ಯವಾಗಿ ಮಕ್ಕಳಿಲ್ಲದವರಿಗೆ ಮಕ್ಕಳಾಗುತ್ತದೆ, ಮದುವೆಯಾಗದವರಿಗೆ ಮದುವೆಯಾಗುತ್ತದೆ ಎಂಬ ನಂಬಿಕೆ ಪ್ರಚಲಿತದಲ್ಲಿದೆ, ಪ್ರತಿಮಾಸದ ಪಂಚಮಿ, ಷಷ್ಠಿಗಳಂದು ಶ್ರದ್ಧಾಭಕ್ತಿಗಳಿಂದ ನಾಗರಾಧನೆ ಮಾಡುವರು. ಜೈನರು "ಶ್ರಾವಣ ಶುದ್ಧ ಪಂಚಮಿ"ಯನ್ನು 'ನಾಗಪಂಚಮಿ' ಎಂದು 'ಮಾರ್ಗರ ಶುದ್ಧ ಪಂಚಮಿ'ಯನ್ನು "ನಾಗದೀವಾಲಿ" ಎಂದು ಆಚರಿಸುವರು. ಪಡುವಲಕಾರಿ, ಹೀರೆಕಾಯಿ, ಸಿಹಿಕುಂಬಳ ಹಾಕಿದ ಸಾರು ಮಾಡುತ್ತಾರೆ. ಈ ದಿನ ತರಕಾರಿಗಳನ್ನು ಅಕ್ಕಪಕ್ಕದ ಮನೆಗಳಿಗೆ ಹಂಚುವ ಸಂಪ್ರದಾಯ ಬ್ರಾಹ್ಮಣರಲ್ಲಿದೆ. ಅದನ್ನು ಅಂದೇ ಬಳಸಬೇಕು, ತರಕಾರಿ ವಿನಿಮಯ ಮಾಡಿಕೊಳ್ಳುವುದು ಈ ಹಬ್ಬದ ವೈಶಿಷ್ಟ್ಯ[22].

ಶ್ರೀಲಕ್ಷ್ಮೀನರಸಿಂಹ ದೇವಾಲಯ

ಶ್ರೀ ಚಂಪಕಧಾಮಸ್ವಾಮಿ ದೇವಸ್ಥಾನದ ಹಿಂಭಾಗದ ಎತ್ತರವಾಗಿರುವ ವಹ್ನಿಗಿರಿ ಬೆಟ್ಟದ ಮೇಲಿರುವ ದೇಗುಲವೇ ಶ್ರೀಲಕ್ಷ್ಮೀನರಸಿಂಹಸ್ವಾಮಿ ದೇವಾಲಯ. ಈ ದೇವಾಲಯ ಸುಮಾರು 15–20 ವರ್ಷಗಳ ಹಿಂದೆ ಒಂದು ಚಿಕ್ಕ ದೇಗುಲವಾಗಿತ್ತು. ಪ್ರಸ್ತುತ ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದ್ದು ವಿಜಯನಗರ ಕಾಲದ ಶೈಲಿಯಲ್ಲಿದೆ. ಗಾರೆ ಕೆತ್ತನೆಗಳಿಂದ ಮತ್ತು ಗ್ರಾನೈಟ್ ಕಲ್ಲುಗಳಿಂದ ಈ ದೇವಾಲಯಕ್ಕೆ ಆಧುನಿಕವಾದ ವಸ್ತುಗಳನ್ನು ಬಳಸಿ ಅಲಂಕಾರಯುತವಾಗಿ ನಿರ್ಮಿಸಿದ್ದಾರೆ.

ತಳವಿನ್ಯಾಸದಲ್ಲಿ ಈ ದೇವಾಲಯವನ್ನು ಎತ್ತರವಾದ ವೇದಿಕೆಯ ಮೇಲೆ ನಿರ್ಮಿಸಿದ್ದಾರೆ. ಈ ದೇವಾಲಯವು ಗರ್ಭಗೃಹ, ಮಹಾಮಂಟಪ ಮತ್ತು ಮುಖ ಮಂಟಪವನ್ನು ಹೊಂದಿದೆ.

[22] ಹನುಸೋಗೆ ಒಂದು ಸಾಂಸ್ಕೃತಿಕ ಅಧ್ಯಯನ, ಲೇ : ಡಾ. ರಾಧ ಹನುಸೋಗೆ, ಪು – 431

ಗರ್ಭಗುಡಿಯಲ್ಲಿರುವ ಶ್ರೀಲಕ್ಷ್ಮೀನರಸಿಂಹ ಮೂರ್ತಿಯು ಮೂರು ಅಡಿ ಎತ್ತರವಿದ್ದು ಕಪ್ಪು ಶಿಲೆಯಿಂದ ಕೆತ್ತಲ್ಪಟ್ಟಿದೆ. ನರಸಿಂಹಸ್ವಾಮಿಯ ಎಡಭಾಗದ ತೊಡೆಯ ಮೇಲೆ ಲಕ್ಷ್ಮೀದೇವಿಯು ಆಸೀನಳಾಗಿದ್ದಾಳೆ. ನರಸಿಂಹ ಮೂರ್ತಿಯು ನಾಲ್ಕು ಕೈಗಳನ್ನು ಹೊಂದಿದ್ದು ಮೇಲಿನ ಎರಡು ಕೈಗಳಲ್ಲಿ ಶಂಖ ಚಕ್ರವನ್ನು ಬಲಭಾಗದ ಒಂದು ಕೈ ಅಭಯಮುದ್ರೆಯನ್ನು ಎಡಭಾಗದ ಕೈಯಿಂದ ತನ್ನ ತೊಡೆಯ ಮೇಲೆ ಆಸೀನಳಾಗಿರುವ ಮಹಾಲಕ್ಷ್ಮೀಯನ್ನು ಹಿಡಿದುಕೊಂಡಿರುವಂತೆ ಕಾಣುತ್ತದೆ. ಇಲ್ಲಿ ನರಸಿಂಹನು ಸಿಂಹದ ಮುಖವನ್ನು ಹೊಂದಿದ್ದು ಉಗ್ರಸ್ವರೂಪವಾಗಿ ಭಯಾನಕವಾಗಿ ಘರ್ಜಿಸುವಂತೆ ಕಂಡರೆ ಮಹಾಲಕ್ಷ್ಮೀದೇವಿಯು ಸೌಮ್ಯಸ್ವರೂಪದ ಮುಖಭಾವವನ್ನು ಹೊಂದಿ ಪ್ರಸನ್ನಚಿತ್ತಳಾಗಿದ್ದಾಳೆ. ಇಲ್ಲಿ ಲಕ್ಷ್ಮಿಯು ಎರಡು ಕೈಗಳನ್ನು ಮಾತ್ರ ಹೊಂದಿದ್ದಾಳೆ. ವಸ್ತುತಃ ಈ ದೃಶ್ಯವು ನಮಗೆ ಪ್ರಸ್ತುತ ಸಮಾಜದಲ್ಲಿ ಗಂಡಿನ ಪರಾಕ್ರಮದ ಮುಂದೆ ಹೆಣ್ಣಿನ ದೀನ ಸ್ಥಿತಿಯನ್ನು ಸಂಕೇತಿಸುವಂತಿದೆ. ಈ ಗರ್ಭಗುಡಿಯ ಸುತ್ತಲೂ ಪ್ರದಕ್ಷಿಣಾಪಥವಿದೆ. ದೇವರ ದರ್ಶನಕ್ಕೆ ಬರುವ ಭಕ್ತರು ವ್ಯವಸ್ಥಿತವಾದ ದರ್ಶನ ಪಡೆಯಲು ಗರ್ಭಗುಡಿಯ ಮುಂಭಾಗದಲ್ಲಿ ಸರಳುಗಳಿಂದ ಕಟಕಟೆಯನ್ನು ನಿರ್ಮಿಸಿದ್ದಾರೆ. ಈ ಮಹಾಮಂಟಪದ ಬಲಪಾರ್ಶ್ವದಲ್ಲಿ ಒಂದು ದ್ವಾರವಿದೆ. ದರ್ಶನ ಪಡೆದ ಭಕ್ತಾದಿಗಳು ಈ ದ್ವಾರದ ಮೂಲಕ ಹೊರಹೋಗಬಹುದು. ಮುಖಮಂಟಪವು ವಿಶಾಲವಾಗಿದ್ದು ಗ್ರಾನೈಟ್ ಕಲ್ಲುಗಳಿಂದ ಸಿಂಗರಿಸಿದ್ದಾರೆ. ಇಲ್ಲಿ ದೇವರಿಗೆ ಎದುರಾಗಿ ಧ್ವಜಸ್ತಂಭವನ್ನು ನಿರ್ಮಿಸಿದ್ದಾರೆ. ದರ್ಶನಪಡೆದ ಭಕ್ತಾದಿಗಳು ಇಲ್ಲಿನ ಮುಖಮಂಟಪದಲ್ಲಿ ಕುಳಿತು ಸ್ವಲ್ಪಕಾಲ ವಿಶ್ರಮಿಸಿ ಇಲ್ಲವೇ ಧಾನ್ಯಾಸಕ್ತರಾಗಿ ನಂತರ ಈ ದೇಗುಲದಿಂದ ನಿರ್ಗಮಿಸುತ್ತಾರೆ. ಈ ಮುಖಮಂಟಪದಲ್ಲಿಯೂ ಸಹ ಪ್ರದಕ್ಷಣಾಪಥವಿದೆ. ಈ ದೇವಾಲಯಕ್ಕೆ ಎರಡು ದ್ವಾರಗಳಿವೆ. ಅಧುನಿಕ ಸಲಕರಣೆಗಳನ್ನು ಬಳಸಿಕೊಂಡು ಈ ದೇಗುಲವನ್ನು ವಿಜಯನಗರ ಕಾಲದ ಶೈಲಿಯಲ್ಲಿ ನಿರ್ಮಿಸಿದ್ದಾರೆ. ಈ ದೇವಾಲಯಕ್ಕೆ ತೆರಳಲು ಬೆಟ್ಟದ ಅಂಚಿನಿಂದ ತುದಿಯವರೆಗೂ ಸುಮಾರು 130 ಮೆಟ್ಟಿಲುಗಳನ್ನು ನಿರ್ಮಿಸಿದ್ದಾರೆ. ಈ ಮೆಟ್ಟಿಲುಗಳಿಗೆ ಸರಳುಗಳನ್ನು ನಿರ್ಮಿಸಿರುವುದರಿಂದ ಬೀಳುವಭಯವಿಲ್ಲ. ಈ ಬೆಟ್ಟದ ಮೇಲಿಂದ ಹಸಿರಿನ ವನರಾಶಿಯಿಂದ ಕಂಗೊಳಿಸುತ್ತಿರುವ ಪ್ರಕೃತಿಯ ಸೊಬಗನ್ನು ವೀಕ್ಷಿಸಬಹುದು. ಪ್ರಶಾಂತವಾದ ವಾತಾವರಣವಿರುವ ಈ ಪ್ರದೇಶ. ಮನಸ್ಸಿಗೆ ಮುದ ನೀಡುತ್ತದೆ. ಹೀಗಾಗಿ ಈ ದೇವಾಲಯವು ಪ್ರವಾಸಿಗರನ್ನು ಪ್ರವಾಸಿಗರನ್ನು, ಪ್ರೇಮಿಗಳನ್ನು ಮತ್ತು ಆಧ್ಯಾತ್ಮಿಕತೆಯನ್ನು ಅರಸಿಬರುವ ಭಕ್ತಾದಿಗಳನ್ನು ತನ್ನತ್ತ ಆಕರ್ಷಿಸುತ್ತದೆ.

ಪುರಾತನ ಕಾಲದ ಅಪೂರ್ಣ ಕಟ್ಟಡ

ವಹ್ನಿಗಿರಿ ಬೆಟ್ಟದ ಮೇಲಿರುವ ಶ್ರೀಲಕ್ಷ್ಮೀನರಸಿಂಹಸ್ವಾಮಿ ದೇವಾಲಯದ ಪಕ್ಕದಲ್ಲಿ ಒಂದು ಪಾಳುಬಿದ್ದಿರುವ ಕಟ್ಟಡವಿದೆ. ಇದು ಕೋಟೆಯೋ, ದೇವಸ್ಥಾನವೋ ತಿಳಿಯದು. ಸ್ಥಳೀಯರು ಈ ಕಟ್ಟಡವನ್ನು 'ದಿಮ್ಮಟ' ಎಂದು ಕರೆಯುತ್ತಾರೆ, ಈ ಕಟ್ಟಡವು ದೊಡ್ಡದಾದ ಕಲ್ಲಿನ ರಚನೆಯಿಂದ ಚೌಕಾಕಾರವಾಗಿ ನಿರ್ಮಿಸಿದ್ದಾರೆ. ಸುಮಾರು ಹತ್ತರಿಂದ ಹನ್ನೆರಡು ಅಡಿ ಎತ್ತರದಲ್ಲಿರುವ ಕಟ್ಟಡದ ರಚನೆಯ ಕೆಲಸ ಅರ್ಧಕ್ಕೆ ನಿಂತು ಪಾಳುಬಿದ್ದಿರುವ ಸ್ಥಿತಿಯಲ್ಲಿದೆ. ಈ ಕಟ್ಟಡದ ಪಾಯದ ರಚನೆ ಕಲ್ಲಿನಿಂದ ಕೂಡಿದೆ, ಪ್ರತಿಯೊಂದು ಕಲ್ಲನ್ನು ಸಹ ವ್ಯವಸ್ಥಿತವಾಗಿ ಕೆತ್ತಿ ಈ ಕಟ್ಟಡಕ್ಕೆ ಅಳವಡಿಸಿದ್ದಾರೆ. ಈ ಕಟ್ಟಡದ ಮಧ್ಯಭಾಗದಲ್ಲಿ ಒಂದು ಗರುಡಸ್ತಂಭವಿದ್ದು, ಇದು ದೇವಾಲಯವನ್ನು ಕಟ್ಟಲು ಹಾಕಿರುವ ಪಾಯವಿರಬೇಕೆಂದು ಬಹುಶಃ ಇಲ್ಲಿ ಮತ್ತೊಂದು ದೇವಾಲಯವನ್ನು ಕಟ್ಟುತ್ತಿದ್ದರೆಂದು

ಊಹಿಸಬಹುದು. ಬೆಟ್ಟದ ಕಲ್ಲಿನಲ್ಲಿ ಕಟ್ಟಡಗಳನ್ನು ನಿರ್ಮಿಸಲು ಇಲ್ಲಿಗೆ ಬೇಕಾದ ಕಲ್ಲಿನ ಕಂಬಗಳನ್ನು ಕೊರೆತು ತೆಗೆಯಲು ಮಾಡಿದ ಗುರುತುಗಳನ್ನು ಕಾಣಬಹುದು. ಈ ಪ್ರದೇಶದಲ್ಲಿ ಆನೆಗಳು ಹೆಚ್ಚಾಗಿದ್ದುದರಿಂದ ಪ್ರಾಯಶಃ. ಈ ಕಲ್ಲಿನ ಕಂಬಗಳನ್ನು ಎತ್ತಲು ಮತ್ತು ಸಾಗಿಸಲು ಇವುಗಳ ಸಹಾಯವನ್ನು ಪಡೆದಿರಬಹುದೆಂದು ಹೇಳಬಹುದಾಗಿದೆ.

ಶ್ರೀಲಕ್ಷ್ಮೀನರಸಿಂಹಸ್ವಾಮಿ ದೇವಾಲಯದ ಆಗಮಿಕರ ಅಭಿಪ್ರಾಯದಂತೆ ಬೆಟ್ಟದ ಮೇಲೆ ಅರ್ಧಕ್ಕೆ ನಿಂತು ಪಾಳುಬಿದ್ದಿರುವ ಈ ಕಲ್ಲಿನ ಕಟ್ಟಡವು ಚಂಪಕಧಾಮಸ್ವಾಮಿ ದೇವಾಲಯದ ಕಟ್ಟಡವೆಂದು ಪ್ರಾಯಶಃ ಬೆಟ್ಟದ ತುದಿಯಲ್ಲಿ ಈ ದೇಗುಲವನ್ನು ನಿರ್ಮಿಸಿದರೆ. ದರ್ಶನಕ್ಕೆ ಆಗಮಿಸುವ ಮಕ್ಕಳು, ವಯಸ್ಸಾದವೃದ್ಧರು, ಗರ್ಭಿಣಿಮಹಳಿಯರಿಗೆ ಬೆಟ್ಟ ಹತ್ತಲು ಕಷ್ಟವಾಗುತ್ತದೆಂದು ಬೆಟ್ಟದ ಬುಡದಲ್ಲಿ ಈ ದೇಗುಲವನ್ನು ನಿರ್ಮಿಸಿರಬೇಕೆಂದು ಹೇಳುತ್ತಾರೆ. ಅರ್ಧಕ್ಕೆ ನಿಂತು ಪಾಳುಬಿದ್ದಿರುವ ಕಟ್ಟಡವು ಅಪಶಕುನವಾಗದಂತೆ ಈ ಕಟ್ಟಡದ ಮಧ್ಯಭಾಗದಲ್ಲಿ ಒಂದು ಗರುಡಸ್ತಂಭವನ್ನು ನಿರ್ಮಿಸಿದ್ದಾರೆಂದು ಈ ಗ್ರಾಮದ ಮತ್ತೊಬ್ಬ ಹಿರಿಯರ ಅಭಿಪ್ರಾಯವಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ ಜನಸಾಮಾನ್ಯರು ಈ ಪಾಳು ಬಿದ್ದ ಕಟ್ಟಡವನ್ನು ವೀಕ್ಷಿಸಿದಾಗ ಇದು ದೇವಾಲಯ ನಿರ್ಮಾಣಕ್ಕೆ ಕಟ್ಟಿದ ಕಲ್ಲಿನ ಕಟ್ಟಡವೆಂದು ಕಾರಣಾಂತರಗಳಿಂದ ಕಾಲದ ಸುಳಿಗೆ ಸಿಕ್ಕಿ ಈ ದೇಗುಲ ಅರ್ಧಕ್ಕೆ ನಿಂತು ಹೋಗಿದೆ ಎಂದು ತಿಳಿಯಬಹುದು. ಪ್ರಸ್ತುತ ಈ ಕಟ್ಟಡದ ಮೇಲೆ ಪ್ರೇಮಿಗಳು ಹಲವಾರು ರೀತಿಯ ಚಿತ್ರವಿಚಿತ್ರ ಬರಹಳಿಂದ ತಮ್ಮ ಪ್ರೇಮವೇದನೆಯನ್ನು ಮಾಡಿಕೊಂಡಿರುವ ದೃಶ್ಯಗಳನ್ನು ಕಾಣಬಹುದು. ಈ ಅಸಭ್ಯ ಚಿತ್ರಗಳು, ಬರಹಗಳಿಂದ ತುಂಬಿರುವ ಈ ಐತಿಹಾಸಿಕ ಕಟ್ಟಡವು ಪ್ರಸ್ತುತ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುತ್ತಿದೆ.

ಸುವರ್ಣಮುಖಿ ಸರೋವರ

ಸುವರ್ಣಮುಖಿ ಸರೋವರವೂ ವಹ್ನಿಗಿರಿ ಬೆಟ್ಟದ ತುದಿಯಿಂದ ಸುಮಾರು ಎರಡು ಕಿ.ಮಿ ದೂರದಲ್ಲಿದೆ. ಈ ಬೆಟ್ಟ ಹತ್ತಿದವರು ನೋಡಲೇಬೇಕಾದ ಮತ್ತೊಂದು ಸ್ಥಳ ಇದಾಗಿದ್ದು ಕಾಲ್ನಡಿಗೆಯಲ್ಲಿ ಈ ಸರೋವರಕ್ಕೆ ಹೋಗಬೇಕು. ದಾರಿಯುದ್ದಕ್ಕೂ ನೆರಳುಬಿಸಿಲಿನಾಟ, ಹಕ್ಕಿಗಳ ಕಲರವ, ಸುತ್ತಲೂ ಹಸಿರಿನಿಂದ ಕಂಗೊಳಿಸುವ ವೃಕ್ಷವನ, ಅಲ್ಲಲ್ಲಿ ನೀಲಗಿರಿ, ಬಿದಿರುಗಳ ಸಾಲು, ಇವೆಲ್ಲ ಮನಸ್ಸಿಗೆ ಮುದ ನೀಡುವಂತಿದ್ದರೆ. ಎಲ್ಲಿ ಕಾಡು ಪ್ರಾಣಿಗಳು ದರ್ಶನವಾಗುವುದೋ ಎಂಬ ಆತಂಕ ಇರುವುದಂತೂ ಸಹಜವೇ, ಮಾರ್ಗಮಧ್ಯೆ ಒಂದ ಮೇಲೊಂದರಂತೆ ಮೂರು ಕಲ್ಲುಗಳನ್ನು ಜೋಡಿಸಿರುವ ಕಲ್ಲುಗುಪ್ಪೆಗಳು ಕಾಣುತ್ತದೆ. ಇವು ಭಕ್ತರ ಕೋರಿಕೆಯ ಪ್ರತೇಕವಾಗಿ ಬಂಡೆಯುದ್ಧಕ್ಕೂ ಕಾಣುವ ರಾಶಿರಾಶಿ ಕಲ್ಲುಗಳ ಜೋಡಣೆಯಿದೆ. ಇವುಗಳ ನಡುವ ಏಳುಸುತ್ತಿನ ಕೋಟೆಯ ರಚನೆಯಿದೆ. ಇದು ಅನೇಕ ಕಲ್ಲುಗಳ ಜೋಡಣೆಯಿಂದ ರಚಿತವಾಗಿದೆ. ಇದು ನಮಗೆ ಪ್ರಾಗೈತಿಹಾಸಿಕ ಕಾಲದ ಪ್ರತೀಕವಾಗಿ ಈ ಪ್ರದೇಶದಲ್ಲಿ ರಚನೆಯಾಗಿದೆ. ಒಂದೆಡೆ ಬಿಸಿಲಬೇಗೆ

ಮತ್ತೊಂದೆಡೆ ತಂಪಾದ ತಂಗಾಳಿ. ಈ ರೀತಿಯ ಸ್ವಚ್ಛಂದ ಪರಿಸರದ ಸ್ವಾದವನ್ನು ಸವಿಯುತ್ತಾ ಹೊರಟರೆ ಸಿಗುವುದೇ ಸುವರ್ಣಮುಖಿ ತೀರ್ಥಕ್ಷೇತ್ರ.

ಕ್ರಿ.ಶ. 1819ರಲ್ಲಿ ಬೆಂಗಳೂರಿನ ಫೌಜೇದಾರನಾಗಿದ್ದ ಲಿಂಗರಾಜೇ ಅರಸ ಅವರು ಈ ಸುವರ್ಣಮುಖಿ ತೀರ್ಥಕ್ಕೆ ನೂತನವಾಗಿ ಹತ್ತೊಂಬತ್ತು ಮೆಟ್ಟಿಲುಗಳುಳ್ಳ ಸುಂದರವಾದ ಸೋಪಾನಗಳನ್ನು ಮತ್ತೆ ಯಾತ್ರಿಕರು ತಂಗಲು ಕೆಲವು ಮಂಟಪಗಳನ್ನು ನಿರ್ಮಿಸಿದನೆಂದು ಈಗ ಅಂಭಾಭವಾನಿ ಆಶ್ರಮವಾಗಿರುವ ಮಂಟಪದಲ್ಲಿನ ತೊಲೆಯ ಮೇಲಿನ ಶಾಸನದಿಂದ ತಿಳಿದು ಬರುತ್ತದೆ.

ಈ ಸುವರ್ಣಮುಖಿ ತೀರ್ಥದ ಜಲವು ಘಟ್ಟದ ತಳಭಾಗದಿಂದ ಶಿಲೆಯ ಒಳಪದರಗಳ ಮೂಲಕ ಹಾದು ಚಿಲುಮೆಗೊಂಡು ವಿವಿಧ ಖನಿಜಯುಕ್ತವಾದ ರೋಗನಿವಾರಕ ಗುಣಗಳನ್ನು ಹೊಂದಿದೆ. ಸ್ಥಳೀಯರು ಈ ಸುವರ್ಣಮುಖಿ ಸರೋವರಕ್ಕೆ ಸಂಬಂಧಿಸಿದಂತೆ ಪೌರಾಣಿಕ ಹಿನ್ನೆಲೆ ಇರುವ ಒಂದು ಸ್ವಾರಸ್ಯಕರವಾದ ದಂತಕತೆಯನ್ನು ಈ ರೀತಿಯಾಗಿ ಹೇಳುತ್ತಾರೆ.

ಒಮ್ಮೆ ಜನಮೇಜಯ ರಾಜನಿಗೆ ಕುಷ್ಠರೋಗ ಬಂದಿತಂತೆ, ರಾಜನು ಒಂದು ದಿನ ಕಾಡು ಪ್ರಾಣಿಗಳ ಬೇಟೆಗಾಗಿ ಬೇಟೆನಾಯಿಯೊಂದಿಗೆ ಈ ಸ್ಥಳಕ್ಕೆ ಬಂದನಂತೆ ಬೇಟೆನಾಯಿ ಬಿಸಿಲ ಬೇಗೆಯನ್ನು ತಾಳಲಾರದೇ ನೀರಿರುವ ಒಂದು ಗುಂಡಿಯಲ್ಲಿ ಒದ್ದಾಡಿ ಬಂದು ವಿಶ್ರಾಂತಿ ಪಡೆಯುತ್ತಿದ್ದ ರಾಜನ ಮುಂದೆ ಮೈಕೊದರಿದಾಗ ಆ ನೀರು ರಾಜನ ಮೈಮೇಲೆ ಬಿದ್ದ ಕ್ಷಣದಲ್ಲೇ ಚರ್ಮ ಸುವರ್ಣವರ್ಣದಂತೆ ಕಾಂತಿಯುತವಾಯಿತಂತೆ. ಇದರಿಂದ ಆಶ್ಚರ್ಯಗೊಂಡ ರಾಜನು ಆ ಸ್ಥಳವನ್ನು ಕಂಡು ಇಲ್ಲಿ ಸುವರ್ಣಮುಖಿ ಕೊಳವನ್ನು ನಿರ್ಮಿಸಿದ್ದಾನೆ ಎಂಬ ಪ್ರತೀತಿಯಿದೆ.

ತ್ರೇತಾಯುಗದಲ್ಲಿ ರಾಮಸೀತೆಯರು ವನವಾಸಕ್ಕೆ ಬಂದಾಗ ಸೀತೆ ಇಲ್ಲಿ ಸ್ನಾನ ಮಾಡಿದಳು ಎಂಬ ಪ್ರತೀತಿ ಇದೆ.

ಚರ್ಮವ್ಯಾದಿ ಇರುವವರು ಈ ಸುವರ್ಣಮುಖಿ ಕೊಳದಲ್ಲಿ ಸ್ನಾನ ಮಾಡಿದರೆ ಚರ್ಮವ್ಯಾದಿ ಕಾಯಿಲೆಗಳು ವಾಸಿಯಾಗುತ್ತವೆ ಎಂಬ ಬಲವಾದ ನಂಬಿಕೆಯಿದೆ.

ಈ ತೀರ್ಥದ ಸಮೀಪದಲ್ಲೇ ದಾರಿಯಲ್ಲಿರುವ ಮಂಟಪಗಳಲ್ಲಿ ಸ್ಥಾನಪಲ್ಲಟಗೊಂಡಿರುವ ಶಿವಲಿಂಗ ಹಾಗೂ ಗಣಪತಿ ವಿಗ್ರಹಗಳು, ರಾಮಲಿಂಗೇಶ್ವರ ದೇವಾಲಯ, ನಂದಿ ವಿಗ್ರಹ ಎಲ್ಲವನ್ನೂ ಶಿಲ್ಪದ ದೃಷ್ಟಿಯಿಂದ ಗಮನಿಸಿದರೆ ವಿಜಯನಗರಕಾಲದಲ್ಲಿ ಶೈವ ಹಾಗೂ ವೈಷ್ಣವರ ಪುಣ್ಯಕ್ಷೇತ್ರವಾಗಿದ್ದಿರಬಹುದೆಂದು ತೋರುತ್ತದೆ.

ಇಂತಹ ಪುಣ್ಯಕ್ಷೇತ್ರಕ್ಕೆ 1958ರಲ್ಲಿ ಬೆಂಳೂರಿನಿಂದ ಆಯುರ್ವೇದ ಪಂಡಿತ ಕೆ.ದಶರಥರಾವ್ ರೊಣ್ಣೋರೆ ದಂಪತಿ ಆಗಮಿಸಿ ಈ ಕ್ಷೇತ್ರದ ಉಸ್ತುವಾರಿಯನ್ನು ನೋಡುತ್ತಾ ವಾಸಿಸತೊಡಗಿದರು.

[23]1963ರಲ್ಲಿ ಸಕಾಲಕ್ಕೆ ಮಳೆಯಾಗದ ಕಾರಣ ಈ ಸರೋವರದ ಜಲವು ಬತ್ತಿಹೋಯಿತು. ಆಗ ರೋಣ್ಣೋರೆ ಅವರು ಆಗಿನ ಆನೇಕಲ್ ತಾಲ್ಲೂಕಿನ ತಹಶೀಲ್ದಾರ್ ಆದ ಭರ್ಮಪ್ಪ ಮತ್ತು ಊರಿನ ಗ್ರಾಮಸ್ಥರ ನೆರವಿನಿಂದ ಈ ಸರೋವರವನ್ನು ಶುದ್ಧೀಕರಿಸಿದರು. ನಂತರ ಮಳೆಬಂದು ಸರೋವರ ತುಂಬಿತು. ರೊಣ್ಣೋರೆ ತಮ್ಮ ಕುಲದೇವತೆಯಾದ ಅಂಬಾಭವಾನಿ ಆಶ್ರಯವನ್ನು ಮತ್ತೇ ಭವಾನಿಶಂಕರ ಮಂದಿರವನ್ನು ಸ್ಥಾಪಿಸಿ 26.11.1983ರಂದು ವಿಧಿವಶರಾದರು ಎಂಬ ವಿಷಯವನ್ನು ವಿದ್ವಾಂಸರಾದ ಡಾ॥ ವೇಮಗಲ್ ಸೋಮಶೇಖರ ಅವರು ಪ್ರಜಾವಾಣಿ ಲೇಖನದಲ್ಲಿ ಉಲ್ಲೇಖಿಸಿದ್ದಾರೆ.

ಕ್ಷೇತ್ರಕಾರ್ಯದ ನಿಮಿತ್ತ ನಾನು ಈ ತೀರ್ಥಕ್ಷೇತ್ರದ ಬಳಿ ಆಗಮಿಸಿದ್ದೆ. ಸುಂದವಾದ ಹಸುರಿನ ವನರಾಶಿಯ ನಡುವೆ ಈ ಸರೋವರ ಪ್ರಶಾಂತವಾಗಿದೆ. ಈ ಸರೋವರದ ಒಂದೊಂದೇ ಸೋಪಾನಗಳನ್ನು ಇಳಿಯುತ್ತಾ ಹೋದಂತೆ ನಾಲ್ಕು ಕಂಬಗಳಿಂದ ಮೇಲ್ಭಾವಣಿ ಹಾಸಿದ ಗುಡಿಯಲ್ಲಿ ಹನುಮಂತನ ಶಿಲ್ಪದ ಕೆತ್ತನೆಯಿದೆ. ಈ ಕೊಳದ ಸೋಪಾನಗಳ ತಳಭಾಗದಲ್ಲಿ ಮೂರು ದಿಕ್ಕುಗಳಲ್ಲಿ ಹಲವಾರು ಕೆತ್ತನೆಯ ಚಿತ್ರಗಳಿವೆ. ಒಂದು ಕಡೆ ಮೂರು ಮೀನುಗಳು ಒಟ್ಟಾಗಿದೆ ಮತ್ತೊಂದು ದಿಕ್ಕಿನಲ್ಲಿ ಒಂದು ಹೆಣ್ಣಿನ ಮುಖಭಾಗದ ದೃಶ್ಯ ಕೋತಿ ಹಣ್ಣನ್ನು ತಿನ್ನುತ್ತಿರುವುದು. ಪದ್ಮದಳದ ಕೆತ್ತನೆ, ಇನ್ನೊಂದು ದೃಶ್ಯದಲ್ಲಿ ಒಂದು ಕಪ್ಪೆ ಪಕ್ಕದಲ್ಲಿ ಒಂದು ಮಗುವಿನ ದೃಶ್ಯವಿದೆ ಬಹುಶಃ ಈ ಎಲ್ಲಾ ಕೆತ್ತನೆಯ ದೃಶ್ಯಗಳಿಗೂ ಒಂದೊಂದು ಮಹತ್ವ ಇರುತ್ತದೆ. ಆದರೆ ಈ ಕೆತ್ತನೆಯ ಉದ್ದೇಶ ಏನೆಂದು ಗೊಂದಲದ ವಿಷಯವಾಗಿದೆ. ಒಟ್ಟಾರೆಯಾಗಿ ಸುಂದರವಾದ ಹಸುರಿನ ವನರಾಶಿಯ ನಡುವೆ ಪ್ರಶಾಂತವಾಗಿರುವ ಈ ಕ್ಷೇತ್ರವು ಎಲೆಮರೆಯ ಕಾಯಿಯಂತೆ ಕಾಡಿನ ನಡುವೆ ಅಡಗಿದೆ.

[24]ಪುರಾಣಗಳಲ್ಲಿ ಈ ಸುವರ್ಣಮುಖಿಯ ಮಹತ್ವವನ್ನು ಉಲ್ಲೇಖಿಸಿರುವಂಥ ಪೌರಾಣಿಕ ಕಥಾಭಾಗವನ್ನು ಈ ಮುಂದಿನಂತೆ ಕಾಣಬಹುದು

ಪ್ರೇತಮುಕ್ತಿ ಮತ್ತು ಸುವರ್ಣಮುಖಿ ಸಾನ್ನದ ಮಹಿಮೆ

ಕೇಳು ! ನಾರದ ! ಆ ಪ್ರೇತ ಮುಕ್ತಿಗಳ ಸಮಾಚಾರವನ್ನು ತಿಳಿಸುವೆನು, ಮಧ್ಯದೇಶದ ವಜ್ರ ಎಂಬ ಗ್ರಾಮದಲ್ಲಿ ಪುಷ್ಕಳ, ಬಾಷ್ಕಳ ಎಂಬ ಇಬ್ಬರು ಅಣ್ಣ ತಮ್ಮಂದಿರು ಇದ್ದರು. ಅವರು ಬಹಳ ಧನವಂತರಾಗಿದ್ದು ಬಹಳ ಲುಬ್ದ ಶಿಖಾಮಣಿಗಳಾಗಿದ್ದರು. ಅವರು ಮದುವೆ ಮಾಡಿಕೊಳ್ಳದೆ ಸಂತಾನ ವಿಹೀನರಾಗಿಯೂ ಆ ಧರ್ಮಾಚರಣೆಯುಳ್ಳವರಾಗಿಯೂ ಇದ್ದರು. ಅವರು ಬ್ರಾಹ್ಮಣರಾಗಿದ್ದರೂ ಹವ್ಯ ಕವ್ಯಗಳನ್ನು ಮಾಡದವರಾಗಿದ್ದರು. ಒಂದಾನೊಂದು ದಿವಸ ಅವರು ಅರಣ್ಯಕ್ಕೆ ಕಟ್ಟಿಗೆಗಾಗಿ ಹೋದರು. ಅಲ್ಲಿದ್ದ ಒಂದು ದೊಡ್ಡ ಮರವನ್ನು ಕಡಿಯುತ್ತಿರಲಾಗಿ ಆ ಮರದ ಬುಡದಲ್ಲಿ ಅಮಿತಧನರಾಶಿಯನ್ನು ನೋಡುತ್ತಲೇ ಆಶಾಪಿ ಪಿಶಾಚಿಗಳಂತೆ ಒಬ್ಬರನ್ನೊಬ್ಬರು ಕೊಂದು ತಾವೇ ಆ ನಿಧಿಯನ್ನು ಕಸಿದುಕೊಳ್ಳುವಂತೆ ಮನಸ್ಸಿನಲ್ಲಿ ಭಾವಿಸಿಕೊಂಡರು. ಆಗ ಹಿರಿಯವನಾದ ಪುಷ್ಕಳನ್ನು ತಮ್ಮನನ್ನು ನೋಡಿ ಬಾಷ್ಕಳನೇ ನನಗೆ ಬಹಳ ಹಸಿವು ಆಗುತ್ತಿದೆ !

---

[23] ಡಾ.ವೇಮಗಲ್ ಸೋಮಶೇಖರ್, ಪ್ರಜಾವಾಣಿ ಲೇಖನ, ದಿನಾಂಕ : 20.07.1996 ಶನಿವಾರ.

[24] ಶ್ರೀ ಚಂಪಕಧಾಮ ದೇವಾಲಯ ಪರಿಚಯ, ಲೇ : ಪಿ.ಎಸ್ ಮೇಘನ, ಪು : 60-61

ಆದುದರಿಂದ ಕೂಡಲೇ ಹೋಗಿ ನಮ್ಮಿಬ್ಬರಿಗೆ ಆಹಾರವನ್ನು ತೆಗೆದುಕೊಂಡು ಬಾ ಎಂದು ಹೇಳಿ ಕಳುಹಿಸಿದನು. ಕಿರಿಯವನಾದ ಬಾಷ್ಕಳನು ಮನಸ್ಸಿನಲ್ಲಿ ಅಣ್ಣನನ್ನು ಹೇಗೆ ಸಂಹರಿಸಲಿ ? ಅದ್ರವ್ಯವನ್ನು ಹೇಗೆ ಹೊಂದಲಿ ಅ ಅಪಾರ ಧನರಾಶಿಯನ್ನು ಪಡೆಯುವುದು ಹೇಗೆ ? ಎಂದು ಆಲೋಚಿಸಿ ವಿಷಪೂರಿತನಾದ ಅನ್ನವನ್ನು ಭಕ್ಷ್ಯ ಭೋಜ್ಯಗಳನ್ನು ತಂದನು. ಆಹಾರಕ್ಕಾಗಿ ತಮ್ಮನು ಹೊರಗೆ ಹೋಗಲು ಪುಷ್ಕಳನು ಆಹಾ! ಅವನು ಹಿಂತಿರುಗಿದಲ್ಲಿ ಆ ಹಣವನ್ನು ಹಂಚಬೇಕಾಗುವುದಲ್ಲ! ತಮ್ಮನನ್ನು ಹೇಗೆ ಸಂಹರಿಸಲಿ ಎಂದು ಆಲೋಚಿಸುತ್ತಾ ಒಂದು ದಪ್ಪ ಕಲ್ಲನ್ನು ಎತ್ತಿಕೊಂಡು ಬರುವ ದಾರಿಗೆ ಅಡ್ಡವಾಗಿರುವ ದೊಡ್ಡ ಬಂಡೆಯ ಮೇಲೆ ನಿಂತು ಕಾದಿದ್ದು ಬಾಷ್ಕಳನು ಬರುತ್ತಲೇ ಅವನ ಮೇಲೆ ಆ ಕಲ್ಲನ್ನು ಎತ್ತಿ ಹಾಕಿದನು. ನೆತ್ತಿಗೆ ಆ ಕಲ್ಲು ಬಿದ್ದಕೂಡಲೇ ಅವನು ಸತ್ತು ಬಿದ್ದನು. ಆ ತರುವಾಯ ಪುಷ್ಕಳನು ಹಸಿದವನಾದುದರಿಂದ ತಮ್ಮನು ತಂದಿದ್ದ ಭಕ್ಷ್ಯ ಭೋಜ್ಯಗಳನ್ನು ತಿಂದನು. ವಿಷವು ಶರೀರಕ್ಕೆ ವ್ಯಾಪಿಸಲು ಸಂಗಡತಿ ಅವನೂ ಮೃತ್ಯ ಹೊಂದಿದನು. ಅವರಿಬ್ಬರೂ ಕಾರ್ಪಟ್ಯದಿಂದ ದುರ್ಮರಣವನ್ನು ಹೊಂದಿದ್ದರಿಂದ ಪ್ರೇತ ಸಂಸ್ಕಾರವಿಲ್ಲದವರಾಗಿ ಪ್ರೇತರೂಪಗಳಾದ ಪಿಶಾಚಿಗಳಾದರು. ನಿನಗೆ ಕಾಣಲ್ಪಟ್ಟವರು ಅವರೆ ಆ ಪ್ರೇತರೂಪಿಗಳು. ಸುವರ್ಣವರ್ಮನೆಂಬ ಆ ದೇಶದ ಅರಸನಿಗೆ ಆ ವರ್ತಮಾನವು ವನಚರರ ಮೂಲಕ ತಿಳಿಯ ಬಂದಿತು. ಆ ಅರಸನು ರಾಜಭಟ್ಟರನ್ನು ಆ ವನಕ್ಕೆ ಕಳುಹಿಸಿ ಆ ನಿಧಿಯನ್ನು ಅವರ ಸ್ವತ್ತನ್ನೆಲ್ಲಾ ತರಿಸಿ ಅದೆಲ್ಲವೂ ಬ್ರಹ್ಮಸ್ವತ್ತಾದ್ದರಿಂದ ಅರಮನೆಗೆ ಸೇರಿಸಿಕೊಳ್ಳದೆ ಅಗ್ನಿಯ ಬೆವರಿನಿಂದ ಹುಟ್ಟಿದ ಅ ನದಿಯ ಮೂಲದಲ್ಲಿ ಆ ಹಣವನ್ನೆಲ್ಲಾ ಖರ್ಚುಮಾಡಿ ಒಂದು ತಟಾಕವನ್ನು (ಸರೋವರ) ಕಟ್ಟಿಸಿದನು ಅದುದರಿಂದ ಅದಕ್ಕೆ ಸುವರ್ಣಮುಖಿ ಸತೀಶ ಎಂಬ ಹೆಸರುಂಟಾಯಿತು. ಆ ಪುಣ್ಯ ಬಲದಿಂದ ಅದರಲ್ಲಿ ಬಇದ್ದ ಪ್ರೇತರೂಪಿಗಳಿಗೆ ಪ್ರೇತತ್ವವು ನಾಶವಾಗಿ ಮುಕ್ತರಾದರು. ಆದುದರಿಂದ ಅ ಪುಣ್ಯಸ್ಥಳವು ಬ್ರಹ್ಮಹತ್ಯೆ, ಸುರಪಾನ ಕಳ್ಳತನ ಗುರುದಾರಾ ಗಮನ ರಾಜಹತ್ಯೆ, ಮಾತೃಹತ್ಯೆ, ಗೋಹತ್ಯೆ, ಭ್ರೂಣಹತ್ಯೆ ಮೊದಲಾದ ಮಹಾಪಾಪಗಳನ್ನು ಹೋಗಲಾಡಿಸಿಸುಕೃತವೀಯುವುದು. ಆ ಸುವರ್ಣ ಮುಖಿಯಲ್ಲಿ ಆಚರಿಸಿದ ಸಾನ್ನ, ದಾನ, ಜಪ ಹೋಮಾದಿಗಳೆಲ್ಲವೂ ಕೋಟಿ ಗುಣಿತಗಳಾಗಿ ಸ್ವರ್ಗ ಲೋಕದಾಯಕಗಳಾಗಿರವುವು. ಅಲ್ಲಿ ವಿನೋದವಾಗಿ ಮಣ್ಣು ಹೆಂಟೆಗಳಿಂದ ದೇವಾಲಯವನ್ನು ಕಟ್ಟಿದವರು ಕೂಡ ಪಾಪ ಮುಕ್ತರಾಗುವರು. ವೇದ ಪರಾಯಣನಾದ ಒಬ್ಬ ಬ್ರಾಹ್ಮಣನಿಗಾದರೂ ಅನ್ನವಿಟ್ಟಲ್ಲಿ ವಿಷ್ಣು ಲೋಕವುಂಟಾಗುವುದು. ಮುತ್ತೈದೆಯರಿಗೆ ಮೊರಗಳನ್ನು ದಾನವಿತ್ತಲ್ಲಿ ಅಂಥ ನಾರೀಮಣಿಯ ನಿತ್ಯ ಸುಮಂಗಲಿಯಾಗುವಳು. ಸುವರ್ಣಮುಖಿಗೆ ಎಲ್ಲಿಯ ತನಕ ಯಾರ ಆಸ್ತಿಗಳು ನೆಲೆಸಿರುವವೊ ಅದುವರೆವಿಗೆ ಅವನಿಗೆ ಸ್ವರ್ಗ ಪ್ರಾಪ್ತಿಯು ಕತ್ತಲೆಯನ್ನು ಸೂರ್ಯನು ದೂರಗೊಳಿಸುವಂತೆ ಅಲ್ಲಿ ಮಾಡುವ ಕರ್ಮವೆಲ್ಲವೂ ಪುಣ್ಯಯುಕ್ತವಾಗುವುದು. ಚಂದ್ರನಿಲ್ಲದ ರಾತ್ರಿಯಂತೆಯೂ ಹೂವುಹಣ್ಣುಗಳಲ್ಲಿದ ಗಿಡಗಳಂತೆಯೂ ಸುವರ್ಣಮುಖಿಯಿಲ್ಲಿದ ದೇಶಗಳೂ ದಿಕ್ಕುಗಳು ಯೋಗ್ಯಗಳಲ್ಲ. ಸಾವಿರಯುಗಗಳು ಒಂಟಿ ಕಾಲಿನಿಂದ ನಿಂತು ತಪಸ್ಸು ಮಾಡುವುದೂ ಒಂದು ತಿಂಗಳು ಸುವರ್ಣಮುಖಿಯ ತೀರ ವಾಸಕ್ಕೆ ಸಾಟಿಯಾಗದು. ಬೆಂಕಿ ಬಿದ್ದ ಹತ್ತಿಯು ಹೇಗೋ ಗರುಡನನ್ನು ನೋಡಿದ ಹಾವುಗಳು ನಿಮಿಷಗಳು ಹೇಗಾಗುವವೊ ಹಾಗೆ ಸುವರ್ಣ ಮುಖಿಯಲ್ಲಿ ಸ್ನಾನ ಮಾಡಿದವರ ಪಾಪಗಳು ಧ್ವಂಸಗಳಾಗುವುವು. ಅಮಂಗಳವನ್ನು ಕೂಡ ಅಲ್ಲಿ ಮುಳುಗುವುದರಿಂದ ಮಂಗಳ ಮೂರ್ತಿಯಾಗುವನು. ಶಕ್ತರಾಗಿದ್ದು ಸುವರ್ಣಮುಖಿಯನ್ನು ನೋಡದವರೇ ಕುರುಡರು, ಕುಂಟರು, ಮತ್ತು ನಪ್ಪ ಪ್ರಾಯರು, ಈ ಸುವರ್ಣಮುಖಿಯ ನೀರಿನ

ಗುಣಗಳನ್ನು ಹೇಳಲು ಅಸಾಧ್ಯವು. ನಾನು ಹೇಳಿದ ಈ ಕಥೆಯನ್ನು ನೀನು ಕೇಳಿರುವೆ, ನಿನ್ನ ಮನೋಚಿಂತೆಯು ಪರಿಹಾರವಾಗಿ ಕರತಾರ್ಥನಾಗು. ಈ ಸುವರ್ಣಮುಖಿಯ ವೃತ್ತಾಂತವನ್ನು ಕೇಳಿದವರೂ, ಓದಿದವರೂ ಗಂಗಾಸ್ನಾನದ ಫಲವನ್ನು ಹೊಂದವರು ಎಂದು ಬ್ರಹ್ಮನು ಹೇಳಿದನು. ನಾರದನು ಅಮಿತಾನಂದಭರಿತನಾಗಿ ಯಥೇಚ್ಛೆಯಿಂದ ವಿಹರಿಸಲು ಬ್ರಹ್ಮನ ಆಜ್ಞೆಯನ್ನು ಪಡೆದು ಅಲ್ಲಿಂದ ಹೊರ ಹೊರಟನು.

[25]ಪರೀಕ್ಷಿತ್ತು ಮತ್ತು ಜನಮೇಜಯರು ಕಲಿಯನ್ನು ಜಯಿಸುವಿಕೆ ಸುವರ್ಣಮುಖಿ ಸ್ನಾನದಿಂದ ಕುಷ್ಠರೋಗ ನಿವಾರಣೆ

ಅದನ್ನೆಲ್ಲಾ ಕೇಳಿ ಆನಂದಗೊಂಡ ಶೌನಕಾದಿ ಮುನಿಗಳು ಸೂತ ಮುನಿಯೇ! ಆ ಸುವರ್ಣಮುಖಿಯ ವೈಭವವನ್ನು ಸೂಚಿಸುವ ಮುತ್ತಾವ ವೃತ್ತಾಂತವೇನಾದರೂ ಇದ್ದುದಾದರೆ ಬೇಸರ ಪಡದೆ ನಮಗೆ ತಿಳಿಯಪಡಿಸುವವನಾಗು ಎಂದು ಕೇಳಿದರು. ಆಗು ಸೂತನು ಈ ರೀತಿಯಾಗಿ ಹೇಳಲಾರಂಭಿಸಿದನು. ಶೌನಕಾದಿ ಮುನಿವರ್ಯರೇ! ನಿಮ್ಮ ಧರ್ಮ ಚಿತ್ತವು ಅಮೋಘವಾದುದು. ದುರಿತ ಪಾಪ ಪರಿಹಾರಕವಾದ ಸುವರ್ಣಮುಖಿಯ ವೈಭವ ವೃತ್ತಾಂತವನ್ನು ಸವಿಸ್ತಾರಗೊಳಿಸುವೆನು. ಧರ್ಮಾತ್ಮನಾದ ಯುಧಿಷ್ಠರನು ಶ್ರೀಕೃಷ್ಣಾನುಗ್ರಹದಿಂದ ಭೂಮಿಯನ್ನು ಪಾಲಿಸುತ್ತಾ ಬರುತ್ತಿರಲಾಗಿ ಧರ್ಮರಾಯನು ಪರೀಕ್ಷಿದ್ರಾಜನಿಗೆ ಪಟ್ಟವನ್ನು ಕಟ್ಟಿ ಸ್ವರ್ಗಾರೋಹಣವನ್ನು ಮಾಡಿದನು. ಆ ತರುವಾಯ ಪರೀಕ್ಷಿತ್ತು ರಾಜ್ಯವಾಳಲಾರಂಭಿಸಿದನು. ಆಗ ಕಲಿ ದ್ವಾಪರ ಯುಗಗಳ ಸಂಧಿಕಾಲವಾಗಿದ್ದಿತು. ಕಾಲವಶನಾದ ಕಲಿಯು ಪ್ರವೇಶನಾದನು. ಕಲಿಯು ಎಂಥಾವನೆಂದರೆ ನೀಲವರ್ಣದವನು, ಕ್ರೂರ ದೇಹವುಳ್ಳವನು, ಕುಷ್ಠಮುಖನು, ರಕ್ತನೇತ್ರನು, ಅವನಿಗೆ ಬ್ರಹ್ಮಹತ್ಯೆಯೇ ತಲೆಯು ಸುವರ್ಣ ಸ್ತೇಯವೇ ಅವನ ಕೈಗಳು, ಮದ್ಯಪಾನವೇ ಅವನ ಹೃದಯವು, ಗುರು ತಲ್ಪಗಮನವೇ ಅವನ ಪ್ರೀತಿಗಳು, ತತ್ಸಂಯೋಗಿತವೇ ಅವನ ಕಾಲುಗಳು, ಸರ್ವ ಪಾಪಗಳೇ ಅವನ ಸರ್ವಾಂಗಗಳು, ಉಪಪಾತಕಗಲೇ ರೋಗಗಳು, ಗಡ್ಡದಲ್ಲಿ ಕೂದಲೂ, ಸುಟ್ಟ ಕಾಲುಗಳುಳ್ಳವನು ಅರಿಷಡ್ವರ್ಗವೇ ಅವನ ಮೂಲವು, ಕುಮತಿ ಎಂಬ ತನ್ನ ಭಾರ್ಯೆಯನ್ನು ಒಳಗೊಂಡಿರುವನು. ಅವಳನ್ನು ಕಂಬಳಿಯಿಂದ ಅಲಂಕೃತವಾದ ಹಂದಿಯ ಮೇಲೆ ಕುಳ್ಳಿರಿಸಿಕೊಂಡು ಹರಿವಾಣವನ್ನು ಕೈಯಲ್ಲಿ ಹಿಡಿದುಕೊಂಡು ಹಸಿವಿನಿಂದಿ ಸೂರಗಿದ ತನ್ನ ಮುದಿ ತಾಯಿ ತಂದೆಗಳನ್ನು ಭಾರವಾದ ಮೂಟೆ ಹೂರಪಿ ನಡೆಯಿಸಿಕೊಂಡು ಮೆಲ್ಲ ಮೆಲ್ಲನೆ ಲೋಕ ವ್ಯಾಪಿಸುತ್ತಾ ಬರುತ್ತಿದ್ದನು. ಆಗ ಬೇಟೆಗಾಗಿ ಹೋಗಿದ್ದು ಬರುತ್ತಿದ್ದ ಪರೀಕ್ಷಿತ್ತು ಆ ವಿಚಿತ್ರವನ್ನು ಕಂಡು, ಇದೇನು! ಈಕೆಯು ಯಾರು? ಆ ಮುದುಕರು ಯಾರು? ನೀನು ಯಾರು? ಎಂದು ಕೇಳಲು, ಅದಕ್ಕೆ ಆ ಕಲಿಯು ಇವಳು ನನ್ನ ಗುಣವತಿಯಾದ ಪತ್ನಿಯು, ಅವರು ಅಧಮರಾದ ನನ್ನ ಜನನೀ ಜನಕರು, ದಕ್ಷಿಣ ದಿಕ್ಕಿಗೆ ಹೋಗುತ್ತಿರುವ ನಮ್ಮನ್ನು ಅರಿಯೆಯಾ? ಹಗಲೂ ರಾತ್ರಿಗಳೇ ನನ್ನ ತಾಯಿ ತಂದೆಗಳ ಹೆಸರು ನನ್ನ ಹೆಸರೇ ಕಲಿಯು ಎಂದನು. ಆ ಮಾತನ್ನು ಕೇಳಿದ ಮಾತ್ರದಲ್ಲಿಯೇ ಪರೀಕ್ಷಿತ್ತು ಕ್ರೋಧಾವೇಶ ಪರವಾಗಿ ತನ್ನ ಕೈಯಲ್ಲಿದ್ದ ಚಂದರಪಾಪದ ಕತ್ತಿಯನ್ನು ಎತ್ತಿ, ಎಲೈ! ದುರಾತ್ಮನೇ! ಹೊರಟು ಹೋಗು ಇಲ್ಲದಿದ್ದಲ್ಲಿ ಇದರಿಂದಲೇ ನಿನ್ನನ್ನು ಭೂಗತ ಪಡಿಸುವೆನು ಎಂದನು ಅದನ್ನು ಕೇಳಿ ಕಲಿಯು ಭಯಪಟ್ಟು ನಡುಗತ್ತಾ ರಾಜಾ! ನನಗೆ ಒಂದು ಸ್ಥಳವನ್ನು ತೋರಿಸು, ನೀನು "ಬದುಕಿರುವವರೆಗೂ ಅಲ್ಲಿ

[25] ಶ್ರೀ ಚಂಪಕಧಾಮ ದೇವಾಲಯ ಪರಿಚಯ, ಲೇ : ಪಿ.ಎಸ್ ಮೇಘನ, ಪು : 72–73

ಅಡಗಿರುವೆನು" ಎಂದು ಬೇಡಿದನು. ಅದಕ್ಕೆ ಪರೀಕ್ಷಿತ್ತುವು ಸಮೀಪದಲ್ಲಿದ್ದ ಒಂದು ತಾಳೆಯ ಮರವನ್ನು ತೋರಿಸಿ, ಇದರಲ್ಲಿ ನೀನು ಅಡಗಿರು, ನಾನು ಇರುವವರೆಗೂ ಹೊರಕ್ಕೆ ಬರಬೇಡ ಎಂದನು. ಆ ತರುವಾಯ ಕಲಿಯು ಆ ತಾಳೆಯ ಮರದಲ್ಲಿ ಪ್ರವೇಶಿಸಿದನು. ಆದುದರಿಂದ ತಾಳೆಮರವು ಭೂಲೋಕದಲ್ಲಿ ಕಲ್ಪವೃಕ್ಷ ಎನ್ನಲ್ಪಟ್ಟಿರುವುದು ಅನಂತರ ಕೆಲವು ಕಾಲ ರಾಜ್ಯವಾಳಿ ಪರೀಕ್ಷಿದ್ರಾಯನು ಆ ತರುವಾಯ ಧರಣೆಯನ್ನು ಪಾಲಿಸಲಾರಂಭಿಸಿದನು.

ಆಗಲೂ ಕಲಿಯು ಪ್ರವೇಶಕ್ಕೆ ಅವಕಾಶವಿಲ್ಲದೆ ಇದ್ದಿತು. ಕಾಳ ರಾತ್ರಿಯಲ್ಲಿ ಕಲಿಯು ಸರಮೆ ಎಂದು ಹೆಣ್ಣು ನಾಯಿಯಾಗಿಯೂ ಅದರ ಮರಿಯ ರೂಪವಾಗಿಯೂ ಜನಮೇಜಯನು ಆಚರಿಸುತ್ತಿದ್ದ ಯಾಗದ ಧರ್ಮಶಾಲೆಯನ್ನು ಪ್ರವೇಶಿಸಿದನು. ಆಯಾಗ ಸಂರಕ್ಷರಾಗಿದ್ದ ಅವನ ತಮ್ಮಂದಿರಾದ ಕ್ರುತಸೇನ, ಉಗ್ರಸೇನ, ಭೀಮಸೇನ ಎಂಬ ಮೂವರು ಕೂಲಿನಿಂದ ಆನಾಯಿಯ ಮರಿಯನ್ನು ಹೊಡೆದು ಓಡಿಸಿದರು. ಅದು ಮರುಗುತ್ತಾ ತನ್ನ ತಾಯಿಯ ಹತ್ತಿರಕ್ಕೆ ಬಂದು ಕೂಗಿ ಕೊಂಡಿತು. ಆ ತಾಯಿ ನಾಯಿಯು ಅರಸನಾದ ಜನಮೇಜಯನ ಬಳಿಗೆ ಬಂದು ಎಲೈ! ಅರಸ! ಯಜ್ಞ ಪಾತ್ರೆಗಳನ್ನು ನೆಕ್ಕದೆಯೂ ಹವಿಸ್ಸನ್ನು ಮುಟ್ಟದೆ ಇದ್ದ ನಿರಪರಾಧಿಯಾದ ನನ್ನ ಮಗನನ್ನು ನಿನ್ನ ತಮ್ಮಂದಿರು ಹೊಡೆದದ್ದು ನೋಡಿದಾಗ್ಯು ಅವರಿಗೆ ಶಿಕ್ಷೆಯನ್ನುಂಟುಮಾಡದೆ ಹೋದುದರಿಂದ ನೀನು ಕುಷ್ಠರೋಗ ಪೀಡಿತನಾಗು ಎಂದು ಶಪಿಸಿ ಹೊರಟು ಹೋಯಿತು. ಆನಮೇಜಯನು ಆಶಾಪಕ್ಕೆ ಸಂಭ್ರಾಂತನಾಗಿ ತನ್ನ ರಾಜ್ಯವನ್ನು ತನ್ನ ಪುತ್ರನಿಗೆ ವಹಿಸಿ ಶುತಶ್ರವನೆಂಬ ಮುನಿಯ ಆಶ್ರಮಕ್ಕೆ ಹೊರಟು ಆತನ ಮಗನಾದ ಸೋಮಶ್ರವನನ್ನು ಪುರೋಹಿತನನ್ನಾಗಿ ಮಾಡಿಕೊಂಡು ತನ್ನ ಕುಷ್ಠರೋಗವನ್ನು ನಿವಾರಣೆ ಮಾಡಬೇಕಂದು ಪ್ರಾರ್ಥಿಸಿದನು. ಆ ಮುನಿವರ್ಯನು ಜ್ಞಾನ ದೃಷ್ಠಿಯನ್ನು ಕೈಗೊಂಡು ಜನಮೇಜಯನಿಗೆ ಕುಷ್ಠರೋಗವು ಕಲಿಯಿಂದ ಸಂಭವಿಸಿರುವುದೆಂದು ತಿಳಿದವನಾಗಿ ಎಲೈ! ಅರಸ ಕಲಿ ಪಾಪ ಪ್ರಣಾಶಿನಿಯಾದ ಸುವರ್ಣಮುಖಿ ಎಂಬುದು ಸಹ್ಯಪಾದ ಪರ್ವತ ಪಂಕ್ತಿಗೆ ಸೇರಿದ ವಹ್ನಿಗಿರಿಯ ಬಳಿಯಲ್ಲಿರುವುದು. ಆ ತೀರ್ಥದಲ್ಲಿ ನಿನ್ನ ಅಂಗವು ಸ್ಪರ್ಶವಾದಲ್ಲಿ ನೀನು ಪುನೀತನಾಗಿ ಸಂತೋಷಪಡುವೆ. ನೀನು ಮಹಾಭಾರತವನ್ನು ಕೇಳಿದ್ದರಿಂದ ನಿನ್ನ ಕುಷ್ಠರೋಗವೆಲ್ಲವೂ ವಾಸಿಯಾಯಿತು. ಆದರೂ ವ್ಯಾಸ ವಾಕ್ಯದಲ್ಲಿ ಸಂಶಯಪಟ್ಟೆಯಾದ ಕಾರಣ ಮುಖದಲ್ಲಿ ಆ ರೋಗ ಚಿಹ್ನೆಯು ಹಾಗೆಯೇ ಇರುವುದು. ಋಷಿವಾಕ್ಯದಲ್ಲಿ ಸಂದೇಹಪಡುವವರಿಗೆ ನಿನ್ನಂತೆ ಮನಶ್ಚಾಂಚಲ್ಯವು ನಿವಾರಣೆಯಾಗದು. ನೀನು ತೀರ್ಥ ಯಾತ್ರಪರನಾಗಿ. ಆ ಸುವರ್ಣಮುಖಿ ನದಿಯ ತೀರವನ್ನು ಸೇರುವವನಾಗು. ಅದು ಕಲಿಯುಗದಲ್ಲಿ ಅಲ್ಪ ಪುಣ್ಯಕೃತರಿಗೂ ಸುಲಭ ಪ್ರದವಾದುದು. ನಿನ್ನ ಸಂದೇಹವೇನೆಂಬುದು ಬಲ್ಲೆ ? ಕುರುಕ್ಷೇತ್ರದ ಭಾರತ ಯುದ್ಧದಲ್ಲಿ ಭೀಮನಿಂದ ಬಿಸಾಡಲ್ಪಟ್ಟ ವಸ್ತುಗಳು ಮಹಾವಾಯುಪಡೆಯಲ್ಲಿ ಚಲಿಸುತ್ತಿರುವವು ಎಂಬ ಮಾತಿನಲ್ಲಿ ನಿನಗೆ ಸಂದೇಹ ಆ ಮಾತನ್ನು ಕೇಳಿ ಜನಮೇಜಯ ರಾಯನು ತೀರ್ಥಾಟನಗೆ ಹೊರಟು ಕಲ್ಲು ಮುಳ್ಳು ಹಳ್ಳ ಕೊಳ್ಳಗಳೆನ್ನದೆ ಬಿಸಿಲಿನಲ್ಲಿ ಒಣಗಿ ಮಳೆಯಲ್ಲಿ ನೆನೆಯುತ್ತಾ ಕೊನೆಯಲ್ಲಿ ವಹ್ನಿ ಪರ್ವತದ ಚಂಪಕಾವನವನ್ನು ಸೇರಿದನು. ಕಲಿಯು ತನ್ನಿಂದ ಉಂಟಾದ ದೋಷವನ್ನು ಜನಮೇಜಯನಿಗೆ ಹೋಗಲಾಡಿಸಬೇಕೆಂದೆಣಿಸಿ ಇವನಿಂದಲೂ ಇವನ ತಂದೆಯಿಂದಲೂ ನಾನು ಗೆಲ್ಲಲ್ಪಟ್ಟೆನು. ಈ ಋಷಿವಾಕ್ಯದಂತೆ ನಡೆಯುವ ಇವನನ್ನು ಸ್ವರ್ಗಲೋಕವನ್ನು ಸೇರುವಂತೆ ಮಾಡಿದಲ್ಲಿ ನಾನು ಸುಖಪಡುವೆನೆಂದು ಯೋಚಿಸಿ ಸರಮೆಯಾದ ನಾಯಿಯ ಮತ್ತು ಮರಿಯಾದ ತನ್ನ ಮಗನ ಸಂಗಡ ಆ ಸುವರ್ಣಮುಖಿಯ ತೀರದಲ್ಲಿ ಸಂಚರಿಸುತ್ತಾ ಬಿಸಿಲಿನಲ್ಲಿ ಬಳಲಿದವರಂತೆ ಸುವರ್ಣಮುಖಿ ನದಿಯಲ್ಲಿ ಬಿದ್ದು ಹೊರಳಾಡಿದರು.

ನಾಯಿಗಳು ನೀರಿನಲ್ಲಿ ಬಿದ್ದ ರಭಸಕ್ಕೆ ಹಾರಿದ ನೀರಿನ ಹನಿಗಳು ಸುವರ್ಣ ಬಿಂದುಗಳಾಗಿ ಸಮೀಪದಲ್ಲಿದ್ದ ಜನಮೇಜಯನ ಮೈಮೇಲೆ ಬಿದ್ದವು. ಆ ಎರಡು ನಾಯಿಗಳೂ ಶರೀರವನ್ನು ಕೂಡಲೆ ತ್ಯಜಿಸಿದವುಗಳಾಗಿ ದಿವ್ಯ ಪುರುಷ ವೇಷವನ್ನು ಪಡೆದು ವಿಮಾನ ರೂಢರಾಗಲು ರಾಯನು ಅವರನ್ನು ನೋಡಿ ನೀವು ಯಾರು ? ಎಂದು ಕೇಳಿದನು. ಅದಕ್ಕೆ ಅವನು ನಿನ್ನಿಂದಲೂ ನಿನ್ನ ಪಿತನಿಂದಲೂ ಗೆಲ್ಲಲ್ಪಟ್ಟ ಕಲಿಯೇ ನಾನು. ಈ ಸುವರ್ಣಮುಖಿಯಲ್ಲಿ ನೀನು ಸ್ನಾನಮಾಡಿದವನಾಗಿ ಕುಷ್ಠರೋಗ ವಿನಾಶಿತನಾಗಿ ಆ ತರುವಾಯ ಸ್ವರ್ಗಕ್ಕೆ ತೆರಳುವೆ ಇನ್ನು ಭೂಲೋಕದಲ್ಲಿ ನಿನ್ನ ಸಮಾನವಾದ ಅರಸನು ಹುಟ್ಟಿದನು. ನಾನು ಈಗ ಭೂಲೋಕವನ್ನು ಪ್ರವೇಶಿಸುವವನು. ಈ ನದಿಯಲ್ಲಿ ಸ್ನಾನ ಮಾಡಿದವರನ್ನು ಮಾತ್ರ ಭಾದಿಸಲಾರೆನು ಎಂದು ಹೇಳಿದನು. ಅದರಂತೆ ಜನಮೇಜಯನು ಆ ಸುವರ್ಣಮುಖಿಯಲ್ಲಿ ಸ್ನಾನಮಾಡಿ ನಿತ್ಯ ಕರ್ಮಗಳನ್ನು ನೆರವೇರಿಸಿ ಶ್ರೀಕೃಷ್ಣನನ್ನು ಧ್ಯಾನಿಸಿದನು ಕುಷ್ಠರೋಗವು ನಿವಾರಣೆಯಾಯಿತು. ಅವನ ಮನಸ್ಸಿನಲ್ಲಿದ್ದ ಸಂಶಯವೆಲ್ಲವೂ ಪರಿಹಾರವಾಯಿತು. ಈ ನದಿಯ ತೀರದಲ್ಲಿ ಯಜ್ಞವನ್ನು ಆಚರಿಸಿದವರು ಸ್ವರ್ಗಲೋಕವನ್ನು ಮಾನ್ಯತೆಯನ್ನು ಪಡೆಯುವರು. ಈ ವೃತ್ತಾಂತವನ್ನು ಹೇಳಿದವರೂ ಕೇಳಿದವರೂ ಕೂಡ ಸರ್ವಪಾಪ ಮುಕ್ತರಾಗುವರು. ಈಲ್ಲಿ ಸ್ನಾನ ಮಾಡಿದ ಮಾತ್ರದಲ್ಲಿ ಅವನ ಪಾಪಕರ್ಮಗಳೆಲ್ಲವೂ ಪಲಾಯನವಾಗುವುವು. ಆಶ್ವಮೇಧ ಮಾಡಿದಷ್ಟು ಫಲವು ಇಲ್ಲಿ ಸ್ನಾನ ಮಾಡುವುದರಿಂದ ಉಂಟಾಗುವುದು.

ಗ್ರಾಮದೇವತೆಗಳು

ಈ ಗ್ರಾಮದೇವತೆಗಳು ಮನುಷ್ಯನ ಜೀವನದಲ್ಲಿ ಒಂದು ಅವಿಭಾಜ್ಯ ಅಂಗವಾಗಿದೆ. ಈ ದೇವತೆಗಳು ವ್ಯಕ್ತಿಯ ಜೀವನದುದ್ದಕ್ಕು ಅವನ ಜೀವನದ ಎಲ್ಲಾ ಮಜಲುಗಳಲ್ಲೂ ಅವು ಹಾಸುಹೊಕ್ಕಾಗಿವೆ. ಅವನ ಮನಸ್ಸಿನ್ನಾಳುವ ಶಕ್ತಿಗಳಾಗಿವೆ. ಮಾನವನ ಬೇಡಿಕೆಗಳನ್ನು ಮತ್ತು ಅವನ ಆಸೆಯನ್ನು ಪೂರೈಸುವ ಮನಸ್ಸಿನ ನಂಬಿಕೆಗೆ ಸ್ಪಂಧಿಸುವ ಶಕ್ತಿಗಳಾಗಿವೆ. ಈ ಗ್ರಾಮದೇವತೆಗಳು, ಒಂದಲ್ಲ ಒಂದು ರೀತಿಯಲ್ಲಿ ಈ ಗ್ರಾಮದೇವತೆಗಳಿಗೆ ಅಧೀನವಾಗಿ ಶರಣಾಗಿ ಅದರಲ್ಲಿ ಇವೆ. ನೆಮ್ಮದಿಯನ್ನು ಕಾಣುವ ಮನುಷ್ಯನ ಸ್ವಭಾವ ನಿಜಕ್ಕೂ ವಿಶೇಷಣವಾದುದು.

ಗ್ರಾಮದೇವತೆಗಳು ಸಾಮಾನ್ಯವಾಗಿ ಆಯಾಯ ಗ್ರಾಮದ ಹೆಸರನ್ನೇ ಹೊಂದಿರುತ್ತವೆ. ಉದಾ:ಹಾಸನಾಂಬ, ಮದ್ದೂರಮ್ಮ, ಕೋಲಾರಮ್ಮ, ಈ ರೀತಿಯ ಶಿಷ್ಟೇತರವಾದ ಹೆಸರಗಳಿರುವಂತೆ ಚಂಪಕಧಾಮ ಕ್ಷೇತ್ರವಾದ ಬನ್ನೇರುಘಟ್ಟದಲ್ಲಿ ಶ್ರೀ ಮಾರಮ್ಮನಿಗೆ 'ಚಂಪಕವಲ್ಲಿ ಮಾರಮ್ಮ' ಎಂಬ ಹೆಸರಿನಿಂದ ಕರೆಯುತ್ತಾರೆ.

ಶ್ರೀ ಚಂಪಕವಲ್ಲಿ ಶ್ರೀ ಮಾರಮ್ಮ ದೇವಾಲಯ

ಬನ್ನೇರುಘಟ್ಟ ಗ್ರಾಮದೇವತೆಗಳಲ್ಲಿ 'ಚಂಪಕವಲ್ಲಿ ಮಾರಮ್ಮ' ನೇ ಅಧಿದೇವತೆ, ಉಳಿದವರಲ್ಲಿ ಗ್ರಾಮದೇವರುಗಳಾಗಿ ಕಂಡು ಬರುತ್ತದೆ. ಈ ಗ್ರಾಮದಲ್ಲಿ ಪ್ರಸ್ತುತ ನೆಲೆಸಿರುವಂತಹ ಶ್ರೀ ಆವಲಮ್ಮದೇವಿ, ಶ್ರೀಸತ್ಯಮ್ಮ ಮತ್ತು ಶ್ರೀಮೂಕಾಂಬಿಕಾ ದೇವತೆಯರಿಗೆ ಶ್ರೀಚಂಪಕವಲ್ಲಿ ಮಾರಮ್ಮನೇ ಅಧಿದೇವತೆ. ಜನಪದರ ಜೀವನದಲ್ಲಿ ಮಾತ್ರ ಹಾಸುಹೊಕ್ಕಾಗಿರುವ ಜನಮನದ

ದೇವತೆ ಮಾರಮ್ಮನನ್ನು ಕುರಿತಂತೆ "ಮಾರಿಗುಡಿ ಇಲ್ಲದ ಊರು ಊರಲ್ಲ ಮಕ್ಕಳು ಇರದ ಮನೆ ಮನೆಯಲ್ಲ" ಎಂಬ ಗಾದೆಯಿದಿ

ಬನ್ನೇರುಘಟ್ಟ ವೃತ್ತದಿಂದ ಶ್ರೀಚಂಪಕಧಮನ ಸನ್ನಿದಿಗೆ ಹೋಗುವ ಮಾರ್ಗಮಧ್ಯೆದ ಎಡಭಾಗದಲ್ಲಿ ನೆಲೆಸಿರುವ ದೇವತೆಯೇ ಶ್ರೀಚಂಪಕವಲ್ಲಿ ಮಾರಮ್ಮ.

ಮಾರಮ್ಮನ ಐತಿಹ್ಯ

[26]ಒಂದು ಐತಿಹ್ಯದ ಪ್ರಕಾರ ಬ್ರಾಹ್ಮಣನ ಮನೆಯಲ್ಲಿ 'ರಂಗ' ಎನ್ನುವ ದಲಿತ ಹುಡುಗನೊಬ್ಬ ಜೀತಕ್ಕಿದ್ದನಂತೆ. ಆತ ಬ್ರಾಹ್ಮಣ ಹುಡುಗಿಯನ್ನು ನೋಡಿ ಆಕೆಯ ರೂಪ, ಲಾವಣ್ಯಕ್ಕೆ ಮಾರುಹೋಗಿ ಅವಳಿಗೆ ಆಸೆಪಟ್ಟು ಆತ ಜೀತವನ್ನು ಬಿಟ್ಟು ದೂರದ ಊರಿಗೆ ಹೋಗಿ ವೇಷ ಬದಲಿಸಿಕೊಂಡು ಸಂಸ್ಕೃತವನ್ನು ಕಲಿತು ಬ್ರಾಹ್ಮಣನ ಮನೆಗೆ ಬಂದು ಅವನ ಮಗಳನ್ನು ಮದುವೆಯಾದನಂತೆ, ಕೆಲವು ದಿನಗಳು ಕಳೆದ ಮೇಲೆ 'ರಂಗ'ನ ಊರಿನವನೊಬ್ಬನು ಬಂದು ನೀನು ಹೊಲೇರ ಚನ್ನನ ಮಗನಲ್ಲವೇ ? ಎಂದನಂತೆ. ಇದನ್ನು ಕೇಳಿಕೊಂಡ ಬ್ರಾಹ್ಮಣಕನ್ಯೆ ಮಾರಿಯ ಅವತಾರತಾಳಿ ಅವನನ್ನು ಮನೆಯಿಂದ ಹೊರದೂಡಿ ಕಲ್ಲಾಗುವಂತೆ ಶಾಪಕೊಟ್ಟು ಅವಳು ಕಲ್ಲಾದಳಂತೆ, ಅದರಂತೆ ವರ್ಷಕ್ಕೊಂದು ಸಲ ನಡೆಯುವ ಗ್ರಾಮದ ಹಬ್ಬದಲ್ಲಿ ಮಾರಮ್ಮನಿಗೆ ಮಕ್ಕಳ ಸಮೇತ ಮುತ್ತೈದೆಯರು ಹೋಗಿ ಅರಿಶಿಣ ಕುಂಕುಮ. ಬೇವಿನಸೊಪ್ಪು, ಮೊಸರನ್ನು ಇಟ್ಟು ನೈವೇದ್ಯಮಾಡಿ ತಂಪನ್ನು ಎರೆಯುತ್ತಾರೆ.

ಈ ದೇವಾಲಯವು ಗರ್ಭಗೃಹ ಮತ್ತು ಮುಖಮಂಟಪವನ್ನು ಒಳಗೊಂಡಿದೆ. ಗರ್ಭಗೃಹದಲ್ಲಿರುವ ಶ್ರೀ ಮಾರಮ್ಮನು ಸಂದರವಾದ ಕಪ್ಪುಶಿಲೆಯಲ್ಲಿ ಸುಮಾರು ಮೂರು ಅಡಿ ಎತ್ತರದಲ್ಲಿದೆ. ಈ ದೇವಿಯು ನಾಲ್ಕು ಕೈಗಳನ್ನು ಹೊಂದಿದ್ದು ಮೇಲಿನ ಎರಡು ಕೈಗಳಲ್ಲಿ ತ್ರಿಶೂಲ ಮತ್ತು ಢಮರುಗವನ್ನು ಬಲಭಾಗದ ಕೈಯಲ್ಲಿ ಖಡ್ಗವನ್ನು ಎಡಭಾಗದ ಹಸ್ತದಲ್ಲಿ ಕುಂಕುಮ ಬಟ್ಟಲನ್ನು ಹಿಡಿದುಕೊಂಡು ಎತ್ತರವಾದ ಪದ್ಮಪೀಠದ ಮೇಲೆ ಕುಳಿತಿದ್ದಾಳೆ. ಈ ದೇವಿಯ ಪದ್ಮಪೀಠದ ಮುಂಭಾಗದಲ್ಲಿ ಕಲ್ಲಿನ ಶಿಲೆಯಿದ್ದು ಇದು ದೇವಿಯ ಮೂಲದೇವರೆಂದು ಬಿಂಬಿಸಲಾಗುತ್ತಿದೆ.

ಗರ್ಭಗೃಹ ನಂತರ ಮುಖಮಂಟಪದಲ್ಲಿ ಭಕ್ತರು ದರ್ಶನ ಪಡೆದು ಗರ್ಭಗುಡಿಯನ್ನು ಪ್ರದಕ್ಷಿಣೆ ಪಥದತ್ತಾ ಸುತ್ತಿ ಬರುತ್ತಾರೆ. ಈ ದೇವಿಯ ಗರ್ಭಗೃಹದ ಒಳಭಾಗದ ಬಲಪಾಶ್ವದಲ್ಲಿ ದೇವಿಯ ಕಂಚಿನ ಉತ್ಸವ ಮೂರ್ತಿ ಇದೆ ಇದನ್ನು ಟಿಪ್ಪುಸುಲ್ತಾನನು ಶಿಲ್ಪಿಗಳ ಮೂಲಕ ನಿರ್ಮಿಸಿ ಈ ದೇವಾಲಯಕ್ಕೆ ಸಮರ್ಪಿಸಿದ್ದಾನೆಂಬ ಮಾತು ಜನಜನಿತವಾಗಿದೆ.

---

[26] ರಾಮನಗರ ಒಂದು ಸಾಂಸ್ಕೃತಿಕ ಅಧ್ಯಯನ, ಲೇ : ಡಾ. ಅಂಕನಹಳ್ಳಿ ಪಾರ್ಥ, ಪು – 118

ಈ ತಾಯಿ ಶಕ್ತಿದೇವತೆಯಾಗಿದ್ದು ಊರಿಗೆ ಸಂಭವಿಸುವ ಅನಿಷ್ಟಗಳನ್ನು ಮತ್ತು ಗಂಡಾಂತರಗಳನ್ನು ಸದಾಕಾಲ ಕಾಯುತ್ತಾಳೆಂಬ ನಂಬಿಕೆಯಿದೆ. ಅಲ್ಲದೆ ಮಕ್ಕಳು ಭೀತಿಬಿದ್ದಾಗ, ಅಮ್ಮ ಆದಾಗ ಈ ದೇವರಿಗೆ ತಂಪು ತೋರಿಸುವುದು ಇಲ್ಲಿ ಕಂಡುಬರುತ್ತದೆ.

ಆಕರ್ಷಕವಾದ ಅಲಂಕಾರಯುತವಾಗಿ ಕಂಗೊಳಿಸುವ ಈ ದೇವತೆ ಎಲ್ಲರನ್ನು ತನ್ನತ್ತ ಕೈ ಬೀಸಿ ಕರೆಯುತ್ತಾಳೆ. ಈ ತಾಯಿಯು ಶ್ರೀ ಚಂಪಕಧಾಮಸ್ವಾಮಿಯ ತಂಗಿಯೆಂದು ಆದ್ದರಿಂದ ಈ ದೇವಿಗೆ 'ಚಂಪಕವಲ್ಲಿ' ಎಂದು ಕರೆಯುವುದು ಸ್ಥಳೀಯರ ವಾಡಿಕೆ.

ಪ್ರತಿ ಮಂಗಳವಾರ ಮತ್ತು ಶುಕ್ರವಾರ ಇಲ್ಲಿ ವಿಶೇಷ ಪೂಜೆ ನಡೆಯುತ್ತದೆ. ಈ ತಾಯಿಯು ಇಲ್ಲಿನ ಚಂಪಕಧಾಮಸ್ವಾಮಿ ದೇವಾಲಯದ ಪ್ರಧಾನ ಅರ್ಚಕರ ಮನೆಯ 'ಕುಲದೇವತೆ' ಆಗಿದ್ದಾಳೆ (ಬ್ರಾಹ್ಮಣ ಕನ್ಯೆಯೊಬ್ಬಳನ್ನು ಮೋಸದಿಂದ ಮದುವೆಯಾದ ದಲಿತ ಯುವಕನ ಮೋಸ ತಿಳಿದ ಆ ನಾರಿ ಮುನಿದು ಮಾರಿಯದ ಕಥೆ ಇರಬಹುದು). ಇವರ ಮನೆಯಲ್ಲಿ ಏನೇ ಶುಭಕಾರ್ಯಗಳು ನಡೆದಲ್ಲಿ ಈ ತಾಯಿಗೆ ಮೊದಲ ಪೂಜಾಕೈಂಕರ್ಯವು ನಡೆಯುವ ಪದ್ಧತಿ, ಪ್ರಸ್ತುತ ಇಂದಿಗೂ ಸಹ ನಡೆದುಕೊಂಡು ಬಂದಿದೆ.

ಈ ದೇಗುಲದ ಬಲಪಾರ್ಶ್ವದಲ್ಲಿ ಕಂಚಿನ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದು ಈ ಮೂರ್ತಿಯ ಎದುರು ಅಗಲವಾದ ಪಾತ್ರೆಯಲ್ಲಿ ಗುಲಗಂಜಿಯನ್ನು ಇಟ್ಟಿದ್ದಾರೆ. ಪ್ರಸ್ತುತ ಈ ದೇಗುಲಕ್ಕೆ ಆಗಮಿಸುವ ಭಕ್ತಾದಿಗಳು ದೇವಿಯ ದರ್ಶನ ಪಡೆದು ಪ್ರದಕ್ಷಿಣೆ ಮಾಡಿ ಬಂದು ಈ ಗುಲಗಂಜಿಯನ್ನು ಈ ಉತ್ಸವ ಮೂರ್ತಿಯ ಮೇಲೆ ಮೂರು ಸಲ ಮನಸ್ಸಿನಲ್ಲಿರುವುದನ್ನು ಸಂಕಲ್ಪಿಸಿಕೊಂಡು ಹಾಕಿದರೆ ಆ ಬಯಕೆ ಈಡೇರುತ್ತದೆಂಬ ನಂಬಿಕೆ ಪ್ರಸ್ತುತ ಈಗಲು ಜನಜನಿತವಾಗಿದೆ. ಈ ದೇಗುಲ ಮೊದಲು ಚಿಕ್ಕಗುಡಿಯಾಗಿದ್ದು ಆಧುನಿಕತೆಯ ಪ್ರಭಾವದಿಂದ ಜೀರ್ಣೋದ್ದಾರಗೊಂಡು ಪ್ರಸ್ತುತ ಅಲಂಕಾಯುತವಾಗಿ ಕಂಗೊಳಿಸುತ್ತಿದೆ.

ಈ ದೇವಾಲಯದ ಮುಂದಿರುವ ಎರಡು ದೇವಾಲಯಗಳೇ ಶ್ರೀಆವಲಮ್ಮದೇವಿ ಮತ್ತು ಶ್ರೀ ಸತ್ಯಮ್ಮ ದೇವಿ ದೇವಾಲಯ. ಇವೆರಡು ದೇವಿಯರಿಗೆ ಎರಡು ಗರ್ಭಗೃಹ ಒಂದೇ ಮುಖಮಂಟಪವಿದೆ. ಈ ಆವಲಮ್ಮದೇವಿಯನ್ನು ಪೂಜಿಸಿದರೆ ಊರಿನಲ್ಲಿರುವ ದನ ಕರು ಎಮ್ಮೆ ಮುಂತಾದ ಮೂಕಪ್ರಾಣಿಗಳಿಗೆ ತಗಲುವ ರೋಗರುಜಿನಗಳು ವಾಸಿಯಾಗುತ್ತದೆಂಬ ನಂಬಿಕೆಯಿದೆ.

ಪುರಾತನ ಕಾಲದ ಗರುಡಸ್ತಂಭ

ಶ್ರೀಸತ್ಯಮ್ಮದೇವಿಯನ್ನು ಈ ಗ್ರಾಮದ 'ಅಗಸ' ಜನಾಂಗದವರು ಆರಾಧಿಸುತ್ತಾರೆ. ಒಟ್ಟಾರೇಯಾಗಿ ಈ ಎರಡು ದೇವಿಯರು ಒಂದೇ ಗುಡಿಯಲ್ಲಿ ಅಕ್ಕತಂಗಿಯರಂತೆ ನೆಲೆಸಿ ಈ ಗ್ರಾಮವನ್ನು ಪೊರೆಯುತ್ತಿದ್ದಾರೆ. ಶ್ರೀ ಆವಲಮ್ಮದೇವಿ ಮತ್ತು ಶ್ರೀಸತ್ಯಮ್ಮದೇವಿ ದೇವಾಲಯಗಳ ಮುಂಭಾಗದಲ್ಲಿರುವುದೇ ಪುರಾತನ ಕಾಲದ ಗರುಡಸ್ತಂಭ. ಬನ್ನೇರುಘಟ್ಟ ಗ್ರಾಮದ ಮಧ್ಯಭಾಗದಲ್ಲಿರುವ ಬಹು ಅಪರೂಪದ ಸುಮಾರು 52 ಅಡಿಗಳಷ್ಟು ಉದ್ದವಿರುವ ಏಕಶಿಲಾ

ಗರುಡಗಂಬ ಅತಿ ಪ್ರಾಚೀನವಾದುದಾಗಿದೆ. ಈ ಗರುಡಸ್ತಂಭದ ಸುತ್ತಲು ಕಲ್ಲಿನ ಕಟ್ಟಡವನ್ನು ನಿರ್ಮಿಸಲಾಗಿದೆ. ಈ ಗರುಡಗಂಬ ಸಿಲೆಗೊಂಡ ಬೇರೆಯಾದಾಗಿದ್ದಿರ ಬೇಕು, ಪ್ರಸ್ತುತ ಈ ಸ್ತಂಭವನ್ನು ಅರ್ಥಹೀನ ಆಚರಣೆಗೆ ಬಳಸಿಕೊಳ್ಳಲಾಗುತ್ತಿದ್ದು ಶಿಥಿಲಾವಸ್ಥೆಯ ಅಂಚಿನಲ್ಲಿದೆ. ಈ ಸ್ತಂಭದ ಮೇಲೆ ಶಂಖ ಚಕ್ರ ಗರುಡ ಮತ್ತು ಹನುಮಂತನ ಮೂರ್ತಿಗಳ ಕೆತ್ತನೆಗಳನ್ನು ಬಹಳ ಸುಂದರವಾಗಿ ಕೆತ್ತಲಾಗಿದೆ. ಈ ಸ್ತಂಭವು ವ್ಯಾಸರಾಯರ ಕಾಲದ್ದೆಂದು ಹೇಳುವುದುಂಟು. ಯಾರೋ ಒಬ್ಬ ಗರ್ಭಿಣಿ ಸ್ತ್ರೀಯೊಬ್ಬಳು ಒಂದೇ ಕೈಯಿಂದ ಈ ಸ್ತಂಭವನ್ನು ಎತ್ತಿ ನಿಲ್ಲಿಸಿದ್ದಾಳೆ ಎಂದು ಪೌರಾಣಿಕ ಕಲ್ಪನೆಯ ಹಿನ್ನೆಲೆಯಲ್ಲಿ ಹೇಳುವುದುಂಟು. ಈ ಸ್ತಂಬವು ಶ್ರೀಚಂಪಕಧಾಮಸ್ವಾಮಿ ದೇವಾಲಯಕ್ಕೆ ಅಭಿಮುಖವಾಗಿರುವುದರಿಂದ ಈ ಸ್ತಂಬದ ಮೇಲ್ಭಾಗದಲ್ಲಿ ಆಗಾಗ ದೀಪವನ್ನು ಹಚ್ಚುವುದುಂಟು. ಗ್ರಾಮದ ಹೃದಯಭಾಗದಲ್ಲಿ ತನ್ನದೇ ಆದ ವೈಶಿಷ್ಟ್ಯತೆಯನ್ನು ಹೊಂದಿರುವ ಈ ಸ್ತಂಭವು ಈ ಊರಿಗೆ ಕಳಶವಿಟ್ಟಂತೆ ಕಾಣುತ್ತದೆ.

ಈ ಗರುಡಸ್ತಂಭದ ಕೆಳಭಾಗದಲ್ಲಿ ಎತ್ತರವಾದ ವೇದಿಕೆಯ ಮೇಲೆ ಎರಡು ಹೆಣ್ಣಿನ ಮುಖವಾಡಗಳಿರುವ ಕಲ್ಲಿನ ಶಿಲೆಗಳೇ ಬಿಸಿಲುಮಾರಮ್ಮ ಮತ್ತು ಮೀಸೆಮಾರಮ್ಮ. ಈ ಎರಡು ಹೆಣ್ಣಿನ ಮುಖವಾಡಗಳು ತುಂಬಾ ಸುಂದರವಾದ ಕೆತ್ತನೆಯಿಂದ ಕೂಡಿದೆ. ಎಡಪಾರ್ಶ್ವದ ಒಂದು ಶಿಲೆಯ ಅಗಲವಾದ ಮುಖಭಾವ, ಕಿರೀಟಧಾರಿಯಾಗಿ ಎರಡು ಸ್ತನಗಳಿಂದ ಕೂಡಿದ್ದು ಸುಂದರವಾದ ಮುಖವನ್ನು ಒಳಗೊಂಡಿದೆ. ಬಹುಶಃ ಇದನ್ನು 'ಬಿಸಿಲುಮಾರಮ್ಮ' ಎಂದು ಕರೆಯುವುದುಂಟು, ಬಲಪಾರ್ಶ್ವದ ಶಿಲಾಮೂರ್ತಿಯು ಸುಂದರವಾಗಿ ಕಂಗೊಳಿಸುತ್ತಿದ್ದು ಅಗಲವಾದ ಮುಖಭಾವ ಕಿರೀಟಧಾರಣೆಯಾಗಿ ಎರಡು ಸ್ತನಗಳನ್ನು ಹೊಂದಿದ್ದರು ಮುಖದಲ್ಲಿ ಮೀಸೆಯನ್ನು ಹೊಂದಿರುವುದು ಆಶ್ಚರ್ಯವನ್ನು ಉಂಟುಮಾಡುತ್ತದೆ. ಬಹುಶಃ ಮೀಸೆಯನ್ನು ಹೊಂದಿರುವ ಈ ಶಿಲೆಯನ್ನು 'ಮೀಸೆಮಾರಮ್ಮ' ಎಂಬುದು ನನ್ನ ಅಭಿಪ್ರಾಯವಾಗಿದೆ. ಈ ಎರಡು ಶಿಲೆಗಳು ಜೊತೆಜೊತೆಯಾಗಿ ಅಕ್ಕಪಕ್ಕದಲ್ಲೇ ಇವೆ, ಇವುಗಳಿಗೆ ಯಾವುದೇ ಗುಡಿಗುಂಡಾರಗಳಾಗಲೀ ಛಾವಣಿಯಾಗಲೀ ಇಲ್ಲ. ಕೇವಲ ಮಳೆ ಬಿಸಿಲು, ಗಾಳಿಗಳಿಗೆ ಅಂಜದೆ ಸದಾಕಾಲ ಬಿಸಿಲಿನಲ್ಲಿ ಒಣಗುತ್ತಿರುವುದರಿಂದ ಇವರನ್ನು 'ಬಿಸಿಲುಮಾರಮ್ಮ'ರು ಎಂದು ಸ್ಥಳೀಯರು ಕರೆಯುತ್ತಾರೆ. ಗ್ರಾಮದ ಮಹಿಳೆಯರು ಈ ಶಿಲೆಗಳಿಗೆ ಆಗಾಗ ಪೂಜೆ ಸಲ್ಲಿಸುತ್ತಾರೆ. ಮಕ್ಕಳಿಗೆ ಅಮ್ಮ, ಬಾಲಗ್ರಹ ಗಳಂತ ತೊಂದರೆಗಳಾದರೆ, ಈ ದೇವಿಯನ್ನು ತಂಪುಗೊಳಿಸಲು ಹಾಲು, ಮೊಸರುಗಳಿಂದ ಅಭಿಷೇಕವನ್ನು ಮಾಡಿ ಅರಿಶಿನ ಕುಂಕುಮ, ಗಂಧಾಕ್ಷತೆಗಳಿಂದ ಫಲಪುಷ್ಪಾದಿಗಳಿಂದ ಸಿಂಗರಿಸಿ ಪೂಜಿಸುವುದರಿಂದ ತೊಂದರೆಗಳು ನಿವಾರಣೆಯಾಗುತ್ತದೆ ಎಂಬ ನಂಬಿಕೆಯಿದೆ.

ಈಗಲೂ ಈ ತಾಯಿಗೆ ಮೊಸರು ತುಪ್ಪಗಳಿಂದ ಅಭಿಷೇಕಮಾಡಿ ಪೂಜಿಸಿದರೆ ಗ್ರಾಮ ತಂಪಾಗಿ ಸುಭಿಕ್ಷೆಯಾಗಿರುತ್ತದೆಂದು, ಆಕಸ್ಮಾತ್ ಗ್ರಾಮದಲ್ಲೇನಾದರೂ ಅನಿಷ್ಟಗಳು ಉಂಟಾದರೆ ಕಾರಣ ಈ ತಾಯಿ ಕೋಪಗೊಂಡಿರಬೇಕೆಂದು ಹೇಳುವುದು ವಾಡಿಕೆಯಾಗಿದೆ ಹಾಗಾಗಿ ಗ್ರಾಮದ ಶಾಂತಿಗಾಗಿ ಈ ದೇವಿಯರಿಗೆ ಹಾಲು, ಮೊಸರು, ಅರಿಷಿನ-ಕುಂಕುಮ ಮತ್ತು ಬೇವಿನ ಸೊಪ್ಪುಗಳಿಂದ ಪೂಜಿಸಿ ಈ ದೇವಿಯನ್ನು ಶಾಂತಗೊಳಿಸುತ್ತಾರೆ.

ಶ್ರೀವೀರಾಂಜನೇಯ ಸ್ವಾಮಿ ದೇವಾಲಯ

ಶ್ರೀಚಂಪಕಧಾಮಸ್ವಾಮಿಗೆ ಅಭಿಮುಖವಾಗಿ ಪ್ರಾಚೀನ ಗರುಡಸ್ತಂಭಕ್ಕೆ ಹಿಂಭಾಗದಲ್ಲಿ ಕಂಡುಬರುವ ದೇಗುಲವೇ ಶ್ರೀವೀರಾಂಜನೇಯಸ್ವಾಮಿ ದೇವಾಲಯ. ಹೆಸರಿಗೆ ತಕ್ಕಂತೆ ವೀರತ್ವವನ್ನೇ ಮೈಗೂಡಿಸಿಕೊಂಡು ಈ ಗ್ರಾಮದ ಪ್ರವೇಶದ್ವಾರದ ಸಮೀಪದಲ್ಲಿ ನೆಲೆಸಿದ್ದಾನೆ. ಸಾಮಾನ್ಯವಾಗಿ ಎಲ್ಲಾ ಗ್ರಾಮಗಳಲ್ಲಿ ಈ ಸ್ವಾಮಿಯನ್ನು ಊರಿನ ಪ್ರವೇಶದ್ವಾರದ ಬಳಿಯಲ್ಲಿ ದೇಗುಲ ನಿರ್ಮಿಸಿ ಪ್ರತಿಷ್ಠಾಪಿಸುವುದು ವಾಡಿಕೆ, ಕಾರಣ ಗ್ರಾಮವನ್ನು ಪ್ರವೇಶಿಸುವ ದೃಷ್ಟಶಕ್ತಿಗಳಿಂದ ಕೆಟ್ಟ ಅನಿಷ್ಟಗಳಿಂದ ಊರನ್ನು ಕಾಪಾಡುವನೆಂಬ ಬಲವಾದ ನಂಬಿಕೆ ಈಗಲೂ ಸಹ ಎಲ್ಲ ಗ್ರಾಮಗಳ ಗ್ರಾಮಸ್ಥರಲ್ಲಿ ಜನಜನಿತವಾಗಿದೆ.

ಈ ಗ್ರಾಮದಲ್ಲಿ ನೆಲೆಗೊಂಡಿರುವ ಈ ವೀರಾಂಜನೇಯಸ್ವಾಮಿಯ ವಿಗ್ರಹವನ್ನು ಕಪ್ಪುಶಿಲೆಯಲ್ಲಿ ಕೆತ್ತಲ್ಪಟ್ಟಿದೆ. ಸುಮಾರು ಹತ್ತರಿಂದ ಹನ್ನೆರಡು ಅಡಿ ಎತ್ತರವಾಗಿರುವ ಐದರಿಂದ ಆರು ಅಡಿ ಅಗಲವಾಗಿರುವ ಕಪ್ಪುಶಿಲೆಯಲ್ಲಿ ಕೆತ್ತಲಾಗಿ ಈ ಮೂರ್ತಿಯೂ ಸುಂದರವಾಗಿ ಕಂಗೊಳಿಸುತ್ತದೆ. ಸ್ವಾಮಿಯ ಬಾಲ ಸುತ್ತಿಕೊಂಡು ತಲೆಯ ಮೇಲೆ ಬಂದಿದೆ. ಬಾಲದಲ್ಲಿ ಗಂಟೆಯಿದೆ, ಬಲಗೈಯಲ್ಲಿ ಅಭಯಮುದ್ರೆಯಿದೆ. ಎಡಗೈಯನ್ನು ಮಡಚಿಕೊಂಡಿದ್ದಾನೆ. ಮುಖವನ್ನು ಓರೆಮಾಡಿಕೊಂಡು ನಿಂತಿರುವುದರಿಂದ ಮುಖದ ಎಡ ಪಾರ್ಶ್ವ ಮಾತ್ರ ಗೋಚರಿಸುತ್ತಿದ್ದು ಬಲಭಾಗದ ಕಣ್ಣು ಮಾತ್ರ ಕಾಣುತ್ತದೆ. ಎಡಭಾಗದ ಕಣ್ಣು ಕಾಣುವುದಿಲ್ಲ. ಕೊರಳಲ್ಲಿ ಸರ, ಹಾರ, ಕೈಯಲ್ಲಿ ಕಪ್ಪ ತೋಳುಬಂದಿ, ಕಾಲುಕಡಗಗಳು, ವೀರಮುಡಿಯನ್ನು ಕಣ್ಣಿಗೆ ಕಾಣುವಂತೆ ಶಿಲ್ಪಿ ಕೆತ್ತಿದ್ದು ಉತ್ತರದಿಕ್ಕಿಗೆ ತನ್ನೆರಡು ಹೆಜ್ಜೆಗಳನ್ನಿಟ್ಟುಕೊಂಡು ಚಲನೆಯಲ್ಲಿರುವಂತೆ ಕಣ್ಣಿಗೆ ಭಾಸವಾಗುತ್ತದೆ. ಈ ಮೂರ್ತಿಯನ್ನು ವ್ಯಾಸರಾಯರು ಪ್ರತಿಷ್ಠಾಪಿಸಿದೆಂದು ಹೇಳುತ್ತಾರೆ. ಪ್ರತಿನಿತ್ಯ ಇಲ್ಲಿ ಪೂಜೆ ನಡೆಯುತ್ತದೆ.

ಈ ದೇವಾಲಯದ ಹಿನ್ನಲೆಯಲ್ಲಿ ಗಮನಿಸುವುದಾದರೆ ಬಹಳ ಹಿಂದಿನಿಂದಲೂ ಈ ದೇಗುಲ ನಾಲ್ಕು ಮಂಟಪಗಳ ಕಲ್ಲಿನ ರಚನೆಯಾಗಿತ್ತಂತೆ, ಗಾಳಿ ಮಳೆಯಿಂದ ಸುರಿಯುತ್ತಿದ್ದ ಈ ದೇಗುಲ ಪೋಲಿಪುಂಡರ ಆಶ್ರಯತಾಣವಾಗಿತಂತೆ, ಕಾಲಸರಿದ ನಂತರ ಈ ಊರಿನ ಹಿರಿಯ ಗ್ರಾಮಸ್ಥರು ಮತ್ತು ಯುವಜನತೆ, ನಿರ್ಲಕ್ಷ್ಯಕ್ಕೊಳಗಾಗಿದ ಈ ಮೂರ್ತಿಗೆ ಆಧುನಿಕವಾಗಿ ಗಾರೆ ಸಿಮೆಂಟ್ ಬಳಸಿ ದೇಗುವನ್ನು ನಿರ್ಮಿಸಿದ್ದಾರೆ, ಸುಂದರವಾಗಿ ಕಾಣುವ ಈ ದೇಗುಲವು ಭಕ್ತಜನರ ಪ್ರಮುಖ ಆಕರ್ಷಣೆಯಾಗಿದೆ. ಈ ದೇಗುಲದ ಮುಂಭಾಗದಲ್ಲಿ ಎತ್ತರವಾದ ಗರುಡಸ್ತಂಭವನ್ನು ಪ್ರತಿಷ್ಠಾಪಿಸಲಾಗಿದೆ. ಈ ಸ್ತಂಭದ ಸುತ್ತಮುತ್ತಲಿನ ಪ್ರಾಂಗಣದಲ್ಲಿ ಅನೇಕ ರೀತಿಯ ಮಾಸ್ತಿಕಲ್ಲು ಆತ್ಮಾಬಲಿಕಲ್ಲು ಮತ್ತು ವೀರಗಲ್ಲುಗಳನ್ನು ಸಂಗ್ರಹಿಸಿ ಇಲ್ಲಿ ನಿಲ್ಲಿಸಲಾಗಿದೆ. ಈ ಕಲ್ಲುಗಳು ಗ್ರಾಮದ ಸುತ್ತಮುತ್ತಲಿನ ಹೊಲ ಗದ್ದೆ ಮತ್ತು ಬಯಲು ಪ್ರದೇಶಗಳಲ್ಲಿ ಜನರ ನಿರ್ಲಕ್ಷ್ಯತೆಯಿಂದ ವಿನಾಶದ ಹಾದಿಯನ್ನು ಹಿಡಿಯುತ್ತಿದ್ದದನ್ನು ಈ ದೇಗುಲದ ಬಳಿ ಸಂಗ್ರಹಿಸಲಾಗಿದೆ. ಈ ಕಲ್ಲುಗಳು ಈ ಊರಿನ ಇತಿಹಾಸವನ್ನು ಸಾರುವಂತೆ ಮೂಕಸಾಕ್ಷಿಗಳಾಗಿ ಈ ದೇವಾಲಯದ ಸುತ್ತಲೂ ನೆಲೆಸಿನಿಂತಿವೆ. ಈ ದೇಗುಲದ ಪ್ರಾಂಗಣದಲ್ಲಿ ಪ್ರಾಚೀನಕಾಲದ ಅಶ್ವಥವೃಕ್ಷ ಮತ್ತು ನಾಗರಕಟ್ಟೆ ಇರುವುದನ್ನು ಕಾಣಬಹುದು.

ಪ್ರಸ್ತುತ ಇತ್ತೀಚಿನ ವರ್ಷಗಳಲ್ಲಿ ಆಧುನಿಕತೆಯ ಪ್ರಭಾವದಿಂದ ಈ ಗ್ರಾಮದ ಸುತ್ತಮುತ್ತಲು ಇನ್ನೂ ಹಲವಾರು ದೇವಾಲಯಗಳು ನಿರ್ಮಾಣವಾಗಿರುವುದನ್ನು ಕಾಣಬಹುದು. ಶ್ರೀಮುಕಾಂಬಿಕಾದೇವಿ ದೇವಾಲಯ, ಶ್ರೀಶನೇಸ್ವರಸ್ವಾಮಿ ದೇವಾಲಯ, ಶ್ರೀಮಹಾಗಣಪತಿ ದೇವಾಲಯಗಳನ್ನು ಸಿಮೆಂಟ್ ಗಾರೆಗಳಿಂದ ಸುಂದರವಾಗಿ ಅಲಂಕರಿಸಿದ್ದಾರೆ, ಮನುಷ್ಯನ ಭಾವನೆಗಳ ಭಕ್ತಿಪಥಗಳು ಕಾಲಕ್ಕೆ ತಕ್ಕಂತೆ ಬದಲಾವಣೆಯಾದಂತೆ ಇಂಥ ಅನೇಕ ದೇವಾಲಯಗಳ ನಿರ್ಮಾಣವಾಗುವ ಸಾಧ್ಯತೆಗಳು ಇನ್ನೂ ಹೆಚ್ಚಿಗೆ ಕಂಡುಬರುತ್ತದೆ.

ಅಧ್ಯಾಯ – 6

ಸಾಂಸ್ಕೃತಿಕ ಕೇಂದ್ರವಾಗಿ ಬನ್ನೇರುಘಟ್ಟ

ಒಂದು ಸ್ಥಳದ ಸಾಂಸ್ಕೃತಿಕ ಮಹತ್ವವನ್ನು ಕುರಿತು ಅಧ್ಯಯನ ಮಾಡುವಾಗ ಮುಖ್ಯವಾಗಿ ಅಲ್ಲಿನ ಜನಾಂಗಗಳ ಸಾಂಸ್ಕೃತಿಕ ಅನನ್ಯತೆಯನ್ನು ಕಡೆಗಣಿಸಿದರೆ ಅದು ಆ ಸ್ಥಳದ ಸಮಗ್ರ ಅಧ್ಯಯನವಾಗಲಾರದು. ಜನಪದವೆಂಬುದು ಒಂದು ಸಾಂಸ್ಕೃತಿಕ ವಿಚಾರವಾಗಿದ್ದು ಅಲ್ಲಿನ ಸಾಹಿತ್ಯ, ಕಲೆ, ಸಂಗೀತ, ಶಿಲ್ಪ ನಂಬಿಕೆ, ಸಂಪ್ರದಾಯ, ಆಚರಣೆ, ಉಡುಗೆ ತೊಡುಗೆ, ಆಹಾರ, ಊಟ ವಸತಿ ಮೊದಲಾದ ಅನಂತಮುಖಗಳು ಈ ಜನಪದ ಸಂಸ್ಕೃತಿ ಇದೆ. ಇವೆಲ್ಲವನ್ನು ಒಳಗೊಂಡ ಅಧ್ಯಯನವೇ ಈ 'ಸಾಂಸ್ಕೃತಿಕ ಅಧ್ಯಯನ'

ಈ ಸಾಂಸ್ಕೃತಿಕ ಎಂಬುದು ಸಮಗ್ರತೆಯ ಹೆಸರಿನಲ್ಲಿ ಎಲ್ಲವನ್ನು ಸೇರಿಸುವ ಒಂದು ದೊಡ್ಡ ಹೋಲ್ಡಾಲ್ ಪರಿಕಲ್ಪನೆಯಾಗಿದೆ. ಈ ಸಮಸ್ಯೆ 'ಸಂಸ್ಕೃತಿ' ಶಬ್ಧಕ್ಕೂ ಇದೆ. ಈ ಸಂಸ್ಕೃತಿ ಮತ್ತು ಸಾಂಸ್ಕೃತಿಕ ಪರಿಕಲ್ಪನೆಗಳು ಸಡಿಲವಾದ ಅಸ್ಪಷ್ಟ ಅರ್ಥಗಳಲ್ಲಿಯೇ ಬಳಕೆಯಾಗುತ್ತಾ ಬಂದಂತಿದೆ.

"ಸಂಸ್ಕೃತಿ ಎಂಬ ಶಬ್ಧವನ್ನು ನಾವು ಸುಲಭವಾಗಿ ಉಪಯೋಗಿಸುತ್ತಿರುವಂತೆ ಅದರ ಅರ್ಥವನ್ನು ಅಷ್ಟು ಸುಲಭವಾಗಿ ವಿವರಿಸಲು ಸಾಧ್ಯವಿಲ್ಲ ಬ್ರಿಟಿಷರ ಸಂಪರ್ಕವುಂಟಾದ ಬಳಿಕ ಆ ಶಬ್ದದ ಉಪಯೋಗ ಹೆಚ್ಚಾಗಿದೆಯೆಂದು ಹೇಳುತ್ತಾರೆ. ಆ ಶಬ್ಧವು ಬಹುವಿಶಾಲವಾದ ಅರ್ಥದಲ್ಲಿ ಬಳಸಲ್ಪಡುತ್ತಿರುವುದರಿಂದ ಅದರ ಅರ್ಥವನ್ನು ವಿವರಿಸುವುದು ಬಿಗಿಯಾಗಿದೆ" ಎಂದು ಡಾ॥ ಸಿಂಪಿಲಿಂಗಣ್ಣ ನವರು ಹೇಳುತ್ತಾರೆ.

ಸಂಸ್ಕೃತಿ ಎಂಬ ಪದವನ್ನು ಇಂಗ್ಲಿಷಿನ 'ಕಲ್ಚರ್' (Culture) ಎಂಬ ಪದಕ್ಕೆ ಸಂವಾದಿಯಾಗಿ ಬಳಸುತ್ತಿದ್ದೇವೆ. ಈ ಕಲ್ಚರ್ ಶಬ್ಧ ಲ್ಯಾಟಿನ್ ಮೂಲದ್ದು. ಈ ಕಲ್ಚರ್ (culture) ಶಬ್ಧಕ್ಕೆ ಲ್ಯಾಟಿನ್ ಭಾಷೆಯಲ್ಲಿ ವ್ಯವಸಾಯ ಮಾಡು ಪರಿಷ್ಕರಿಸು ಪೂಜೆ ಮಾಡು ಎಂಬರ್ಥಗಳಿವೆ.

ಸಂಸ್ಕೃತಿ ಎಂಬುದು ನಮ್ಮ ಧರ್ಮದ ಅಥವಾ ದೇಶದ ಒಂದು ಸಾಂಕೇತಿಕ ಗುರುತು, ಅದು ಪವಿತ್ರವೂ, ಪ್ರಾಚೀನವೂ ಆದದ್ದು, ನಮ್ಮ ಹಿರೀಕರಿಂದ ಬಂದ ಬಳುವಳಿ, ನಾವದನ್ನು ಆದರಿಸಬೇಕು. ಅನುಸರಿಸಬೇಕು ಮಾತ್ರವಲ್ಲ ಅನ್ಯರ ಆಕ್ರಮಣಗಳಿಂದ ರಕ್ಷಿಸಬೇಕು. ಈ ಸಂಸ್ಕೃತಿ ಎಂಬ ಶಬ್ದ 'ಸಂಸ್ಕೃತದ್ದು' ಸಂಸ್ಕೃತಿ ಎಂಬುದು ಭೌದ್ಧಿಕ ಚರ್ಚೆ ಮಾಡುವವರು ಬಳಸುವು ಒಂದು ಪರಿಭಾಷೆ.

'ಸಂಸ್ಕೃತಿ' ಎಂದರೆ ಸಮುದಾಯ ಒಂದರ ಸಮಗ್ರ ಜೀವನ ವಿಧಾನಗಳ ಮೊತ್ತ ಅಂದರೆ ಉಡುವ ಬಟ್ಟೆ, ಉಣ್ಣುವ ಊಟ, ಆಡುವ ಮಾತು, ಮಾಡುವ ಆಚರಣೆ, ನಂಬಿದ ನಂಬಿಕೆ, ಮುಂತಾಗಿ ಇಡೀ ಬದುಕಿನ ವಿವರಗಳನ್ನು ಒಳಗೊಳ್ಳುತ್ತದೆ.

ಮನುಷ್ಯನ ಅಂತರಂಗ, ಬಹಿರಂಗ ವರ್ತನೆ ಕ್ರಿಯೆಗಳು ಸಂಸ್ಕೃತಿಯನ್ನು ರೂಪಿಸುತ್ತ, ಹಿಗ್ಗಿಸುತ್ತ ಬರುತ್ತವೆ, ಆದ್ದರಿಂದ ಮನುಷ್ಯ ಎಂಬುವವನು ಎಲ್ಲೆಲ್ಲಿ ಇದ್ದಾನೋ ಅಲ್ಲೆಲ್ಲ ಸಂಸ್ಕೃತಿ ಇದ್ದೇ ಇರುತ್ತದೆ. ಜಗತ್ತಿನಾದ್ಯಂತ ಒಂದೇ ಸಂಸ್ಕೃತಿ ಇಲ್ಲ, ಇರಲು ಸಾಧ್ಯವೂ ಇಲ್ಲ, ಗೂಬೆ ಕೂಗಿದ್ದು ಭಾರತೀಯರಿಗೆ ಅಪಶಕುನವಾದರೆ ಪಾಶ್ಚಾತ್ಯದೇಶಗಳಲ್ಲಿ ಗೂಬೆ ಬುದ್ಧಿವಂತಿಕೆಗೆ ಸಂಕೇತವಾಗಿ ಮೆಚ್ಚುಗೆಯ ಪಕ್ಷಿಯಾಗಿದೆ. ಆದ್ದರಿಂದ ಸಂಸ್ಕೃತಿಗಳಲ್ಲಿ ಒಂದು ಕನಿಷ್ಠ ಒಂದು ಶ್ರೇಷ್ಠ ಎಂಬ ತಾರತಮ್ಯ ಮಾಡಬಾರದು.

ಇಪ್ಪತ್ತನೇ ಶತಮಾನದ ಬೌದ್ಧಿಕ ಚರ್ಚೆಗಳಲ್ಲಿ ಅಪಾರವಾಗಿ ಬಳಕೆಯಾದ ಶಬ್ದಗಳಲ್ಲಿ ಸಂಸ್ಕೃತಿಯೂ ಒಂದು, ಈ ಶಬ್ದವನ್ನು ಬಳಸಿಕೊಂಡು ಹುಟ್ಟಿರುವ ವಿವಿಧ ಪರಿಭಾಷೆಗಳನ್ನು ಈ ರೀತಿ ಕಾಣಬಹುದು. ಹಿಂದೂ ಸಂಸ್ಕೃತಿ, ಮುಸ್ಲಿಂಸಂಸ್ಕೃತಿ, ಸಿದ್ಧಿಯರ ಸಂಸ್ಕೃತಿ, ದಲಿತಸಂಸ್ಕೃತಿ, ಭಾರತೀಯ ಸಂಸ್ಕೃತಿ, ಜರ್ಮನ್ ಸಂಸ್ಕೃತಿ, ಮರಾಠಿ ಸಂಸ್ಕೃತಿ, ಕನ್ನಡ ಸಂಸ್ಕೃತಿ, ಗ್ರಾಮೀಣ ಸಂಸ್ಕೃತಿ, ಪರ್ಯಾಯಾ ಸಂಸ್ಕೃತಿ, ಉಪಸಂಸ್ಕೃತಿ, ಪ್ರತಿ ಸಂಸ್ಕೃತಿ, ಸಮಾಜವಾದಿ ಸಂಸ್ಕೃತಿ, ಬಂಡವಾಳಶಾಯಿ ಸಂಸ್ಕೃತಿ, ಕೃಷಿ ಸಂಸ್ಕೃತಿ, ಪುಸ್ತಕ ಸಂಸ್ಕೃತಿ, ಸಿನಿಮಾ ಸಂಸ್ಕೃತಿ, ಯುದ್ಧ ಸಂಸ್ಕೃತಿ, ಗೂಂಡಾ ಸಂಸ್ಕೃತಿ, ಹಿಪ್ಪಿ ಸಂಸ್ಕೃತಿ, ಬಾಂಬ್ ಸಂಸ್ಕೃತಿ – ಇತ್ಯಾದಿ ಪರಿಭಾಷೆಗಳು, ಪರಿಕಲ್ಪನೆಗಳು ಹುಟ್ಟಿಕೊಂಡಿವೆ.

ಈ ಸಂಸ್ಕೃತಿ ಪರಿಕಲ್ಪನೆಯ ಈ ಬಹುರೂಪಿ ಅರ್ಥಗಳಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಬಳಕೆಯಾಗುತ್ತಿರುವ 'ಸಾಂಸ್ಕೃತಿಕ ಅಧ್ಯಯನ'ದ ಅರ್ಥವೂ ಸೇರಿದೆ.

ಯಾವುದಾದರೂ ವಿಷಯ ಆರಿಸಿಕೊಂಡು ಅದನ್ನು 'ಸಾಂಸ್ಕೃತಿಕ' ಎಂದು ಪ್ರಚಲಿತವಾಗಿರುವ ಒಂದು ಅಧ್ಯಯನ ವಿಧಾನದ ಮೂಲಕ ವಿಶ್ಲೇಷಿಸುವುದನ್ನು 'ಸಾಂಸ್ಕೃತಿಕ ಅಧ್ಯಯನ' ಎನ್ನಬಹುದು. ಉದಾ: ಚಿದಾನಂದಮೂರ್ತಿ ಅವರ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಚಾರಿತ್ರಿಕವಾಗಿ ಮೊದಲು ಶುರುವಾಗಿದ್ದು ಸಂಸ್ಕೃತಿ ಚಿಂತನೆ ನಂತರ ಬಂದದ್ದು ಈ ಸಾಂಸ್ಕೃತಿಕ ಅಧ್ಯಯನಗಳು ಸಾಂಸ್ಕೃತಿಕ ಅಧ್ಯಯನ ಮಾಡುತ್ತಲೆ ಸಂಸ್ಕೃತಿ ಚಿಂತನೆ ರೂಪು ತಳೆಯಬಹುದು. 'ಸಾಂಸ್ಕೃತಿಕ' ಎಂಬುದು ಬದುಕಿನ ಹಲವು ಆಯಾಮಗಳನ್ನು ಅಖಂಡವಾಗಿ ಹಿಡಿವ ಪರಿಭಾಷೆಯಾಗಿ ಬಳಕೆ ಆಗುತ್ತಿರುವುದನ್ನು ಕನ್ನಡದಲ್ಲಿ ಕಾಣಬಹುದು.

ಬಹುಶಃ ಕನ್ನಡದಲ್ಲಿ ಬಹುಶಿಸ್ತೀಯ ಎಂಬರ್ಥದಲ್ಲಿ 'ಸಾಂಸ್ಕೃತಿಕ ಅಧ್ಯಯನ'ದ ಪರಂಪರೆಯನ್ನು ಶುರುಮಾಡಿದ್ದು ಚಿದಾನಂದಮೂರ್ತಿ ಅವರ "ಕನ್ನಡ ಶಾಸನಗಳು ಸಾಂಸ್ಕೃತಿಕ ಅಧ್ಯಯನ' (1966) ಎನ್ನುಬಹುದು. ನಂತರ ದಿನಗಳಲ್ಲಿ ಪಿ.ವಿ.ನಾರಾಯಣ 'ವಚನ ಸಾಹಿತ್ಯ' ಸಾಂಸ್ಕೃತಿಕ ಅಧ್ಯಯನ' ಮೂಡಿಬಂದವು. ನಂತರದ ಕಾಲಘಟ್ಟದಲ್ಲಿ ನಿರ್ದಿಷ್ಟವಾದ ಗ್ರಾಮಕ್ಕೆ ಸಂಬಂಧಿಸಿದ ಸಾಂಸ್ಕೃತಿಕ ಅಧ್ಯಯನಗಳು ಉದಾ : ಸುಗ್ಗನಹಳ್ಳಿ – ಒಂದು ಸಾಂಸ್ಕೃತಿಕ ಅಧ್ಯಯನ, ಹೊಂಗನೂರು – ಒಂದು ಸಾಂಸ್ಕೃತಿಕ ಅಧ್ಯಯನ ಎಂಬ ಅಧ್ಯಯನಗಳು ಮೂಡಿಬಂದವು.

ಸಾಂಸ್ಕೃತಿಕ ಅಧ್ಯಯನದ ಜೊತೆಜೊತೆಯಲ್ಲಿಯೇ ಈ ಸಂಸ್ಕೃತಿ ಅಧ್ಯಯನ ನಡೆಯುತ್ತಿರುತ್ತದೆ. ಇವೆರಡನ್ನೂ ಬೇರ್ಪಡಿಸಿ ನೋಡಲಾಗುವುದಿಲ್ಲ. ಪ್ರಸ್ತುತ ನನ್ನ ಅಧ್ಯಯನದಲ್ಲಿ 'ಸಾಂಸ್ಕೃತಿಕ' ಎಂಬುದಾಗಿ ಪದಪ್ರಯೋಗವಿದ್ದರೂ ಅದು 'ಸಂಸ್ಕೃತಿ' ಕೇಂದ್ರದ ಸುತ್ತಲು ಸುತ್ತುತ್ತಿರುತ್ತದೆ ಎಂದು ಹೇಳಬಹುದು. ಈ ದೃಷ್ಟಿಯಿಂದ 'ಬನ್ನೇರುಘಟ್ಟ' ಕ್ಷೇತ್ರದ ಅಧ್ಯಯನವು ಹಲವು ಸಾಂಸ್ಕೃತಿಕ ಆಯಮಗಳನ್ನು ಒಳಗೊಂಡಿದೆ ಂದು ಹೇಳಬಹುದು. ಈ ಕ್ಷೇತ್ರವನ್ನು ಭೌಗೋಳಿಕವಾಗಿ, ಚಾರಿತ್ರಿಕವಾಗಿ, ಧಾರ್ಮಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಅಲ್ಲಿನ ಶಾಸನಗಳು, ಜಾನಪದೀಯ ಆಚರಣೆಗಳು ನಂಬಿಕೆಗಳು, ಸಂಪ್ರದಾಯಗಳು ಹೀಗೆ ವಿವಿಧ ಜನಾಂಗಗಳ ಸಾಂಸ್ಕೃತಿಕ ಬದುಕನ್ನು ಈ ಕೆಳಕಂಡಂತೆ ವಿಭಾಗೀಕರಿಸಿಕೊಂಡು ಅಧ್ಯಯನ ಮಾಡಲಾಗಿದೆ.

[27]ಜಾತಿಪದ್ಧತಿ

ಹಿಂದೂ ಸಮಾಜದಲ್ಲಿ ಅನೇಕ ಸಾಮಾಜಿಕ ಪದ್ದತಿಗಳು ಬೆಳೆದುಬಂದಿವೆ. ಅದರಲ್ಲಿ ಜಾತಿವ್ಯವಸ್ಥೆಯು ಒಂದು. ಈ ಜಾತಿವ್ಯವಸ್ಥೆ ಪ್ರಮುಖವಾದ ಮತ್ತು ಬಲಿಷ್ಠವಾದ ಒಂದು ಸಾಮಾಜಿಕ ಲಕ್ಷಣವಾಗಿದೆ. ಪ್ರಾಚೀನ ಕಾಲದಲ್ಲಿ ಈ ಜಾತಿವ್ಯವಸ್ಥೆಯನ್ನು ಮುಖ್ಯವಾಗಿ ನಾಲ್ಕು ವರ್ಣಗಳಿಂದ ಕರೆಯಲಾಗುತ್ತಿದ್ದು ಕಾಲಕ್ರಮೇಣ ಈ ನಾಲ್ಕು ವರ್ಣಗಳಿಂದ ಅನೇಕ ಜಾತಿ, ಉಪಜಾತಿಗಳು ನಿರ್ಮಾಣವಾದವು. ಇದರಿಂದ ಜನರಲ್ಲಿ ಒಗ್ಗಟ್ಟು ಕಡಿಮೆಯಾಯಿತು, ವಿವಿಧ ರೀತಿಯ ವೃತ್ತಿಗನುಗುಣವಾಗಿ ಈ ಜಾತಿವ್ಯವಸ್ಥೆ ನಿರ್ಮಾಣವಾಯಿತು.

ಬನ್ನೇರುಘಟ್ಟ ಗ್ರಾಮದಲ್ಲಿ ಜಾತಿವ್ಯವಸ್ಥೆ ಗಟ್ಟಿಯಾದ ಒಂದು ಸಾಮಾಜಿಕ ವ್ಯವಸ್ಥೆಯಾಗಿದೆ. ಈ ಗ್ರಾಮದಲ್ಲಿ ಇಂದಿಗೂ ಸಹ ಪ್ರಬಲವಾಗಿ ಈ ಜಾತಿವ್ಯವಸ್ಥೆ ಉಳಿದುಕೊಂಡು ಬಂದಿದೆ. ಇದರಿಂದ ಸಾಂಸ್ಕೃತಿಕವಾಗಿ ಹಲವು ಅಂಶಗಳನ್ನು ನಿರ್ಮಿಸುವ ಮತ್ತು ನಿಯಂತ್ರಿಸುವ ವಿಶೇಷತೆಯನ್ನು ನಡೆದಿದೆ. ಈ ಹಿನ್ನೆಲೆಯಲ್ಲಿ 'ಬನ್ನೇರುಘಟ್ಟ' ಗ್ರಾಮದ 'ಜಾತಿ' ವಿಚಾರವನ್ನು ಗುರುತಿಸಲಾಗಿದೆ. ಈ ಬನ್ನೇರುಘಟ್ಟದಲ್ಲಿ ಪ್ರಮುಖವಾಗಿ ಬ್ರಾಹ್ಮಣರು, ಒಕ್ಕಲಿಗರು, ಮೊದಲಿಯಾರ್‌ಗಳು ರಜಪೂತರು, ಲಿಂಗಾಯಿತರು, ಬಣಜಿಗರು, ಬೋವಿಗಳು, ಅಗಸರು, ಹರಿಜನಾಂಗದವರೆಗೆ ಹಲವಾರು ಜಾತಿಯವರು ಈ ಗ್ರಾಮದಲ್ಲಿ ನೆಲೆಸಿದ್ದಾರೆ. ಅಲ್ಲದೇ ಮುಸ್ಲಿಂಮರು ಈ ಊರಿನಲ್ಲಿ ವಾಸವಿಲ್ಲ. ಕ್ರಿಸ್ಚಿಯನ್ನರು ಈ ಗ್ರಾಮದಲ್ಲಿ ವಾಸವಿಲ್ಲದಿದ್ದರೂ ಈ ಗ್ರಾಮದ ಸಮೀಪದಲ್ಲಿ ನೆಲೆಸಿದ್ದಾರೆ. ಇದರಿಂದ ಗ್ರಾಮವನ್ನು ಅಧ್ಯಯನ ಮಾಡುವಾಗ ಸಾಮಾಜಿಕ ಜೀವನ ಚಿತ್ರಣವನ್ನು ಅಧ್ಯಯನ ಮಾಡುವುದು ಸೂಕ್ತ ಏಕೆಂದರೆ ಸಾಮಾಜಿಕ ಜೀವನದಲ್ಲಿ ಗ್ರಾಮದ ಇಂದಿನ ಪೂರ್ಣ ಚಿತ್ರವಿರುವುದರಿಂದ ಇದನ್ನು ಅಧ್ಯಯನ ಮಾಡಬೇಕಾಗುತ್ತದೆ.

ಬ್ರಾಹ್ಮಣರು :

ಈ ಬನ್ನೇರುಘಟ್ಟ ಗ್ರಾಮದಲ್ಲಿ ಈ ಬ್ರಾಹ್ಮಣ ಸಮುದಾಯದವರು ಕಡಿಮೆ ಸಂಖ್ಯೆಯಲ್ಲಿದ್ದಾರೆ. ಸುಮಾರು 10–15 ಮನೆಗಳಲ್ಲಿ ವಾಸವಾಗಿದ್ದಾರೆ. ತುಂಬಾ ವರ್ಷಗಳ ಹಿಂದಿನಿಂದಲೂ ಇದೇ ಗ್ರಾಮದಲ್ಲಿ ನೆಲೆಸಿದ್ದಾರೆ. ಮೂಲತಃ ಅರ್ಚಕವೃತ್ತಿಯನ್ನು ಮಾಡುತ್ತಿದ್ದಾರೆ.

---

[27] ವಕ್ತೃ : ನರಸಿಂಹಯ್ಯ ಒಕ್ಕಲಿಗ, 67 ವರ್ಷ, ವ್ಯವಹಾರ

ಇವರು ವೈಷ್ಣವರಾಗಿದ್ದು ವಿಷ್ಣು ಮತ್ತು ವಿಷ್ಣುವಿನ ಅವತಾರಗಳ ದೈವಾರಾಧಕರು. ಈ ಗ್ರಾಮದ ಆರಾಧ್ಯದೈವವಾದ ಶ್ರೀಚಂಪಕಧಾಮಸ್ವಾಮಿ ಮತ್ತು ಶ್ರೀ ಲಕ್ಷ್ಮೀನರಸಿಂಹಸ್ವಾಮಿಯ ದೇವಾಲಯಗಳಲ್ಲಿ ಪೂಜಾ ಕೈಂಕರ್ಯಗಳನ್ನು ಮಾಡುತ್ತಾ ಆಗಮಿಕರಾಗಿ ಪ್ರಸ್ತುತ ಸೇವೆಸಲ್ಲಿಸುತ್ತಿದ್ದಾರೆ. ವಿದ್ಯಾವಂತರಾಗಿರುವ ಇವರು ಖಾಸಗಿಕೆಲಸಗಳಲ್ಲೂ ನಿರತರಾಗಿದ್ದಾರೆ. ಇವರ ಸಂಬಂಧಿಕರು ತಿರುಪತಿ ಶ್ರೀವೆಂಕಟೇಶ್ವರನಿಗೂ ಮತ್ತು ಕದಿರಿ ನರಸಿಂಹಸ್ವಾಮಿ ಮತ್ತು ಬೆಟ್ಟದಾಸನಪುರ ಶ್ರೀತಿಮ್ಮರಾಯಸ್ವಾಮಿ ದೇವಾಲಯಗಳಲ್ಲೂ ಮೂಲತಃ ಅರ್ಚಕರಾಗಿ ಸೇವೆಸಲ್ಲಿಸುತ್ತಿದ್ದಾರೆಂತೆ. ವಂಶಪಾರಂಪರ್ಯವಾಗಿ ನಡೆಸಿಕೊಂಡು ಬಂದಿರುವ ಈ ಪೌರಾಹಿತ್ಯ ವೃತ್ತಿಯನ್ನು ಪ್ರಸ್ತುತ ಜೀವನೋಪಾಯದ ವೃತ್ತಿಯಾಗಿ ಮಾಡಿಕೊಂಡಿದ್ದಾರೆ.

ಮೊದಲಿಯಾರ್‌ಗಳು :

ಈ ಗ್ರಾಮಕ್ಕೆ ಇವರು ವಲಸಿಗರಾಗಿ ತುಂಬಾ ವರ್ಷಗಳ ಹಿಂದೆಯೇ ಆಗಮಿಸಿದ್ದಾರೆ. ಸುಮಾರು 150 ಮನೆಗಳಲ್ಲಿ ವಾಸವಾಗಿರುವ ಇವರು ಆರ್ಥಿಕವಾಗಿ ಪ್ರಬಲರಾಗಿದ್ದಾರೆ. ಬ್ರಿಟಿಷರ ಆಡಳಿತದ ಕಾಲದಲ್ಲಿ ಮದ್ರಾಸ್ ಪ್ರಾಂತ್ಯದ ಕಡೆಯಿಂದ ಈ ಪ್ರದೇಶಕ್ಕೆ ಆಗಮಿಸಿದರೆಂದು ಹೇಳುತ್ತಾರೆ. ಪ್ರಮುಖವಾಗಿ ಇವರು ವ್ಯಾಪಾರದ ಅಂಗಡಿಗಳು ಗಿರಿವಿ ಅಂಗಡಿ ಮತ್ತು ಅನೇಕ ಚಿಲ್ಲರೆ ಅಂಗಡಿಗಳನ್ನು ಇಟ್ಟುಕೊಂಡು ಜೀವನ ನಡೆಸುತ್ತಿದ್ದಾರೆ. ಕೆಲವರು ಸರ್ಕಾರಿ ಉದ್ಯೋಗದಲ್ಲಿದ್ದಾರೆ. ಮೂಲತಃ ಭೂಮಿಯನ್ನು ಹೊಂದಿರುವ ಇವರು ಕೃಷಿಕ ವೃತ್ತಿಯಲ್ಲೂ ನಿರತರಾಗಿದ್ದಾರೆ. ವಿವಾಹದ ಛತ್ರಗಳನ್ನು ಹೊಂದಿರುವ ಇವರು ವ್ಯಾಪಾರ ವೃತ್ತಿಯಲ್ಲಿ ಜನಪ್ರಿಯರಾಗಿದ್ದು ಆರ್ಥಿಕವಾಗಿ ಪ್ರಬಲರಾಗಿದ್ದಾರೆ.

ಒಕ್ಕಲಿಗರು :

ಈ ಬನ್ನೇರುಘಟ್ಟ ಗ್ರಾಮದಲ್ಲಿ ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುವ ಪ್ರಮುಖ ಸಮುದಾಯವೆಂದರೆ ಒಕ್ಕಲಿಗರು. ಹೊಲದ ಉಳುಮೆ ಮತ್ತು ಒಕ್ಕುವ ಕೆಲಸದಿಂದಾಗಿ 'ಒಕ್ಕಲಿಗ' ಎಂಬ ಪದ ಬಂದಂತಿದೆ. ಜೊತೆಗೆ 'ಗೌಡ' ಎಂಬ ಹೆಸರು ಇವರಿಗಿದೆ. ಮೂಲತಃ ಭೂಮಿಯನ್ನು ಹೊಂದಿರುವುದರಿಂದ ವ್ಯವಸಾಯವನ್ನು ಮಾಡಿಕೊಂಡಿದ್ದಾರೆ. ಈ ಗ್ರಾಮದಲ್ಲಿ ಒಕ್ಕಲಿಗರಲ್ಲಿ ಪ್ರಧಾನವಾಗಿ ಎರಡು ಪಂಗಡಗಳಿರುವುದನ್ನು ಕಾಣಬಹುದು.

1) ಗಂಗಟಕಾರ ಒಕ್ಕಲಿಗರು 2) ಕುಂಚಿಟಿಗ ಒಕ್ಕಲಿಗರು.

ಗಂಗಟಕಾರ ಒಕ್ಕಲಿಗರು :

ಇವರು ಗಂಗರಸರ ವಂಶದವರಾಗಿದ್ದು ಗಂಗರು ಎಲ್ಲೆಲ್ಲಿ ರಾಜ್ಯ ಸ್ಥಾಪನೆ ಮಾಡಿದರೊ ಅಲ್ಲೆಲ್ಲಾ 'ಗಂಗಡಕಾರ ಒಕ್ಕಲಿಗರು' ಕಂಡುಬರುತ್ತಾರೆ. ಬೇಸಾಯವನ್ನೇ ಕುಲಕಸುಬನ್ನಾಗಿ ಮಾಡಿಕೊಂಡು ಈ ಪ್ರದೇಶದಲ್ಲಿ ಅನೇಕ ವರ್ಷಗಳಿಂದ ನೆಲೆಸಿದ್ದಾರೆ. ಇವರ ಹಿಂದಿನಿಂದಲೂ ತಮ್ಮ ಮನೆಯ ಸಂಪ್ರದಾಯದಂತೆ 'ಕರಿಯಣ್ಣ–ಕೆಂಚಣ್ಣ' ಎಂಬ ದೈವಾರಾಧನೆಯಲ್ಲಿ ತೊಡಗಿಕೊಂಡಿದ್ದಾರೆ. ಇವರು ಮನೆಮನೆಗೆ ಈ ಜನಪದ ದೇವರುಗಳನ್ನು ಕೊಂಡೊಯ್ದು ನಾಮಧಾರಿಗಳಾಗಿ ಗಂಟೆ, ಜಾಗಟೆ, ಮತ್ತು ಶಂಖಗಳ ನಾದ ಮೊಳಗಿಸಿ ಆ ಮನೆಯವರಿಗೆ ಒಳ್ಳೆದಾಗಲೆಂದು ಪೂಜೆ ಸಲ್ಲಿಸುತ್ತಾರೆ. ಕೊನೆಯಲ್ಲಿ ಆ ಮನೆಯವರು ನೀಡುವ ದವಸ–ಧಾನ್ಯ–

ಕಾಣಿಕೆಗಳನ್ನು ತೆಗೆದುಕೊಂಡು ಮರಳುತ್ತಾರೆ, ಮುಖ್ಯವಾಗಿ ಇವರು 'ಶ್ರಾವಣ ಶನಿವಾರ'ಗಳಲ್ಲಿ ಈ ರೀತಿಯ ಸಂಪ್ರದಾಯಗಳನ್ನು ಮಾಡುತ್ತಾರೆ.

ಕುಂಚಿಟಗ ಒಕ್ಕಲಿಗರು :

ಇವರು ಸಹ ಈ ಗ್ರಾಮದಲ್ಲಿ 'ವ್ಯವಸಾಯ'ದಲ್ಲಿ ನಿರತರಾಗಿದ್ದಾರೆ. ಬಹಳ ವರ್ಷಗಳಿಂದಲೂ ಇದೇ ಗ್ರಾಮದಲ್ಲಿ ವಾಸವಾಗಿರುವವರು ಕೆಲವರಾದರೆ ಮತ್ತೆ ಕೆಲವರು ತಮಿಳುನಾಡಿನ ಗುಮ್ಮಳಾಪುರ ಮತ್ತು ತಳಿ ಪ್ರದೇಶಗಳಿಂದ ಈ ಗ್ರಾಮಕ್ಕೆ ಬಹಳ ವರ್ಷಗಳ ಹಿಂದೆಯೇ ವಲಸೆ ಬಂದಿದ್ದಾರೆ. ಹೀಗಾಗಿ ಈ ಎರಡು ಪಂಗಡಗಳ ಒಕ್ಕಲಿಗರು ಮುಖ್ಯವಾಗಿ ಈ ಗ್ರಾಮದಲ್ಲಿ ನೆಲೆಸಿದ್ದು ವ್ಯವಸಾಯ, ರಿಯಲ್ ಎಸ್ಟೇಟ್, ಚಿಲ್ಲರೆ ವ್ಯಾಪಾರ, ಗಾರ್ಮೆಂಟ್ಸ್ ಕೆಲಸಗಳಲ್ಲದೆ ರಾಜಕೀಯ ಕ್ಷೇತ್ರದಲ್ಲೂ ತೊಡಗಿಸಿಕೊಂಡಿದ್ದಾರೆ. ಆರ್ಥಿಕವಾಗಿ ಪ್ರಬಲರಾಗಿರುವ ಈ ಜನಾಂಗದವರು ಬನ್ನೇರುಘಟ್ಟ ಪ್ರದೇಶದ ಪಕ್ಕದಲ್ಲಿರುವ 'ಕರಿಯಪ್ಪನ ಹಳ್ಳಿ' ಗ್ರಾಮದಲ್ಲಿ ಸಹ ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿದ್ದಾರೆ.

ರಜಪೂತರು :

ಈ ಗ್ರಾಮದಲ್ಲಿ ಇವರನ್ನು 'ಸಿಂಗರೆಂದು' ಕರೆಯುತ್ತಾರೆ. ಬಹುಶಃ ಇವರು ಪಂಜಾಬ್ ಪ್ರಾಂತ್ಯದವರಾಗಿರಬೇಕು, ಇವರು ಈ ಗ್ರಾಮಕ್ಕೆ ವ್ಯಾಪಾರಕ್ಕಾಗಿ ಬಂದವರು ಇಲ್ಲಿಯೇ ನೆಲೆಸಿದ್ದಾರೆ ಸುಮಾರು 50–60 ವರ್ಷಗಳ ಹಿಂದೆ ಈ ಹಳೆಯ ತಲೆಮಾರಿನ ಜನಾಂಗದವರು ಈ ಬನ್ನೇರುಘಟ್ಟ ಪ್ರದೇಶದ ಕಾಡಿಗೆ 'ಅರಣ್ಯಾಧಿಕಾರಿ'ಗಳಾಗಿ ಬಂದು ತದ ನಂತರ ಇದೇ ಗ್ರಾಮದಲ್ಲಿ ವ್ಯಾಪಾರವನ್ನು ಮಾಡಿಕೊಂಡು ವಾಸಿಸುತ್ತಿದ್ದಾರೆ. ಬಹಳವರ್ಷಗಳ ಹಿಂದೆ ಈ ಪ್ರದೇಶಕ್ಕೆ ಆಗಮಿಸಿದ ಇವರು ಈ ಗ್ರಾಮದಲ್ಲಿ ವ್ಯವಸಾಯ ಭೂಮಿಯನ್ನು ಹೊಂದಿದ್ದಾರೆ. ಪ್ರಸ್ತುತ ಆರ್ಥಿಕವಾಗಿ ಪ್ರಬಲರಾಗಿರುವ ಜನಾಂಗವಾಗಿದೆ. ಈ ಗ್ರಾಮದ ಶ್ರೀಜಯರಾಮ್ ಎಂಬುವವರು ಬಹಳ ಹಿಂದಿನಿಂದಲೂ ಈ ಗ್ರಾಮದಿಂದ ರಾಜಕೀಯ ಕ್ಷೇತ್ರಕ್ಕೆ ಪಾದರ್ಪಣೆಮಾಡಿದ್ದು ಕಾಲಸರಿದಂತೆ, ಗ್ರಾಮಪಂಚಾಯಿತಿ, ತಾಲ್ಲೂಕು ಪಂಚಾಯ್ತಿ ಚುನಾವಣೆಗಳಲ್ಲಿ ಸ್ಪರ್ಧಿಸಿ ಪ್ರಮುಖ ಸ್ಥಾನವನ್ನು ಪಡೆದ ಇವರು ಪ್ರಸ್ತುತ ಜಿಲ್ಲಾಪಂಚಾಯ್ತಿಯ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಈ ಗ್ರಾಮದಲ್ಲಿ ವಿವಾಹದ ಕಲ್ಯಾಣ ಮಂಟಪಗಳು, ರಿಯಲ್ ಎಸ್ಟೇಟ್, ವ್ಯಾಪಾರ–ವ್ಯವಹಾರ ಬಾಡಿಗೆ ಹಲವಾರು ಅಂಗಡಿ ಮುಂಗಟ್ಟುಗಳನ್ನು ಇಟ್ಟುಕೊಂಡು ಆರ್ಥಿಕವಾಗಿ ಪ್ರಬಲರಾಗಿದ್ದಾರೆ.

ಲಿಂಗಾಯಿತರು :

ಈ ಲಿಂಗಾಯಿತರಿಗೆ 'ವೀರಶೈವರು', 'ಶಿವಾಚಾರದವರೆಂದು' ಕರೆಯುತ್ತಾರೆ. ಲಿಂಗಾಯಿತ ಧರ್ಮದ ಹೆಸರೇ ಸೂಚಿಸುವಂತೆ ಲಿಂಗಧಾರಣೆ ಮಾಡಿಕೊಂಡಿರುವುದರಿಂದ ಇವರನ್ನು 'ಲಿಂಗಾಯಿತರು' ಎಂದು ಕರೆಯುತ್ತಾರೆ. ಈ ಸಮುದಾಯದವರು ಈ ಗ್ರಾಮಕ್ಕೆ ಅನೇಕ ವರ್ಷಗಳಿಂದಲೂ ವಾಸವಾಗಿದ್ದಾರೆ ಕೆಲವು ಕುಟುಂಬಗಳು ಮಾತ್ರ ರಾಜಾಪುರ (ವೀರಶೈವಕ್ಷೇತ್ರ)ದಿಂದ ಈ ಗ್ರಾಮಕ್ಕೆ ವಲಸೆಬಂದವರಾಗಿದ್ದಾರೆ. ಈ ಗ್ರಾಮದಲ್ಲಿ ಅತ್ಯಂತ ಕಡಿಮೆ ಸಂಖ್ಯೆಯಲ್ಲಿರುವ ಇವರು ವ್ಯವಸಾಯ ವೃತ್ತಿಯಲ್ಲದೆ ಗಂಧಿಗೆ ಅಂಗಡಿಗಳನ್ನು ಇಟ್ಟುಕೊಂಡು ಆರ್ಥಿಕವಾಗಿ ಜೀವನೋಪಾಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಈ ಗ್ರಾಮದಲ್ಲಿರುವ ಶ್ರೀ

ಆವಲಮ್ಮ ಮತ್ತು ಶ್ರೀ ಸತ್ಯಮ್ಮ ಎಂಬ ದೇವಾಲಯಗಳನ್ನು ನಿರ್ಮಿಸಿಕೊಂಡು ಪೂಜಾಕೈಂಕರ್ಯಗಳಲ್ಲೂ ಸಹ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಹಿಂದಿನಿಂದಲೂ ಶಿವನಿಗೆ ಸಂಬಂಧಿಸಿದ ಎಲ್ಲಾ ಹಬ್ಬಗಳನ್ನು ಈ ಲಿಂಗಾಯಿತ ಸಮುದಾಯದವರು ಆಚರಿಸುತ್ತಾರೆ.

ಭೋವಿಗಳು :

ಇವರು 'ದಲಿತಜನಾಂಗಕ್ಕೆ' ಸೇರಿದವರು. ಸಾಮಾಚಿಕವಾಗಿ ಕೆಳ ಸಮುದಾಯದವರಾಗಿದ್ದಾರೆ. ಇವರು ಮೂಲ ಅನೇಕ ವರ್ಷಗಳಿಂದ ಈ ಗ್ರಾಮದಲ್ಲೇ ನೆಲೆಸಿದ್ದಾರೆ. ಸಾಮಾಜಿಕವಾಗಿ ಕೆಳಜನಾಂಗದವರಾದರು ಆರ್ಥಿಕವಾಗಿ ಮುನ್ನಡೆಯನ್ನು ಹೊಂದುತ್ತಿದ್ದಾರೆ. ಈ ಸಮುದಾಯದವರು ಸುಮಾರು 50-60 ಮನೆಗಳಲ್ಲಿ ಈ ಬನ್ನೇರುಘಟ್ಟಕ್ಕೆ ಹೊಂದಿಕೊಂಡಂತೆ ಕೆಂಪನಾಯಕನಹಳ್ಳಿಯಲ್ಲಿ ವಾಸವಾಗಿದ್ದಾರೆ. ರಿಯಲ್ ಎಸ್ಟೇಟ್, ಬಾಡಿಗೆ ಮನೆಗಳು, ವ್ಯಾಪಾರ ಅಂಗಡಿಮುಂಗಟ್ಟುಗಳನ್ನು ಹೊಂದಿರುವ ಇವರು ರಾಜಕೀಯವಾಗಿಯೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕೆಲವರು ವ್ಯವಸಾಯ ಭೂಮಿಯನ್ನು ಹೊಂದಿದ್ದು ಬೇಸಾಯವನ್ನು ಮಾಡಿಕೊಂಡು ಜೀವನೋಪಾಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಬಣಜಿಗರು :

ಈ ಬನ್ನೇರುಘಟ್ಟ ಗ್ರಾಮದಲ್ಲಿ ಈ ಸಮುದಾಯದವರು ಬಹಳ ವರ್ಷಗಳ ಹಿಂದಿನಿಂದಲೂ ವಾಸವಾಗಿದ್ದಾರೆ. ಮೂಲತಃ ವ್ಯವಸಾಯ ಮತ್ತು ವ್ಯಾಪಾರ ವೃತ್ತಿಯನ್ನು ಮಾಡಿಕೊಂಡು ಜೀವನೋಪಾಯದಲ್ಲಿ ತೊಡಗಿಸಿಕೊಂಡಿದ್ದಾರೆ. ಸುಮಾರು 50-60 ಮನೆಗಳಲ್ಲಿ ವಾಸವಾಗಿರುವ ಈ ಜನಾಂಗದವರು ಮೊದಲಿನಿಂದಲೂ ವ್ಯಾಪಾರ ವೃತ್ತಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಮೊದಲಿನಿಂದಲೂ ಈ ಗ್ರಾಮದಲ್ಲಿ ಹೂಕಟ್ಟುವುದು, ಮಾರುವುದು, ಬಳೆ ಮಾರಾಟ ಇವರ ಮೂಲ ವೃತ್ತಿಗಳಾಗಿವೆ. ಬಣಜಿಗರಾದ ಇವರನ್ನು 'ಶೆಟ್ಟರು' ಎಂಬ ಹೆಸರಿನಿಂದಲೂ ಕರೆಯುತ್ತಾರೆ. ಇವರ ಕಸುಬು ಬಳೆ ಮಾರಾಟ, ಬಟ್ಟೆ ವ್ಯಾಪಾರ, ಹೂವಿನ ವ್ಯಾಪಾರವನ್ನು ಮಾಡುವುದು. ಇವರು ತೆಲುಗು ಮಾತಾನಾಡುವುದರಿಂದ ಇವರನ್ನು 'ತೆಲಗು ಬಣಜಿಗರು' ಎಂದು ಕರೆಯುತ್ತಾರೆ. ಇವರು ವೈಷ್ಣವ ಸಂಪ್ರದಾಯದವರು, ಬನ್ನೇರುಘಟ್ಟದ 'ವ್ಯವಸಾಯಸೇವಾ ಸಹಕಾರಿ ಕೇಂದ್ರ'ದಲ್ಲಿ ವೃತ್ತಿಯನ್ನು ಮಾಡಿಕೊಂಡಿರುವ ಈ ಜನಾಂಗದವರು ಆರ್ಥಿಕವಾಗಿ ಮುನ್ನಡೆಯುತ್ತಿದ್ದಾರೆ. ಬನ್ನೇರುಘಟ್ಟದಲ್ಲಿ ಕೇವಲ ಎರಡು ಮನೆಗಳಲ್ಲಿ ವಾಸವಾಗಿರುವ ಈ ಸಮುದಾಯದವರು ಪಕ್ಕದ ಕೆಂಪನಾಯಕನಹಳ್ಳಿಯಲ್ಲಿ ಸುಮಾರು 50-60 ಮನೆಗಳಲ್ಲಿ ವಾಸವಾಗಿದ್ದಾರೆ.

ದಲಿತರು :

ಬನ್ನೇರುಘಟ್ಟ ಗ್ರಾಮದ ಅಂಚಿನಲ್ಲಿ ಈ 'ದಲಿತ ಜನಾಂಗ'ದವರು ವಾಸವಾಗಿದ್ದಾರೆ. ಇವರು ವಾಸ ಮಾಡುವ ಬೀದಿಯನ್ನು 'ದಲಿತರ ಬೀದಿ' ಎಂದು ಕರೆಯುತ್ತಾರೆ. ಸಾಮಾಜಿಕವಾಗಿ ಕೆಳ ಸಮುದಾಯದವರಾದ ಈ ಜನಾಂಗದವರು ಈ ಬನ್ನೇರುಘಟ್ಟದ ಅಂಚಿನಲ್ಲಿರುವ ಕೆಂಪನಾಯಕನಹಳ್ಳಿ, ಕರಿಯಪ್ಪನ ಪಾಳ್ಯ ಮತ್ತು ಸಂಪಿಗೆಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದಾರೆ. ಮೂಲತಃ ಇವರನ್ನು 'ಆದಿಕರ್ನಾಟಕ' ವರ್ಗದವರೆಂದು ಕರೆಯುತ್ತಾರೆ. ಅನೇಕವರ್ಷಗಳ

ಹಿಂದಿನಿಂದಲೂ ಈ ಗ್ರಾಮಗಳಲ್ಲೇ ವಾಸವಾಗಿರುವ ಈ ಸಮುದಾಯದವರು ಸುಮಾರು 300–350 ಮನೆಗಳಲ್ಲಿ ವಾಸವಾಗಿದ್ದಾರೆ. ಕೆಲವರು ಮಾತ್ರ ಬೇರೆ ಕಡೆಯಿಂದ ವಲಸೆ ಬಂದಿದ್ದಾರೆ. ಇವರು ಸಹ ಊರಿನ ಜಾತ್ರೆ, ಉತ್ಸವ, ಮದುವೆ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ಹೊಲಗದ್ದೆಗಳನ್ನು ಹೊಂದಿರುವ ಇವರು ಸಹ ವ್ಯವಸಾಯವನ್ನು ಪ್ರಮುಖ ವೃತ್ತಿಯನ್ನಾಗಿ ಮಾಡಿಕೊಂಡು ಉತ್ತಮ ಜೀವನ ನಡೆಸುತ್ತಿದ್ದಾರೆ. ಕೆಲವರು ಕೂಲಿ, ವ್ಯಾಪಾರ, ವ್ಯವಹಾರ ಅಂಗಡಿ ಮುಂಗಟ್ಟುಗಳನ್ನೇ ನಿರ್ಮಿಸಿಕೊಂಡು ಜೀವನೋಪಾಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

<u>ಅಗಸರು</u> :

ಈ ಅಗಸರನ್ನು 'ಮಡಿವಾಳದವರು', 'ಬಟ್ಟೆ ತೊಳೆಯುವವರು' ಎಂದು ಕರೆಯುತ್ತಾರೆ. ಬಟ್ಟೆ ಒಗೆಯುವುದು, ಇಸ್ತ್ರಿ ಮಾಡುವುದು ಇವರ ಕುಲಕಸುಬಾಗಿದೆ. ಈ ಗ್ರಾಮದಲ್ಲಿ ಕಡಿಮೆ ಸಂಖ್ಯೆಯಲ್ಲಿರುವ ಈ ಸಮುದಾಯದವರು ಸುಮಾರು 5–6 ಮನೆಗಳಲ್ಲಿ ವಾಸವಾಗಿದ್ದಾರೆ. ಊರಿನಲ್ಲಿ ಎಲ್ಲ ಮನೆಗಳಿಗೂ ಇವರು ಅತ್ಯಗತ್ಯವಾಗಿ ಬೇಕಾದವರಾಗಿದ್ದಾರೆ. ಹುಟ್ಟು, ಮುಟ್ಟು, ಮದುವೆ, ಸಾವು, ಹಬ್ಬ, ಉತ್ಸವ, ಜಾತ್ರೆ ಮುಂತಾದ ಎಲ್ಲಾ ಸಂದರ್ಭಗಳಲ್ಲಿಯೂ ಅಗಸರು ಇಲ್ಲದೆ ಕರ್ಮ ಕಳೆಯುವುದಿಲ್ಲ. ಪ್ರತಿನಿತ್ಯವೂ ಕೂಲಿಗೆ ಹೋಗಿ ಅದರಿಂದ ಬಂದ ಹಣದಿಂದ ತಮ್ಮ ಜೀವನವನ್ನು ನಡೆಸುತ್ತಿದ್ದಾರೆ. ಈ ಗ್ರಾಮದಲ್ಲಿ ಶ್ರೀಸತ್ಯಮ್ಮ ದೇವಿ ದೇವಾಲಯವನ್ನು ನಿರ್ಮಿಸಿಕೊಂಡು ಹಲವಾರು ರೀತಿಯ ಪೂಜಾಕೈಂಕರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರು ವೀರಶೈವ ಮತವನ್ನು ಅನುಸರಿಸುವವರು, ವಚನಕಾರ ಮಡಿವಾಳ ಮಾಚಯ್ಯ, ಮೈಲಾರಲಿಂಗ ಮತ್ತು ಹೆಣ್ಣುದೇವರು ಗಂಗಮಾಳಮ್ಮ, ಎಲ್ಲಮ್ಮ ತಾಯಿಯನ್ನು ಇವರು ಪೂಜಿಸುತ್ತಾರೆ.

<u>ಕುಂಬಾರರು</u> :

ಮೂಲತಃ 'ಮಡಿಕೆ ತಯಾರಿಕೆ' ಕಾಯಕದಲ್ಲಿ ನಿರತರಾಗಿದ್ದಾರೆ. ಈ ಸಮುದಾಯದವರು ಈ ಗ್ರಾಮದಲ್ಲಿ ಸುಮಾರು 15–20 ಮನೆಗಳಲ್ಲಿ ವಾಸವಾಗಿದ್ದಾರೆ. ಪ್ರಸ್ತುತ ಈ ಜನಾಂಗದವರು ಜಾಗತೀಕರಣದ ಬದಲಾವಣೆಯಿಂದ ರಿಯಲ್ ಎಸ್ಟೇಟ್ ವ್ಯಾಪಾರ, ವೃತ್ತಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದಲ್ಲದೆ. ರಾಜಕೀಯಕ್ಷೇತ್ರದಲ್ಲೂ ನಿರತರಾಗಿರುವುದನ್ನು ಕಾಣಬಹುದಾಗಿದೆ. ಪ್ರಸ್ತುತ ಇತ್ತೀಚಿನ ದಿನಗಳಲ್ಲಿ ಆರ್ಥಿಕವಾಗಿ ಪ್ರಬಲರಾಗಿದ್ದಾರೆ.

<u>ಜೈನರು :</u>

ಜಿನನನ್ನು ಪೂಜಿಸುವವರನ್ನು 'ಜೈನಿಗರು' ಎಂದು ಕರೆಯುತ್ತಾರೆ.

ಈ ಜೈನಿಗರು ಈ ಬನ್ನೇರುಘಟ್ಟ ಗ್ರಾಮಕ್ಕೆ ಅನೇಕ ವರ್ಷಗಳ ಹಿಂದೆ ವ್ಯಾಪಾರ ವ್ಯವಹಾರ ನಿಮಿತ್ತ ವಲಸೆಬಂದಿದ್ದಾರೆ. ಈ ಗ್ರಾಮದಲ್ಲಿ ವ್ಯಾಪಾರ, ವ್ಯವಹಾರ, ರಿಯಲ್ ಎಸ್ಟೇಟ್, ವ್ಯವಸಾಯ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಆರ್ಥಿಕವಾಗಿ ಪ್ರಬಲರಾಗಿದ್ದಾರೆ. ಈ ಬನ್ನೇರುಘಟ್ಟದ ನ್ಯಾಷನಲ್ ಪಾರ್ಕ್ ಸಮೀಪದಲ್ಲಿ 'ಇಸ್ಕಾನ್‌ದೇವಾಲಯ'ವನ್ನು ನಿರ್ಮಿಸಿದ್ದಾರೆ, ಬನ್ನೇರುಘಟ್ಟದಿಂದ ಭೂತಾನಹಳ್ಳಿ ಕಡೆಗೆ ಹೋಗುವ ಮಾರ್ಗಮಧ್ಯದಲ್ಲಿ ಶ್ರೀ ಮಹಾಲಕ್ಷ್ಮೀ ದೇವಾಲಯವನ್ನು ನಿರ್ಮಿಸಿದ್ದಾರೆ. ಇವರು ಈ ಗ್ರಾಮದಲ್ಲಿ ಸುಮಾರು 50–60 ಮನೆಗಳಲ್ಲಿ

ವಾಸವಾಗಿದ್ದಾರೆ. ಆರ್ಥಿಕವಾಗಿ ಪ್ರಬಲರಾಗಿರುವ ಈ ಜನಾಂಗದವರು ಎಲೆಮರೆಯ ಕಾಯಿಯಂತೆ ಜೀವನ ಸಾಗಿಸುತ್ತಿದ್ದಾರೆ.

ಕ್ರಿಶ್ಚಿಯನ್ :

ಬನ್ನೇರುಘಟ್ಟ ಗ್ರಾಮದಲ್ಲಿ ಸುಮಾರು 5–10 ಮನೆಗಳಲ್ಲಿ ವಾಸವಾಗಿರುವ ಈ ಜನಾಂಗದವರು ಅತ್ಯಂತ ಕಡಿಮೆಸಂಖ್ಯೆಯಲ್ಲಿದ್ದಾರೆ. ಬನ್ನೇರುಘಟ್ಟದ ಸಮೀಪದಲ್ಲಿರುವ ಕಲ್ಕೆರೆ ಗ್ರಾಮದಲ್ಲಿ ಒಂದು 'ಚರ್ಚ್'ನ್ನು ನಿರ್ಮಿಸಿಕೊಂಡಿದ್ದಾರೆ. ಇವರಲ್ಲಿ ಅನೇಕ ಮಂದಿ ವಿದ್ಯಾವಂತರಾಗಿದ್ದು ಖಾಸಗಿ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಆರ್ಥಿಕವಾಗಿ ಪ್ರಬಲತೆಯನ್ನು ಹೊಂದುತ್ತಿದ್ದಾರೆ.

ಮುಸ್ಲಿಮರು :

ಬನ್ನೇರುಘಟ್ಟ ಗ್ರಾಮದಲ್ಲಿ ಈ ಮುಸ್ಲಿಂ ಸಮುದಾಯಕ್ಕೆ ಅಷ್ಟಾಗಿ ಹೊಂದಿಕೆಯಾಗುವುದಿಲ್ಲ ಎಂಬ ಮಾತು ಈ ಊರಿನಲ್ಲಿ ಜನಜನಿತವಾಗಿದೆ. ಕಾರಣ ಈ ಗ್ರಾಮದ ಆರಾಧ್ಯದೈವ ಶ್ರೀ ಚಂಪಕಧಾಮಸ್ವಾಮಿ ದೇವಾಲಯದ ಆವರಣದ ಕಂಬದಲ್ಲಿರುವ ವಿಜಯನಗರದ ಲಾಂಛನದಲ್ಲಿ (ವರಾಹ) 'ಹಂದಿ'ಯ ಕೆತ್ತನೆಯ ದೃಶ್ಯವನ್ನು ಹೊಂದಿರುವುದರಿಂದ ಮುಸ್ಲಿಮರು ಈ ದೇಗುಲವನ್ನು ಪ್ರವೇಶಿಸುವುದಿಲ್ಲ ಮತ್ತು ಈ ಊರಿನಲ್ಲಿ ಈ ಸಮುದಾಯದವರು ಬಹಳ ಕಾಲ ನೆಲೆನಿಂತು ವಾಸವಿರುವುದಿಲ್ಲ ಎಂಬುದು ಈ ಗ್ರಾಮದ ಅನೇಕ ಹಿರಿಯರ ಅಭಿಪ್ರಾಯವಾಗಿದೆ. ಆದರೆ ಕಾರಣ ಏನೇ ಇದ್ದರು ಈ ಗ್ರಾಮದಲ್ಲಿ ಮುಸ್ಲಿಂ ಸಮುದಾಯದವರ ಒಂದು ಮನೆಯೂ ಸಹ ಇಲ್ಲದಿರುವುದನ್ನು ಪ್ರಸ್ತುತ ಕ್ಷೇತ್ರಕಾರ್ಯದಲ್ಲಿ ನಾನು ಗಮನಿಸಿದ ಸಂಗತಿಯಾಗಿದೆ.

ಈ ಬನ್ನೇರುಘಟ್ಟ ಗ್ರಾಮದಲ್ಲಿ ಹಲವಾರು ಜಾತಿ ಪಂಗಡಗಳು ಕಂಡುಬಂದರೂ ಅವರವರ ಆರ್ಥಿಕತೆಯ ಹಿನ್ನೆಲೆಯಲ್ಲಿ ಜೀವನವನ್ನು ನಡೆಸಿಕೊಂಡು ಬಂದಿದ್ದಾರೆ. ಈ ಗ್ರಾಮದಲ್ಲಿ ಆರ್ಥಿಕವಾಗಿ ಪ್ರಬಲವಾಗಿರುವ ರಜಪೂತರು ಸಹ ಎಲ್ಲಾ ಜನಾಂಗಗಳ ಜೊತೆ ಸಾಮರಸ್ಯದಿಂದ ಹಬ್ಬಹರಿದಿನಗಳಲ್ಲಿ ಭಾಗವಹಿಸುತ್ತಾರೆ. ಮೊದಲಿಯಾರ್‌ಗಳು, ಒಕ್ಕಲಿಗರು ಬಹಳ ಹಿಂದಿನಿಂದಲೂ ಕೃಷಿ ಭೂಮಿಯನ್ನು ಹೊಂದಿದ್ದು ಬೇರೆ ಜನಾಂಗಗಳ ಮೇಲೆ ಶೋಷಣೆ ಮತ್ತು ದಬ್ಬಾಳಿಕೆಗಳನ್ನು ನಡೆಸಿಲ್ಲ. ಬ್ರಾಹ್ಮಣ ಸಮುದಾಯದವರು ಪೂಜಾಕೈಂಕರ್ಯಗಳ ಮೂಲಕ ತಮ್ಮ ನಿತ್ಯ ಜೀವನದಲ್ಲಿ ಭಾಗಿಯಾಗಿರುತ್ತಾರೆ ಇನ್ನೂ ಬಣಜಿಗರು, ಲಿಂಗಾಯಿತರು, ಮಡಿವಾಳಗಳು ಭೋವಿಗಳು ಇವರೆಲ್ಲ ಅಲ್ಪಪ್ರಮಾಣದಲ್ಲಿದ್ದರೂ ಸಹದಿನನಿತ್ಯದ ಕೆಲಸಕಾರ್ಯಗಳಲ್ಲಿ ತಮ್ಮ ಬದುಕನ್ನು ಕಳೆಯುತ್ತಾರೆ ಇನ್ನೂ ಈ ಗ್ರಾಮದ ಅಂಚಿನಲ್ಲಿರುವ ದಲಿತರು ಮತ್ತು ಅಲ್ಪಪ್ರಮಾಣದ ಭೋವಿಗಳು ತಮ್ಮ ದಿನನಿತ್ಯದ ಕಾಯಕದಲ್ಲಿ ತಮ್ಮ ಜೀವನವನ್ನು ದೂಡುತ್ತಾರೆ. ಕ್ರೈಸ್ತರು ಒಂದೆರಡು ಮನೆಗಳು ಈ ಗ್ರಾಮದ ಅಂಚಿನ ವಾಸವಿದ್ದರೂ ಮುಸ್ಲಿಂ ಸಮುದಾಯದವರು ಈ ಗ್ರಾಮದಲ್ಲಿ ವಾಸವಿಲ್ಲದಿರುವುದು ಆಶ್ಚರ್ಯಕರ ಸಂಗತಿಯಾಗಿದೆ. ಇಷ್ಟೆಲ್ಲಾ ಸಮುದಾಯದವರು ಈ ಗ್ರಾಮದಲ್ಲಿ ಬಹಳ ಹಿಂದಿನಿಂದಲೂ ವಾಸಿಸುತ್ತಿದ್ದರು ಇದುವರೆವಿಗೂ ಯಾವುದೇ ಜಾತಿ ಸಂಘರ್ಷಗಳು ನಡೆದಿರುವುದೇ ವಿರಳ. ಎಲ್ಲ ಸಮುದಾಯದವರು ತಮ್ಮ ದಿನ ನಿತ್ಯದ ವ್ಯಾಪಾರವ್ಯವಹಾರಗಳಲೇ ತಮ್ಮ ಜೀವನವನ್ನು ನಡೆಸಿಕೊಂಡು ಬದುಕಿನಬಂಡಿಯನ್ನು ಎಳೆಯುತ್ತಿದ್ದಾರೆ. ಹೀಗೆ ಈ ಎಲ್ಲಾ

ಜನಾಂಗದವರು ಒಗ್ಗಟ್ಟಿನಿಂದ ಈ ಗ್ರಾಮದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು, ಧಾರ್ಮಿಕ ಆಚರಣೆಗಳನ್ನು ಇಂದಿಗೂ ಸಹ ಭಾವೈಕ್ಯತೆಯಿಂದ ನಡೆಸಿಕೊಂಡು ಬಂದಿರುವುದನ್ನು ಕಾಣಬಹುದು.

ಆಚರಣೆಗಳು

ಆಚರಣೆ ಎಂದಾಕ್ಷಣ ನಮಗೆ ಹಬ್ಬಗಳ ನೆನಪಾಗುವುದುಂಟು ಮೂಲಾರ್ಥದಲ್ಲಿ ಈ ಆಚರಣೆ ಎಂಬುದು ಅನುಸರಿಸುವುದು ಎಂಬ ಅರ್ಥದಲ್ಲಿ ಬಳಸುತ್ತಾರೆ. ಆಚರಣೆ ಎಂಬುದು ಪ್ರಾಚೀನಕಾಲದಿಂದಲೇ ಅನುಸರಿಸುತ್ತಾ ಬಂದಿರುತ್ತದೆ. ಅಂತಹುಗಳನ್ನು ಮಾತ್ರ ಆಚರಣೆ ಎಂದು ಕರೆಯುತ್ತಾರೆ ಎಂಬ ಮಾತನ್ನು ಒಪ್ಪತಕ್ಕದ್ದಲ್ಲ ಕಾರಣ ಧಾರ್ಮಿಕ ಆಚರಣೆಗಳ ಹಿನ್ನಲೆಯನ್ನು ಇಟ್ಟುಕೊಂಡು ಹೇಳಿದ ಮಾತುಗಳಾಗಿರುತ್ತದೆ. ಇಂದು ಆಚರಣೆ ಎಂಬುದು ಬಹು ವಿಸ್ತಾರವಾಗಿ ಬೆಳೆದಿದೆ. ಅದು ಪ್ರಾಚೀನ ವಿಷಯವೇ ಆಗಿರಲಿ, ಆಧುನಿಕ ವಿಷಯವೇ ಆಗಿರಲಿ ಒಂದು ನಿರ್ದಿಷ್ಟ ಕಾರ್ಯಕ್ರಮವನ್ನು ಸುವ್ಯವಸ್ಥಿತವಾದ ರೀತಿಯಲ್ಲಿ ಅನುಸರಿಸಿಕೊಂಡು ಬರುವುದಾಗಿದೆ.

ಆಚರಣೆ ಎಂಬುದು ಯಾವುದೇ ಕಟ್ಟು ನಿಟ್ಟಿಗೆ ಒಳಪಡುವುದಿಲ್ಲ. ಕೆಲವು ಆಚರಣೆಗಳು ಕಾರಣಾಂತರಗಳಿಂದ ನಿಲ್ಲಬಹುದು. ಮತ್ತು ಕೆಲವು ಹೊಸ ಹೊಸ ರೂಪ ಪಡೆದು ಹುಟ್ಟಿಕೊಳ್ಳಬಹುದು. ಆದರೆ ಈ ಅನುಸರಣಿಕೆ ಎಂಬುದು ಪ್ರಾಚೀನ ರೂಪದಲ್ಲಿಯೇ ನಿಲ್ಲದೆ ಬದಲಾವಣೆಯನ್ನು ಬಯಸುತ್ತ ಕಾಲದಿಂದ ಕಾಲಕ್ಕೆ ಪರಿಸ್ಥಿತಿ, ಪರಿಸರ, ಅಭಿರುಚಿ ಮುಂತಾದ ವಿಷಯಗಳ ಕಾರಣದಿಂದ ಬದಲಾವಣೆಯನ್ನು ನಿರಂತರ ಪಡೆಯುತ್ತ ಬರುತ್ತದೆ. ನಮ್ಮ ಪೂರ್ವಿಕರು ಹೇಳುವಂತೆ ನಮ್ಮ ಕಾಲದ ಆಚರಣೆಯಷ್ಟು ಇಂದಿನ ಯಾವುದೇ ಆಚರಣೆ ಇಂದು ಕಂಡು ಬರುವುದಿಲ್ಲ. ಆದ್ದುದರಿಂದಲೇ ಕಂಠೀರವ ನರಸರಾಜ ಒಡೆಯರ ಕಾಲದಲ್ಲಿ ಇದ್ದ ದಸರಾ ಉತ್ಸವದ ಸ್ವರೂಪಕ್ಕೂ ಇಂದಿನ ಉತ್ಸವಕ್ಕೂ ಅಪಾರವಾದ ವ್ಯತ್ಯಾಸವನ್ನು ಗುರ್ತಿಸುತ್ತಾರೆ.

ಆಚರಣೆ ಒಂದು ನಿರ್ದಿಷ್ಟ ಪ್ರದೇಶದ ಸಾಮಾಜಿಕ, ಆರ್ಥಿಕ ಜೀವನವನ್ನು ತಿಳಿಯಲು ಬಳುವಳಿಯಾಗಿ ಬಂದ ಪದ್ಧತಿ ಎಂದರೆ ತಪ್ಪಾಗಲಾರದು. ಒಂದು ಊರಿನ ಬಗ್ಗೆ ಸಾಂಸ್ಕೃತಿಕವಾಗಿ ನೋಡಲು ಹೊರಟವರಿಗೆ ಆಚರಣೆ ಎಂಬುದು ಆ ಪ್ರದೇಶದ ಜನಜೀವನದ ಬಗ್ಗೆ ತಿಳಿಯಲು ಬಹು ಸಹಾಯಕವಾಗುತ್ತದೆ. ಸಾಂಸ್ಕೃತಿಕ ಅಧ್ಯಯನದಲ್ಲಿ ಆಚರಣೆ ಎಂಬುದು ಪ್ರಮುಖವಾದ ಪಾತ್ರವನ್ನು ವಹಿಸುತ್ತಾರೆ. ಆಧುನಿಕ ಭರಾಟೆಯಲ್ಲಿ ಜಾನಪದ ಸಂಸ್ಕೃತಿ ಮರೆಯಾಗುತ್ತಿದೆ ಎಂಬ ಕೂಗು ಕೇಳಿ ಬರುತ್ತಿದ್ದರೂ ಕೂಡ ಎಲ್ಲೋ ಅದು ಇನ್ನೂ ಹೆಚ್ಚು ಹೆಚ್ಚು ಪ್ರಚಾರಕ್ಕೆ ಆಚರಣೆಗೆ ಬರುತ್ತಿದೆ ಎಂದೆನಿಸುತ್ತದೆ. ಯಾಂತ್ರಿಕ ಬದುಕಿನ ಜಂಜಾಟದಲ್ಲಿ ಮನಸ್ಸಿನ ಎಲ್ಲಾ ಜಿಡ್ಡನ್ನು ತೊಲಗಿಸಿ ಮೈಮನವನ್ನು ಪ್ರಫುಲ್ಲಗೊಳಿಸುತ್ತಿದೆ. ತನ್ನ ಮನಸ್ಸಿನ ಎಲ್ಲಾ ನೋವು, ಸಂಕಟ, ದುಃಖ, ಆಯಾಸ, ಬೇಸರಗಳನ್ನು ಕುಟುಂಬ ಸದಸ್ಯರೊಡಗೂಡಿ ಹಬ್ಬ ಹರಿದಿನಗಳಲ್ಲಿ, ಜಾತ್ರೆ ಉತ್ಸವಗಳಲ್ಲಿ, ಪೂಜೆ ಪುನಸ್ಕಾರಗಳಲ್ಲಿ ತೊಡಗಿ ಎಲ್ಲವನ್ನು ಮರೆತು ಭಕ್ತಿ ಭಾವೈಕ್ಯತೆಯಿಂದ ಈ ಹಬ್ಬಗಳನ್ನು ಮತ್ತು ಜಾತ್ರೆಗಳನ್ನು ಆಚರಿಸುತ್ತಾರೆ. ಈ ಹಬ್ಬಗಳು ಮತ್ತು ರಥೋತ್ಸವಗಳು ಕೇವಲ ಧಾರ್ಮಿಕ ಸಂದರ್ಭಗಳು ಮಾತ್ರ ಆಗಿರದೆ ಸ್ಥಳೀಯ ಸಾಂಸ್ಕೃತಿಕ ವಾಣಿಜ್ಯದ ಹೆಗ್ಗುರುತುಗಳು ಆಗಿವೆ. ಈ

ರೀತಿಯಾಗಿ ಬನ್ನೇರುಘಟ್ಟದಲ್ಲಿ ನಡೆಯುವ ಹಲವಾರು ಹಬ್ಬಗಳು ಮತ್ತು ಹರಿದಿನೋತ್ಸವಗಳಲ್ಲಿ ಇಲ್ಲಿ ನಡೆಯುವ ಜಾತ್ರೆ ವಿಶೇಷವಾಗಿದೆ.

ಈ ಊರಿನಲ್ಲಿ ನಡೆಯುವ ಜಾತ್ರೆಯ ಜೊತೆ ಜೊತೆಯಲ್ಲಿಯೇ ಶ್ರೀಚಂಪಕಧಾಮಸ್ವಾಮಿಯ ಬ್ರಹ್ಮರಥೋತ್ಸವವು ಸುತ್ತಮುತ್ತಲು ಹಳ್ಳಿಗಳಿಗೆ ಕೇಂದ್ರಸ್ಥಾನವಾಗಿ ಪ್ರಮುಖ ಆಕರ್ಷಣೆಯಾಗಿದೆ.

ಶ್ರೀಚಂಪಕಧಾಮಸ್ವಾಮಿಯ ಬ್ರಹ್ಮರಥೋತ್ಸವ

ಜಾತ್ರೆ ಒಂದು ಧಾರ್ಮಿಕ ಆರಾಧನೆ. ಆಚರಣೆಯ ಚೌಕಟ್ಟಿನಲ್ಲಿ ಒಂದು ಸಂಸ್ಕೃತಿಯ ವಿಶಿಷ್ಟತೆಯನ್ನು ಪ್ರತಿ ಬಿಂಬಿಸುವ ಅಭಿವ್ಯಕ್ತಿಯ ಸಮೂಹ ಮಾಧ್ಯಮ. ಜಾತ್ರೆ ಕೇವಲ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರಣಗಳಿಗಾಗಿ ಮಾತ್ರ ಜರುಗುವಂತಹುದಲ್ಲ. ಸ್ಥಳೀಯ ವಿಶೇಷತೆಯನ್ನು ಮೈಗೂಡಿಸಿಕೊಂಡು ಜಾತ್ರೆ ಅನನ್ಯತೆಯ ಸಂಕೇತವಾಗಿ ತನ್ನ ಛಾಪು ಮೂಡಿಸುತ್ತದೆ. ಮಾನವನ ದೈನಂದಿನ ಜೀವನದ ಚಟುವಟಿಕೆಯಲ್ಲಿ ನಿರ್ದಿಷ್ಟ ಕಾಲಾವಧಿಯಲ್ಲಿ ನಡೆಯುತ್ತದೆ.

ಬನ್ನೇರುಘಟ್ಟದ ಜಾತ್ರೆಯನ್ನು ಕುರಿತು ಅಧ್ಯಯನ ಮಾಡಿದರೆ ನಮ್ಮ ಸ್ಥಳೀಯ ಸಾಂಸ್ಕೃತಿಕ ಜೀವನದ ಸೂಕ್ಷ್ಮ ಅಂಶಗಳ ಸಂಬಂಧವನ್ನು ತಿಳಿವಂತಾಗುತ್ತದೆ. ಶಿಷ್ಟರ-ಜನಪದರ ದಾರ್ಮಿಕ ಮನೋಭಾವದ ಏಕತಾನತೆಯನ್ನು ಸಾರ್ವಕಾಲಿಕತೆಗಳನ್ನು ಗುರುತಿಸಲು ಸಹಾಯವಾಗುತ್ತದೆ. ಪ್ರಸ್ತುತ ಇಲ್ಲಿ ಸ್ಥಳೀಯ ವಿಶೇಷತೆಯನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ.

ಬ್ರಹ್ಮರಥೋತ್ಸವ ಎಂದರೆ ಸ್ವಾಮಿಗೆ ವರ್ಷಕ್ಕೆ ಒಮ್ಮೆ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಸೇರಿ ನಡೆಸುವ ಉತ್ಸವ. ಶ್ರೀ ಚಂಪಕಧಾಮಸ್ವಾಮಿಯ ಬ್ರಹ್ಮರಥೋತ್ಸವವು ಅಕ್ಕಪಕ್ಕದ ಹತ್ತಾರು ಹಳ್ಳಿಗಳಲ್ಲಿ ಜನಪ್ರಿಯವಾಗಿದೆ. ಸುತ್ತಮುತ್ತಲ ಊರುಗಳಿಗೆ ಇಲ್ಲಿನ ರಥೋತ್ಸವವು ಬಹಳ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಶ್ರೀದೇವಿ ಮತ್ತು ಭೂದೇವಿ ಸಹಿತವಾಗಿ ಶ್ರೀ ಚಂಪಕಧಾಮಸ್ವಾಮಿಯ ಬ್ರಹ್ಮರಥೋತ್ಸವವು ಪ್ರತಿ ಸಂವತ್ಸರದ ಫಾಲ್ಗುಣ ಮಾಸದ ಅನುರಾಧ ನಕ್ಷತ್ರದಂದು ವೈಖಾನಸಾಮೋಕ್ಷ ಪ್ರಕಾರ ನಡೆಯುತ್ತದೆ. ಹತ್ತು ದಿನಗಳ ಈ ಬ್ರಹ್ಮರಥೋತ್ಸವಕ್ಕೆ ವಿಶೇಷವಾಗಿ ಪಾಂಡಿತ್ಯಹೊಂದಿರುವ ಆಗಮಿಕರನ್ನು ಬರಮಾಡಿಕೊಂಡು ಅವರಿಂದ ಎಲ್ಲ ರಥೋತ್ಸವದ ಕೈಂಕರ್ಯಗಳು ಪ್ರಾರಂಭದಿಂದ ಮುಕ್ತಾಯದವರೆವಿಗೂ ನಡೆಯುತ್ತದೆ. ಈ ಬ್ರಹ್ಮರಥೋತ್ಸವದ ಕಾರ್ಯಕ್ರಮಗಳು ಸುಮಾರು ಹತ್ತು ದಿವಸಗಳ ಕಾಲ ನಡೆಯುತ್ತವೆ.

ಮೊದಲದಿನ ಅಂಕುರಾರ್ಪಣೆ :

ಈ ಅಂಕುರಾರ್ಪಣೆಯಿಂದ ಈ ರಥೋತ್ಸವವು ಪ್ರಾರಂಭವಾಗುತ್ತದೆ. ಈ ದಿನದಂದು ಹುತ್ತದ ಮಣ್ಣನ್ನು ತೆಗೆದುಕೊಂಡು ಬಂದು ಮೇದಿನಿ, ರಾಕ, ಸಿನಿವಾಲಿ ಎಂಬ ಮೂರನ್ನ ನಾಲ್ಕು ದಿಕ್ಕುಗಳಲ್ಲಿ ಎಂದರೆ ಒಟ್ಟು ಹನ್ನೆರಡು ಕುಂಡಗಳಲ್ಲಿ ನವಧಾನ್ಯಗಳನ್ನು ತುಂಬಿ ಮೊಳಕೆಯೊಡೆಯಲು ಏರ್ಪಡಿಸುವುದೇ 'ಅಂಕುರಾರ್ಪಣೆ'.

ಈ ದಿನದಲ್ಲಿ ಒಟ್ಟು ನಲವತ್ತೆಂಟು ಮಂದಿ ದೇವತೆಗಳನ್ನು ಆವಾಹಿಸಿ ಅವರ ಹೆಸರುಗಳಲ್ಲಿ ದಿನವೂ ಯಾಗಶಾಲೆಯಲ್ಲಿ ಮೂಲವಿರಾಟ ಮೂರ್ತಿಯ ನಲವತ್ತೆಂಟು ಕಳೆಗಳನ್ನು ಪಂಚಕಳಾವಾಹನ ಪದ್ಧತಿಯಲ್ಲಿ ಉತ್ಸವ ಮೂರ್ತಿಗಳಲ್ಲಿ ಆವಾಹನೆಯಾಗುವಂತೆ ಮಾಡಿ ಸಂಕಲ್ಪ ಪೂರ್ವಕವಾಗಿ ಯೋಗ ಶಾಲೆಯಲ್ಲಿ ಪ್ರತಿದಿನವೂ ಹೋಗ ನಡೆಸುವರು. ಈ ಕಳೆಗಳಿಂದ ಕೂಡಿದ ಉತ್ಸವ ಮೂರ್ತಿಗಳನ್ನು ಬೆಳಗ್ಗೆ ಮತ್ತು ಸಾಯಂಕಾಲಗಳಲ್ಲಿ ಮೆರವಣಿಗೆಯಲ್ಲಿ ಕೊಂಡೊಯ್ಯುವುದೇ ಈ ಉತ್ಸವಗಳ ಪ್ರತ್ಯೇಕತೆ. ಈ ದಿನಗಳಲ್ಲಿ ಮೂಲದೇವರಿಗೆ ನಿತ್ಯ ಪ್ರಜಾದಿಗಳು ಮಾಮೂಲಾಗಿಯೇ ನಡೆಯುತ್ತಿರುತ್ತದೆ. ವಿಶೇಷವಾಗಿ ಉತ್ಸವಮೂರ್ತಿಗಳಿಗೆ ಸ್ನಪನತಿರುಮಂಜನವನ್ನು ನಡೆಸುವರು.

<u>ಧ್ವಜಾರೋಹಣ</u>

ಈ ಅಂಕುರಾರ್ಪಣೆಯ ದಿನವೇ 'ಧ್ವಜಾರೋಹಣ' ನಡೆಯುತ್ತದೆ. ವಸ್ತ್ರದ ಮೇಲೆ ಗುರುತ್ಮಂತನ ರೂಪವನ್ನು ಚಿತ್ರಿಸಿ, ಅಲಂಕರಿಸಿ, ಎಲ್ಲಾ ವಿಧಿ ವಿಧಾನಗಳಿಂದ ಪೂಜೆಯನ್ನು ನೆರವೇರಿಸಿ ಮೆರವಣಿಗೆ ಮಾಡುತ್ತಾರೆ. ನಂತರ ಗರ್ಭಗುಡಿಯ ಮುಂಭಾಗದ ಧ್ವಜಸ್ಥಂಭದ ಮೇಲೆ ದರ್ಭೆಗಳಿಂದ ಮಾಡಿ ಅತಿದೊಡ್ಡ ಹಗ್ಗದಿಂದ ಈ ಬಾವುಟವನ್ನು ಪ್ರತಿಷ್ಠೆ ಮಾಡುವರು. ಗರುಡಮೂರ್ತಿ ಧ್ವಜಸ್ಥಂಭದ ಮೇಲೆ ಪಟಪಟನೆ ಹಾರಾಡುತ್ತಾ ಆಕಾಶಮಾರ್ಗದಲ್ಲಿ ಸಂಚರಿಸುವ ದೇವಜಾತಿಗಳಿಗೆ ಸ್ವಾಮಿಯ ಉತ್ಸವವು ಆರಂಭವಾದವು ಎಂಬುದನ್ನು ಸೂಚಿಸುತ್ತದೆ. ದೃಷ್ಟಿದೋಷವಾಗದಂತೆ ಈ ಹತ್ತು ದಿನಗಳೂ ಗರಡುನು ತನ್ನ ರೆಕ್ಕೆಗಳಿಂದ ಕಾಪಾಡುವನೆಂದು ಹಿರಿಯರು ಹೇಳುತ್ತಾರೆ. ಇಂದು ರಾತ್ರಿ ನಡೆಯುವುದೇ ಸಿಂಹವಾಹನೋತ್ಸವ.

<u>ಸಿಂಹವಾಹನೋತ್ಸವ</u>

ಈ ಸಿಂಹವಾಹನೋತ್ಸವದಲ್ಲಿ ಸಿಂಹದ ಮೇಲೆ ತನ್ನ ಮುಂಗಾಲುಗಳನ್ನು ಮುಂದೆ ಮಾಡಿ ನಿಧಾನವಾಗಿ ಚಲಿಸುವಂತೆ ಕಾಣುತ್ತದೆ. ಹಿತ್ತಾಳೆಯಿಂದ ಮಾಡಿದ ಸಿಂಹವು ಕೋರೆಹಲ್ಲುಗಳನ್ನು ಬಿಟ್ಟುಕೊಂಡು ಕೆಂಗಣ್ಣುಗಳನ್ನು ಬೀರಿ ಭಯಾನಕ ಸ್ವರೂಪದಲ್ಲಿ ಕಾಣುವಂತೆ ಭಾಸವಾಗುತ್ತದೆ. ಬಹುಶಃ ಸ್ವಾಮಿಯು ಈ ಸಿಂಹ ವಾಹನದ ಸಂಕೇತವನ್ನು ಗಮನಿಸುವುದಾದರೆ ದುಷ್ಟ ಹಿರಣ್ಯಕಶುಪುವನ್ನು ಸಂಹರಿಸಲು ಈ ಸ್ವಾಮಿಯು ನರಸಿಂಹನ ಅವತಾರವನ್ನು ತಾಳಿ ಕಂಬದಿಂದ ಪ್ರತ್ಯಕ್ಷವಾಗಿ ಬಂದ ಪೌರಾಣಿಕ ಹಿನ್ನೆಲೆಯನ್ನು ನೆನಪಿಸಿಕೊಳ್ಳಬಹುದು. ಏನೇ ಆದರೂ ಸ್ವಾಮಿಯು ಈ ಸಿಂಹವಾಹನದಲ್ಲಿ ಗಂಭೀರವದನನಾಗಿ ಆಸೀನವಾಗಿರುವುದನ್ನು ಕಾಣಬಹುದು. ಸ್ವಾಮಿಯು ಪುರುಷ-ಸಿಂಹ ಪುರುಷೋತ್ತಮನೆಂದು ಹಿರಿಯರು ಹೇಳುತ್ತಾರೆ.

ಗರುಡವಾಹನೋತ್ಸವ :

ಈ ಗರುಡನು ಸ್ವಾಮಿಗೆ ಚಿರಕಾಲ ಬಂಧು. ಸ್ವರ್ಗಕ್ಕೆ ನೆಗೆದು ಅಮೃತಕಳಶವನ್ನು ಎತ್ತಿತಂದ ಸಾಹಸಿ ಇವನನ್ನೇ ಸ್ವಾಮಿ ವಾಹನವನ್ನಾಗಿ ಮಾಡಿಕೊಂಡಿದ್ದಾನೆ. ಈ ವಾಹನ ಕಲಾಕಾರನ ಕೈಯಲ್ಲಿ ಅರ್ಧಮನುಷ್ಯ, ಅರ್ಧಪಕ್ಷಿಕಾರ ಮಂಡಿಯೂರಿ ವೀರಗತ್ತಿನಲ್ಲಿ ಕುಳಿತ ಮನುಷ್ಯಾಕೃತಿಯ ಮೂರ್ತಿ. ಇಕ್ಕೆಲಗಳದಲ್ಲಿಯೂ ರೆಕ್ಕೆಗಳಿದ್ದು ಮೂಗು ಉದ್ದವಿದ್ದೂ ಕೊಕ್ಕಿನಾಕಾರದಲ್ಲಿದೆ ತನ್ನೆರಡು ಕೈಗಳನ್ನು ಮುಂದೆಮಾಡಿ ಉತ್ಸವಮೂರ್ತಿಯನ್ನು ಹೊತ್ತುಕೊಂಡು ಹೋಗಲು ಸಿದ್ಧವಾಗಿರುವಂತೆ ಕಾಣುತ್ತದೆ. ಇದು ಅತಿಮಾನುಷವಾಗಿ ರಚನೆಯಾಗಿದೆ.

ಹನುಮಂತ ವಾಹನ :

ತ್ರೇತಾಯುಗದಲ್ಲಿ ಸ್ವಾಮಿಯು ರಾಮಾವತಾರವನ್ನು ತಾಳಿದಾಗ ರಾವಣನ ಸಂಹಾರಕ್ಕೆ ಹನುಮಂತನೇ ವಾಹನವಾಗಿ ಹೊರಟ ಸನ್ನಿವೇಶವನ್ನು ನೆನೆಯಬಹುದು. ಹೀಗೆ ಶ್ರೀರಾಮನನ್ನು ಯುದ್ಧದಲ್ಲಿ ತನ್ನ ಭುಜದ ಮೇಲೆ ಹೊತ್ತುನಿಂತ ವಾಹನವೂ ಹನುಮಂತನೇ ಆಗಿದ್ದಾನೆ. ಹನುಮಂತನು ಬಲಗಾಲು ಮುಂದೆ ಮಾಡಿ ಎಡ ಮಂಡಿಯೂರಿರುವ ಹಾಗೆ ಕುಳಿತು ತನ್ನ ಎರಡು ಕೈಗಳನ್ನು ಮುಂದೆ ಮಾಡಿ ಉತ್ಸವಮೂರ್ತಿಯನ್ನು ಹಿಡಿದುಕೊಂಡಿರುವಂತೆ ಕಾಣುತ್ತದೆ.

ಸೂರ್ಯಮಂಡಲೋತ್ಸವ :

ಸೂರ್ಯನ ಸ್ವರೂಪವೇ ನಾರಾಯಣನೆಂದು ಹೇಳುವ ಪುರಾಣ ವಾಕ್ಯಗಳಿವೆ ಎಂತಲೇ ಸೂರ್ಯ ಮಂಡಲೋತ್ಸವದಲ್ಲಿ ಸ್ವಾಮಿಯು ರಥಾರೂಢನಾಗಿ ಆಸೀನವಾಗಿ ಸುತ್ತಲೂ ಅರುಣಕಿರಣಗಳನ್ನು ಬೀರಿ ಬರುತ್ತಿರುವ ಹಾಗೆ ಕಾಣುವ ಈ ಉತ್ಸವವೇ ದಿವ್ಯವೈಭವ.

ಶೇಷವಾಹನ :

ವೈಕುಂಠದಲ್ಲಿ ಸ್ವಾಮಿಯ ಪಲ್ಲಂಗವೂ ಶೇಷವೇ ತಾನೆ. ಈ ಉತ್ಸವ ಮೂರ್ತಿಯ ಪಾದದ ಕೆಳಗೆ ಗದ್ದಿಗೆಯೋಪಾದಿಯಲ್ಲಿ ತನ್ನ ಶರೀರವನ್ನು ಸಿಂಬೆಯಂತೆ ಸುರುಳಿ ಸುತ್ತಿಕೊಂಡಂತೆ ಇರುವುದು. ತಲೆಯ ಮೇಲ್ಭಾಗದಲ್ಲಿ ಹರಡಿಕೊಂಡಿರುವ ವಿಶಾಲ ಹೆಡೆಯನ್ನು ಪಡೆದಿರುವ ಹಿತ್ತಾಲೆಯ ಸರ್ಪ, ಏಳು ಹೆಡೆಯನ್ನು ಪಡೆದಿರುವ ಶೇಷವಾಹನದ ಬಾಯಿಯಲ್ಲಿ ನಾಲಿಗೆ ಅತ್ತ ಇತ್ತ ತೆನೆದಾಡುವಂತೆ ಕಾಣುತ್ತದೆ.

ಮೋಹಿನಿ ತಿರುಕುಳೋತ್ಸವ :

ದೇವತೆಗಳು ರಾಕ್ಷಸರು ಕ್ಷೀರಸಾಗರವನ್ನು ಮಥಿಸಿದಾಗ ಅಮೃತ ಹುಟ್ಟಿತು. ಆಗ ಮಹಾವಿಷ್ಣು ಮೋಹಿನಿ ಅವತಾರವನ್ನು ತಾಳಿ ಅಮೃತ ಕುಂಭವನ್ನು ಕೈಯಲ್ಲಿ ಹಿಡಿದು

ದೇವತೆಗಳಿಗೆ ಅಮೃತವನ್ನು ಹಂಚಿ ಸುರರನ್ನಾಸಿಸಿದನು. ರಾಕ್ಷಸರು ಮಧ್ಯ ಸೇವನೆಯಿಂದಲೇ ಅಸುರರಾದರು ಜಗತ್ತನ್ನೇ ಭ್ರಮೆಯಲ್ಲಿ ಮುಳುಗಿಸಿದ ಮಹಾವಿಷ್ಣುವಿನ ಈ ಮೋಹಿನಿ ಸ್ವರೂಪವು ಈ (ಬ್ರಹ್ಮೋತ್ಸವದಲ್ಲಿ ಮೋಹಿನಿ ತಿರುಕೋಳೋತ್ಸವ) ಎಂಬ ವೈಶಿಷ್ಯತೆಯನ್ನು ಪಡೆದಿದೆ.

ಗಜವಾಹನ :

ಆನೆಯು ತನ್ನ ಮುಂಗಾಲನ್ನು ಮುಂದೆ ಮಾಡಿ ನಿಧಾನವಾಗಿ ಚಲಿಸುವಂತೆ ಕಾಣುತ್ತದೆ. ಕೊರಳಲ್ಲಿ ಘಂಟೆಯಿದೆ. ಉತ್ಸವ ಕಾಲದಲ್ಲಿ ಆನೆಯ ಮೇಲೆ ಉತ್ಸವ ಮೂರ್ತಿಯನ್ನಿಟ್ಟು ಮೆರವಣಿಗೆ ಹೊರಡಿಸುತ್ತಾರೆ. ಈ ದಿನ ಉತ್ಸವ ಹೊರಡುವುದಕ್ಕೂ ಮುಂಚೆ 'ಗಜೇಂದ್ರಮೋಕ್ಷ' ಕಥೆಯನ್ನು ಗುಣಗಾನ ಮಾಡುತ್ತಾರೆ.

ಹಂಸವಾಹನೋತ್ಸವ :

ಬ್ರಹ್ಮದೇವನ ವಾಹನ ಹಂಸ, ಹಿತ್ತಾಳೆಯಲ್ಲಿ ಮಾಡಿದ ಹಂಸದ ಮೇಲೆ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸುತ್ತಾರೆ. ಹೀಗೆ ಹಂಸ ವಾಹನವನ್ನೇರಿದ ಸ್ವಾಮಿಯನ್ನೇ ವಿವಿಧ ಬಗೆಗಳಲ್ಲಿ ಅರ್ಚಿಸಿ ಆರಾಧಿಸುತ್ತಾರೆ. ಸ್ವಾಮಿಯು ಹಂಸದ ಮೇಲೆ ಕುಳಿತು ಚಲಿಸುತ್ತಿರುವಂತೆ ನೋಡುಗರ ಕಣ್ಣಿಗೆ ಭಾಸವಾಗುತ್ತದೆ.

[28]ಕಲ್ಯಾಣೋತ್ಸವ :

ಈ ದೇವಾಲಯದ ಆಗಮಿಕರು ಮತ್ತು ಅರ್ಚಕರು ಈ ದಿನ ಶ್ರೀಚಂಪಕಧಾಮಸ್ವಾಮಿಗೆ ಮದುವೆ ಮಾಡಿಸುವ ಈ ಸಂಭ್ರಮವನ್ನು 'ಕಲ್ಯಾಣೋತ್ಸವ' ಎಂದು ಕರೆಯುತ್ತಾರೆ.

ಅಂದು ಶ್ರೀದೇವಿ ಮತ್ತು ಭೂದೇವಿಯ ಸಮೇತನಾದ ಶ್ರೀ ಚಂಪಕಧಾಮಸ್ವಾಮಿಗೆ ಶಾಸ್ತ್ರ ವಿಧಿವಿಧಾನಗಳ ಮೂಲಕ ಕಲ್ಯಾಣೋತ್ಸವವನ್ನು ನೆರವೇರಿಸುತ್ತಾರೆ. ಈ ಉತ್ಸವದಲ್ಲಿ ಕುಳಿತ ಸ್ವಾಮಿಯು ತುಂಬಾ ಅಲಂಕಾರ ಪ್ರಿಯನಾಗಿ ಕಂಗೊಳಿಸುತ್ತಿರುತ್ತಾನೆ. ಭಕ್ತ ಶ್ರೇಷ್ಠರು ಈ ವೈಭವವನ್ನು ಕಂಡು ಭಕ್ತಿಯಿಂದ ಧನ್ಯತೆಯ ಭಾವವನ್ನು ಹೊಂದುತ್ತಾರೆ ಅಲ್ಲದ್ದೆ ಭಕ್ತಾದಿಗಳು ತಮ್ಮ ಮನೆಗಳಲ್ಲಿರುವ ಹೆಣ್ಣುಗಂಡುಗಳಿಗೆ ಬೇಗನೆ ವಿವಾಹ ಯೋಗ್ಯ ಪ್ರಾಪ್ತಿಯಾಗಲೆಂದು ಪ್ರಾರ್ಥಿಸಿಕೊಳ್ಳುತ್ತಾರೆ. ಈ ರೀತಿಯಾಗಿ ಈ ಕಲ್ಯಾಣೋತ್ಸವವು ಜಗತ್ತಿಗೆ ಮಂಗಳ ಕರವಾಗುವಂತೆ ವಿಜೃಂಭಣೆಯಿಂದ ನೆರವೇರುತ್ತದೆ.

ಈ ಬ್ರಹ್ಮರಥೋತ್ಸವದ 7ನೇ ದಿನದಂದು ಶ್ರೀಚಂಪಕಧಾಮಸ್ವಾಮಿಯವರ 'ಬ್ರಹ್ಮರಥೋತ್ಸವ' ಜರುತ್ತದೆ. ಅದು ಪ್ರತಿ ಸಂವತ್ಸರದ ಫಾಲ್ಗುಣಮಾಸದ ಅನುರಾಧಾನಕ್ಷತ್ರದ

---

[28] ವಕ್ತೃ : ರಮೇಶ್, ಬ್ರಾಹ್ಮಣರು, ವಯಸ್ಸು –44, ಆಗಮಿಕರು

ದಿನವಾಗಿರುತ್ತದೆ. ಈ ಏಳನೇಯ ದಿನದಂದು ಶ್ರೀ ಚಂಪಕಧಾಮಸ್ವಾಮಿಯು ಶ್ರೀದೇವಿ ಮತ್ತು ಭೂದೇವಿಯರ ಸಮೇತನಾಗಿ ಬ್ರಹ್ಮರಥೋತ್ಸವದಲ್ಲಿ ಕಂಗೊಳಿಸುತ್ತಿರುತ್ತಾನೆ.

ಬನ್ನೇರುಘಟ್ಟದಲ್ಲಿ ನಡೆಯುವ ಈ ರಥೋತ್ಸವವನ್ನು 'ಶ್ರೀಚಂಪಕಧಾಮಸ್ವಾಮಿಯ ಬ್ರಹ್ಮರಥೋತ್ಸವ' ಎಂದು ಕರೆಯುತ್ತಾರೆ, ಪುರಾಣದ ಹಿನ್ನೆಲೆಯಲ್ಲಿ ಗಮನಿಸುವುದಾದರೆ ಭಕ್ತೆ ಬಕುಳದೇವಿಯ ಆಸೆಯಂತೆ ಕಲಿಯುಗದಲ್ಲಿ ಬ್ರಹ್ಮದೇವರು ಇದ್ದಾನೆ ಎನ್ನುವುದಕ್ಕೆ ಶ್ರೀನಿವಾಸನ ರೂಪದಲ್ಲಿ ಶ್ರೀಚಂಪಕಧಾಮಸ್ವಾಮಿಯೇ ಇಲ್ಲಿ ರಥೋತ್ಸವದ ಪೂಜೆ ಪಡೆಯುತ್ತಿದ್ದಾನೆ. ಈ ದಿನ ಸಾಕ್ಷಾತ್ ಬ್ರಹ್ಮನೇ ಆಸ್ಥಾನವನ್ನು ಅಲಂಕರಿ ನಡೆಸಿಕೊಡುತ್ತಾರೆಂಬ ನಂಬಿಕೆಯಿಂದ ಇದನ್ನು "ಚಂಪಕಧಾಮ (ಶ್ರೀನಿವಾಸ) ಸ್ವಾಮಿಯ ಬ್ರಹ್ಮರಥೋತ್ಸವ" ಎಂದು ಕರೆಯುತ್ತಾರೆ. ಬನ್ನೇರುಘಟ್ಟದ ಸುತ್ತಮುತ್ತಲು ಯಾವ ಗ್ರಾಮಗಳಲ್ಲಿಯೂ ನಡೆಯದ ರೀತಿಯಲ್ಲಿ ಅತ್ಯಂತ ವಿಜೃಂಭಣೆಯಿಂದ ಈ ರಥೋತ್ಸವವು ಇಲ್ಲಿ ನಡೆಯುತ್ತದೆ. ಬನ್ನೇರುಘಟ್ಟದ ಸುತ್ತಮುತ್ತಲ ಗ್ರಾಮದ ಗ್ರಾಮಸ್ಥರು. ದೂರದ ತಮಿಳುನಾಡಿನ ಭಕ್ತಾದಿಗಳು ಬೆಂಗಳೂರಿನ ಹಲವಾರು ಭಕ್ತರು ಈ ರಥೋತ್ಸವದಲ್ಲಿ ಭಾಗಿಯಾಗುತ್ತಾರೆ.

ಈ ಬನ್ನೇರುಘಟ್ಟ ಪ್ರದೇಶವು ರಾಜಧಾನಿ ಬೆಂಗಳೂರು. ತಾಲ್ಲೂಕು ಕೇಂದ್ರವಾದ ಅನೇಕಲ್ಲುಗೆ ಮತ್ತು ಕಗ್ಗಲಪುರ ರಸ್ತೆಗಳ ನಡುವೆ ಸಂಪರ್ಕ ಹೊಂದಿರುವುದರಿಂದ ಸುತ್ತಮುತ್ತಲ ಜನಗಳ ಪ್ರಮುಖ ಆಕರ್ಷಣೆಯಾಗಿರುವ ಈ ಬ್ರಹ್ಮರಥೋತ್ಸವವು ಭಕ್ತರನ್ನು ತನ್ನತ್ತ ಸೆಳೆಯುವ ಧಾರ್ಮಿಕ ಉತ್ಸವವಾಗಿದೆ.

ಈ ಬನ್ನೇರುಘಟ್ಟದ ರಥೋತ್ಸವ ಸುತ್ತಮುತ್ತಲ ಹತ್ತಾರು ಹಳ್ಳಿಗಳಿಗೆ ತುಂಬಾ ಪ್ರಸಿದ್ಧವಾದುದು. ಸುತ್ತಮುತ್ತ ಗ್ರಾಮಗಳಲ್ಲಿ ರಥೋತ್ಸವ ನಡೆಯದ ಕಾರಣ ಇದು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಈ ರಥೋತ್ಸವಕ್ಕೆ ದಿನಗಳು ಹತ್ತಿರ ಇರುವಾಗಲೇ ಜಾತ್ರೆಯ ಆಚರಣೆಗಳು ಆರಂಭವಾಗುತ್ತದೆ. ಈ ರಥೋತ್ಸವದ ಕಾರ್ಯಭಾರವೆಲ್ಲಾ ಸ್ಥಳೀಯ ಗ್ರಾಮಸ್ಥರು ಹಾಗೂ ಸಾರ್ವಜನಿಕ ಸಹಕಾರದೊಂದಿಗೆ ಸರ್ಕಾರದ ಮುಜರಾಯಿ ಇಲಾಖೆ ವತಿಯಿಂದಲೇ ಬಹಳ ವಿಜೃಂಭಣೆಯಿಂದ ನಡೆಯುತ್ತದೆ. ಮುಜರಾಯಿ ಅಧಿಕಾರಿಗಳಿಂದ ಆನೇಕಲ್ ತಾಲ್ಲೂಕಿನ ತಹಶೀಲ್ದಾರ್ ಅವರ ನೇತೃತ್ವದಲ್ಲಿ ದೇವಾಲಯದ ಧರ್ಮದರ್ಶಿ ಮಂಡಲಿಯ ಮಾರ್ಗದರ್ಶನದಲ್ಲಿ ಎಲ್ಲ ವ್ಯವಸ್ಥೆಗಳೂ ಆಗುತ್ತವೆ. ಸ್ಥಳೀಯವಾಗಿ ಈ ದೇಗುಲ್ ಉಸ್ತುವಾರಿಯನ್ನು ದೇವಸ್ಥಾನದ ಪಾರುಪತ್ತೇದಾರರು ವಹಿಸಿಕೊಂಡಿರುತ್ತಾರೆ.

ಈ ಬ್ರಹ್ಮರಥದ ಸಿದ್ಧತೆಗೆ ಹತ್ತುಹಲವಾರು ಗ್ರಾಮಗಳ ಗ್ರಾಮಸ್ಥರ ಸೇವೆಯು ಅನನ್ಯವಾಗಿದೆ. ಇಲ್ಲಿನ ಬ್ರಹ್ಮರಥವನ್ನು ಕಟ್ಟಿ ಸಿಂಗರಿಸುವಲ್ಲಿ ಬನ್ನೇರುಘಟ್ಟ, ಕೆಂಪನಾಯಕನಹಳ್ಳಿ, ಶ್ಯಾನುಭೋಗನಹಳ್ಳಿ, ಲಕ್ಷ್ಮೀಪುರ ಹಾಗೂ ಸುತ್ತಮುತ್ತಲಿನ ಹಳ್ಳಿಗಳ ಜನರ ಪಾತ್ರವು ಬಹಳ ಮಹತ್ತರವಾದದ್ದು.

ಈ ಬ್ರಹ್ಮರಥದ ಅಂಕಣಗಳನ್ನು ಜೋಡಿ ರಥ ಕಟ್ಟಲು ಬೇಕಾದ ಬಿದಿರು ಹಗ್ಗಗಳನ್ನು ಲಕ್ಷ್ಮೀಪುರದ ವಹ್ನಿಕುಲ ಕ್ಷತ್ರೀಯರು ಬನ್ನೇರುಘಟ್ಟದ ಅರಣ್ಯದ ಬಿದಿರಿನಿಂದ ತಯಾರಿಸಿಕೊಡುತ್ತಾರೆ. ಹಾಗೆಯೇ ರಥವನ್ನು ಎಳೆಯಲು ಬೇಕಾದ ಬಿದಿರಿನ ವರ್ಜಹಗ್ಗವೂ ಸಹಾ ಅವರಿಂದಲೇ ತಯಾರಾಗುತ್ತದೆ.

ಭೂತಾನಹಳ್ಳಿಯ ಗ್ರಾಮಸ್ಥರು ಯಾಗಶಾಲೆಗೆ ಬೇಕಾದ ಪರಿಕರಗಳು ಮತ್ತು ಚಪ್ಪರದ ಸೇವೆಯನ್ನು ನೆರವೇರಿಸುತ್ತಾರೆ. ಕೆಂಪನಾಯಕನಹಳ್ಳಿಯ ಭೋವಿಜನಾಂಗದವರು ಹಿಂದಿನಿಂದಲೂ ಈ ತೇರನ್ನು ಕಟ್ಟುವ ಕೆಲಸ ಅಂದರೆ ಅಂಕಣವನ್ನು ಜೋಡಿಸಿ ಬಿದಿರು ಹಗ್ಗಗಳಿಂದ ತೇರನ್ನು ಬಿಗಿಗೊಳಿಸಿ ತುದಿಯಲ್ಲಿ ಹಿತ್ತಾಳೆ ಕಳಶವನ್ನಿಟ್ಟು ರಥ ನಡೆಸುವ ಕೆಲಸವನ್ನು ನಡೆಸುತ್ತಿದ್ದರು ಕಾಲ ಬದಲಾದಂತೆ ಈ ಜನಾಂಗದವರು ಸಿಬ್ಬಂದಿಯ ಕೊರತೆಯಿಂದಲ್ಲೋ ತೇರನ್ನು ಸಿದ್ಧಗೊಳಿಸುವ ಕೆಲಸ ನಿಲ್ಲಿಸಿದ್ದಾರಂತೆ ಪ್ರಸ್ತುತ ಬನ್ನೇರುಘಟ್ಟದ ಗ್ರಾಮಸ್ಥರೇ ರಥಕಟ್ಟಿ ನಡೆಸುವ ಪ್ರಯತ್ನವನ್ನು ಮಾಡುತ್ತಿದ್ದಾರೆ.

ಲಕ್ಷ್ಮೀಪುರದ ಗ್ರಾಮಸ್ಥರು ಕಟ್ಟಿ ಸಿದ್ದಪಡಿಸಿರುವ ರಥವನ್ನು ತಳಿರುತೋರಣಗಳಿಂದ ಸಿಂಗರಿಸುತ್ತಾರೆ, ರಥದ ನಾಲ್ಕು ಕಡೆಗಳಿಗೆ ಗೊನೆಯಿಚಿದ ಬಾಳೆಕಂಬಗಳನ್ನು ಕಟ್ಟಿ ಸಿಂಗರಿಸುವ ಕೆಲಸವನ್ನು ಪರಂಪರಾಗತವಾಗಿ ಮಾಡಿಕೊಂಡು ಬಂದಿದ್ದಾರೆ.

ತೇರಿಗೆ ಬಣ್ಣಬಣ್ಣದ ಬಟ್ಟೆಯ ಹೊದಿಕೆಯನ್ನು ಕಳಸದವರೆಗೂ ಕಟ್ಟಿ ಅಲಂಕಾರಗೊಳಿಸುವ ಕಾರ್ಯವನ್ನು ಈ ಗ್ರಾಮದ ಮಡಿವಾಳ ಜನಾಂಗದವರದ್ದಾಗಿರುತ್ತದೆ. ಹುಲ್ಲಹಳ್ಳಿ ಗ್ರಾಮಸ್ಥರು ಈ ತೇರಿನ ಚಕ್ರಗಳಿಗೆ ಗುಜ್ಜನ್ನು ಕೊಡುವ ಕಾಯಕವನ್ನು ಮಾಡುತ್ತಿದ್ದಾರೆ. ಹೀಗೆಲ್ಲ ಸಿಂಗಾರವಾದ ರಥಕ್ಕೆ ವೈಶಾಖಸಾಗಮೋಕ್ತವಾಗಿ ಆಗಮಿಕರ ನೇತೃತ್ವದಲ್ಲಿ ಬಲಿಹರಣ, ರಥಬಲಿ, ತೇರು ನಡೆಸುವ ಸಲಕರಣೆಗಳೂ ಬಿದಿರಿನಹಗ್ಗ, ಇವುಗಳಿಗೆ ಶಸ್ತ್ರೋಕ್ತವಾಗಿ ಸಾಂಪ್ರದಾಯಿಕ ಪೂಜೆ ನೆರವೇರುತ್ತದೆ. ನಂತರ ರಥಾರೋಹಣಕ್ಕಾಗಿ ಸಜ್ಜಾಗಿರುವ ವಿಧವಿಧವಾದ ಪುಷ್ಪಹಾರಗಳಿಂದಲೂ ಪಟ್ಟೆ ಪೀತಾಂಬರ, ಜರತಾರಿ ವಸ್ತುಗಳಿಂದಲೂ ಸಿಂಗರಿಸಲ್ಪಟ್ಟ ಶ್ರೀದೇವಿ ಭೂದೇವಿ ಸಮೇತವಾಗಿ ಶ್ರೀ ಚಂಪಕಧಾಮ ಸ್ವಾಮಿಯನ್ನು ದೂಪ, ದೀಪ, ನೈವೇದ್ಯಗಳಿಂದ ಪೂಜಿಸಿ, ವಿಪ್ರೋತ್ತಮರು ವೇದಘೋಷಗಳ ಮಧ್ಯೆ, ಸುಶ್ರಾವ್ಯವಾದ ಮಂಗಳವಾದ್ಯಗೋಷ್ಠಿಯ ಛತ್ರಿ ಚಾಮರಗಳ ಸಮೇತ ಆಗಮಿಕರು ಋತ್ವಿಕ ಅರ್ಚಕ ಪರಿವಾರದವರು, ರಾಜಸ್ವ ಹಾಗೂ ಮುಜರಾಯಿ ಅಧಿಕಾರಿಗಳು ದೇವಸ್ಥಾನದ ಧರ್ಮದರ್ಶಿ ಮಂಡಲಿಯ ಧರ್ಮದರ್ಶಿಗಳು, ಸಂಚಾಲಕರು, ಗ್ರಾಮಪಂಚಾಯಿತಿ ಮುಖಂಡರು, ಸಮಸ್ತ ಗ್ರಾಮಸ್ಥರ ಉಪಸ್ಥಿತಿಯಲ್ಲಿ ಸಕಲ ವೈಭವ ಪೂರಿತವಾದ ಅತ್ಯಾಕರ್ಷಕವಾದ ಮೆರವಣಿಗೆಯಲ್ಲಿ ಕರೆತಂದು ರಥಕ್ಕೆ ಮೂರು ಬಾರಿ ಪ್ರದಕ್ಷಿಣೆಯನ್ನು ಮಾಡಿ ಶ್ರೀ ಸ್ವಾಮಿಯವರನ್ನು ಬ್ರಹ್ಮರಥದಲ್ಲಿ ಕುಳ್ಳರಿಸುತ್ತಾರೆ. ಪಂಡಿತೋತ್ತಮ ಆಗಮಿಕರಿಂದ ನಿಶ್ಚಯಿಸಲ್ಪಟ್ಟಿರುವ ಲಗ್ನದಲ್ಲಿ ಮಂಗಳವಾದ್ಯ ಹರ್ಷೋದ್ದಾರಗಳ ಮಧ್ಯೆ 'ಗೋವಿಂದಾ', 'ಗೋವಿಂದಾ' ಗೋವಿಂದಾ' ಎಂಬ ಘೋಷಣೆಗಳನ್ನು ಕೂಗುತ್ತಾ ರಥವನ್ನು ಎಳೆಯುತ್ತಾರೆ. ನೆರೆದಿರುವ ಜನಸ್ತೋಮ/ಭಕ್ತರೆಲ್ಲರೂ ಶ್ರೀ ಚಂಪಕಧಾಮ ಸ್ವಾಮಿ ರಥವನ್ನು ಎಳೆದು

ಧನ್ಯರಾಗುತ್ತಾರೆ ಇದಲ್ಲದೇ ಎಷ್ಟೋ ಜನ ಭಕ್ತಾದಿಗಳು ಈ ಸಂದರ್ಭದಲ್ಲಿ ಹರಕೆಗಳನ್ನು ಸಲ್ಲಿಸುತ್ತಾರೆ.

ಶ್ರೀಚಂಪಕಧಾಮನನ್ನು ಮನೆದೇವರು/ಕುಲದೈವನನ್ನಾಗಿಸಿಕೊಂಡಿರುವ ಭಕ್ತರು ತಪ್ಪದೇ ಈ ರಥೋತ್ಸವದಲ್ಲಿ ಭಾಗವಹಿಸುತ್ತಾರೆ. ಸ್ಥಳೀಯ ಸಂಪ್ರದಾಯದಂತೆ ನೂತನವಾಗಿ ಮದುವೆಯಾದ ದಂಪತಿಗಳು ತಪ್ಪದೇ ಈ ರಥೋತ್ಸವದಲ್ಲಿ ಭಾಗವಹಿಸಿ ಸೇವೆಸಲ್ಲಿಸುತ್ತಾರೆ.

ದೇವಾಲಯದ ಕಡೆಯಿಂದ ರಥ ಮುಂದೆ ಸಾಗುತ್ತಿದ್ದಂತೆ ಸುತ್ತಮುತ್ತಲಿನ ಗ್ರಾಮಸ್ಥರು ಭಕ್ತಾದಿಗಳು ಅರವಂತಿಕೆಗಳನ್ನು ಹಾಗೂ ಎಲ್ಲ ಕೋಮಿನವರು ಅವರದ್ದೇ ಛತ್ರಗಳಲ್ಲಿ ಅನ್ನಸಂತರ್ಪಣೆಯನ್ನು ವಿಶೇಷವಾಗಿ ಏರ್ಪಡಿಸುತ್ತಾರೆ.

ಈ ಬನ್ನೇರುಘಟ್ಟ ಗ್ರಾಮದ ಸುತ್ತಮುತ್ತಲ ಹಳ್ಳೀಗಳಾದ ಹುಲ್ಲಹಳ್ಳಿ, ಸಕಲವಾರ, ಮಂಚನಹಳ್ಳಿ, ನಲ್ಲಸಂದ್ರ, ಹುಲಿಮಂಗಲ, ದೇವಗಾನಹಳ್ಳಿ, ಬೇಗೂರು, ತೋಗೂರು, ವಾಲ್ಮೀಕಿನಗರ ಹಾಗೂ ಕೊಪ್ಪ ಗ್ರಾಮದ ಅನೇಕ ಗ್ರಾಮಸ್ಥರು ಅರವಂತಿಕೆ ಮತ್ತು ಅನ್ನದಾನಗಳನ್ನು ಬಹಳ ವಿಜೃಂಭಣೆಯಿಂದ ನೆರವೇರಿಸುತ್ತಾರೆ.

ಈ ರೀತಿಯಾಗಿ ಅನೇಕ ವಿಶೇಷತೆಗಳನ್ನು ಹೊಂದಿರುವ ನೂರಾರು ಭಕ್ತರನ್ನು ತನ್ನತ್ತ ಸೆಳೆಯುವ ಈ ಬನ್ನೇರುಘಟ್ಟ ಶ್ರೀ ಚಂಪಕಧಾಮಸ್ವಾಮಿಯ ರಥೋತ್ಸವವು ಇಡೀ ಆನೇಕಲ್ ತಾಲ್ಲೂಕಿನಲ್ಲಿಯೇ ಹೆಸರುವಾಸಿಯಾಗಿದೆ.

ದಸರಾ ಮಹೋತ್ಸವ

ಬನ್ನೇರುಘಟ್ಟದಲ್ಲಿ ಶ್ರೀ ಚಂಪಕಧಾಮ ಸ್ವಾಮಿಗೆ ದಸರಾ ಮೆರವಣಿಗೆಯನ್ನು ಸುಮಾರು 50 ವರ್ಷಗಳ ಹಿಂದಿನಿಂದಲೂ ನವರಾತ್ರಿ ಅಲಂಕಾರಗಳಿಂದ ವಿವಿಧ ಸೇವಾಕರ್ತರು ನೆರವೇರಿಸಿಕೊಂಡು ಬಂದಿದ್ದಾರೆ. ಈ ವಿಜಯದಶಮಿಯನ್ನು ಅನೇಕ ವರ್ಷಗಳ ಹಿಂದಿನಿಂದಲೂ ಸರಳವಾಗಿ ಆಚರಿಸಿಕೊಂಡು ಬಂದಿದ್ದಾರೆ. 1993ರ ವರ್ಷದಲ್ಲಿ ಮುಜರಾಯಿ ಇಲಾಖೆಯ ಅಧಿಕಾರಿ ಮತ್ತು ಆನೇಕಲ್ ತಾಲ್ಲೂಕಿನ ತಹಶೀಲ್ದಾರ್‌ರಾಗಿದ್ದ ಶ್ರೀ ಎಂ.ಮಹದೇವಗೌಡ ರವರು ಈ ವಿಜಯದಶಮಿ ದಸರಾಮೆರವಣಿಗೆಯನ್ನು ಸ್ಥಳೀಯ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಆನೆಯನ್ನು ಬಳಸಿಕೊಂಡು ಮೈಸೂರು ಮಾದರಿಯಲ್ಲಿ ವೈಭವಪ್ರೇತ ಜಂಬೂಸವಾರಿಯ ಅಂಬಾರಿ ಮೆರವಣಿಗೆಯನ್ನು ಏರ್ಪಡಿಸಲು ಆದೇಶ ನೀಡಿದರು.

ಈ ಜಂಬೂಸವಾರಿಯ ಪ್ರಯತ್ನಕ್ಕೆ ಬನ್ನೇರುಘಟ್ಟದ ಗ್ರಾಮಸ್ಥರು ಮತ್ತು ಈ ಗ್ರಾಮದ ದಸರಾಯುವ ಸೇವಾ ವೇದಿಕೆಯ ಸಾಧನೆ ಅನನ್ಯವಾದದ್ದು. ಅಂದು ಗ್ರಾಮದಲ್ಲಿ ಅದ್ದೂರಿಯಾಗಿ ಜಂಬೂಸವಾರಿ ಮೆರವಣಿಗೆಯನ್ನು ವ್ಯವಸ್ಥೆಮಾಡಿ ಜೊತೆಜೊತೆಗೆ ನಮ್ಮ ಇತಿಹಾಸದ ಸಂಸ್ಕೃತಿಯನ್ನು ಪ್ರತಿಬಿಂಬಿಸುವಂಥ ಜಾನಪದ ಕಲಾತಂಡಗಳು ಕೋಲಾಟ, ಕತ್ತಿವರಸೆ,

ದೊಣ್ಣೆವರಸೆ, ಸೋಮನಕುಣಿತ, ಡೊಳ್ಳುಕುಣಿತ, ಹುಲಿವೇಷ, ಕುಸ್ತಿಪಂದ್ಯಾವಳಿ, ಕೀಲುಕುದುರೆ, ಗಾರುಡಿಪ್ರದರ್ಶನ, ಸ್ತಬ್ಧಚಿತ್ರಗಳು, ರಂಗೋಲಿಸ್ಪರ್ಧೆ ಮುಂತಾದವುಗಳನ್ನು ವ್ಯವಸ್ಥಿತವಾಗಿ ಆಯೋಜಿಸಿ ದಸರಾಮಹೋತ್ಸವವನ್ನು ನೆರವೇರಿಸಲಾಯಿತು.

ಈ ರೀತಿಯಾಗಿ ನಡೆದುಕೊಂಡು ಬಂದ ದಸರಾ ಮಹೋತ್ಸವವು 1997ರಲ್ಲಿ ಶ್ರೀ ಚಂಪಕವಲ್ಲಿ ಮಾರಮ್ಮದೇವರ ದಸರಾ ಮತ್ತು ಶ್ರೀಚಂಪಕಧಾಮಸ್ವಾಮಿಯ ದಸರಾ ಮೆರವಣಿಗೆಯನ್ನು ಎರಡು ಬೇರೆ ಬೇರೆ ಉತ್ಸವಗಳಾಗಿ ಮಾಡಲಾಯಿತು. ಈ ಕಾರ್ಯಕ್ಕೆ ಈ ಗ್ರಾಮದ ಯುವಕರ ತಂಡವು ಯುವಜನ ಕ್ರೀಡಾಸೇವೆ ಹಾಗೂ ದಸರಾ ಉತ್ಸವ ಸಮತಿಗಳನ್ನು ರಚಿಸಿಕೊಂಡಿತು. ಅನೇಕ ವರ್ಷಗಳಿಂದ ಈ ಗ್ರಾಮದಲ್ಲಿ ಯುವಕರ ಮನದಲ್ಲಿ ಉಳಿದ ಕಹಿಘಟನೆಗಳನ್ನು ಮರೆತು ಮತ್ತೆ ಅಂದಿನ ಹಾಲಿ ಕನ್ವೀನರ್ ಆದ ಶ್ರೀ ಎನ್.ಜಯರಾಮ್ ರವರ ದೂರದೃಷ್ಠಿಯ ಫಲವಾಗಿ ಮತ್ತೆ ಒಂದಾಗಿ 2009ರಲ್ಲಿ ದಸರಾ ನಡೆಯಿತು.

ತದನಂತರ ಗ್ರಾಮದ ಎಲ್ಲಾ ಮುಖಂಡರು, ಸ್ಥಳೀಯ ಗ್ರಾಮಪಂಚಾಯಿತಿ ಮತ್ತು ಇಲ್ಲಿನ ಅನೇಕ ಸಂಘಟನೆಗಳು ಒಮ್ಮತವಾಗಿ ಈ ದಸರಾ ಉತ್ಸವವನ್ನು ಇತ್ತೀಚಿನ ವರ್ಷಗಳಲ್ಲಿ 'ಊರಹಬ್ಬ'ವಾಗಿ ಆಚರಿಸಲಾಗುತ್ತಿದೆ.

ಅಂದಿನಿಂದ ಎರಡು ಆನೆಗಳನ್ನು ಬಳಸಿಕೊಂಡು ಎರಡು ಅಂಬಾರಿಯಲ್ಲಿ ಒಂದು ಶ್ರೀಚಂಪಕಧಾಮಸ್ವಾಮಿ ಮತ್ತು ಮತ್ತೊಂದರಲ್ಲಿ ಶ್ರೀಚಂಪಕವಲ್ಲಿ ಮಾರಮ್ಮ ದೇವರ ಅಂಬಾರಿ ಉತ್ಸವಗಳು ಬನ್ನೇರುಘಟ್ಟದಲ್ಲಿ ನಡೆಯುತ್ತ ಬಂದಿದೆ.

[29]<u>ಊರಹಬ್ಬ</u> :

ಈ ಬನ್ನೇರುಘಟ್ಟ ಗ್ರಾಮದಲ್ಲಿ ಶ್ರೀ ಚಂಪಕವಲ್ಲಿ ಮಾರಮ್ಮನಿಗೆ ದೀಪಧಾರತಿಗಳನ್ನು ಬೆಳಗುವುದರ ಮೂಲಕ ಇಡೀ ಊರಿನಲ್ಲಿರುವವರು ಆಚರಿಸುವ ಐಕ್ಯತೆಯ ಹಬ್ಬವೇ ಈ ಊರಹಬ್ಬ. ಈ ತಾಯಿಯು ಈ ಗ್ರಾಮಕ್ಕೆ ಅಧಿದೇವತೆಯಾಗಿದ್ದು ಈ ಗ್ರಾಮಕ್ಕೆ ಸಂಭವಿಸುವ ಯಾವುದೇ ಅನಿಷ್ಠಗಳನ್ನು ಮತ್ತು ಗಂಡಾಂತರಗಳನ್ನು ನಿವಾರಿಸುತ್ತಾಳೆ ಎಂಬ ನಂಬಿಕೆ ಈ ಸ್ಥಳೀಯರ ಮನದಲ್ಲಿ ಜನಜನಿತವಾಗಿದೆ. ಈ ಗ್ರಾಮದಲ್ಲಿ ಯಾವುದೇ ತೊಂದರೆಗಳು, ಅನಿಷ್ಟಗಳು, ಪೀಡೆಗಳು ಸಂಭವಿಸಿದರೆ ಈ ಗ್ರಾಮದೇವತೆ ಕೋಪಿಸಿಕೊಂಡಿದ್ದಾಳೆಂಬ ಮಾತು ಪ್ರಸ್ತುತ ಈಗಲೂ ಚಾಲ್ತಿಯಲ್ಲಿದೆ, ಆದ್ದರಿಂದ ಈ ತಾಯಿಯನ್ನು ತಂಪುಗೊಳಿಸಲು ಈ ತಾಯಿಗೆ ಕುರಿ ಅಥವಾ ಮೇಕೆಯನ್ನು ಬಲಿ ನೀಡುತ್ತಾರೆ. ಗ್ರಾಮದ ಹೆಂಗಳೆಯರು ತಂಬಿಟ್ಟಿನಿಂದ ದೀಪಾಧಾರತಿಗಳನ್ನು ಮಾಡಿಕೊಂಡು ದೇವರಿಗೆ ಬೆಳಗಿ ತಮ್ಮ ಮನಸ್ಸಿನ ಹರಕೆಗಳು ಫಲಿಸಲೆಂದು ಪ್ರಾರ್ಥಿಸಿಕೊಳ್ಳುತ್ತಾರೆ, ನಂತರ ಈ ದೇಗುಲದ ಮುಂಭಾಗದಲ್ಲಿ ಬೆಂಕಿಕೆಂಡಗಳಿಂದ ಕೂಡಿದ ಕೊಂಡವನ್ನು ನಿರ್ಮಿಸುತ್ತಾರೆ. ಗ್ರಾಮದ ಎಲ್ಲ ಜಾತಿಜನಾಂಗದವರು ಶ್ರದ್ಧಾ ಭಕ್ತಿಯಿಂದ ಬೇವಿನ ಸೊಪ್ಪನ್ನು

---

[29] ವಕ್ತೃ : ಮಾರಪ್ಪ, ಒಕ್ಕಲಿಗ, ವಯಸ್ಸು –56, ಅರ್ಚಕರು

ಕೈಯಲ್ಲಿ ಹಿಡಿದು ಮನದಲ್ಲಿ ಈ ದೇವಿಯನ್ನು ನೆನೆಯುತ್ತ ಈ ಕೊಂಡವನ್ನು ಹಾಯುವ ಪದ್ಧತಿ ಪ್ರಸ್ತುತ ಈಗಲೂ ನಡೆಯುತ್ತಿದೆ.

ಈ ಗ್ರಾಮದ ಸುತ್ತಮುತ್ತಲಿರುವ ಎಲ್ಲಾ ದೇವತೆಗಳಿಗೆ ಈ ಗ್ರಾಮದ ಹೆಂಗೆಳೆಯರು ಭಕ್ತಿಪೂರ್ವಕವಾಗಿ ದೀಪಧಾರತಿಗಳನ್ನು ಬೆಳಗುತ್ತ ಊರಿಗೆ ಒಳ್ಳೆಯದಾಗಲಿ ಎಂದು ಬೇಡಿಕೊಳ್ಳುತ್ತಾರೆ. ಕೆಟ್ಟ ಅನಿಷ್ಠಗಳಿಮದ, ಮಕ್ಕಳಿಗೆ ಬಾಲಗ್ರಹ, ದೃಷ್ಟಪೀಡೆ ಪರಿಹಾರಗಳಿಂದ ಈ ಗ್ರಾಮವನ್ನು ಈ ಎಲ್ಲಾ ದೇವತೆಗಳು ಸದಾಕಾಲ ಕಾಯಬೇಕೆಂದು ಊರಿನ ಗ್ರಾಮಸ್ಥರೆಲ್ಲರು ಬೇಡಿಕೊಂಡು ಬಲಿ ಹೊಡೆದ ಮೇಕೆ ಅಥವಾ ಕುರಿಯನ್ನು ಪ್ರಸಾದವಾಗಿ ತಯಾರಿಸಿ ಎಲ್ಲರೂ ಸಹ ಒಟ್ಟಾಗಿ ಊಟವನ್ನು ಮಾಡುತ್ತಾರೆ.

ಛತ್ರಗಳು

[30]ಛತ್ರಗಳು ಈ ಮೂಲತಃ ಈ ಗ್ರಾಮದ ಹಳೆಯಕಾಲದ ಕಲ್ಲಿನ ಮಂಟಪಗಳು. ಅನೇಕ ವರ್ಷಗಳ ಹಿಂದಿನಿಂದಲೂ ಈ ಅರಣ್ಯ ಪ್ರದೇಶದಲ್ಲಿ ಭಕ್ತರಿಗೆ ದರ್ಶನ ನೀಡುತ್ತಿರುವ ಶ್ರೀ ಚಂಪಕಧಾಮಸ್ವಾಮಿಯನ್ನು ಆರಾಧಿಸಲು ದೂರದ ಸ್ಥಳಗಳಿಂದ ಬಂದವರು ಕಟ್ಟಿದ ಕಟ್ಟಡಗಳೇ ಈ ಛತ್ರಗಳು.

ಈ ಚಂಪಕಧಾಮನನ್ನು ಆರಾಧಿಸಲು ಹಿಂದಿನ ಕಾಲದಲ್ಲಿ ಬಹಳ ದೂರದ ಸ್ಥಳಗಳಿಂದ ಎತ್ತುಗಳನ್ನು ಕಟ್ಟಿಕೊಂಡ ಬಂಡಿಯಲ್ಲಿ ಎಲ್ಲ ಸಕಲ ಕುಟುಂಬ ವರ್ಗದವರು ಆಗಮಿಸುತ್ತಿದ್ದರಂತೆ, ಆಗಾಗ ಆಗಮಿಸಿದ ಇವರುಗಳು ಈ ಸ್ಥಳದಲ್ಲಿ ತಾತ್ಕಾಲಿಕವಾಗಿ ಸುಮಾರು 2–3ದಿನಗಳು ಅಥವಾ ಒಂದು ವಾರ ಕಾಲ ಈ ಸ್ಥಳದಲ್ಲಿ ತಂಗುತ್ತಿದ್ದರು, ಈ ರೀತಿಯಾಗಿ ಪದೇ ಪದೇ ಈ ಸ್ಥಳಕ್ಕೆ ಆಗಮಿಸುತ್ತಿದ್ದ ಇವರು ತಮ್ಮ ಸೌಕರ್ಯಕ್ಕಾಗಿ ಕಲ್ಲಿನಿಂದ ಮಂಟಪಗಳ ಹಾಗೆ ನಿರ್ಮಿಸಿಕೊಂಡ ಈ ಕಟ್ಟಡಗಳೇ ಕಾಲಕ್ರಮೇಣ ಛತ್ರಗಳಾಗಿ ರೂಪಗೊಂಡವು. ಕಾಲ ಸರಿದಂತೆ ಈ ಛತ್ರಗಳಲ್ಲಿ ನೆಲೆನಿಂತ ಈ ಜನರು ಶ್ರೀ ಚಂಪಕಧಾಮನನ್ನು ಪೂಜಿಸಿ ನೆರೆದ ಎಲ್ಲಾ ಭಕ್ತಾದಿಗಳಿಗೆ ಅನ್ನದಾಸೋಹವನ್ನು ಮಾಡುತ್ತಿದ್ದರು. ಈ ರೀತಿಯ ಧಾರ್ಮಿಕ ಕಾಯಗಳಿಗೆ ಅವರು ಈ ಸ್ಥಳದಲ್ಲಿ ರಚಿಸಿದ ಕಲ್ಲಿನ ಕಟ್ಟಡಗಳ ರಚನೆಗಳೇ ಈ ಛತ್ರಗಳು. ಹೀಗೆ ಕಾಲಸರಿದಂತೆ ಈ ಗ್ರಾಮಕ್ಕೆ ಅನೇಕ ಕಡೆಗಳಿಂದ ಎಲ್ಲಾ ಜಾತಿಜನಾಂಗದವರು ಆಗಮಿಸಿ ತಾತ್ಕಾಲಿಕವಾಗಿ ಕಲ್ಲಿನ ಕಟ್ಟಡಗಳನ್ನು ಮತ್ತು ಮನೆಗಳನ್ನು ನಿರ್ಮಿಸಿ ಈ ಗ್ರಾಮದಲ್ಲಿ ನೆಲೆನಿಂತರಂತೆ. ಕಾಲಕ್ರಮೇಣ ಈ ಛತ್ರಗಳೇ ಭಕ್ತಾದಿಗಳ ಅನ್ನಛತ್ರಗಳಾಗಿ, ಅರವಂಟಿಕೆಗಳ ಕೇಂದ್ರವಾಗಿ ಬದಲಾದವಂತೆ. ಹೀಗೆ ಸಾಗಿಬಂದ ಈ ಛತ್ರಗಳನ್ನು ಅನೇಕ ವರ್ಷಗಳು ಕಳೆದ ಹಾಗೆ ವಿವಾಹದ ಛತ್ರಗಳಾಗಿ 'ವ್ಯಾವಹಾರಿಕ ಕೇಂದ್ರ'ಗಳಾಗಿ ಮಾರ್ಪಾಟಾಗಿವೆ. ಹೀಗಾಗಿ ಬನ್ನೇರುಘಟ್ಟ ಪ್ರದೇಶದಲ್ಲಿ ಶ್ರೀದೇವಿ ಭೂದೇವಿಯರ ಸಮೇತ ನೆಲೆನಿಂತ ಚಂಪಕಧಾಮನ ಈ ಕ್ಷೇತ್ರದಲ್ಲಿ ವಿವಾಹವಾದರೆ ಸಕಲಸುಖಶಾಂತಿ ಸಮೃದ್ಧಿಗಳು ಪ್ರಾಪ್ತವಾಗುತ್ತವೆ ಎಂಬ ಸ್ಥಳೀಯ ನಂಬಿಕೆಯಿಂದ ಈ ಕ್ಷೇತ್ರದಲ್ಲಿ ಈ ಛತ್ರಗಳಲ್ಲಿ ಇಂದಿಗೂ ಸಹ ವಿವಾಹಗಳು ನಡೆದುಕೊಂಡು ಬಂದಿದೆ. ಬನ್ನೇರುಘಟ್ಟದ ಸುತ್ತಮುತ್ತಲಲ್ಲಿರುವ ಅನೇಕ ಗ್ರಾಮಸ್ಥರು

[30] ವಕ್ತೃ : ಮಹಾದೇವ, ಒಕ್ಕಲಿಗ, ವಯಸ್ಸು : 48, ವ್ಯವಹಾರ

ಪ್ರಸ್ತುತ ಈಗಲೂ ಸಹ ಈ ಕ್ಷೇತ್ರದಲ್ಲಿ ವಿವಾಹ ಕಾರ್ಯಕ್ರಮಗಳನ್ನು ನಡೆಸುತ್ತಿರುವುದು ಈ ಕ್ಷೇತ್ರದ ಪ್ರಮುಖ ಆಕರ್ಷಣೆಯಾಗಿದೆ. ಬಹಳ ವರ್ಷಗಳ ಹಿಂದಿನಿಂದ ಕೇವಲ ಕಲ್ಲಿನಛತ್ರಗಳಾಗಿ ರೂಪಗೊಂಡ ಈ ಕಟ್ಟಡಗಳೇ ಪ್ರಸ್ತುತ ದೊಡ್ಡ ದೊಡ್ಡ ಅಲಂಕಾರಿಕವಾದ 'ಕಲ್ಯಾಣಮಂಟಪ'ಗಳಾಗಿ ರೂಫಗೊಂಡು ಪ್ರಸ್ತುತ ವಿವಾಹನಡೆಸುವ ಸ್ಥಳಗಳಾಗಿ ರೂಪುಗೊಂಡಿವೆ.

ಪ್ರಸ್ತುತ ಈ ಕ್ಷೇತ್ರದಲ್ಲಿ ಎಲ್ಲಾ ಜಾತಿಜನಾಂಗಗಳ ಛತ್ರಗಳಿರುವುದನ್ನು ಕಾಣಬಹುದು. ಮೊದಲಿಯಾರ್ ಸುಂದರಮ್ಮಾಳ್ ಛತ್ರ, ದೊಂಡೋಸಾಛತ್ರ, ಹರಿಕೋಡೆಛತ್ರ, ಕೊಮ್ಮಟಗಿರಿ ಛತ್ರ, ಸೊಣ್ಣಮ್ಮನ ಛತ್ರ, ಪಿಳ್ಳಯನ ಛತ್ರ. ಈ ರೀತಿಯಾಗಿ ಇನ್ನು ಅನೇಕ ಛತ್ರಗಳನ್ನು ಈಗಲೂ ಸಹ ಈ ಗ್ರಾಮದಲ್ಲಿ ಕಾಣಬಹುದು. ಕೆಲವು ಛತ್ರಗಳು ನಾಶವಾಗಿದೆ ಮತ್ತೆ ಕೆಲವು ವಿನಾಶದ ಅಂಚಿನಲ್ಲಿವೆ. ಪ್ರಸ್ತುತ ಆಧುನಿಕವಾಗಿ ಅನೇಕ ಕಲ್ಯಾಣಮಂಟಪಗಳನ್ನು ನಿರ್ಮಿಸಲಾಗಿದೆ. ಶ್ರೀ ಬಾಲಾಜಿ ಕಲ್ಯಾಣಮಂಟಪ, ಪ್ರೇಮವಿಜಯ ಕನ್ವೆಷನ್ ಹಾಲ್, ಶ್ರೀರಂಗನಾಥ ಕಲ್ಯಾಣಮಂಟಪ, ಶ್ರೀ ಆನಂದಸಭಾ ಗೃಹ, ಶ್ರೀ ರಾಘವೇಂದ್ರ ಕಲ್ಯಾಣ ಮಂಟಪ, ಶ್ರೀ ಜಿ.ಎಂ.ಆರ್. ಕಲ್ಯಾಣ ಮಂಟಪ ಹೀಗೆ ಕಾಲಸರಿದಂತೆ ಜಾಗತೀಕವಾದ ಪರಿಣಾಮದಿಂದ ಈ ರೀತಿಯ ಅನೇಕ 'ಕಲ್ಯಾಣ ಮಂಟಪ'ಗಳು ಈ ಕ್ಷೇತ್ರದಲ್ಲಿ ರಚನೆಗೊಂಡು ಸುತ್ತಮುತ್ತಲ ಪ್ರದೇಶಗಳಲ್ಲಿ ವಾಸವಾಗಿರುವ ಅನೇಕ ಯುವಕ-ಯುವತಿಯರಿಗೆ ವಿವಾಹದ ಕಾಯಕಲ್ಪವನ್ನು ಒದಗಿಸುತ್ತಿದೆ.

ಪ್ರಸ್ತುತ ಎಲ್ಲಾ ಜಾತಿಜನಾಂಗದವರು ಸಹ ವ್ಯಾವಹಾರಿಕ ದೃಷ್ಟಿಯಿಂದ ಅನೇಕ ಕಲ್ಯಾಣಮಂಟಪಗಳನ್ನು ಈ ಕ್ಷೇತ್ರದಲ್ಲಿ ಕಟ್ಟಿಸಿರುವುದನ್ನು ಕಾಣಬಹುದು.

[31]ಕಲ್ಯಾಣಿಗಳು :

ಇವುಗಳನ್ನು 'ತೀರ್ಥದಬಾವಿ'ಗಳೆಂದು ಮತ್ತು 'ಕೊಳ'ಗಳೆಂದು ಕರೆಯುತ್ತಾರೆ. ಇತಿಹಾಸಪೂರ್ವ ಕಾಲದಿಂದಲೂ ತನ್ನದೇ ಆದ ಅಸ್ಥಿತ್ವವನ್ನು ಉಳಿಸಿಕೊಂಡು ಬಂದಿರುವ ಈ ತೀರ್ಥಬಾವಿಗಳು ಬಹುಶಃ ಯಾವ ಕಾಲದಲ್ಲಿ ನಿರ್ಮಾಣವಾದವುಗಳು ಎಂಬುದರ ಬಗ್ಗೆ ಮಾಹಿತಿಗಳಿಲ್ಲ. ಬಹುಶಃ ಈ ಕಲ್ಯಾಣಿಗಳು ಈ ಪ್ರದೇಶವನ್ನು ಆಳಿದ ರಾಜರುಗಳ ಆಳ್ವಿಕೆಯಲ್ಲಿ ನಿರ್ಮಾಣಗೊಂಡಿರಬಹುದು. ಅಥವಾ ಅರಣ್ಯ ಪ್ರದೇಶವಾಗಿದ್ದ ಈ ಊರಿನಲ್ಲಿ ದೂರದ ಊರುಗಳಿಂದ ಆಗಮಿಸಿದ ಭಕ್ತಾದಿಗಳು ಕುಡಿಯುವ ನೀರಿಗಾಗಿ ನಿರ್ಮಿಸಿರಬಹುದು. ಪ್ರಾಯಶಃ ಈ ತೀರ್ಥಬಾವಿಗಳು ಯಾವ ಕಾಲದಲ್ಲಿ ನಿರ್ಮಾಣವಾದವೋ ಗೊತ್ತಿಲ್ಲ, ಪ್ರಸ್ತುತ ಈ ಕಲ್ಯಾಣಿಗಳು ಈ ಕ್ಷೇತ್ರದ ಪ್ರಾಚೀನತೆಯ ಕುರುಹುಗಳಾಗಿ ಉಳಿದುಕೊಂಡಿರುವುದನ್ನು ಕಾಣಬಹುದು.

ಪ್ರತಿಯೊಂದು ಕಲ್ಯಾಣಿಯ ಹೆಸರುಗಳು ಆಸ್ಥಳದ ವಿಶಿಷ್ಟತೆಯನ್ನು ಕುರಿತದ್ದಾಗಿದೆ. ಬನ್ನೇರುಘಟ್ಟದಲ್ಲಿದ್ದ ಕಲ್ಯಾಣಿಗಳ ಹೆಸರುಗಳು ಈ ರೀತಿ ಇವೆ : ಕೊಮ್ಮಟಗಿರಿ ಬಾವಿ, ತುಳಸಿತೋಟ, ಸುವರ್ಣಮುಖಿ ತೀಥ ಕೊಳ, ಯಲ್ಲಾಂಬಾವಿ, ಅನಂತ ಸರಸ್ವತಿ ಬಾಯಿ, ಯಾತದ ಬಾವಿ, ಮಹಾನವಮಿ ಮಂಟಪ, ಪುಷ್ಪಾಕಲ್ಯಾಣಿ, ಮಹಾಲಕ್ಷ್ಮಿ ಕಲ್ಯಾಣಿ, ಕಂಚಿಗನಕುಂಟೆ (ಸಂಪಿಗೆ

---

[31] ವಕ್ತೃ : ನಾರಾಯಣಪ್ಪ, ಒಕ್ಕಲಿಗ, ವಯಸ್ಸು – 67, ದೇವಾಲಯದ ಕೆಲಸಕಾರ್ಯ

ಹಳ್ಳಿಯಲ್ಲಿದೆ). ಇನ್ನು ಅನೇಕ ತೀರ್ಥಬಾವಿಗಳಿದ್ದವೆಂದು ಈ ಊರಿನ ಗ್ರಾಮಸ್ಥರು ಹೇಳುತ್ತಾರೆ. ಪ್ರಸ್ತುತ ಈಗಿರುವ ಕಲ್ಯಾಣಿಗಳೆಂದರೆ ಪುಷ್ಪ ಕಲ್ಯಾಣಿ. ಸುವರ್ಣಮುಖಿ ಕಲ್ಯಾಣಿ ಮತ್ತು ಕೊಮ್ಮಟಗಿರಿ (ಸೊಪತ್ ಕಲ್ಯಾಣಿ) ಉಳಿದಿದೆ. ಉಳಿದೆಲ್ಲವುಗಳು ಆಧುನಿಕ ಪ್ರಭಾವದಿಂದ ಮುಚ್ಚಿ ಹೋಗಿವೆ. ಕೆಲವು ಹೂಳು ತುಂಬಿಕೊಂಡಿದೆ, ಮತ್ತೆ ಕೆಲವರು ವಯಕ್ತಿಕ ಉದ್ದೇಶಗಳಿಗೆ ಈ ಕಲ್ಯಾಣಿಗಳನ್ನು ಅತಿಕ್ರಮಿಸಿಕೊಂಡಿರುವುದನ್ನು ಕಾಣಬಹುದು. ಉಳಿದಿರುವ ಬೆರಳೆಣಿಕೆಯಷ್ಟು ಕಲ್ಯಾಣಿಗಳು ಪ್ರಸ್ತುತ ವಿನಾಶದ ಅಂಚಿನಿಲ್ಲಿದೆ. ಪ್ರಸ್ತುತ ಜಾಗತೀಕರಣದ ಪ್ರಭಾವದಿಂದ ಇಲ್ಲಿನ ಗ್ರಾಮಸ್ಥರು ಜನಗಳು ಪ್ರಾಚೀನತೆಯ ಕುರುಹುಗಳಾಗಿರುವ ಈ ಕಲ್ಯಾಣಿಗಳು ಉಳಿಸಿಕೊಳ್ಳಲು ಆಸಕ್ತಿ ವಹಿಸದಿರುವುದೇ ಇತ್ತೀಚಿನ ದಿನಗಳಲ್ಲಿ ಇವು ಅವನತಿಯ ಹಾದಿಯನ್ನು ಹಿಡಿದಿರುವುದನ್ನು ಕಾಣಬಹುದು.

[32]**ಸಂತೆ :**

ಮನುಷ್ಯ ಬದುಕಿನಲ್ಲಿ ಪ್ರಾಚೀನವಾಗಿರುವ ಈ ಸಂತೆಗೆ ಅದರದ್ದೇ ಆದ ಸಾಂಸ್ಕೃತಿಕ ಪ್ರಭಾವವಿದೆ. ತಮ್ಮ ದಿನನಿತ್ಯದ ಉಪಯೋಗಕ್ಕಾಗಿ ಅಗತ್ಯವಾದ ವಸ್ತುಗಳನ್ನು ವಾರದಲ್ಲಿ ಒಂದು ನಿರ್ದಿಷ್ಟ ದಿನದಂದು ನಿರ್ದಿಷ್ಟವಾದ ಸ್ಥಳದಲ್ಲಿ ಮಾರಾಟಮಾಡುವ ಮತ್ತು ಕೊಳ್ಳುವ ವ್ಯವಸ್ಥೆಯು ಹಿಂದಿನಿಂದಲೂ ನಡೆದುಕೊಂಡು ಬಂದಿರುತ್ತದೆ. ಇದನ್ನು 'ಸಂತೆ' ಎಂದು ಕರೆಯುತ್ತಾರೆ.

ಸಂತೆಗಳು ನಗರದ ಬೆಳವಣಿಗೆಗೆ ತುಂಬಾ ಸಹಕಾರಿಯಾಗಿವೆ. ಸಾಮಾನ್ಯವಾಗಿ ಸ್ಥಳೀಯ ವರ್ತಕರಿಂದ ನಿಯಂತ್ರಿಸಲ್ಪಡುವ ಈ ಸಂತೆಗಳು ತುಂಬಾ ಹಿಂದಿನಿಂದಲೂ ಪ್ರಚಲಿತದಲ್ಲಿದೆ. ವಾರದಲ್ಲಿ ಒಂದೊಂದು ದಿನ ಇತರ ಪ್ರದೇಶಗಳಲ್ಲಿಯೂ ಸಂತೆ ನಡೆಯುತ್ತದೆ. ಈ ತಾಲ್ಲೂಕಿನ ಜಿಗಣಿಯಲ್ಲಿ ಬುಧವಾರ, ಆನೇಕಲ್‌ನಲ್ಲಿ-ಶುಕ್ರವಾರ, ದೊಮ್ಮಸಂದ್ರದಲ್ಲಿ- ಸೋಮವಾರ, ಚಂದಾಪುರದಲ್ಲಿ ಶನಿವಾರ ನಡೆಯುವಂತೆ ಈ ಬನ್ನೇರುಘಟ್ಟದಲ್ಲಿ 'ಮಂಗಳವಾರ' ದಿನದಂದ ಸಂತೆ ನಡೆಯುತ್ತದೆ ಹೀಗೆ ವಾರವಿಡೀ ಹತ್ತಾರು ಕಡೆ ನಡೆಯುವ ಸಂತೆಗೆ ಹೋಗಿ ವರ್ತಕರು ವ್ಯಾಪಾರ ನಡೆಸುತ್ತಾರೆ. ಸಂತೆ ನಡೆಯುವ ಕಡೆಗೆಲ್ಲಾ ಗ್ರಾಮದವರು ಬರಲು ಹೋಗಲು ಸಾರಿಗೆ ಸಂಪರ್ಕ ವ್ಯವಸ್ಥೆಯು ಇರುವುದರಿಂದ ಅನುಕೂಲಕರವಾಗಿದೆ. ಬಹಳ ವರ್ಷಗಳ ಹಿಂದಿನಿಂದಲೂ ಈ ಗ್ರಾಮದಲ್ಲಿ 'ಸಂತೆ'ಗೆ ಜನ ಸೇರುತ್ತಿದ್ದರಂತೆ, ಈ ಊರಿನ ಸಂತೆಗೆ ಸುತ್ತಮುತ್ತಲ ಹಳ್ಳಿಗಳಿಂದ ಎತ್ತಿನಗಾಡಿ, ಸೈಕಲ್, ಕುದುರೆಗಳಿಂದ ಮತ್ತು ದಾರಿಯುದ್ದಕ್ಕು ನಡೆದುಕೊಂಡು ಬಂದ ವರ್ತಕರು ಮತ್ತು ವ್ಯಾಪಾರಸ್ಥರು ಈ ಸ್ಥಳದಲ್ಲಿ ಸೇರುತ್ತಿದ್ದರಂತೆ.

ಮತ್ತೊಂದು ಹಿನ್ನೆಲೆಯ ಪ್ರಕಾರ ಈ ಗ್ರಾಮದ ಸಂತೆ ನಡೆಯುವ ಸ್ಥಳದಲ್ಲಿ ಜಾತ್ರೆ ಸಂದರ್ಭದಲ್ಲಿ ಅನೇಕ ಗ್ರಾಮದ ದೇವರುಗಳನ್ನು ಮತ್ತು ಬೇಗಳಮ್ಮ ದೇವಿಯನ್ನು ಈ ಸಂತೆ ನಡೆಯುತ್ತಿದ ಸ್ಥಳದಲ್ಲಿ ಮರದ ಕೆಳಗಿಟ್ಟು ಪೂಜೆಸಲ್ಲಿಸಿ ನಂತರ ಕೊಂಡೊಯ್ಯುತ್ತಿದ್ದರಂತೆ. ಈ ಪೂಜಾ ನಿಮಿತ್ತ ಬಿಟ್ಟಿದ್ದ ಸ್ಥಳವೇ ಕಾಲಕ್ರಮೇಣ ಸಂತೆಯಾಗಿ ಪರಿವರ್ತನೆಯಾತ್ತು ಎಂಬುದು ಇಲ್ಲಿನ ಗ್ರಾಮಸ್ಥರ ಅಭಿಪ್ರಾಯವಾಗಿದೆ.

---

[32] ವಕ್ತೃ : ಮಹಾದೇವ, ಒಕ್ಕಲಿಗ, ವಯಸ್ಸು –48, ವ್ಯವಹಾರ

ಕಾಡು ಮತ್ತು ನಾಡು ಎರಡರ ಸಮ್ಮಿಶ್ರಣವಾಗಿರುವ ಈ ಬನ್ನೇರುಘಟ್ಟ ಗ್ರಾಮದಲ್ಲಿ ನಡೆಯುವ ಸಂತೆಗೆ ಹತ್ತುಹಲವಾರು ಕಡೆಗಳಿಂದ ಅನೇಕ ಜನರು ಸೇರುತ್ತಾರೆ. ಈ ಪ್ರದೇಶದಲ್ಲಿ ಸಂತೆಗೆ ಅನುಕೂಲವಾಗುವಂತೆ ಸಾರಿಗೆ ವ್ಯವಸ್ಥೆಯು ಸಹ ತುಂಬಾ ಸಹಕಾರಿಯಾಗಿದೆ. ಅನೇಕ ಗ್ರಾಮಗಳಿಂದ ಮತ್ತು ನಗರಪ್ರದೇಶಗಳಿಂದಲೂ ಸಹ ಜನರು ಇಲ್ಲಿನ ಸಂತೆಗೆ ಆಗಮಿಸುತ್ತಾರೆ.

ಬನ್ನೇರುಘಟ್ಟದ ಸುತ್ತಮುತ್ತಲ ಪ್ರದೇಶಗಳಾದ ಸಂಪಿಗೆಹಳ್ಳಿ, ಕರಿಯಪ್ಪನಹಳ್ಳಿ, ಭೂತಾನಹಳ್ಳಿ, ಸೀಲೀಂದ್ರದೊಡ್ಡಿ, ರಾಗಿಹಳ್ಳಿ, ಶಿವನಹಳ್ಳಿ, ಜಿಗಣಿ, ಬಿಲವಾರದಹಳ್ಳಿ, ಕಲ್ಕೆರೆ, ಮಂಟಪ, ಹುಲ್ಲಹಳ್ಳಿ, ಬೇಗಿಹಳ್ಳಿ, ಸಕಲವಾರ, ಬಿಳೇಕಹಳ್ಳಿ, ಕಮ್ಮನಹಳ್ಳಿ, ಮುದವಾಡಿ, ಗೊಟ್ಟಿಗೆರೆ, ಇನ್ನು ಮುಂತಾದ ಅನೇಕ ಪ್ರದೇಶಗಳಿಂದ ಈ ಗ್ರಾಮದ ಸಂತೆಗೆ ವ್ಯಾಪಾರಸ್ಥರು ಮತ್ತು ವರ್ತಕರು ಆಗಮಿಸುತ್ತಾರೆ ಹೀಗೆ ಜಾತಿ ಮತಭೇದಗಳಲ್ಲಿದೆ ಈ ಸಂತೆಗಳಿಗೆ ಆಗಮಿಸುವ ಜನರು ಭಾವೈಕ್ಯತೆಯಿಂದ ಕೂಡಿಕೊಳ್ಳುವಿಕೆಯ ಪ್ರಧಾನ ಕೇಂದ್ರಗಳಾಗಿರುವುದನ್ನು ಕಾಣಬಹುದು. ಹೀಗಾಗಿ ಸಂತೆಗಳು ಸ್ಥಳೀಯ ಜನರ ಅವಶ್ಯಕತೆಗಳನ್ನು ಪೂರೈಸುವುದಲ್ಲದೆ ಹೆಚ್ಚು ಹೆಚ್ಚು ಜನರ ಜೊತೆ ಸಂಪರ್ಕಹೊಂದಲು ಸಾಧ್ಯವಾಗುತ್ತಿದೆ. ಇದರಿಂದಾಗಿ ಅವರ ಇತರೆ ವ್ಯವಹಾರಗಳು ಹೆಚ್ಚಾಗುತ್ತವೆ, ಆದಾಯವೃದ್ಧಿಸುತ್ತದೆ, ಒಟ್ಟಾರೆಯಾಗಿ ಮನುಷ್ಯನ ಒಂದು ಸಾಂಸ್ಥಿಕ ಜೀವನದಲ್ಲಿ ಈ ಸಂತೆಯು ಪ್ರಮುಖ ಪಾತ್ರವಹಿಸುತ್ತವೆ.

[33]<u>ಶ್ರಾವಣ ಶನಿವಾರ</u> :

ವರ್ಷಕ್ಕೊಮ್ಮೆ ಬರುವ ಶ್ರಾವಣಮಾಸದಲ್ಲಿ ನಾಲ್ಕು ಶನಿವಾರಗಳು ಕೆಲವೊಮ್ಮೆ ಐದು ಶನಿವಾರಗಳು ಬರುತ್ತವೆ. ವೈಷ್ಣವಕ್ಷೇತ್ರವಾದ ಈ ಬನ್ನೇರುಘಟ್ಟದಲ್ಲಿ ಈ ಶ್ರಾವಣಮಾಸವು ಭಕ್ತಿಪೂರ್ವಕವಾಗಿ ನಡೆಯುತ್ತವೆ. ಇಲ್ಲಿನ ಶ್ರೀಚಂಪಕಧಾಮಸ್ವಾಮಿ, ಶ್ರೀಲಕ್ಷ್ಮೀನರಸಿಂಹಸ್ವಾಮಿ ಮತ್ತು ಶ್ರೀವೀರಾಂಜನೇಯಸ್ವಾಮಿ ದೇವಾಲಯಗಳಲ್ಲಿ ಈ ದಿನಗಳಂದು ವಿಶೇಷವಾದ ಪೂಜಾಕೈಂಕರ್ಯಗಳು ಜರುಗುತ್ತವೆ. ಈ ಶ್ರಾವಣ ಮಾಸದಂದು ಈ ಕ್ಷೇತ್ರಕ್ಕೆದೂರದ ಊರುಗಳಿಂದ ಭಕ್ತಾಧಿಗಳು ಆಗಮಿಸಿ ಶ್ರೀಚಂಪಕಧಾಮನಿಗೆ ಪೂಜೆಸಲ್ಲಿಸಿ ಕೃತಾರ್ಥರಾಗುತ್ತಾರೆ.

ಈ ಶ್ರಾವಣ ಶನಿವಾರಗಳಲ್ಲಿ ವೈಷ್ಣವಸಂಪ್ರದಾಯದವರು ಮಕ್ಕಳಿಗೆ 'ಎಣ್ಣೆಸ್ನಾನ' ಮಾಡಿಸಿ ಹೊಸಶಲ್ಯ, ಹಣೆಗೆ 'ಮೂರು ಏಟಿನಾಮ' ಹಾಕಿ ಅಕ್ಕಿ ಬೇಡಲು ಮನೆ ಮನೆಗೆ ಕಳಿಸುವರು. ಮಕ್ಕಳು ತ್ರಿನಾಮಧಾರಿಯಾಗಿ ಪ್ರತಿಯೊಬ್ಬರ ಮನೆಗೂ ಹೋಗಿ ಅಕ್ಕಿ ಬೇಡುವುದೇ ಈ ಶ್ರಾವಣ ಶನಿವಾರದ ವಿಶೇಷಗೆ. ಇಲ್ಲಿ ವಯಸ್ಸಿನ ಮಿತಿ ಇಲ್ಲ. ತ್ರಿನಾಮಧಾರಿಯಾಗಿ ಕುಲದೈವದ ನಾಮಸ್ಮರಣೆಯೊಂದಿಗೆ ಪ್ರತಿಯೊಬ್ಬರ ಮನೆಯಲ್ಲಿ ಅಕ್ಕಿ ಬೇಡುವುದನ್ನೇ 'ಪಡಿ ಬೇಡುವುದು' ಎಂದು ಕರೆಯುತ್ತಾರೆ. ಈ ಸಮಯದಲ್ಲಿ ಅವರವರ ಕುಲ ದೈವದ ಹೆಸರನ್ನು ಮೂರು ಬಾರಿ ಹೇಳಿ 'ಅಕ್ಕಿ ಬೇಡುತ್ತಾರೆ' ಹಾಗೆಯೇ ಅಕ್ಕಿಕೊಟ್ಟ ಮನೆಗೆ ಒಳ್ಳೆಯದಾಗಲಿ ಎಂದು ಅರಸುತ್ತಾ ಶಂಖನಾದ ಮಾಡಿ ಹೊರಡುತ್ತಾರೆ.

---

[33] ವಕ್ತೃ : ರಂಗಣ್ಣ, ಒಕ್ಕಲಿಗ, ವಯಸ್ಸು –68, ಆಯುರ್ವೇದ ಪಂಡಿತರು

ಅಂದು ಮನೆಯಲ್ಲಿ ಯಾರಾದರೊಬ್ಬರು 'ಒಪ್ಪೊತ್ತು' ಮಾಡಿ ಭಿಕ್ಷೆ ಬೇಡಿ ತಂದಿದ್ದ ಅಕ್ಕಿಯಿಂದ ಅಡಿಗೆಯನ್ನು ಮಾಡಿ ದೇವರಿಗೆ ಅರ್ಪಿಸಿ ಪೂಜಿಸುತ್ತಾರೆ. ಈ ದಿನ ಹೊರಗಿನವರಿಗೆ ಒಬ್ಬರಿಗೆ ಊಟ ಹಾಕಿ ಅನಂತರ ಮನೆ ಮಂದಿಯೆಲ್ಲಾ ಊಟಮಾಡುತ್ತಾರೆ. ಈ ಮಾಸದಲ್ಲಿ ಎಲ್ಲರೂ ಸಸ್ಯಾಹಾರಿಗಳಾಗಿರುತ್ತಾರೆ. ಈ ಶ್ರಾವಣ ಶನಿವಾರಗಳಲ್ಲಿ ಶನಿದೇವರನ್ನು ವಿಶೇಷ ರೀತಿಯಲ್ಲಿ ಪೂಜಿಸಿ ಆರಾಧಿಸುತ್ತಾರೆ. ನವಗ್ರಹಗುಡಿ, ಶನಿದೇವರ ಗುಡಿಯಲ್ಲಿ ಕಪ್ಪು ಬಟ್ಟೆಯಿಂದ ಮಾಡಿದ ಎಳ್ಳು ಬತ್ತಿಯನ್ನು ಹಚ್ಚುವುದು, ಎಳ್ಳೆಣ್ಣೆಯ ದೀಪ ಉರಿಸುವುದು. ಕಾಗೆಗೆ ಅನ್ನ ಇಡುವುದು ಕಂಡುಬರುತ್ತದೆ. ಇದರಿಂದ ಸಂತೃಪ್ತನಾದ ಶನಿದೇವ ಎಲ್ಲರಿಗೂ ಮಂಗಳವನ್ನು ಉಂಟುಮಾಡುತ್ತಾನೆ ಎಂಬುದು ನಂಬಿಕೆ ಹಿಂದಿನಿಂದಲೂ ಜನಪದರ ಮನಸ್ಸಿನಲ್ಲಿದೆ.

ಈ ಶ್ರಾವಣ ಶನಿವಾರಗಳಂದು 'ದಾಸಯ್ಯನ ಒಕ್ಕಲಿಗರು' ಈ ಬನ್ನೇರುಘಟ್ಟದಲ್ಲಿ ಹಿಂದಿನಿಂದಲೂ ವಿಶೇಷವಾದ ಆಚರಣೆಯನ್ನು ಅನುಸರಿಸಿಕೊಂಡು ಬಂದಿದ್ದಾರೆ ಇವರು ತಮ್ಮ ಒಕ್ಕಲಿಗ ಮನೆಗಳಿಗೆ ಊರು ಊರಿಗೂ ನಡೆದುಹೋಗಿ ತಮ್ಮ ಕುಲದೈವರಾದ ಕರಿಯಣ್ಣ-ಕೆಂಚಣ್ಣನ ಪೂಜೆಗಳನ್ನು ಸಲ್ಲಿಸುವ ಸಂಪ್ರದಾಯವನ್ನು ಈಗಲೂ ಮುಂದುವರೆಸಿಕೊಂಡು ಬಂದಿದ್ದಾರೆ. ತಮ್ಮ ಮನೆತನ ಹಿಂದಿನ ಸಂಪ್ರದಾಯದಂತೆ ಕೊರಳಿಗೆ ಕೆಂಪುಮಣಿ ಧರಿಸುತ್ತಾರೆ. ಕೆಲವರು ಬಿಳಿ ವಸ್ತುಗಳನ್ನಷ್ಟೇ ಧರಿಸಿದರೆ ಮತ್ತೆ ಕೆಲವರು ಹಣೆಗೆ ಬಿಳಿಬಣ್ಣದ ಮೂರು ಏಟಿ ನಾಮ ಹಾಕಿಕೊಂಡು ಕುಂಕುಮ ಲೇಪನ ಮಾಡಿ. ಬಿಳಿಪಂಚೆ ಬಿಳಿ ಅಂಗಿ, ಕೈಯಲ್ಲಿ ಶಂಖ ಜಾಗಟೆಯನ್ನು ಬಾರಿಸುತ್ತಾ ತಮ್ಮ ಕುಲದೈವರಾದ ಕರಿಯಣ್ಣ-ಕೆಂಚಣ್ಣ ಎಂಬ ಜನಪದ ದೈವದ ಮುಖವಾಡಗಳನ್ನು ಧರಿಸಿಕೊಂಡು ಶಂಖವನ್ನು ಊದಿ- ಮನೆ ಮನೆಗೆ ಹೋಗಿ ಭಿಕ್ಷೆಕ್ವಾರಣ್ಯ ಮಾಡುವ ಪದ್ಧತಿಯಿದೆ. ಈ ಒಕ್ಕಲಿಗೆ ಸೇರಿದವರು ಇವರನ್ನು ಮದುವೆ –ಗೃಹಪ್ರವೇಶಗಳಂತಹ ವಿಶೇಷ ಸಂದರ್ಭಗಳಲ್ಲಿ ಆಹ್ವಾನಿಸಿ ಪೂಜೆ ಪುನಸ್ಕಾರಗಳನ್ನು ಮಾಡಿಸುತ್ತಾರೆ. ಈ ಪೂಜಾ ಕೈಂಕರ್ಯಗಳೆಲ್ಲ ಸಾಂಗವಾಗಿ ನಡೆದ ಮೇಲೆ ಸಂಪ್ರದಾಯದಂತೆ ತಮ್ಮ ಮನೆಯಲ್ಲಿರುವ ಅಕ್ಕಿ ರಾಗಿ, ದವಸಧಾನ್ಯಗಳು, ಬೆಳೆ ತರಕಾರಿ ಮತ್ತು ಕಾಣಿಕೆಗಳನ್ನು ಕೊಟ್ಟು ಇವರಿಂದ ಆರ್ಶೀವಾದ ಪಡೆಯುತ್ತಾರೆ. ಹೀಗೆ ಭಕ್ತಾದಿಗಳಿಂದ ದವಸಧಾನ್ಯ ಕಾಣಿಕೆಗಳನ್ನು ಪಡೆದ ಈ ದಾಸಯ್ಯನವರು ಅವರ ಮನೆಗೆ ಒಳ್ಳೆಯದಾಗಲೀ ಎಂದು ಎಲ್ಲರಿಗೂ ಆರ್ಶೀವದಿಸಿ ಶಂಖನಾದವನ್ನು ಮಾಡುತ್ತಾ ಹೊರಡುತ್ತಾರೆ. ಇವರನ್ನು 'ದಾಸ ಒಕ್ಕಲಿಗರು' ಎಂದೇ ಕರೆಯುತ್ತಾರೆ. ಪ್ರಸ್ತುತ ಬನ್ನೇರುಘಟ್ಟದಲ್ಲಿ ಪ್ರತಿ ವರ್ಷದ ಶ್ರಾವಣ ಶನಿವಾರಗಳಂದು ಈ ರೀತಿಯ ಪೂಜೆಗಳನ್ನು ಮಾಡುವ ಸಂಪ್ರದಾಯವನ್ನು ಇಂದಿಗೂ ಸಹ ನಡೆಸಿಕೊಂಡು ಬಂದಿರುವುದನ್ನು ಕಾಣುತ್ತೇವೆ.

ಈ ರೀತಿಯಾಗಿ ಈ ಬನ್ನೇರುಘಟ್ಟದಲ್ಲಿ ಹಿಂದಿನಿಂದಲೂ ಅನೇಕ ರೀತಿಯ ಆಚರಣೆಗಳು, ಹಬ್ಬಗಳು, ಸಂಪ್ರದಾಯಗಳು, ಧಾರ್ಮಿಕ ಕಾರ್ಯಕ್ರಮಗಳು, ಪೂಜಾಪುನಸ್ಕಾರಗಳನ್ನು ಈ ಗ್ರಾಮದ ಜನರು ನಡೆಸಿಕೊಂಡು ಬಂದಿದ್ದಾರೆ. ಆದ್ದರಿಂದಲೇ ಈ ಕ್ಷೇತ್ರವು ಸಾಂಸ್ಕೃತಿಕವಾಗಿ, ಐತಿಹಾಸಿಕವಾಗಿ, ಚಾರಿತ್ರಿಕವಾಗಿ ತನ್ನ ಕುರುಹುಗಳನ್ನು ಇಂದಿಗೂ ಸಹ ಉಳಿಸಿಕೊಂಡು ಬಂದಿದೆ.

ಅಧ್ಯಾಯ – 7

ಜಾಗತಿಕ ಹಿನ್ನೆಲೆಯಲ್ಲಿ ಬನ್ನೇರುಘಟ್ಟ ಸ್ಥಿತ್ಯಂತರ

ಭೌಗೋಳಿಕವಾಗಿ ಬೆಟ್ಟ, ಗುಡ್ಡ, ಕಾಡು ಕಣಿವೆಗಳಿಂದ ಕೂಡಿದ ಈ ಬನ್ನೇರುಘಟ್ಟ ಪ್ರದೇಶವು ಶಾಸನಗಳಲ್ಲಿ 'ಬನ್ನಿಯಘಟ್ಟ', 'ಬಂನ್ನೂರುಘಟ್ಟ', ಬನ್ನೂರುಘಟ್ಟ ಎಂಬ ಖ್ಯಾತಿಯನ್ನು ಪಡೆದುಕೊಂಡಿದ್ದು ಕಾಲ ಸರಿದಂತೆ "ಬನ್ನೇರುಘಟ್ಟ" ಎಂಬ ಹೆಸರಿನಿಂದ ಕರೆಯಲ್ಪಟ್ಟಿದೆ. ಈ ರೀತಿಯಾಗಿ ಈ ಊರಿನ ಹೆಸರು ಅನೇಕ ಕಾಲಘಟ್ಟಗಳಲ್ಲಿ ಬದಲಾವಣೆಯನ್ನು ಪಡೆದುಕೊಂಡಂತೆ ಇಲ್ಲಿನ ಪರಿಸರ ಜನಜೀವನ, ಸಂಪ್ರದಾಯ ಜನತೆಯ ರೀತಿ–ನೀತಿ, ನಡೆನುಡಿಗಳೆಲ್ಲವೂ ಸಹ ಜಾಗತೀಕರಣದ ಪ್ರಭಾವದಿಂದ ಬದಲಾವಣೆಯಾಗಿದೆ. ಮೇಲುನೋಟಕ್ಕೆ ಈ ಪ್ರದೇಶದ ಗ್ರಾಮೀಣ ಬದುಕು ಒಂದೇ ತೆರನಾಗಿ ಕಂಡರು ಕಾಲನ ದವಡೆಗೆ ಸಿಕ್ಕಿ ತನ್ನದೇ ಆದ ಚಲನ ಶೀಲತೆಯನ್ನು ಕಂಡುಕೊಂಡು ಪ್ರತ್ಯೇಕವಾದ ಗುಣವನ್ನು ಪಡೆದುಕೊಂಡಿದೆ.

ಒಂದು ಕಾಲದಲ್ಲಿ ಪ್ರಾಕೃತಿಕ ಸೊಬಗಿನಿಂದ ಹಚ್ಚಹಸಿರಿನ ವನರಾಶಿಯಲ್ಲಿ ಕಂಗೊಳಿಸುತ್ತಿದ್ದ ಈ ಊರು ಇಂದು ಆಧುನಿಕತೆಯ ಗಾಳಿ ಬೀಸಿ ಕಾಂಕ್ರಿಟ್ ಕಾಡಿನಂತೆ ಎಲ್ಲೆಲ್ಲೂ ಅನೇಕ ಮನೆಗಳು, ಬಿಲ್ಡಿಂಗ್‌ಗಳು, ಕಾಂಪ್ಲೆಕ್ಸ್‌ಗಳು, ಬಡಾವಣೆಗಳು ತಲೆಎತ್ತುತ್ತಿವೆ.

ರಾಜಧಾನಿ ಬೆಂಗಳೂರು ನಗರದಿಂದ ಕೇವಲ 22ಕೀ.ಮೀ. ದಕ್ಷಿಣಕ್ಕೆ ಮತ್ತು ತಾಲ್ಲೂಕು ಕೇಂದ್ರವಾದ ಆನೇಕಲ್‌ನಿಂದ 20ಕೀ.ಮೀ. ಪಶ್ಚಿಮಕ್ಕೆ ಇರುವ ಈ ಊರು ಪ್ರಾಕೃತಿಕವಾಗಿ ನೈಜ ಕಾಡನ್ನು ಹೊಂದಿದೆ ಮತ್ತು ಈ ಪ್ರದೇಶ ಜನ ವಸತಿ ಹೊಂದಿರುವ ನಾಡನ್ನು ಒಳಗೊಂಡಿದ್ದು ಸ್ವಭಾತಃ ಕಾಡು ಮತ್ತು ನಾಡು ಇವೆರಡರ ಸಂಮಿಶ್ರಣವನ್ನು ಹೊಂದಿದೆ.

ಈ ಊರಿನ ಮಧ್ಯಭಾಗದಲ್ಲಿ ಎತ್ತರವಾಗಿರುವ ವಹ್ನಿಗಿರಿ ಬೆಟ್ಟವಿದ್ದು ಈ ಬೆಟ್ಟವು ಈ ಊರಿಗೆ ಕಳಶವಿಟ್ಟಂತೆ ಕಂಗೊಳಿಸುತ್ತಿದೆ. ಈ ಬೆಟ್ಟದ ಬುಡದಲ್ಲಿ ಪುರಾತನ ಕಾಲದ ಶ್ರೀ ಚಂಪಕಧಾಮಸ್ವಾಮಿಯ ದೇವಾಲಯವಿದೆ ಇಲ್ಲಿನ ಆರಾಧ್ಯ ದೈವ ಶ್ರೀ ಚಂಪಕಧಾಮಸ್ವಾಮಿಯು ಭಕ್ತಿ ಭಾವದಿಂದ ತುಂಬಿರುವ ಭಕ್ತರನ್ನು ತನ್ನತ್ತ ಕೈ ಬೀಸಿ ಕರೆಯುತ್ತಾನೆ. ಈ ದೇಗುಲಕ್ಕೆ ಹಲವಾರು ರಾಜ ಮನೆತನದವರು ಅನೇಕ ರೀತಿಯಲ್ಲಿ ದಾನದತ್ತಿಗಳನ್ನು ನೀಡಿರುವುದು ಇಲ್ಲಿನ ಶಾಸನಗಳಿಂದ ತಿಳಿದುಬರುತ್ತದೆ. ಆಧುನಿಕತೆಯ ಬಿರುಗಾಳಿ ಈ ದೇಗುಲದ ಮೇಲೆ ತನ್ನ ಪ್ರಭಾವವನ್ನು ಬೀರಿದ್ದು ಜೀರ್ಣೋದ್ದಾರದ ಮೂಲಕ ಅಲಂಕಾರಯುತವಾಗಿ ಈ ದೇಗುಲವನ್ನು ನಿರ್ಮಿಸಿದ್ದಾರೆ. ಈ ದೇವಾಲಯವನ್ನು ಸಿಮೆಂಟ್ ಮತ್ತು ಗಾರೆ ಕೆತ್ತನೆಗಳಿಂದ ನಯಗೊಳಸಿದ್ದು ಗ್ರಾನೆಟ್ ಕಲ್ಲುಗಳನ್ನು ಹಾಸಿ ಸಿಂಗರಿಸಿದ್ದಾರೆ. ಈ ದೇಗುಲದ ಗೋಪುರವನ್ನು ಇತ್ತೀಚಿನ ವರ್ಷಗಳಲ್ಲಿ ಆಧುನಿಕವಾಗಿ ನಿರ್ಮಾಣ ಮಾಡಿದ್ದು ಸಿಮೆಂಟಿನ ಗಾರೆ ಮತ್ತು ಕೆತ್ತನೆಗಳಿಂದ ಸುಣ್ಣಬಣ್ಣಗಳನ್ನು ಲೇಪಿಸಿ ಅಲಂಕಾರಯುತವಾಗಿ ನಿರ್ಮಿಸಿದ್ದಾರೆ.

ವಹ್ನಿಗಿರಿ ಬೆಟ್ಟದ ಮೇಲಿರುವ ಶ್ರೀ ಲಕ್ಷ್ಮೀ ನರಸಿಂಹ ದೇವಾಲಯವನ್ನು ಸಹ ಇತ್ತೀಚಿನ ವರ್ಷಗಳಲ್ಲಿ ಜೀರ್ಣೋದ್ದಾರಗೊಳಿಸಿದ್ದು ಬಹಳ ಅಲಂಕಾರಯುತವಾಗಿ ಕಂಗೊಳಿಸುತ್ತಿದೆ. ಆಧುನಿಕತೆಯ ಉಪಕರಣಗಳನ್ನು ಬಳಸಿ ನೂತನವಾಗಿ ಕಂಗೊಳಿಸಿವಂತೆ ಈ ದೇವಾಲಯವನ್ನು

ನಿರ್ಮಿಸಿದ್ದಾರೆ. ದೂರದ ಸ್ಥಳಗಳಿಂದ ಈ ದೇಗುಲಕ್ಕೆ ಭಕ್ತರು ಆಗಮಿಸಿ ದರ್ಶನ ಪಡೆದ ನಂತರ ಈ ಬೆಟ್ಟದ ಮೇಲೆ ಸ್ವಲ್ಪ ಸಮಯ ವಿಶ್ರಮಿಸುವುದುಂಟು. ಎತ್ತರವಾಗಿರುವ ಈ ಬೆಟ್ಟದ ಮೇಲಿಂದ ಒಮ್ಮೆ ವೀಕ್ಷಿಸಿದರೆ ಈ ಬೆಟ್ಟದ ಮುಂಭಾಗದ ಒಂದು ಕಡೆ ಆಧುನಿಕತೆಯ ಪ್ರಭಾವದಿಂದ ನಗರವಾಗಿ ಬೆಳವಣಿಗೆಯಾಗುತ್ತಿರುವ ಕಾಂಕ್ರೆಟ್ ಕಾಡಿನ ಪ್ರದೇಶ ಮತ್ತೊಂದು ಕಡೆ ನಿಸರ್ಗದತ್ತವಾಗಿ ಹಸಿರಿನ ಸಿರಿಯನ್ನು ಹಾಸಿದಂತೆ ಕಂಗೊಳಿಸುತ್ತಿರುವ ನೈಜ ಕಾಡಿನ ಪ್ರದೇಶ ಇವೆಲ್ಲವನ್ನು ಮರೆಸುವಂತೆ ತಂಪಾಗಿ ಬೀಸುವ ಸುಳಿಗಾಳಿ ಇವೆಲ್ಲಾ ನೋಡುಗರನ್ನು ಮತ್ತೆ ಮತ್ತೆ ಈ ಕಡೆ ಕೈ ಬೀಸಿ ಕರೆಯುತ್ತದೆ. ಒಂದು ಕಾಲದಲ್ಲಿ ಸಮೃದವಾದ, ಕೃಷಿ ಚಟುವಟಿಕೆಗಳಲ್ಲಿ ತೊಡಗಿದ್ದ ಇಲ್ಲಿನ ಜನ ಆರ್ಥಿಕವಾಗಿ ತನ್ನದೇ ಆದ ಪ್ರಾಬಲತ್ಯೆಯನ್ನು ಮೆರೆದಿದ್ದರೂ ಸಹ ಪ್ರಸ್ತುತ ಈ ಗ್ರಾಮದಲ್ಲಿ ಕೃಷಿ ಚಟುವಟಿಕೆಗಳು ವಿರಳ ಸಂಖ್ಯೆಯಲ್ಲಿದೆ ಇಲ್ಲಿನ ಜನರೆಲ್ಲ ಜೀವನಾವಶ್ಯಕ ಕೃಷಿಗೆ ಮಾತ್ರ ಪ್ರಸ್ತುತ ಸೀಮಿತರಾಗಿದ್ದಾರೆ. ಈ ಅರಣ್ಯದ ಅಂಚಿನಲ್ಲಿ ಅಲ್ಲಲ್ಲಿ ಕೃಷಿ ಚಟುವಟಿಕೆಗಳು ನಡೆಯಿತ್ತಿದ್ದರೂ ಸಹ ಆಗಾಗ ಬೆಳೆದ ಬೆಳೆಯಲ್ಲ ಕಾಡುಪ್ರಾಣಿಗಳ ಹಾವಳಿಗೆ ತುತ್ತಾಗುತ್ತದೆ. ಇದರಿಂದ ಜನರು ತೀವ್ರ ಸಂಕಷ್ಟಕ್ಕೆ ಒಳಗಾಗುವ ಸ್ಥಿತಿ ಪ್ರಸ್ತುತ ಇಂದಿನ ದಿನಗಳಲ್ಲೂ ಸಹ ನಡೆಯುತ್ತಿದೆ. ಇದರಿಂದ ಕೋಪಗೊಂಡ ರೈತರು ಆಗಾಗ ಅರಣ್ಯಾಧಿಕಾರಿಗಳೊಂದಿಗೆ ಮಾತಿಗಿಳಿಯುವುದುಂಟು, ಈ ರೀತಿಯಾಗಿ ರೈತರು ಮತ್ತು ಅರಣ್ಯಾಧಿಕಾರಿಗಳ ನಡುವೆ ಆಗಾಗ ಮಾತಿನ ಸಂಘರ್ಷ ನಡೆಯುತ್ತಿರುತ್ತದೆ.

ಈ ಬನ್ನೇರುಘಟ್ಟ ಪ್ರದೇಶವು ಕಾಡಿನಿಂದ ಆವೃತವಾಗಿರುವುದರಿಂದ ಬೇರೆ ಪ್ರದೇಶಕ್ಕೆ ಹೋಲಿಸಿದರೆ ಇಲ್ಲಿ ಮಳೆಯ ಪ್ರಮಾಣ ವರ್ಷದಲ್ಲಿ ಸ್ವಲ್ಪ ಅಧಿಕವಾಗಿರುತ್ತದೆ. ಆದ್ದರಿಂದ ಈ ಪ್ರದೇಶದ ಸುತ್ತಮುತ್ತಲು ಬೆಳೆಯು ಪ್ರಮಾಣ ಸಮೃದವಾಗಿರುತ್ತದೆ. ಈ ರೀತಿಯಾಗಿ ಸದಾ ಹಸಿರಿನ ವನರಾಶಿಯಿಂದ ಕಂಗೊಳಿಸುತ್ತಿದ್ದ ಈ ಊರು ಪ್ರಸ್ತುತ ಕಾಂಕ್ರೆಟ್ ಕಾಡಾಗಿ ಬದಲಾಗುತ್ತಿದೆ. ಭೂಮಿಯ ಮೌಲ್ಯವು ಈ ಪ್ರದೇಶದಲ್ಲಿ ದಿನೇ ದಿನೇ ಅಧಿಕ ಬೆಲೆಯನ್ನು ಹೊಂದುತ್ತಿರುವ ಕಾರಣ ಹಲವಾರು ಭೂ ಮಾಲೀಕರಿಂದ, ಬಿಲ್ಡರ್ಸ್‌ಗಳಿಂದ, ಉದ್ಯಮಿಗಳಿಂದ ಸ್ಥಳೀಯ ರಾಜಕಾರಣಿಗಳ ಪ್ರಭಾವದಿಂದ ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿ ಈ ಪ್ರದೇಶ ಶರವೇಗದಲ್ಲಿ ಬೆಳೆಯುತ್ತಿದೆ.

ಈ ಬನ್ನೇರುಘಟ್ಟ ಪ್ರದೇಶದ ಸುತ್ತಮುತ್ತಲಿನ ಕಾಳೇಶ್ವರಿ, ರಾಗಿಹಳ್ಳಿ ಮತ್ತು ಶಿವನಹಳ್ಳಿಯ ಸುತ್ತ ಮುತ್ತಲು ಸಾಕಷ್ಟು ಅರಣ್ಯ ಪ್ರದೇಶವಿದೆ. ದಟ್ಟವಾಗಿರುವ ಈ ಅರಣ್ಯ ಪ್ರದೇಶದಲ್ಲಿ ಶ್ರೀಗಂಧ, ಬೀಟೆ, ಹೊನ್ನೆ, ಹಲಸು, ಮಾವು, ಮತ್ತಿ, ನೀಲಗಿರಿ ಮೊದಲಾದ ಅನೇಕ ಜಾತಿಯ ಗಿಡ ಮರಗಳ ಸಸ್ಯ ಸಂಮೃದ್ಧಿಯನ್ನು ಬೆಳೆಯಲಾಗುತ್ತಿದೆ. ಇದಲ್ಲದೆ ಔಷಧಿಗಳಿಗೆ ಅಗತ್ಯವಾದ ನೂರಾರು ಜಾತಿಯ ಗಿಡ ಮೂಲಿಕೆಗಳು ಈ ಅರಣ್ಯ ಪ್ರದೇಶದಲ್ಲಿ ದೊರೆಯುತ್ತವೆ.

ಈ ಪ್ರದೇಶದ ಸುತ್ತಮುತ್ತ ಮನುಷ್ಯ ತನ್ನ ಭೂದಾಹದ ದುರಾಸೆಯ ಫಲದಿಂದ ಕಾಡನ್ನು ಕಡಿದು ವ್ಯವಸಾಯ ಭೂಮಿಯನ್ನಾಗಿ ಪರಿವರ್ತಿಸಿ ಕೊಳ್ಳುತ್ತಿದ್ದಾನೆ. ಈ ಅರಣ್ಯದ ನಾಶದಿಂದ ಕೋಪಕೊಂಡ ಆನೆಗಳು ಆಗಾಗ ಮನುಷ್ಯನ ಆವಾಸ ಸ್ಥಾನಗಳಿಗೆ ಆಗಾಗ ಆಹಾರಕ್ಕಾಗಿ ಲಗ್ಗೆಯಿಟ್ಟು ರೈತನು ಬೆಳೆದ ಬೆಳೆಯನ್ನು ನಾಶ ಮಾಡುತ್ತವೆ. ಈ ಆನೆಗಳ ದಾಳಿಯಿಂದ ಕುಪಿತನಾದ ಮನುಷ್ಯ ಅವುಗಳನ್ನು ಕಾಡಿ ಅಟ್ಟಲು ಅನೇಕ ರೀತಿಯಲ್ಲಿ ಕೇಕೆ ಹಾಕುತ್ತ, ವಿಚಿತ್ರವಾದ

ಶಬ್ದಗಳನ್ನು ಮಾಡುತ್ತ ಸ್ಥಳದಿಂದ ಸ್ಥಳಕ್ಕೆ ಅಟ್ಟಿಸಿಕೊಂಡು ಬರುತ್ತಾರೆ. ಅನೇಕ ಜನಗಳ ಈ ವಿಕೃತ ಶಬ್ದಗಳಿಂದ ಭಯಗೊಂಡ ಆನೆಗಳು ಅರಣ್ಯಪ್ರದೇಶದ ಕಡೆಗೆ ಮುಖಮಾಡುತ್ತದೆ. ಇಂಥ ಸಂದರ್ಭದಲ್ಲಿ ಆಗಾಗೆ ಈ ಮಂಡ ಆನೆಗಳ ದಾಳಿಗೆ ಸಿಕ್ಕಿ ಹಲವು ವ್ಯಕ್ತಿಗಳು ಪ್ರಾಣ ಕಳೆದು ಕೊಂಡಿರುವ ಪ್ರಸಂಗಗಳು ಉಂಟು.

ಈ ರೀತಿಯಾಗಿ ಬನ್ನೇರುಘಟ್ಟದ ಸುತ್ತಮುತ್ತಲ ಪ್ರದೇಶಗಳಲ್ಲಿ ಆಗಾಗೆ ಆನೆ ಮತ್ತು ಮಾನವನ ನಡುವೆ ಆಗಾಗ ಸಂಘರ್ಷ ನಡೆಯೆವಯದನ್ನು ಕಾಣಬಹುದು.

ಕರ್ನಾಟಕ ಸರ್ಕಾರವು 1987ನೇ ವರ್ಷದಲ್ಲಿ ಬೆಂಗಳೂರಿನ ಹೊರವಲಯದಲ್ಲಿರುವ ಈ ಪ್ರದೇಶವನ್ನು ಗ್ರೀನ್ ಬೆಲ್ಟ್ (ಹಸಿರು ವಲಯ) ಪ್ರದೇಶವೆಂದು ಘೋಷಿಸಿ ಈ ವ್ಯವಸಾಯ ಭೂಮಿಯನ್ನು ವ್ಯವಸಾಯೇತರ ಭೂಮಿಯನ್ನಾಗಿ ಪರಿವರ್ತಿಸುವುದನ್ನು ನಿರ್ಬಂಧಿಸಲಾಗಿದೆ. ಈ ಹಸಿರುವಲಯದ ಪ್ರದೇಶದಲ್ಲಿ ಅಡಿಯಲ್ಲಿ ಜಿಗಣಿ ಹೋಬಳಿಯ ಸುಮಾರು 25 ಗ್ರಾಮಗಳು ಸೇರುತ್ತವೆ. ಅವುಗಳಲ್ಲಿ ಬನ್ನೇರುಘಟ್ಟ ಪ್ರದೇಶವೂ ಒಂದು.

ಈ ಬನ್ನೇರುಘಟ್ಟದ ಕಾಡಿನ ಪ್ರದೇಶದಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಅರಣ್ಯ ವಿಭಾಗಕ್ಕೆ ಸೇರಿದ ರಕ್ಷಿತ ಉದುರೆಲೆ ಅರಣ್ಯ ಪ್ರದೇಶವಾಗಿದೆ. ಒಟ್ಟು 104 ಚ.ಕೀ. ವೀಸ್ತೀರ್ಣದ ಈ ಕಾಡಿನ ಪ್ರದೇಶದಲ್ಲಿ ಅಲ್ಲಲ್ಲಿ 14 ಕಾಡುಗಳನ್ನು 'ರಕ್ಷಿತ ವನ'ಗಳೆಂದು ಘೋಷಿಸಲಾಗಿದೆ. ಈ 14 ವನಗಳು ಬೆಂಗಳೂರು ಜಿಲ್ಲೆಯ ಸರಹದ್ದಿನಲ್ಲಿದೆ. ಈ ಅರಣ್ಯದ ಉತ್ತರಕ್ಕೆ ತಮಿಳುನಾಡು ರಾಜ್ಯದ ಗಡಿ ಭಾಗವಿದೆ.

ಜನರ ಜೀವನಾಡಿಯಾಗಿರುವ ಬೇಸಾಯವನ್ನು ನಂಬಿ ಇಲ್ಲಿನ ಜನ ಬದುಕುತ್ತಿದ್ದಾರೆ. ರೈತರ ಬೆನ್ನೆಲುಬಾಗಿರುವ ಕೃಷಿ ಇಲ್ಲಿನ ಜನರಿಗೆ ಮತ್ತು ಜಾನುವಾರುಗಳಿಗೆ ಆಹಾರ ಒದಗಿಸುವ ಪ್ರಮುಖ ಮೂಲವಾಗಿದೆ. ಈ ಪ್ರದೇಶದಲ್ಲಿ ದಿನೇದಿನೇ ನಾಗರೀಕತೆ ಬೆಳೆಯುತ್ತಿರುವುದರಿಂದ ಮರಗಿಡಗಳ ನಾಶ ಮಳೆ ಪ್ರಮಾಣ ಕಡಿಮೆ, ಎಲ್ಲೆಂದರಲ್ಲೇ ಮನೆಗಳ ನಿರ್ಮಾಣ. ಕೈಗಾರಿಕಿಕರಣದಿಂದ ಕಾರ್ಖಾನೆಗಳ ಹೆಚ್ಚಳ, ಕೃಷಿಕಾರ್ಮಿಕರ ಕೊರತೆಯಿಂದ ಕೃಷಿಚಟುವಟಿಕೆಗಳು ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಈ ಗ್ರಾಮದಲ್ಲಿ ಹಿಂದೆ ಸು. 25 ತೀರ್ಥ ಕೊಳಗಳಿದ್ದು ಪ್ರಸ್ತುತ ಬೆರಳಣಿಕೆಯಷ್ಟು ಮಾತ್ರ ಉಳಿದಿವೆ ಅಲ್ಲದೆ ತೆರೆದ ಬಾವಿಗಳು ಮತ್ತು ಈ ತೀರ್ಥ ಕೊಳಗಳು ಈ ಗ್ರಾಮದ ಪ್ರಾಚೀನತೆಯ ಕುರುಹುಗಳಾಗಿವೆ ಇವುಗಳಲ್ಲಿ ಕೆಲವೊಂದು ರಿಯಲ್ ಎಸ್ಟೇಟ್ ಅಡಿಗೆ ಸಿಕ್ಕು ನಾಶವಾಗಿವೆ, ಕೆಲವೊಂದು ಜನರ ಅಜ್ಞಾನದಿಂದ ಕಣ್ಮರೆಯಾಗಿರುವುದನ್ನು ಕಾಣಬಹುದು ಇವೆಲ್ಲಾ ಬದಲಾಗುತ್ತಿರುವ ನಾಗರಿಕೆಯ ಪರಿಣಾಮವಾಗಿದೆ.

ಈ ಊರಿನ ಪರಂಪರೆಯ ಇತಿಹಾಸವನ್ನು ಸಾರುತ್ತಿದ್ದ ಛತ್ರಗಳು ಪ್ರಸ್ತುತ 'ಕಲ್ಯಾಣ ಮಂಟಪ" ಗಳಾಗಿ ವಧುವರರನ್ನು ತನ್ನತ್ತ ಆಕರ್ಷಿಸುತ್ತಿದೆ.

ಇಷ್ಟೇಲ್ಲಾ ಜಾತಿ ಜನಾಂಗಗಳನ್ನು ಹೊಂದಿರುವ ಈ ಗ್ರಾಮದಲ್ಲಿ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡಲು ಈ ಬನ್ನೇರುಘಟ್ಟದಲ್ಲಿ ' ಪೋಲೀಸ್ ಠಾಣೆ'ಯನ್ನು ಸ್ಥಾಪಿಸಲಾಗಿದೆ. ಈ ಠಾಣೆಯು ಬೆಂಗಳೂರು ಮತ್ತು ಆನೇಕಲ್ಲಿನ ಹೆದ್ದಾರಿಯಲ್ಲಿದ್ದು ಈ ಗ್ರಾಮದ ಪ್ರಧಾನ ವೃತ್ತ ಭಾಗದಲ್ಲಿದೆ.

ಒಂದು ಗ್ರಾಮದ ಸದೃಡ ಸಮಾಜ ನಿರ್ಮಾಣಕ್ಕೆ ಶಿಕ್ಷಣವೇ ಭದ್ರ ಬುನಾದಿಯಾಗಿದ್ದು ಈ ಗ್ರಾಮದಲ್ಲಿ ಅನೇಕ ಶೈಕ್ಷಣಿಕ ಸಂಸ್ಥೆಗಳಿವೆ. ಶ್ರೀ ಚಂಪಕಧಾಮ ಪ್ರೌಢಶಾಲೆ, ಶ್ರೀ ವೆಂಕಟೇಶ್ವರ ಪಾಲಿಟೆಕ್ನಿಕ ಸಂಸ್ಥೆ ಎ.ಎಂ.ಸಿ. ಇಂಜಿನಿಯರಿಂಗ್ ಕಾಲೇಜು, ಮತ್ತೆ ರ್ಯಾಯನ್ ಅಂತರ್ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಅಲ್ಲದೆ ಸಾರ್ವಜನಿಕರ ವಿದ್ಯಾ ದಾಹವನ್ನು ನೀಗಿಸಲು ಗ್ರಾಮ ಪಂಚಾಯಿತಿವತಿಯಿಂದ 'ಗ್ರಂಥಾಲಯ' ವನ್ನು ನಿರ್ಮಿಸಲಾಗಿದೆ. ಈ ಗ್ರಾಮದಲ್ಲಿ ನಡೆಯುವ ಜಾತ್ರೆ, ರಥೋತ್ಸವಗಳು, ಹಿಂದಿನ ಸಂಪ್ರದಾಯ, ಹಬ್ಬ ಹರಿದಿನಗಳ ಪದ್ಧತಿಗಳನ್ನೆಲ್ಲಾ. ದಾಟಿ ಪ್ರಸ್ತುತ ಆಧುನಿಕವಾಗಿ ಧಾರ್ಮಿಕ ಕಾರ್ಯಗಳೆಲ್ಲಾ ವಿಜೃಂಭಣೆಯಿಂದ ಜರುಗುತ್ತಿದ್ದು, ಸುತ್ತಮುತ್ತಲ ಗ್ರಾಮಗಳ ಅನೇಕ ಜನರನ್ನು ತನ್ನತ್ತ ಆಕರ್ಷಿಸುತ್ತದೆ. ಆಧುನಿಕತೆಯ ಪ್ರಭಾವದಿಂದ ಈ ಆಚರಣೆಗಳೆಲ್ಲಾ ಇಂದು ಬಹಳ ವೈಭವದಿಂದ ನಡೆಯುತ್ತವೆ.

ಈ ಊರಿನ ಕಡು ಬಡವರಿಗೆ ಕಡಿಮೆ ದರದಲ್ಲಿ ಆಹಾರ ಧಾನ್ಯಗಳನ್ನು ಒದಗಿಸುವ ಉದ್ದೇಶದಿಂದ ಪ್ರತಿ ತಿಂಗಳು 'ಸಾರ್ವಜನಿಕ ವಿತರಣೆ ವ್ಯವಸೆ ್ಥ'ಯ ಮೂಲಕ ಅಕ್ಕಿ, ಗೋಧಿ, ಸೀಮೆ ಎಣ್ಣೆ, ಸಕ್ಕರೆಯನ್ನು ವಿತರಿಸಲಾಗುತ್ತದೆ. ಇಂಥ ನ್ಯಾಯ ಬೆಲೆ ಅಂಗಡಿಗಳಿಂದ ಸುತ್ತಮುತ್ತಲ ಗ್ರಾಮದ ಅನೇಕ ಜನಗಳಿಗೆ ಅನುಕೂಲಕರವಾಗಿದೆ. ಈ ಬನ್ನೇರುಘಟ್ಟ ಗ್ರಾಮವು ಪಟ್ಟಣ ಸ್ವರೂಪದಲ್ಲಿ ಇತ್ತೀಚಿನ ದಿನಗಳಲ್ಲಿ ವ್ಯಾಪಾರ ಕೇಂದ್ರವಾಗಿ ಬೆಳೆಯುತ್ತಿರುವುದರಿಂದ ಆರ್ಥಿಕವಾಗಿ ಈ ಪ್ರದೇಶ ಮುಂದುವರೆಯಲು ಸರ್ಕಾರ ಹಣಕಾಸಿನ ಸಂಸ್ಥೆಗಳನ್ನು ತೆರೆದಿದೆ. ಅವುಗಳಲ್ಲಿ ವಿಜಯ ಬ್ಯಾಂಕ್ ಮತ್ತು ವಿ.ಎಸ್.ಎಸ್. ಎನ್. ಬ್ಯಾಂಕ ಪ್ರಮುಖವಾಗಿದೆ. ಈ ಗ್ರಾಮದಲ್ಲಿರುವ 'ಸಮಾಜ ವಿಕಾಸ ಟ್ರಸ್ಟ್' 1993ನೇ ವರ್ಷದಲ್ಲಿ ಸ್ಥಾಪನೆಯಾಗಿದ್ದು ಬನ್ನೇರುಘಟ್ಟದ ಸುತ್ತಮುತ್ತಲ ಅರಣ್ಯ ಪ್ರದೇಶಗಳ ಹಿಂದುಳಿದ 25 ಗ್ರಾಮಗಳ ಜನರ ಶ್ರೇಯೊಭಿವೃದ್ಧಿಗೆ ಶ್ರಮಿಸುತ್ತಿದೆ. ಅಲ್ಲದೆ ನಾಗರಿಕ ಜಗತ್ತಿನಿಂದ ದೂರವಿದ್ದ ಹಕ್ಕಿಪಿಕ್ಕಿ ಕಾಲೋನಿಯ ಅಲೆಮಾರಿ ಬುಡಕಟ್ಟು ಜನಾಂಗದವರಿಗೆ ಅಕ್ಷರ ಕಲಿಸುವ ಯೋಜನೆಯನ್ನು ರೂಪಿಸಿದೆ. ಈ ಟ್ರಸ್ಟಿನ ಯೋಜನಾ ಕಚೇರಿ 'ಬನ್ನೇರುಘಟ್ಟ'ದಲ್ಲಿದೆ.

ಈ ಬನ್ನೇರುಘಟ್ಟ ಗ್ರಾಮವು ಬೆಂಗಳೂರು ಮತ್ತು ಆನೇಕಲ್ಲಿನ ಮುಖ್ಯ ಹೆದ್ದಾರಿಯಲ್ಲಿರುವುದರಿಂದ ಮುಕ್ತವಾದ ಸಾರಿಗೆ ವ್ಯವಸ್ಥೆಯನ್ನು ಹೊಂದಿದೆ. ಅಲ್ಲದೆ ಕನಕಪುರ ರಸ್ತೆಯ ಕಗ್ಗಲಿಪುರ ಮಾರ್ಗವಾಗಿ ಚಂದಾಪುರಕ್ಕೂ ಸಹ ಬಸ್ಸಿನ ವ್ಯವಸ್ಥೆಯನ್ನು ಕಲ್ಪಿಸಿದ್ದು ಈ ಬನ್ನೇರುಘಟ್ಟದ ಮೂಲಕವೇ ಪ್ರಧಾನ ಸಂಪರ್ಕವನ್ನು ಹೊಂದಿದೆ. ಈ ರೀತಿಯಾಗಿ ಈ ಬನ್ನೇರುಘಟ್ಟ ಗ್ರಾಮವು ನಗರ ಪ್ರದೇಶಕ್ಕೆ ಮತ್ತು ತಾಲ್ಲೂಕು ಕೇಂದ್ರಕ್ಕೆ ಉತ್ತಮ ಸಂಪರ್ಕ ಹೊಂದಿದ್ದು ಸುತ್ತಮುತ್ತಲ ಹಳ್ಳಿಗಳಿಗೂ ಉತ್ತಮ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸುವ ಪ್ರಧಾನ ಕೇಂದ್ರ ಸ್ಥಾನವನ್ನು ಹೊಂದಿದೆ.

ಪ್ರಸ್ತುತ ಈ ಗ್ರಾಮದಲ್ಲಿ ಎಲ್ಲಾ ರೀತಿಯ ಜಾತಿಜನಾಂಗಗಳು ವಾಸಿಸುತ್ತಿದ್ದು ಪ್ರತಿಯೊಬ್ಬರು ಸಹ ಶಾಂತಿಯುತವಾದ ಸಹಬಾಳ್ವೆಯನ್ನು ನಡೆಸುತ್ತಿದ್ದಾರೆ. ಇಲ್ಲಿ ವರ್ಗ ಸಂಘರ್ಷವಿಲ್ಲದೆ ಎಲ್ಲರು ಸಹ ಭಕ್ತಿ ಭಾವೈಕ್ಯತೆಯಿಂದ ಎಲ್ಲರೂ ಹಬ್ಬ ಹರಿದಿನಗಳನ್ನು ಸಂಪ್ರದಾಯ ಪದ್ಧತಿಗಳನ್ನು ಪಾಲಿಸಿಕೊಂಡು ಬರುತ್ತಿದ್ದಾರೆ. ಈ ಗ್ರಾಮದಲ್ಲಿ ಆಚರಿಸುವ ಜಾತ್ರೆ ರಥೋತ್ಸವ, ದಸರಾ ಉತ್ಸವಗಳನ್ನು ಎಲ್ಲ ಜನಾಂಗದವರು ಭಕ್ತಿಯಿಂದ ಶ್ರದ್ಧಾ ಪೂರ್ವಕವಾಗಿ ಆಚರಿಸುತ್ತಾರೆ. ಇಂದಿಗೂ

ಸಹ ಈ ಜನರು ಹಲವಾರು ಸಂಪ್ರದಾಯಗಳನ್ನು ಪಾಲಿಸಿಕೊಂಡು ಬಂದಿದ್ದಾರೆ. ಸಾಮಾಜಿಕವಾಗಿ ಈ ಗ್ರಾಮದ ಜನಾಂಗಗಳ ಕಾರ್ಯ ಚಟುವಟಿಕೆಗಳನ್ನು ಒಕ್ಕಲಿಗರು ವ್ಯವಸಾಯವನ್ನು ಮೊದಲಿಯರ್‌ಗಳು ವ್ಯಾಪಾರವನ್ನು , ರಜಪೂತರು ರಿಯಲ್ ಎಸ್ಟೇಟ್‌ನ್ನು, ಲಿಂಗಾಯಿತರು ಗಂಧಿಗೆ ಅಂಗಡಿಗಳನ್ನು, ಮಡಿವಾಳಿಗರು ಬಟ್ಟೆ ಒಗೆಯುವುದನ್ನು, ಬಣಜಿಗರು ಬಳೆ ಮತ್ತು ಹೂವಿನ ವ್ಯಾಪಾರವನ್ನುಮಾಡುತ್ತಿದ್ದಾರೆ. ಈ ರೀತಿಯಾಗಿ ಜನಾಂಗಿಕವಾಗಿ ಹಲವಾರು ಜನರು ಬಗೆಬಗೆಯ ಕೆಲಸ ಕಾರ್ಯಗಳಲ್ಲಿ ತಮ್ಮ ನಿತ್ಯ ಜೀವನವನ್ನು ಮಾಡುತ್ತಾರೆ.

ಅನೇಕ ವರ್ಷಗಳ ಹಿಂದೆ ಹೈನುಗಾರಿಕೆ ಈ ಗ್ರಾಮದಲ್ಲಿ ವ್ಯಾಪಕವಾಗಿದ್ದು ನೂರಾರು ಲೀಟರ್‌ನಷ್ಟು ಹಾಲು ಈ ಗ್ರಾಮದಿಂದ ಬೆಂಗಳೂರು ನಗರಕ್ಕೆ ಸರಬರಾಜಾಗುತ್ತಿತ್ತು. ಪ್ರಸ್ತುತ ಜಾಗತಿಕರಣದ ಪ್ರಭಾವದಿಂದ ನಗರೀಕರಣವಾಗುತ್ತೀರುವ ಈ ಗ್ರಾಮದಲ್ಲಿ ದನ, ಕರು, ಎಮ್ಮೆ, ಮೇಕೆಗಳ ಪಾಲನೆ ಕಡಿಮೆಯಾಗಿದ್ದು ರಾಜಧಾನಿಯಿಂದ ಈ ಗ್ರಾಮಕ್ಕೆ ಪ್ರಸ್ತುತ ಹಾಲಿನ ಸರಬರಾಜಾಗುವ ಪರಿಸ್ಥಿತಿ ಬಂದೊದಗಿದೆ.

ಈ ಗ್ರಾಮದ ಜನರು ಇತೆರೆಡೆಗಳಿಗೆ ಸಂಪರ್ಕವನ್ನು ಸಾಧಿಸಲು ಉತ್ತಮ 'ದೂರವಾಣಿ ಸೌಲಭ್ಯ'ವನ್ನು ಕಲ್ಪಿಸಲಾಗಿದೆ. ಈ ಗ್ರಾಮದಲ್ಲಿ ದೂರವಾಣಿ ಕೇಂದ್ರವನ್ನು ಸ್ಥಾಪಿಸಲಾಗಿದೆ. ಮತ್ತು ಪ್ರತ್ಯೇಕ 'ಉಪ ಕಛೇರಿ'ಯನ್ನು ಸ್ಥಾಪಿಸಲಾಗಿದ್ದು ಈ ಗ್ರಾಮದ ವ್ಯಾಪ್ತಿಯ ಪೀನ್ ಕೋಡು-560083 ಸಂಖ್ಯೆಯಲ್ಲಿದೆ. ಈ ರೀತಿ ಈ ಗ್ರಾಮಕ್ಕೆ 'ವಿದ್ಯುನ್ಮಾನ ವ್ಯವಸ್ಥೆ'ಯನ್ನು ಕಲ್ಪಿಸಲಾಗಿದೆ. ಗ್ರಾಮೀಣ ಪ್ರದೇಶವಾಗಿರುವ ಈ ಹಳ್ಳಿಗೆ ಉತ್ತಮ ಆರೋಗ್ಯ ಸುಧಾರಣೆಗಾಗಿ ಅಗತ್ಯವಾದ ವೈದ್ಯಕೀಯ ನೆರವನ್ನು ಪಡೆಯಲ್ಲು ರಾಗಿಹಳ್ಳಿ ಮತ್ತು ಈ ಬನ್ನೇರು ಘಟ್ಟ ಗ್ರಾಮಗಳಲ್ಲಿ 'ಸರ್ಕಾರಿ ಆರ್ಯುವೇದ ಆಸ್ಪತ್ರೆ'ಗಳನ್ನು ತೆರೆಯಲಾಗಿದೆ. ಇವು ಈ ಪ್ರದೇಶದ ಬಡರೋಗಿಗಳಿಗೆ ವರದಾನವಾಗಿದೆ. ಸ್ಥಳೀಯ ಪ್ರದೇಶದ ಕುಂದುಕೊರತೆಗಳನ್ನು ನೀಗಿಸಲು ಈ ಗ್ರಾಮದಲ್ಲಿ ' ಪಂಚಾಯಿತಿ'ಯನ್ನು ಸ್ಥಾಪಿಸಲಾಗಿದೆ. ಈ ಬನ್ನೇರುಘಟ್ಟ ಗ್ರಾಮದ ಸುತ್ತಮುತ್ತಲ ಪ್ರದೇಶಗಳಿಗೆ ಅಗತ್ಯವಾದ ಅನುಕೂಲಗಳನ್ನು ಒದಗಿಸಲು ಈ 'ಪಂಚಾಯಿತಿ'ಯು ಈ ಗ್ರಾಮದ ಮುಖ್ಯ ಕೇಂದ್ರವಾಗಿದೆ. ಅಲ್ಲದೆ ಈ ಗ್ರಾಮವು ' ತಾಲ್ಲೂಕು ಪಂಚಾಯಿತಿ' ಕ್ಷೇತ್ರಗಳಲ್ಲಿ ಒಂದಾಗಿದೆ. ಈ ಗ್ರಾಮದ ರೈತರ ಹಿತ ಕಾಪಾಡುವಲ್ಲಿ 'ವ್ಯವಸಾಯ ಸೇವಾ ಸಹಕಾರ ಕೇಂದ್ರ' ವನ್ನು ತೆರೆಯಲಾಗಿದ್ದು ರೈತರು ಕೃಷಿಗೆ ಸಂಬಂಧಿಸಿದ ಗೊಬ್ಬರ, ಭಿತ್ತನೇ ಬೀಜ ಮತ್ತು ವ್ಯವಸಾಯ ಸಂಬಂಧಿ ಸಲಕರಣೆಗಳನ್ನು ರಿಯಾಯಿತಿ ದರದಲ್ಲಿ ಪಡೆಯಲು ಅನೂಕುಲಕರವಾಗಿದೆ.

ಈ ಬನ್ನೇರುಘಟ್ಟ ಪ್ರದೇಶದ ಅರಣ್ಯದ ಅಂಚಿನಲ್ಲಿರುವ ಕಾಡು ಪೂಜಾರಿಗಳು, ಹಕ್ಕಿಪಿಕ್ಕಿಗಳು ಮತ್ತು ಇರುಳಿಗ ಬುಡಕಟ್ಟು ಜನಾಂಗಗಳು ಸಹ ಅನೇಕ ವರ್ಷಗಳಿಂದ ಈ ಪ್ರದೇಶದಲ್ಲಿ ವಾಸವಾಗಿದ್ದಾರೆ. ಮೊದಲು ಈ ಬುಡಕಟ್ಟು ಜನಾಂಗಗಳು ಈ ಪ್ರದೇಶದ ಬೆಟ್ಟ ಗುಡ್ಡ ಅರಣ್ಯ ಪ್ರದೇಶಗಳಲ್ಲಿ ವಾಸಿಸುತ್ತಿದ್ದು ಪ್ರಸ್ತುತ ನಾಗರಿಕತೆಯ ಪ್ರಭಾವದಿಂದ ಈ ಕಾಡಿನ ಅಂಚಿನಲ್ಲಿ ವಾಸವಾಗಿದ್ದಾರೆ. ಇವರು ವಾಸವಾಗಿರುವ ಈ ಸ್ಥಳಕ್ಕೆ ಪ್ರಸ್ತುತ 'ಹಕ್ಕಿಪಿಕ್ಕಿ ಕಾಲೋನಿ' ಎಂದು ಹೆಸರಿಡಲಾಗಿದೆ.

ಈ ಬುಡಕಟ್ಟು ಜನಾಂಗಗಳ ಸಂಪ್ರದಾಯಗಳಲ್ಲೂ ನಾಗರಿಕತೆಯ ಪ್ರಭಾವ ಬೀರಿದ್ದು ಇವರ ಮಾತುಕಥೆ, ನಡೆನುಡಿ, ಜೀವನ ವಿಧಾನ, ವೇಷಭೂಷಣ ಹೀಗೆ ಎಲ್ಲಾದರಲ್ಲಿಯೂ ಸಹ ಅನೇಕ ಬದಲಾವಣೆಗಳು ಕಂಡು ಬಂದಿವೆ. ತಪಾಲದ ಚಕ್ಕೆಯನ್ನು ತಾಳಿಯಾಗಿ ಕಟ್ಟುವ ಈ ಇರುಳಿಗರ

ಪದ್ಧತಿ ಪ್ರಸ್ತುತ ಇವರು ನಾಗರಿಕತೆಗೆ ಹತ್ತಿರವಾದಂತೆ 'ಬಂಗಾರ ತಾಳಿ' ಯನ್ನು ಕಟ್ಟುತ್ತಾರೆ. ಅವರ ಕಸುಬಾಗಿದ್ದ ಇಲಿ ಬೇಟೆ, ಮೊಲ ಮತ್ತು ಮುಂಗುಸಿ ಬೇಟೆಯನ್ನು ಕೈ ಬಿಟ್ಟಿದ್ದು ಪ್ರಸ್ತುತ ಕೂಲಿನಾಲಿ ಬಿಟ್ಟು, ಪೇಟೆಕೋಟೆ ತಿರುಗಿ ನಾಗರಿಕ ಪ್ರಪಂಚಕ್ಕೆ ಹತ್ತಿರವಾಗುತ್ತಿದ್ದಾರೆ. ಈ ಎಲ್ಲಾ ಕ್ಷೇತ್ರಗಳಲ್ಲಿ ಖ್ಯಾತಿಯನ್ನು ಪಡೆದಿರುವ ಈ ಬನ್ನೇರುಘಟ್ಟ ಪ್ರದೇಶವು 'ಸಿನಿಮಾರಂಗ'ದಲ್ಲೂ ಸಹ ತನ್ನದೆ ಆದ ಛಾಪನ್ನು ಮೂಡಿಸಿದೆ. ಈ ಗ್ರಾಮದಲ್ಲಿ ಹಲವಾರು ಚಲನ ಚಿತ್ರಗಳ ಮತ್ತು ಧಾರಾವಾಹಿಗಳ ಚಿತ್ರೀಕರಣಗಳನ್ನು ಸಹ ಬಹಳ ವರ್ಷಗಳಿಂದ ಸೆರೆಹಿಡಿಯಲಾಗಿದೆ. ಕಾಡಿನ ಪ್ರದೇಶ; ಬೆಟ್ಟ ಗುಡ್ಡ, ದೇವಾಲಯ, ಛತ್ರ, ಕೊಳಗಳು, ಕಲ್ಲಿನ ಮಂಟಪಗಳು ಮತ್ತು ರಾಷ್ಟ್ರೀಯ ಉದ್ಯಾನವನ್ನು ಒಳಗೊಂಡಿರುವ ಈ ಬನ್ನೇರುಘಟ್ಟ ಪ್ರದೇಶ ಚಿತ್ರೀಕರಣಕ್ಕೆ ಮತ್ತು ಪ್ರವಾಸಿಗರಿಗೆ ಉತ್ತಮವಾದ ತಾಣವಾಗಿದೆ.

ಈ ಗ್ರಾಮದಲ್ಲಿ ಚಿತ್ರೀಕರಣಗೊಂಡ ಚಲನಚಿತ್ರಗಳೆಂದರೆ: ರಜನಿಕಾಂತ್ ನಟಿಸಿರುವ 'ತಪ್ಪಿದ ತಾಳಂಗಳ್', ಎಡಕಲ್ಲು ಗುಡ್ಡದ ಮೇಲೆ, ರಾಮಚಾರಿ, ಕಿಂದರಿ ಜೋಗಿ, ಸಿಪಾಯಿ, ಭಕ್ತ ಸಿರಿಯಾಳ ಮತ್ತು ಇತ್ತೀಚೆಗೆ ಸೆರೆಹಿಡಿದ ಜಯಮ್ಮನ ಮಗ ಚಿತ್ರಗಳಾದರೆ ಧಾರಾವಾಹಿಗಳಾದ :- ಕಾವೇರಿ, ಚಿ.ಸೌ.ಸಾವಿತ್ರಿ, ವಠಾರ, ತುಳಸಿ, ರಾಧಾರುಕ್ಮಿಣಿ ಈ ರೀತಿಯಾಗಿ ಹತ್ತು ಹಲವಾರು ಚಿತ್ರಗಳನ್ನು ಈ ಪ್ರದೇಶದಲ್ಲಿ ಚಿತ್ರೀಕರಿಸಿರುವುದನ್ನು ಬೆಳ್ಳಿತೆರೆಯ ಮೇಲೆ ವೀಕ್ಷಿಸಬಹುದಾಗಿದೆ.

ಒಟ್ಟಾರೆಯಾಗಿ ' ಬನ್ನೇರುಘಟ್ಟ" ದ ಪ್ರಸ್ತುತ ಸ್ಥಿತಿಯು ಪ್ರತಿಯೊಬ್ಬರಲ್ಲಿ ಗೊಂದಲದ ಗೂಡಾಗಿ ಕಂಡರೂ ಇಲ್ಲಿನ ಆಚರಣೆಗಳು, ಸಂಪ್ರದಾಯಗಳು, ವಿಧಿವಿಧಾನಗಳು, ನೀತಿನಿಯಮಗಳು, ಇಲ್ಲಿನ ಜನರ ನಂಬಿಕೆಗಳಲ್ಲಿ ಸಾಂಸ್ಕೃತಿಕವಾಗಿ ತನ್ನದೆ ಆದ ಮಹತ್ವವನ್ನು ಉಳಿಸಿಕೊಂಡಿದೆ ಎಂದು ಹೇಳಬಹುದು.

ಅಧ್ಯಾಯ-8

ಪ್ರವಾಸಿ ಕೇಂದ್ರವಾಗಿ ಬನ್ನೇರುಘಟ್ಟ

ಈ ಬನ್ನೇರು ಘಟ್ಟ ಪ್ರದೇಶವು ಪ್ರಾಕೃತಿಕವಾಗಿ ಕಾಡು ಮತ್ತು ನಾಡು ಎರಡರ ಸಂಮ್ಮಿಶ್ರಣ ಹೊಂದಿರುವುದರಿಂದ ಸಹಜವಾಗಿಯೇ ಪ್ರವಾಸಿಗರನ್ನು ತನ್ನತ್ತ ಸೆಳೆಯುತ್ತದೆ. ರಾಜಧಾನಿ ಬೆಂಗಳೂರಿನಿಂದ ಕೇವಲ 22 ಕೀ.ಮಿ ದೂರದಲ್ಲಿರುವ ಈ ಪ್ರದೇಶ ನಗರದ ನಾಗರಿಕರಿಗೆ ತುಂಬಾ ಸಮೀಪದಲ್ಲಿದೆ. ನಗರ ಜೀವನದ ಜಂಜಾಟದಲ್ಲಿ ಮಾನಸಿಕವಾಗಿ ಗೊಂದಲಮಯವಾಗಿರುವ ಮನಸ್ಸಿಗೆ ಸ್ವಲ್ಪ ಸಮಯ ಉಲ್ಲಾಸ ಮತ್ತು ವಿಶ್ರಾಂತಿಯನ್ನು ಪಡೆಯಲು ಈ ಕ್ಷೇತ್ರ ತುಂಬಾ ಅನುಕೂಲಕರವಾಗಿದೆ. ಇದರ ಪರಿಣಾಮವೇ ದೂರದ ಸ್ಥಳಗಳಿಂದ ಅನೇಕ ಪ್ರವಾಸಿಗರು, ಪ್ರೇಮಿಗಳು, ಮಕ್ಕಳು, ಮತ್ತು ಮಹಿಳೆಯರು ಆಗಮಿಸುತ್ತಿದ್ದು ಇವರೆಲ್ಲರಿಗೂ ಈ ಪ್ರದೇಶ ನೆಚ್ಚಿನ ತಾಣವಾಗಿದೆ.

ಈ ಗ್ರಾಮದಲ್ಲಿರುವ ಪುರಾತನ ದೇವಾಲಯವಾದ ಶ್ರೀ ಚಂಪಕಧಾಮ ಸ್ವಾಮಿ ದೇವಾಲಯ ಧಾರ್ಮಿಕವಾಗಿ ಭಕ್ತರನ್ನು ತನ್ನತ್ತ ಸೆಳೆಯುವ ಪ್ರಸಿದ್ಧವಾದ ವೈಷ್ಣವ ಕ್ಷೇತ್ರವಾಗಿದೆ.

ಪುರಾಣ ಪ್ರಸಿದ್ಧವಾದ ಈ ದೇವಾಲಯದ ಹಿಂಬದಿಯಲ್ಲಿ 'ವಹ್ನಿಗಿರಿ' ಬೆಟ್ಟವಿದೆ. ಈ ಬೆಟ್ಟಕ್ಕೆ ಅನೇಕ ಸೋಪಾನಗಳನ್ನು ನಿರ್ಮಿಸಲಾಗಿದೆ. ಈ ಬೆಟ್ಟವನ್ನು ಹತ್ತುವ ನವಜೋಡಿಗಳಿಗೆ, ಯುವ ಪ್ರೇಮಿಗಳಿಗೆ, ಹುಡುಗರಿಗೆ, ಹರಟೆ ಹೊಡೆಯುವ ಸ್ನೇಹಿತರಿಗೆ, ಮಹಿಳೆಯರಿಗೆ ಸಂತೋಷವನ್ನು ನೀಡುತ್ತದೆ. ಈ ಬೆಟ್ಟದ ಮೇಲಿರುವ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಾಲಯ ಮತ್ತೊಂದು ಪ್ರಸಿದ್ಧ ದೇಗುಲವಾಗಿದೆ. ಈ ಬೆಟ್ಟವನ್ನು ಹತ್ತಿ ಆಯಾಸಗೊಂಡ ಭಕ್ತರು ಈ ದೇವರ ದರ್ಶನ ಪಡೆದು ಸ್ವಲ್ಪ ಸಮಯ ಈ ಸ್ಥಳದಲ್ಲಿ ವಿಶ್ರಾಂತಿ ಪಡೆಯಬಹುದು.

ಎತ್ತರವಾದ ಈ ಬೆಟ್ಟದ ಮೇಲೆ ಪ್ರಶಾಂತವಾದ ವಾತಾವರಣವಿದ್ದು ತಂಪಾದ ಗಾಳಿಬೀಸುತ್ತದೆ. ಸುತ್ತಮುತ್ತಲ ಪ್ರಕೃತಿಯ ವನರಾಶಿ ಮನಸ್ಸಿಗೆ ಮುದ ನೀಡುತ್ತದೆ. ಈ ಬೆಟ್ಟದ ಮೇಲಿರುವ 'ಪುರಾತನ ಕಾಲದ ಅಪೂರ್ಣ ಕಟ್ಟಡ'ವು ಈ ಪ್ರೇಮಿಗಳ ಕ್ರೂರ ದೃಷ್ಟಿಗೆ ಒಳಗಾಗಿದ್ದು ಅವರ ಮನಸ್ಸಿನ ಪ್ರೇಮ ನಿವೇದನೆಯ ನಾಮಧೇಯಗಳಿಂದ ವಿಕೃತವಾಗಿರುವುದನ್ನು ಕಂಡರೆ ಮನಸ್ಸಿಗೆ ಬೇಸರವನ್ನು ಮೂಡಿಸುತ್ತದೆ.

ಮಕ್ಕಳಾಗದವರು, ಮದುವೆಯ ಕೋರಿಕೆ ಇದ್ದವರು, ಇಲ್ಲಿನ ಅನೇಕ ಮರಗಳಿಗೆ ತೊಟ್ಟಿಲುಗಳನ್ನು ಕಟ್ಟಿ ತಮ್ಮ ಇಷ್ಟಾರ್ಥವನ್ನು ಹೇಳಿಕೊಳ್ಳುತ್ತಾರೆ. ಅಲ್ಲದೆ ತಮ್ಮ ಮನಸ್ಸಿನ ಕೋರಿಕೆಗಳು ಈಡೇರಲೆಂದು 3 ಕಲ್ಲುಗಳನ್ನು ಒಂದರ ಮೇಲೊದರಂತೆ ಜೋಡಿಸಿರುವ ಅನೇಕ ' ಕಲ್ಲುಗುಪ್ಪೆ' ಗಳನ್ನು ಈ ಬೆಟ್ಟದ ಮೇಲೆ ಕಾಣಬಹುದು.

ಈ ಬೆಟ್ಟ ಹತ್ತಿದವರು ನೋಡಲೇಬೇಕಾದ ಮತ್ತೋಂದು ಸ್ಥಳವೆಂದರೆ ' ಸುವರ್ಣಮುಖಿ ಕೊಳ' ಈ ಬೆಟ್ಟದ ತುದಿಯಿಂದ 2 ಕೀ.ಮೀ ಕಾಲ್ನಡಿಗೆಯಲ್ಲಿ ಹೋಗಬೇಕು. ದಾರಿಯೊದ್ದಕ್ಕು ನೆರಳು ಬಿಸಿಲಿನಾಟ ಹಕ್ಕಿಗಳ ಕಲರವ ಕೇಳುತ್ತಾ ಸಾಗಿದರೆ 'ಏಳು ಸುತ್ತಿನ ಕೋಟೆ' ಕಾಣುತ್ತದೆ. ಈ

ಕೋಟೆಯ ರಚನೆ ನೋಡಲು ಸುಂದರವಾಗಿದೆ. ಇದರ ಸಮೀಪದಲ್ಲಿ ರಾಶಿ ರಾಶಿ ಕಲ್ಲು ಗುಪ್ಪೆಗಳನ್ನು ಕಾಣುತ್ತಾ ಮುಂದೆ ನಡೆದರೆ ಸಿಗುವುದೆ 'ಸುವರ್ಣ ಮುಖಿ ತೀರ್ಥ'.

ವಿಶಾಲವಾದ ಪ್ರಾಚೀನ ಕಾಲದ ಈ ತೀರ್ಥ ಕ್ಷೇತ್ರದಲ್ಲಿ ಸ್ನಾನ ಮಾಡಿ ದೇವರ ದರುಶನವನ್ನು ಪಡೆಯಬಹುದು. ಸುತ್ತಮುತ್ತಲು ಪ್ರಕೃತಿಯ ನಡುವೆ ಇರುವ ಕೊಳವು ಈ ಅರಣ್ಯ ಪ್ರದೇಸದಲ್ಲಿ ಎಲೆ ಮರೆಯ ಕಾಯಿಯಂತೆ ಅಡಗಿದೆ. ತದ ನಂತರ ಈ ವಹ್ನಿ ಗಿರಿ ಬೆಟ್ಟಕ್ಕೆ ತೆರಳಿ ಈ ಬೆಟ್ಟದಿಂದ ವೀಕ್ಷಿಸಿದರೆ ಬೆಂಕಿ ಪೊಟ್ಟಣದಂತೆ ಕಾಣು ಉದ್ಯಾನ ನಗರಿಯ ಕಟ್ಟಡಗಳು, ಮರಗಳಲ್ಲಿ ತೂಗಾಡುವ ಹರಕೆಯ ತೊಟ್ಟಿಲುಗಳು ಮತ್ತು ಸುತ್ತಲು ಕಾಣುವ ಹಸಿರಿನ ಬಿದಿರು ಹೀಗೆ ಇಡೀ ಕಾಡಿನ ಸೌಂದರ್ಯವೆಲ್ಲವೂ ಮನಸ್ಸಿಗೆ ಮುದ ನೀಡುತ್ತದೆ. ಈ ರೀತಿಯಾಗಿ ಈ ಬೆಟ್ಟವು ಪ್ರೇಮಿಗಳ ಪಿಸುಮಾತಿಗೆ, ಹುಡುಗರ ಉಲ್ಲಾಸಕ್ಕೆ, ಯುವ ಜೋಡಿಗಳ ನವ ಸಂತಸಕ್ಕೆ, ಮಹಿಳೆಯರ ಮಾತುಗಳಿಗೆ ಈ ಬೆಟ್ಟ ಸಾಕ್ಷಿಭೂತವಾಗಿದೆ.

[34]<u>ರಾಷ್ಟ್ರೀಯ ಉದ್ಯಾನ ವನ</u>

ಬೆಂಗಳೂರಿನಿಂದ ಸುಮಾರು 22 ಕೀ.ಮೀ ದಕ್ಷಿಣಕ್ಕೆ ಇರುವ ಈ ಬನ್ನೇರುಘಟ್ಟ ನೈಜ ಅರಣ್ಯ ಪ್ರದೇಶ. ಈ ಕಾಡಿನಲ್ಲಿ ಸ್ಥಳಿಯ ಸಸ್ಯ ವರ್ಗ ಮತ್ತು ಪ್ರಾಣಿ ವರ್ಗಗಳ ರಕ್ಷಣೆಗೆ ಮೀಸಲಿಡಲಾಗಿದೆ. ಈ ಅರಣ್ಯ ಪ್ರದೇಶದಲ್ಲಿ ಸು. 120 ಜಾತಿಯ ಪಕ್ಷಿ, ಆನೆ, ಕಾಡು ಕೋಣ, ಚಿರತೆ, ಜಿಂಕೆ ಮತ್ತಿತರ ವನ್ಯ ಜೀವಿಗಳ ನೆಲೆಯಾಗಿದೆ. ಈ ಶ್ರೀಮಂತಿಕೆಯನ್ನು ಗಮನಿಸಿ ಸರ್ಕಾರ 1974ರಲ್ಲಿ ಇದನ್ನು 'ರಾಷ್ಟ್ರೀಯ ಉದ್ಯಾನ ವನ' ಎಂದು ಘೋಷಿಸಲಾಗಿದೆ. ಈ

ಪ್ರದೇಶ 104.27 ಚ.ಕೀ.ಮೀ ಇದರ ಅಳತೆ ಇದ್ದು ವಾರ್ಷಿಕವಾಗಿ 700 ಮೀ.ಮೀ ನಷ್ಟು ಮಳೆಯಾಗುತ್ತದೆ. ಇತ್ತೀಚಿಗೆ ಇದನ್ನು ಕರ್ನಾಟಕ ಸರ್ಕಾರದ ಮೃಗಾಲಯ ಪ್ರಾದಿಕಾರದ (Zoo Authority of Karnataka) ವ್ಯಾಪ್ತಿಗೆ ತರಲಾಗಿದೆ.

ಇದೊಂದು ಪ್ರತಿಷ್ಠಿತ ಪ್ರವಾಸಿ ತಾಣವೂ ಹೌದು. ಇಲ್ಲಿನ ಮೃಗಾಲಯವು ಚಿರತೆ, ನೀರಾನೆ, ಜೀಬ್ರಾ, ವಿವಿಧ ಜಾತಿಯ ಮೊಸಳೆ ಹಾಗೂ ಚಿರತೆಗಳನ್ನೊಳಗೊಂಡಿದೆ. ಅನೇಕ ವಿವಿಧ ಜಾತಿಯ ದೇಶಿ ಹಾಗೂ ಚಿರತೆಗಳನ್ನೊಳಗೊಂಡಿದೆ. ಅನೇಕ ವಿವಿಧ ಜಾತಿಯ ದೇಶಿ ಹಾಗೂ ವಿದೇಶಿ ಹಕ್ಕಿಗಳಿವೆ. ದಾಸ ಮಂಗಟ್ಟೆ ಹಕ್ಕಿ (Great Indian Hornbill) ಎಂಬ ದೊಡ್ಡ ಗಾತ್ರದ ಹಕ್ಕಿ ಮೃಗಾಲಯದ ಪ್ರಮುಖ ಆಕರ್ಷಣೆಗಳಲ್ಲೊಂದು. ಇಲ್ಲಿನ ಸಮುದಾಯ ಭವನದಲ್ಲಿ ಆನೆಗಳು ಕೋಟ್ಯಂತರ ವರ್ಷಗಳಲ್ಲಿ ವಿಕಾಸವಾದ ಬಗೆಯನ್ನು ಚಿತ್ರ ಬಿಡಿಸಿ ತೋರಿಸಿದ್ದಾರೆ. ಹುಲಿ, ಚಿರತೆ , ಸಿಂಹ ಇವುಗಳ ವಿವಿಧ ಒಳ ಜಾತಿಗಳ ಪ್ರತಿಕೃತಿ ಹಾಗೂ ಅಸ್ಥಿ ಪಂಜರವನ್ನು ಇರಿಸಲಾಗಿದೆ. ಎಲ್ಲಾ ದಿನಗಳಲ್ಲಿ ಮಧ್ಯಾಹ್ನ 12.30 ಹಾಗೂ ಸಂಜೆ 4.00 ಗಂಟೆಗೆ ವನ್ಯ ಜೀವಿ ಕುರಿತ ಚಲನ ಚಿತ್ರ ಪ್ರದರ್ಶನ ಇರುತ್ತದೆ (ಮಂಗಳವಾರ ರಜಾ) ಅರಣ್ಯ ಇಲಾಖೆ, ಪ್ರವಾಸೋದ್ಯಮ ಇಲಾಖೆಯ ಸಹಯೋಗದೊಂದಿಗೆ ಇಲ್ಲಿನ ಕಾಡಿನಲ್ಲಿ ಸಫಾರಿ ಕಾರ್ಯಕ್ರಮ ನಡೆಸುತ್ತದೆ. ಸುಮಾರು ಒಂದು ಗಂಟೆಯ ಈ ಸಫಾರಿ ಇಲ್ಲಿ ಪುನರ್ವಸತಿಗೊಂಡಿರುವ ಹುಲಿ ಹಾಗೂ ಸಿಂಹಗಳನ್ನು ಹತ್ತಿರದಿಂದ ನೋಡಲು ಒಂದು ಅವಕಾಶ. ಇದರೊಂದಿಗೆ ಸರ್ಕಾರಿ ಸ್ವಾಮ್ಯದ ಜಂಗಲ್ ಲಾಡ್ಜಸ್ ಆಂಡ್

[34] ಬೆಂಗಳೂರು ದರ್ಶನ, ಸಂ –2, ಪುಟ–573.

ರಿಸಾರ್ಟ್ಸ್ ನಿಯಮಿತ ಇಲ್ಲಿ ಪ್ರಕೃತಿ ಶಿಬಿರವನ್ನು ನಿರಂತರವಾಗಿ ನಡೆಸುತ್ತಿರುತ್ತದೆ. ಇಲ್ಲಿ ಇದೇ ಸಂಸ್ಥೆಯ ಉತ್ತಮ ದರ್ಜೆಯ ರೆಸಾರ್ಟ್ಸ್ ನಡೆಸುತ್ತಿದ್ದು ಊಟ ಹಾಗೂ ವಸತಿ ಸೌಲಭ್ಯವಿರುತ್ತದೆ. ಈ ಅರಣ್ಯ ಪ್ರದೇಶದಲ್ಲಿ ಉಡಿನ ಬಂಡೆ ಮತ್ತು ಹಜಾಮನ ಬಂಡೆ ಎಂಬ ಚಾರಣಾ ಸ್ಥಳಗಳಿದ್ದು ಉಡಿನ ಬಂಡೆಯಿಂದ ಕಾಡಾನೆಗಳು ಓಡಾಡುದನ್ನು ಸುರಕ್ಷಿತವಾಗಿ ನೋಡಬಹುದು. ಮಿರ್ಜ ಬೆಟ್ಟ ಹಾಗೂ ದೇವ್ ಭಾಗ್ ಇನ್ನೆರಡು ಚಾರಣ ಸ್ಥಳಗಳು, ಅಲ್ಲದೆ ಆನೆಯ ಮೇಲೆ ಹೋಗುವ ಸಫಾರಿ ಕಾರ್ಯಕ್ರಮವೂ ಇದೆ. ಮುಂದಾಗಿಯೇ ಕಾರ್ಯಕ್ರಮಗಳನ್ನು ಗೊತ್ತುಪಡಿಸಬಹುದು.

<u>ಚಿಟ್ಟೆ ಉದ್ಯಾನ ವನ</u>

ಇಲ್ಲಿನ ಮೃಗಾಲಯದ ವಿಸ್ಕೃತ ಭಾಗವಾಗಿ ಎಂಟು ಎಕರೆ ಪ್ರದೇಶದಲ್ಲಿ ಚಿಟ್ಟೆ ಉದ್ಯಾನವನ್ನು ಪ್ರಸ್ತಾಪಿಸಲಾಗಿದೆ. ಚಿಟ್ಟೆಗಳು ಮಾನವ ಅತ್ಯಂತ ಕಡಿಮೆ ಅಧ್ಯಯನ ಮಾಡಿರುವ ವಿಷಯಗಳಲ್ಲಿ ಒಂದು. ಚಿಟ್ಟೆಗಳ ಅಧ್ಯಯನ ಇಲ್ಲಿನ ಮುಖ್ಯ ಉದ್ದೇಶ. ಇದೊಂದು ಮೃಗಾಲಯ ಪ್ರಾಧಿಕಾರ, ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯ ಹಾಗೂ ಖಾಸಗಿ ವಲಯದ ಅಶೋಕ ಟ್ರಸ್ಟ ಫಾರ್ ರಿಸರ್ಚ್ ಇಕಾಲಜಿ ಅಂಡ್ ಎನ್‌ವೈರ್ನ್ ಮೆಂಟ್‌ಯನರ ಜಂಟಿ ಕಾರ್ಯಕ್ರಮವಾಗಿದೆ.

ದಕ್ಷಿಣ ಭಾರತದ ಎಲ್ಲ ಚಿಟ್ಟೆಗಳನ್ನು ಇಲ್ಲಿನ ಬೃಹದಾಕಾರದ ಪಾರದರ್ಶಕ ಗೋಲದಲ್ಲಿ ಇಟ್ಟು ಅವುಗಳ ಜೀವನ, ವಂಶಾಭಿವೃದ್ಧಿ ಇತ್ಯಾದಿಗಳ ಬಗ್ಗೆ ಸಂಶೋಧನೆ ನಡೆಸಲಾಗುವುದು. ಗೋಲದ ಯಳಿದ ಭಾಗಗಳಲಿ ಚಿಟ್ಟೆಗಳ ಛಾಯಚಿತ್ರ ಹಾಗೂ ಚಿಟ್ಟೆಗಳಿಗೆ ಸಂಬಂಧಪಟ್ಟ ಅನೇಕ ವಸ್ತುಗಳ ಪ್ರದರ್ಶನವಿದ್ದು ಮೂರನೆಯ ಭಾಗದಲ್ಲಿ ಸಮ್ಮೇಳನ ಸಭಾಂಗಣವನ್ನು ರಚಿಸಲಾಗುವುದು.

<u>ಪಕ್ಷಿ ವೀಕ್ಷಣಾ ತಾಣ</u>

ಈ ಬನ್ನೇರುಘಟ್ಟದ ಸುತ್ತಮುತ್ತಲ ಅರಣ್ಯ ಪ್ರದೇಶಗಳಲ್ಲಿ ಅನೇಕ ಜಾತಿಯ ಪಕ್ಷಿಗಳು ಕಂಡು ಬರುತ್ತವೆ. ಹೀಗಾಗಿ ಬೆಂಗಳೂರಿನ ಪಕ್ಷಿ ವೀಕ್ಷಣಾ ತಾಣಗಳಲ್ಲಿ ಈ ಬನ್ನೇರುಘಟ್ಟದ ರಾಷ್ಟ್ರೀಯ ಉದ್ಯಾನ ವನವೂ ಒಂದಾಗಿದೆ.

<u>ಟಿ.ಕೆ ಫಾಲ್ಸ್</u> : ಇದನ್ನು ಸ್ಥಳಿಯರು 'ತೊಟ್ಟಿಕಲ್ಲು ಜಲಪಾತ' ಕರೆಯುವರು. ಬನ್ನೇರುಘಟ್ಟದ ವೃತ್ತದಿಂದ ಕಗ್ಗಲಿಪುರ ಮಾರ್ಗವಾಗಿ ಹೊರಟರೆ ಮುಂದೆ ಬ್ಯಾಟರಾಯನ ದೊಡ್ಡಿಯ ಸಮೀಪದಲ್ಲಿ ಈ ಜಲಪಾತ ಸಿಗುತ್ತದೆ. ಸುಮಾರು 40–50 ಅಡಿಗಳ ಆಳದಲ್ಲಿ ದುಮ್ಮಿಕ್ಕುವ ನೀರಿನ ಬೋರ್ಗೆರೆತ ಮನಸ್ಸಿಗೆ ಮದ ನೀಡುತ್ತದೆ ಮತು ಈ ಜಲ ಕನ್ಯೆಯ ನರ್ತನ ಪ್ರವಾಸಿಗರನ್ನು ತನ್ನತ್ತಾ ಆಕರ್ಷಿಸುತ್ತದೆ. ಈ ಜಲಪಾತದಲ್ಲೂ ಸಹ ಅನೇಕ ಚಿತ್ರಿಕರಣಗಳನ್ನು ಚಿತ್ರೀಕರಿಸಲಾಗಿದೆ. ನಗರದಿಂದ ಆಗಮಿಸುವ ಪ್ರವಾಸಿಗರು ಈ ಜಲಪಾತದ ಸೊಬಗನ್ನು ಇತ್ತೀಚಿನ ದಿನಗಳಲ್ಲಿ ನಾಶಪಡಿಸುತ್ತೀರುವುದನ್ನು ಕಂಡರೆ ಮನಸ್ಸಿಗೆ ಬೇಸರ ಉಂಟು ಮಾಡುತ್ತದೆ.

ಈ ಮೇಲಿನ ಪ್ರವಾಸಿ ತಾಣಗಳಲ್ಲದೆ ಪ್ರಸ್ತುರ ಈ ಬನ್ನೇರುಘಟ್ಟ ಗ್ರಾಮದಲ್ಲಿರುವ ತೀರ್ಥದ ಬಾವಿಗಳು, ಕಲ್ಯಾಣಿಗಳು, ವೀರಗಲ್ಲುಗಳು, ಪುರಾತನ ಗರುಡ ಸ್ಥಂಭ ಮತ್ತು ಬೃಹತ್ ಶಿಲಾಯುಗದ ಸಮಾಧಿ ಇವೆಲ್ಲವೂ ಧಾರ್ಮಿಕವಾಗಿ ಮತ್ತು ಚಾರಿತ್ರಿಕವಾಗಿ ಮತ್ತೇ ಮತ್ತೇ ಪ್ರವಾಸಿಗರನ್ನು ಈ ಕ್ಷೇತ್ರ ತನ್ನತ್ತ ಕೈ ಬೀಸಿ ಕರೆಯುತ್ತಿದೆ.

ಉಪಸಂಹಾರ

'ಬನ್ನೇರು ಘಟ್ಟ ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ ವಿಷಯವನ್ನು ಕುರಿತು ಸಂಪ್ರಬಂಧವನ್ನು ರಚಿಸಲು ನಿರ್ಧಾರವನ್ನು ತೆಗೆದುಕೊಂಡು ನನಗೆ ಬಹುಶ: ಈ ಗ್ರಾಮದಲ್ಲಿ ಸಾಂಸ್ಕೃತಿಕ ಅಧ್ಯಯನಕ್ಕೆ ಪೂರಕವಾಗಿರುವಂಥ ಮಾಹಿತಿಗಳು ಲಭ್ಯವಾಗುತ್ತವೆಯೇ ಎಂಬ ಸಂದೇಹದಿಂದಲೇ ಈ ಕಾರ್ಯಕ್ಕೇ ಕೈ ಹಾಕಿದೆ. ತದ ನಂತರ ಅನೇಕ ರೀತಿಯ ಸಂದೇಹ ಸಂಶಯಗಳಿಂದಲೇ ಈ ಬನ್ನೇರುಘಟ್ಟಕ್ಕೆ ಭೇಟಿ ನೀಡಬೇಕಾಯಿತು. ಪ್ರಾರಂಭದಲ್ಲಿ ಗ್ರಾಮಕ್ಕೆ ಭೇಟಿ ಕೊಟ್ಟಾಗ ಎಲ್ಲಿಂದ ನಾನು ಸಂಶೋಧನೆಯನ್ನು ಪ್ರಾರಂಭಿಸಲಿ ಎಂಬ ಗೊಂದಲದಿಂದಲೇ ಶ್ರೀ ಚಂಪಕಧಾಮ ಸ್ವಾಮಿ ದೇವಾಲಯದ ಕಡೆಗೆ ಹೆಜ್ಜೆ ಹಾಕಿದೆ, ಗರ್ಭಗುಡಿಯಲ್ಲಿ ಶ್ರೀ ದೇವಿ ಭೂದೇವಿಯ ಸಮೇತನಾಗಿ ವಿರಾಜಮಾನವಾಗಿರುವ ಚಂಪಕಧಾಮನನ್ನು ಕಂಡು ನನ್ನ ಈ ಸಂಶೋಧನಾಕಾರ ಯಶಸ್ವಿಯಾಗಲಿ ಎಂದು ಮನದಲ್ಲಿ ಪ್ರಾರ್ಥಿಸಿದೆ. ಆದರೆ ಚಂಪಕಧಾಮನು ಮಾತಿಲ್ಲದೆ ಮೌನವಾಗಿ ನಿಂತಿದ್ದ ಆದರೆ ನನ್ನ ಮನಸ್ಸಿನಲ್ಲಿ ಚಿಂತೆಯ ಪ್ರವಾಹವೇ ಬೋರ್ಗರೆಯುತ್ತಿತ್ತು. ಏನೇ ಆಗಲಿ ಕೈ ಗೊಂಡ ಕಾರ್ಯ ಪೂರ್ಣ ಗೊಳಿಸಬೇಕು ಎಂಬ ಧೃಢ ನಿಶ್ಚಯವನ್ನು ಕೈಗೊಂಡು ಚಂಪಕಧಾಮನಿಗೆ ಮತ್ತೊಮ್ಮೆ ವಂದಿಸಿ ಈ ದೇಗುಲದಿಂದ ಹಿಂದಿರುಗಿದೆ. ಈ ರೀತಿಯ ಗೊಂದಲ ಮತ್ತು ಸಂದೇಹಗಳಿಂದಲೇ ಈ ಗ್ರಾಮವನ್ನೊಮ್ಮೆ ಸುಮ್ಮನೆ ಸುತ್ತು ಹಾಕಿ, ಇನ್ನೊಮ್ಮೆ ಭೇಟಿ ನೀಡಿದರಾಯಿತು ಎಂದುಕೊಂಡು ಹೊರಟುಬಂದೆ.

ಒಂದೆರಡು ದಿನಗಳು ಕಳೆದ ನಂತರ ಈ ಗ್ರಾಮಕ್ಕೆ ಪುನ: ಮತ್ತೊಮ್ಮೆ ಭೇಟಿ ನೀಡಿದಾಗ ಅಲ್ಲಿನ ಅನೇಕ ಹಿರಿಯ ಗ್ರಾಮಸ್ಥರನ್ನು ಭೇಟಿಯಾದೆ ಅವರ ಮಾತುಗಳಿಂದ ಹೊಸಹೊಸ ವಿಚಾರಗಳನ್ನು ತಿಳಿದ ನನಗೆ ತೀವ್ರವಾದ ಕುತುಹಲ ಉಂಟಾಯಿತು. ಈ ರೀತಿ ಮತ್ತೆ ಮತ್ತೆ ಈ ಗ್ರಾಮಕ್ಕೆ ಭೇಟಿ ನೀಡಿದಾಗಲು ಈ ಪ್ರದೇಶದಲ್ಲಿರುವ ಪುರಾತನ ದೇವಾಲಯ ವೀರಗಲ್ಲುಗಳು, ಆತ್ಮಾಹುತಿಕಲ್ಲುಗಳು ಇಲ್ಲಿನ ಪ್ರಾಚೀನ ಗರುಡ ಸ್ತಂಭ ಸುವರ್ಣಮುಖಿ ತೀರ್ಥ, ಏಳು ಸುತ್ತಿನಕೋಟೆ, ಬೃಹತ್ ಶಿಲಾಯುಗದ ಸಮಾಧಿಗಳು ಇವೆಲ್ಲಾ ನಮ್ಮನ್ನು ಇನ್ನಷ್ಟು ಆಧುನಿಕತೆಯಿಂದ ಪ್ರಾಚೀನತೆಯ ಕಡೆಗೆ ಕರೆದೊಯ್ಯಲು ತೀವ್ರ ಕುತೂಹಲವನ್ನು ಉಂಟುಮಾಡಿದವು.

ಇಷ್ಟೆಲ್ಲಾ, ಪುರಾತನ ಅವಶೇಷಗಳನ್ನು ಹೊಂದಿರುವ ಈ ಗ್ರಾಮದ ಹಿನ್ನೆಲೆ ಏನು? ಈ ಪ್ರದೇಶವನ್ನು ಆಳಿದ ರಾಜವಂಶಗಳು ಯಾವುವು? ಇಲ್ಲಿನ ಶಾಸನಗಳು ಏನು ಹೇಳುತ್ತವೆ ? ಎಂಬುದನ್ನು ತಿಳಿಯಲು ಇತಿಹಾಸದ ಪುಟಗಳನ್ನೊಮ್ಮೆ ತಿರುವಿ ನೋಡಿದಾಗ ಮತ್ತಷ್ಟು ಚಾರಿತ್ರಿಕ ಮಾಹಿತಿಗಳು ಒಂದೊಂದಾಗಿ ಗರಿಬಿಚ್ಚ ತೊಡಗಿದವು.

ಕೆಲವೊಂದು ಹಳೆಯ ದಾಖಲೆಗಳು ಮತ್ತು ಪುಸ್ತಕಗಳ ಪುಟಗಳನ್ನೊಮ್ಮೆ ತಿರುವು ಹಾಕಿದಾಗ ಐತಿಹಾಸಿಕವಾದ ಈ ಪ್ರದೇಶವನ್ನು ಚೋಳರು, ಹೊಯ್ಸಳರು, ವಿಜಯನಗರದ ಅರಸರು ಮತ್ತು ಮೈಸೂರು ಅರಸರ ಆಳ್ವಿಕೆಗೆ ಒಳಪಟ್ಟಿರುವ ಮಾಹಿತಿಯು ಲಭ್ಯವಾಯಿತು.

ಈ ರೀತಿಯಾಗಿ ಈ ಪ್ರದೇಶದ ಬಗ್ಗೆ ತಿಳಿದುಕೊಳ್ಳಲು ತೀವ್ರ ಆಸಕ್ತಿಯಿಂದ ಮತ್ತೊಮ್ಮೆ ಗ್ರಾಮದ ಕೆಲವು ಗ್ರಾಮಸ್ಥರನ್ನು ಸಂಪರ್ಕಿಸಿದಾಗ ಅವರಾಡಿದ ತಾತ್ಸರದ ಮಾತುಗಳು ಮನಸ್ಸಿಗೆ

ಸ್ವಲ್ಪ ಬೇಸರವನ್ನುಂಟು ಮಾಡಿದರೂ ಸಹ ದಿನ ಕಳೆದಂತೆ ಇಲ್ಲಿನ ಜನರಿಂದ ಅನೇಕ ವಿಚಾರಗಳೂ ಗರಿಬಿಚ್ಚ ತೊಡಗಿತು. ಇವರ ಜೊತೆಯಲ್ಲಿ ಮತ್ತೆ ಮತ್ತೆ ಕಳೆದ ಇಂಥ ರಸನಿಮಿಷದ ಅನುಭವಗಳು ಹಲವು ರೀತಿಯಲ್ಲಿದ್ದರೂ ಕೆಲವೊಂದು ವೇಳೆಯಲ್ಲಿ ಪೇಚಿಗೆ ಒಳಗಾದ ಪ್ರಸಂಗಗಳು ಉಂಟು.

ನನ್ನ ಈ ಸಂಶೋಧನಾ ಕಾರ್ಯಕ್ಕೆ ಈ ಗ್ರಾಮದ ಕೆಲವರು ವಿಶೇಷವಾದ ಪ್ರೋತ್ಸಾಹವನ್ನು ನೀಡಿದರಾದರೂ ಮತ್ತೆ ಕೆಲವರು ತಮಗೆ ಗೊತ್ತಿರುವ ಅನೇಕ ಸಂಗತಿಗಳನ್ನು ಹೇಳಲು ಮತ್ತು ಮಾಹಿತಿಗಳನ್ನು ನೀಡಲು ನಿರಾಕರಿಸಿರುವುದು ಬೇಸರ ತಂದ ಸಂಗತಿಗಳಾಗಿವೆ. ಇನ್ನೂ ಕೆಲವರು ವಿಷಯವನ್ನು ಅರಿತಿದ್ದರೂ ಸಹ ಮುಕ್ತವಾಗಿ ಚರ್ಚಿಸಲು ಹಿಂಜರಿಯುತ್ತಿದ್ದರೂ ಸಹ ಅವರ ಮಾನಸಿಕ ತಾಕಲಾಟಗಳು ಮತ್ತೆ ಮತ್ತೆ ನಮ್ಮನ್ನು ಮೌನಕ್ಕೆ ಶರಣಾಗುವಂತೆ ಮಾಡುತ್ತಿತ್ತು. ಪ್ರಾಚೀನ ಕಾಲದಿಂದಲೂ ತನ್ನದೇ ಆದ ಸಾಂಸ್ಕೃತಿಕತೆಯನ್ನು ಉಳಿಸಿಕೊಂಡು ಬಂದಿರುವ ಈ ಬನ್ನೇರುಘಟ್ಟ ಪ್ರದೇಶವು ಅನೇಕ ಜಾತಿ ಮತ ಪಂಗಡಗಳನ್ನು ತನ್ನ ಗರ್ಭದಲ್ಲಿರಿಸಿಕೊಂಡೆ ಕಾಪಾಡುತ್ತಾ ಬಂದಿದೆ. ಹೀಗಿದ್ದರೂ ಸಹ ಈ ಗ್ರಾಮದಲ್ಲಿ ಪ್ರಸ್ತುತ ಜಾತಿ ತಾರತಮ್ಯದ ಲಕ್ಷಣಗಳು ಎದ್ದು ಕಾಣುವಂತಿದೆ. ಮೇಲುನೋಟಕ್ಕೆ ಜಾತಿಜನಾಂಗಗಳು ಹಬ್ಬ ಹರಿದಿನಗಳು ಜಾತಿ ಉತ್ಸವಾದಿಗಳಲ್ಲಿ ಒಂದೇಯಾಗಿರುವಂತೆ ಕಂಡು ಬಂದರೂ ಒಡಲಾಳದಲ್ಲಿ ಜಾತಿ ವ್ಯವಸ್ಥೆ ಇನ್ನೂ ಸಹ ತನ್ನ ಬೇರನ್ನು ಉಳಿಸಿಕೊಂಡಿರುವುದನ್ನು ಕೆಲವು ಜನಾಂಗಗಳ ಮಾತುಗಳಲ್ಲಿ ಕಾಣಬಹುದಾಗಿದೆ.

ಈ ಊರಿನ ಬಗ್ಗೆ ಕೆಲವೊಂದು ಮಾಹಿತಿಗಳನ್ನು ನೀಡುವಲ್ಲಿ ಇಲ್ಲಿನ ಬಹಳಷ್ಟು ಜನರು ಸಿನಿಕ ಸ್ವಭಾವದವರಾಗಿದ್ದು ಎಲ್ಲಿ ನಮ್ಮ ಹೇಳಿಕೆಯಿಂದ ಭವಿಷ್ಯದಲ್ಲಿ ಯಾವ ತೊಂದರೆ ಒಳಗಾಗುತ್ತವೆ ಎಂಬ ಆಂತಕದ ಛಾಯೆ ಅವರ ಮುಖಭಾವಗಳಲ್ಲಿ ಎದ್ದು ಕಾಣುತ್ತಿತ್ತು. ಕೆಲವರು ವಾಸ್ತವ ಸ್ಥಿತಿಗತಿಗಳನ್ನು ಹೇಳಿದರು ಸಹ ಮತ್ತೆ ಕೆಲವು ಮಂದಿ ಹಳೆಯ ಕಾಲದ ಕಟ್ಟುಕತೆಗಳ ಮೂಲಕ ಸುಳ್ಳಿನ ಸರಮಾಲೆಯನ್ನೇ ನಂಬುವಂತೆ ಹೇಳುತ್ತಿದ್ದರು.

ಈ ಗ್ರಾಮದಲ್ಲಿ ಇಷ್ಟೇಲ್ಲಾ ಜಾತಿಜನಾಂಗಗಳಿದ್ದರೂ ಸಹ ಈ ಗ್ರಾಮದ ಪ್ರಾಚೀನ ಪರಂಪರೆಯನ್ನು ಉಳಿಸುವ ನಿಟ್ಟಿನಲ್ಲಿ ಯಾರು ಕಾರ್ಯ ಪ್ರವೃತ್ತರಾಗದೇ ಇರುವುದು ನೋವಿನ ಸಂಗತಿಯಾಗಿದೆ. ಬಹುಶ: ಪ್ರಸ್ತುತ ದಿನಗಳಲ್ಲಿ ಈ ಊರಿನ ಜನತೆಗೆ ಈ ಪರಂಪರೆಯನ್ನು ಉಳಿಸುವ ಕಾರ್ಯಕ್ಕಿಂತ ಹೆಚ್ಚಾಗಿ ತನ್ನ ಬದುಕಿ ಒಂದಿಸ್ಟು ಹಣವನ್ನು ಹೊಂದಿಸಿಕೊಳ್ಳುವ ವ್ಯವಹಾರಿಕ ದೃಷ್ಟಿಕೋನವೇ ಹೆಚ್ಚಿನ ಸಂಖ್ಯೆಯಲ್ಲಿದೆ. ಇದರ ಪ್ರತಿ ಫಲವೇ ಪ್ರಸ್ತುತ ಈ ಗ್ರಾಮದ ಕಲ್ಯಾಣಿಗಳು, ತೀರ್ಥಕೊಳಗಳು, ಹಳೆಯ ಛತ್ರಗಳು ಇಂದು ವಿನಾಶದ ಅಂಚಿಗೆ ತೆರಳುತ್ತಿವೆ. ಈ ಬನ್ನೇರುಘಟ್ಟ ಪ್ರದೇಶದ ಸುತ್ತಮುತ್ತಲ ಪ್ರದೇಶವನ್ನು ಸರ್ಕಾರದವರು 'ಹಸಿರುವಲಯ ಪ್ರದೇಶ'ವೆಂದು ಘೋಷಿಸಿ ಕಾಯ್ದೆಯನ್ನು ಜಾರಿಗೆಗೊಳಿಸಿದ್ದಾರೆ. ಸರ್ಕಾರದ ಈ ಕಾಯ್ದೆಯ ಫಲವೇ ಪ್ರಸ್ತುತ ಈ ಪ್ರದೇಶದ ಇಂದಿಗೂ ಸಹ ಮರಗಿಡಗಳಿಂದ ಕೂಡಿದ ಸಸ್ಯ ಸಂಮೃದ್ಧವಾಗಿರುವ ಅರಣ್ಯ ಪ್ರದೇಶವನ್ನು ಕಾಣಬಹುದು.

ಇದಲ್ಲದೆ ಈ ಬನ್ನೇರುಘಟ್ಟ ಅರಣ್ಯ ಪ್ರದೇಶವನ್ನು 'ರಕ್ಷಿತಾರಣ್ಯ' ವಾಗಿ ಮಾರ್ಪಾಡಿಸಿರುವುದರಿಂದ ಜಾಗತೀಕರಣದ ಇಂದಿನ ದಿನಗಳಲ್ಲಿ ಈ ವಲಯದಲ್ಲಿ ಪ್ರಕೃತಿ ಸೊಬಗಿನಿಂದ ಕೂಡಿದೆ. ಹಚ್ಚ ಹಸಿರಿನ ಅರಣ್ಯ ಪ್ರದೇಶ ನೋಡುಗರ ಮನಸ್ಸಿಗೆ ಉತ್ಸಾಹವನ್ನು

ಉಂಟು ಮಾಡುತ್ತದೆ. ಈ ಅರಣ್ಯ ಪ್ರದೇಶ ಬೆಟ್ಟ, ಗುಡ್ಡ, ಕಣಿವೆ ಮತ್ತು ಘಟ್ಟ ಪ್ರದೇಶಗಳಿಂದ ಕೂಡಿದ್ದರಿಂದಲೇ ಈ ಪ್ರದೇಶಕ್ಕೆ ' ಬನ್ನೇರುಘಟ್ಟ" ಎಂಬ ಹೆಸರು ಪ್ರಾಕೃತಿಕ ಹಿನ್ನಲೆಯಲಿ ಬಂದಿದೆ. ಈ ಪ್ರಕೃತಿಯ ಸೊಬಗು ಈ ವಲಯದದಲ್ಲಿ ಬಹುಶ: ಇಲ್ಲದೆ ಹೋಗಿದ್ದರೆ ಈ ಪ್ರದೇಶಕ್ಕೆ 'ಬನ್ನೇರುಘಟ್ಟ' ಎಂಬ ಹೆಸರು ಅಷ್ಟಾಗಿ ಹೊಂದಿಕೊಳ್ಳದೇ ಬಹುಶ: ಈ ಊರು ತನ್ನ ಮಹತ್ವವನ್ನು ಕಳೆದುಕೊಳ್ಳುತ್ತಿತ್ತೇನೋ ಎಂದು ಭಾಸವಾಗುತ್ತದೆ.

ಈ ಬನ್ನೇರುಘಟ್ಟದ ಅರಣ್ಯ ಪ್ರದೇಶದ ಅಂಚಿನಲ್ಲಿ ಇಂದಿಗೂ ಸಹ ಬುಡಕಟ್ಟು ಜನಾಂಗಗಳಾದ ಕಾಡುಪೂಜಾರಿಗಳು, ಹಕ್ಕಿಪಿಕ್ಕಿಗಳು ಮತ್ತು ಇರುಳಿಗ ಸಮುದಾಯದವರು ವಾಸವಾಗಿದ್ದಾರೆ. ಈ ಎಲ್ಲಾ ಜನಾಂಗದವರೆಗೆ ಈ ಕಾಡೇ ಉಸಿರು. ಈ ಕಾಡೇ ಬದುಕು. ಈ ಕಾಡಿನಲ್ಲೇ ತಮ್ಮ ನಿತ್ಯ ಬದುಕನ್ನು ಎಣಿಸಿಕೊಂಡಿದ್ದಾರೆ. ಇತ್ತೀಚಿನ ದಿನಗಳಲ್ಲಿ ಈ ಜನಾಂಗದವರೆಲ್ಲ ನಾಗರಿಕ ಪ್ರಪಂಚಕ್ಕೆ ಕಾಲಿಡುತ್ತಿದ್ದಾರೆ 'ಪರಿವರ್ತನೆ ಜಗದ ನಿಯಮ' ಎಂಬ ಶ್ರೀ ಕೃಷ್ಣನ ವಾಣಿಯಂತೆ ತಮ್ಮ ಬದುಕಿನಲ್ಲೂ ಸಹ ಹತ್ತು ಹಲವಾರು ರೀತಿಯ ಬದಲಾವಣೆಗಳನ್ನು ಬಯಸಿ ನಾಗರಿಕ ಸಮುದಾಯಕ್ಕೆ ಕಾಲಿಡುತ್ತಿದ್ದಾರೆ. ಇವರ ಜೀವನ, ಸಂಪ್ರದಾಯ, ನಡೆನುಡಿ, ಆಚರಣೆ, ವೇಷಭೂಷಣ, ಮಾತುಕತೆ, ಎಲ್ಲವೂ ಸಹ ಬದಲಾಗುತ್ತಿರುವುದನ್ನು ಕಂಡರೆ ಬಹುಶ: ಜಾಗತೀಕರಣದ ಪ್ರಭಾವ ಇವರ ಮೇಲೇಯೂ ಆಗಿರುವುದು ಸ್ಪಷ್ಟವಾಗಿ ಕಾಣ ಬಹುದು. ಸರ್ಕಾರ ಈ ಬುಡಕಟ್ಟು ಜನಾಂಗದವರಿಗೆ ಪ್ರತ್ಯೇಕವಾದ ಕಾಲೋನಿಯನ್ನು ನಿರ್ಮಿಸಿದೆ.ಇದನ್ನು 'ಹಕ್ಕಿಪಿಕ್ಕಿ ಕಾಲೋನಿ' (ಎಚ್.ಪಿ.ಕಾಲೋನಿ) ಎಂದೂ ಕರೆಯುತ್ತಾರೆ. ಇತ್ತೀಚೆಗೆ ವರ್ಷಗಳಲಿ ಈ ಕಾಲೋನಿಯವರಿಗೆ ಸರ್ಕಾರದ ವತಿಯಿಂದ ಅನೇಕ ಅನುಕೂಲತೆಗಳನ್ನು ಒದಗಿಸಿಕೊಡಲಾಗುತ್ತಿದೆ.

ಜಾಗತೀಕರಣ ಪ್ರಭಾವದಿಂದ ನಶಿಸಿ ಹೋಗುತ್ತೀರುವ ಜನಾಂಗಗಳ ಹಿಂದಿನ ಆಚರಣೆಗಳು, ಪದ್ಧತಿಗಳು, ನೀತಿನಿಯಮಗಳ ಬಗ್ಗೆ ಸಮರ್ಪಕವಾದ ಅಧ್ಯಯನಗಳು ನಡೆದಿವೆ. ಡಾ.ಎಮ್. ಬೈರೇ ಗೌಡರವರು ರಚಿಸಿದ 'ಇರುಳಿಗರು ಜಾನಪದ ಅಧ್ಯಯನ' ಮತ್ತು ಯು.ವಿ.ರವಿಯವರ '1950 ರಿಂದ ಇತ್ತೀಚಿನವರೆಗೆ, ಬನ್ನೇರುಘಟ್ಟ, ಬಂಡಿಪುರ ಮತ್ತು ನಾಗರಹೊಳೆ ಅರಣ್ಯದಂಚಿನ ಜನಾಂಗಗಳ ಅಧ್ಯಯನ' ಎಂಬ ಪಿ.ಎಚ್‌ಡಿ ಪ್ರಬಂಧಗಳು ಕಾಡಂಚಿನ ಈ ಜನಾಂಗಗಳ ಬದುಕಿನ ಬಗ್ಗೆ ಸಂಪೂರ್ಣವಾದ ಚಿತ್ರಣವನ್ನು ಒದಗಿಸುತ್ತವೆ.

ಈ ಬನ್ನೇರುಘಟ್ಟ ಪ್ರದೇಶ ಪ್ರಸ್ತುತ ಜಾಗತೀಕರಣದ ಪ್ರಭಾವದಿಂದ ಆಧುನಿಕವಾಗಿ ಎಷ್ಟೇ ಬದಲಾವಣೆಯಾದರೂ ಸಹ ಈ ಪ್ರದೇಶದ ಬಗ್ಗೆ ಇನ್ನೂ ಪರಿಪೂರ್ಣವಾದ ಸಂಶೋಧನೆಯಾಗಬೇಕಿದೆ. ಬಹುಶ: ಈ ಪ್ರದೇಶದಲ್ಲಿ ಉತ್ಖನನ ನಡೆದರೆ ಇತಿಹಾಸದ ಕಾಲ ಗರ್ಭದಲ್ಲಿ ಅಡಗಿ ಹೋದ ಅನೇಕ ಮಾಹಿತಿಗಳ ಜೊತೆಗೆ ಚಿನ್ನಕ್ಕೆ ಸಂಬಂಧಿಸಿದ ಹೆಚ್ಚಿನ ವಿಷಯಗಳು ದೊರೆಯ ಬಹುದು ಎನ್ನುವುದನ್ನು ತಳ್ಳಿ ಹಾಕುವಂತಿಲ್ಲ. ಈ ನಿಟ್ಟಿನಲ್ಲಿ ಸಮಗ್ರ ರೀತಿಯ ಸಂಶೋಧನೆಗೆ ಕಾಯುತ್ತಿರುವ ಈ ಪ್ರದೇಶವು ಅನೇಕ ಸಂಗತಿಗಳನ್ನು ತನ್ನ ಒಡಲಾಳದಲ್ಲಿ ಅವಿತಿಟ್ಟುಕೊಂಡು ಧಾರ್ಮಿಕವಾಗಿ ಭಕ್ತಿಯನ್ನು, ಮೆರೆಯುತ್ತ ಪ್ರವಾಸಿಗರನ್ನು ತನ್ನತ್ತ ಆಕರ್ಷಿಸುತ್ತದೆ. ಆಧುನೀಕರಣದ ಪ್ರಭಾವದಿಂದ ಈ ಗ್ರಾಮವು ಕಾಂಕ್ರೇಟ್ ಕಾಡಿನ ಹಾಗೆ ಎಷ್ಟೇ ಬದಲಾದರು ಸಹ ಇಲ್ಲಿರುವ ಅನೇಕ ಪ್ರಾಚೀನ ಪರಂಪರೆಯ ಕುರುಹುಗಳನ್ನು ರಕ್ಷಿಸಿಕೊಂಡು

ಬಂದರಷ್ಟೇ ಪ್ರಾಯಶ: ಮುಂದಿನ ದಿನಗಳಲ್ಲಿ ಈ ಊರಿಗೆ 'ಬನ್ನೇರುಘಟ್ಟ' ಎಂಬ ಹೆಸರು ಮೌಲ್ಯಯುತವಾಗಿರುತ್ತದೆ ಎಂದು ಹೇಳಬಹುದು. ಬಹುಶ: ನನಗೆ ಈ ಪ್ರಬಂಧ ರಚಿಸಲು ಆಸಕ್ತಿ ಉಂಟಾದದ್ದು ಚಿಕ್ಕಂದಿನಿಂದಲೂ ಈ ಪ್ರದೇಶದ ಬಗ್ಗೆ ನನಗಿದ್ದ ಕುತೂಹಲವೇ ಕಾರಣ. ನಮ್ಮ ಕುಟುಂಬ ವರ್ಗದಲ್ಲಿ ಯಾವುದೇ ವಿವಾಹಗಳಾದರೂ ಹಿಂದಿನಿಂದಲೂ ಈ ಕ್ಷೇತ್ರದಲ್ಲಿ ನಡೆಯಿತ್ತಿತ್ತು. ಈ ವಿವಾಹದ ಸಂದರ್ಭಗಳಲ್ಲಿ ಈ ಊರಿಗೆ ಆಗಮಿಸುತ್ತಿದ್ದಾ ನಾನು ಈ ಗ್ರಾಮದ ದೇವಾಲಯ, ಬೆಟ್ಟಗುಡ್ಡ, ಕಾಡಿನ ಪ್ರದೇಶ ಸುವರ್ಣಮುಖಿ ಕೊಳ ಇಲ್ಲಿನ ಪ್ರಕೃತಿಯ ಸೊಬಗು ಎಲ್ಲವೂ ಸಹ ಪದೇ ಪದೇ ನನ್ನ ಮನಸ್ಸಿಗೆ ಹೊಚ್ಚ ಹೊಸದರಂತೆ ಕಾಣುತ್ತಿತ್ತು.

ಇವೆಲ್ಲವೂ ಸಹ ನನ್ನ ಮನದಾಳದಲ್ಲಿ ಬೇರೂರಿ ಅನೇಕ ವರ್ಷಗಳ ನಂತರ ಅಕ್ಷರಗಳ ರೂಪವನ್ನು ಪಡೆದು ಮೂಡಿಬಂದ ಪರಿಣಾಮವೇ ಈ ಸಂಪ್ರಬಂಧದ ರಚನೆಗೆ ನಾಂದಿಯಾಯಿತು ಎಂಬುದನ್ನು ಈ ಸಂದರ್ಭದಲ್ಲಿ ನಾನು ಮತ್ತೆ ಮತ್ತೆ ನೆನೆಯುತ್ತೇನೆ.

ಒಟ್ಟಾರೆಯಾಗಿ 'ಬನ್ನೇರುಘಟ್ಟ- ಒಂದು ಸಾಂಸ್ಕೃತಿಕ ಅಧ್ಯಯನ' ಎಂಬುದು ಬನ್ನೇರುಘಟ್ಟದ ಬಗೆಗೆ ಒಂದು ರೀತಿಯ ಕ್ಷ- ಕಿರಣವನ್ನು ಬೀರುವ ಪ್ರಯತ್ನವನ್ನು ಮಾಡಲಾಗಿದೆ. ಸ್ವಲ್ಪಮಟ್ಟಿಗಾದರು ಸಹ ಈ ಬನ್ನೇರುಘಟ್ಟದ ಬಗೆಗಿನ ಜ್ಞಾನಶಾಖೆಯನ್ನು ವಿಸ್ತರಿಸುವ ಸಣ್ಣ ಪ್ರಯತ್ನವನ್ನಷ್ಟೇ ಈ ಪ್ರಬಂಧದ ಹಿನ್ನೆಲೆಯಲ್ಲಿ ಮಾಡಿದ್ದೇನೆ ಎಂಬ ಭಾವನೆ ನನಗಿದೆ.

ಗ್ರಂಥ ಋಣ

1. ಬೆಂಗಳೂರು ದರ್ಶನ, ಸಂಪುಟ–01 — (ಸ) ಪ್ರೊ॥ಎಲ್.ಎಸ್.ಶೇಷಗಿರಿರಾವ್
ಪ್ರಕಾಶಕರು – ಉದಯಭಾನು ಕಲಾಸಂಘ
ಬೆಂಗಳೂರು, ವರ್ಷ – 2005

1.1 ಬೆಂಗಳೂರು ಜಿಲ್ಲೆ ಗೆಜೆಟಿಯರ್ — ಕರ್ನಾಟಕ ಸರ್ಕಾರ, ಬೆಂಗಳೂರು

2. ಎಪಿಗ್ರಾಫಿಯಾ ಕರ್ನಾಟಕ ಸಂಪುಟ–9 — (ಸ) ವಿ. ಲೂಯಿಸ್ ರೈಸ್
ಮೈಸೂರು ಸರ್ಕಾರದ ಮುದ್ರಣ, 1905

3. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ — ಡಾ॥ ಎಂ.ಚಿದಾನಂದ ಮೂರ್ತಿ
ಸ್ವಪ್ನ ಪ್ರಕಾಶನ, ಬೆಂಗಳೂರು, 2002

4. ಇತಿಹಾಸ ದರ್ಶನ, ಸಂಪುಟ –08 — ಡಾ॥ ದೇವರಕೊಂಡಾರೆಡ್ಡಿ
ಸಂಪುಟ–08,
ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು,1988

5. ಶಾಸನಮಂಥನ — ಡಾ॥ ಪಿ.ವಿ.ಕೃಷ್ಣಮೂರ್ತಿ
ಪ್ರಕಾಶಕರು, ತುಮಕೂರು ವಿಶ್ವವಿದ್ಯಾಲಯ,
ತುಮಕೂರು.

6. ಬೆಂಗಳೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ — ಸಂ. ಡಾ॥ ಆರ್.ಗೋಪಾಲ್
ಪ್ರಕಾಶಕರು : ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು.

7. ರಾಮನಗರ ಒಂದು ಸಾಂಸ್ಕೃತಿಕ ಅಧ್ಯಯನ — ಡಾ॥ ಅಂಕನಹಳ್ಳಿ ಪಾರ್ಥ
ಅಂಕನಹಳ್ಳಿ ಪ್ರಕಾಶನ, ರಾಮನಗರ

8. ಸಾಂಸ್ಕೃತಿಕ ಅಧ್ಯಯನ — ಡಾ॥ ರಹಮತ್ ತರೀಕೆರೆ
ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 2004

9. ದೇವಾಲಯ ವಾಸ್ತು ಶಿಲ್ಪ ಪರಿಚಯ — ಡಾ॥ ಕೂ.ಸಾ. ಅಪರ್ಣಾ
ಪ್ರಕಾಶಕರು – ಪ್ರಸಾರಾಂಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ

10. ಶ್ರೀ ಚಂಪಕಧಾಮ ಸ್ವಾಮಿ ದೇವಾಲಯ ಪರಿಚಯ — ಸಿ.ಆರ್.ಮೇಘನಾ

11. ಕರ್ನಾಟಕ ವಿಷಯ ವಿಶ್ವಕೋಶ — ಮೈಸೂರು – 2005

12. ಬೆಂಗಳೂರಿನ ಸಂಕ್ಷಿಪ್ತ ಇತಿಹಾಸ — ಡಾ॥ ತುಳಸಿರಾಮ್ ನಾಯಕ

13. ಹನಸೋಗೆ ಒಂದು ಸಾಂಸ್ಕೃತಿಕ ಅಧ್ಯಯನ — ಡಾ॥ ರಾಧ ಹನಸೋಗೆ
ಪ್ರಕಾಶಕರು, ಗಾಯಿತ್ರಿ ಪ್ರಿಂಟರ್ಸ್, ಮೈಸೂರು.

14. ವಿಜಯನಗರ ವಾಸ್ತುಶಿಲ್ಪ — ಡಾ॥ ಬಾ.ರಾ.ಗೋಪಾಲ್
ಹೆಚ್.ಎಸ್.ವಿ ರಾವ್–ಐ.ಬಿ.ಹೆಚ್ ಪ್ರಕಾಶನ
ಬೆಂಗಳೂರು – 54

15. ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಕೋಶ — ಸಂ : ಡಾ.ಚಿ.ಸಿ.ನಿಂಗಣ್ಣ,
ಪ್ರಕಾಶಕರು – ಶ್ರೀಸಿದ್ಧಲಿಂಗೇಶ್ವರ ಪ್ರಕಾಶನ
ಗುಲ್ಬರ್ಗ

15. Mysore Archeological Survey Annual Report — Volume – 03,
1902-1913

16. Annual Report on the Archeological Survey of Mysore — 1900 – 1901

17. Master Plan of Bannerughatta Biological Park — Zoo Authority of Karnataka.

<u>**ನಿಯತ ಕಾಲಿಕೆಗಳು :**</u>

- ☞ ಪ್ರಜಾವಾಣಿ
- ☞ ಉದಯವಾಣಿ
- ☞ ಕನ್ನಡ ಪ್ರಭ
- ☞ ಸಂಯುಕ್ತ ಕರ್ನಾಟಕ



ಬನ್ನೇರುಘಟ್ಟದ ವಹ್ನಿಗಿರಿ ಬೆಟ್ಟದ ವಿಹಂಗಮ ನೋಟ



ದೇವಾಲಯದಲ್ಲಿ ಆಳ್ವಾರರ ಮೂರ್ತಿಗಳು



ಶ್ರೀದೇವಿ ಭೂದೇವಿ ಸಮೇತವಾದ ಶ್ರೀಚಂಪಕಧಾಮಸ್ವಾಮಿ



ವಹ್ನಿಗಿರಿ ಬೆಟ್ಟದ ಮೇಲಿರುವ ಪುರಾತನ
ಅಪೂರ್ಣ ಕಟ್ಟಡ




ಅಶ್ವಥಕಟ್ಟೆಯ ನಾಗರಕಲ್ಲುಗಳು



ಶ್ರೀಚಂಪಕಧಾಮಸ್ವಾಮಿ ದೇವಾಲಯದ
ಪ್ರವೇಶದ್ವಾರ ಗೋಪುರ



ಭಕ್ತರ ಹರಕೆಯ ಸಂಕೇತಗಳೇ ಈ ಕಲ್ಲುಗ ಗುಪ್ಪೆಗಳು



ಬೃಹತ್ ಶಿಲಾಸಮಾಧಿಯ ದೃಶ್ಯ



ಗ್ರಾಮದೇವತೆ ಶ್ರೀಚಂಪಕವಲ್ಲಿ ಮಾರಮ್ಮ



ಶ್ರೀಚಂಪಕವಲ್ಲಿ ಮಾರಮ್ಮನ ದೇವಾಲಯ



ಶ್ರೀವೀರಾಂಜನೇಯ ಸ್ವಾಮಿ
ದೇವಾಲಯ



ಹೊನ್ನಮ್ಮ-ಚೆನ್ನಮ್ಮರೆಂಬ
ಮಾಸ್ತಿಕಲ್ಲಿನ ದೃಶ್ಯ















ಪುರಾತನ ಕಾಲದ
ಗರುಡ ಸ್ತಂಭ



ವಿಜಯನಗರದ
ಲಾಂಚನ




ಆತ್ಮಾಹುತಿ ಕಲ್ಲಿನ ದೃಶ್ಯ










ಬನ್ನೇರುಘಟ್ಟದ ಬ್ರಹ್ಮರಥೋತ್ಸವ



ವ್ಯಾಸ ಪ್ರತಿಷ್ಠಾಪನೆಯ ಶ್ರೀ ವೀರಾಂಜನೇಯ ಸ್ವಾಮಿ



ಸುವರ್ಣಮುಖಿ ತೀರ್ಥ ಕೊಳ




ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ



ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಾಲಯ




ಜಾಗತೀಕರಣದ ಪ್ರಭಾವ ಬೆಳವಣಿಗೆಯತ್ತ ಬನ್ನೇರುಘಟ್ಟ




ಬನ್ನೇರುಘಟ್ಟ ಸುತ್ತಮುತ್ತಲ ಪ್ರಮುಖ ಸ್ಥಳಗಳ ನಕ್ಷೆ



ಬನ್ನೇರುಘಟ್ಟ ಸುತ್ತಮುತ್ತಲ ಪ್ರಮುಖ ರೆವೆನ್ಯೂ ನಕ್ಷೆ



ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ನಕ್ಷೆ



CHAMPAKADHAMA SWAMY TEMPLE PLAN
NTS

ಶ್ರೀಚಂಪಕಧಾಮಸ್ವಾಮಿ ದೇವಾಲಯದ ಮೂಲ ನಕ್ಷೆ